ವಿಶ್ವವಾಣಿ
ವಿಶ್ವಾಸವೇ ವಿಶ್ವ

ಐಸಿಸಿ ಅವಧಿಯಲ್ಲಿ ಬದಲಾವಣೆ ತರಲು ಯೋಚನೆ

ಐಸಿಸಿ ಅಧ್ಯಕ್ಷ ಮತ್ತು ಸ್ವತಂತ್ರ ನಿರ್ದೇಶಕರ ಅವಧಿಯಲ್ಲಿ ಬದಲಾವಣೆ ತರಲು ಅಂತಾರಾಷ್ಟ್ರೀಯ ಕ್ರಿಕೆಟ್ ಉದ್ದೇಶಿಸಿದ್ದು, ಮೂರು ವರ್ಷಗಳ ಎರಡು ಅವಧಿಗೆ ಶಿಫಾರಸು ಮಾಡಿದೆ. ಇದು ಜಾರಿಯಾದಲ್ಲಿ ಹಾಲಿ ತಲಾ ಎರಡು ವರ್ಷಗಳ ಮೂರು ಅವಧಿಯ ನಿಯಮ ಬದಲಾಗಲಿದೆ. ಈ ಶಿಫಾರಸಿಗೆ ಸದಸ್ಯರು ಸಮ್ಮತಿ ನೀಡಿದಲ್ಲಿ, ಡಿಸೆಂಬರ್ 1ರಂದು ಅಧ್ಯಕ್ಷರಾಗಲಿರುವ ಜಯ್ ಶಾ ಅವರಿಗೆ ಮೂರು ವರ್ಷಗಳ ಅಧಿಕಾರದ ಅವಧಿ ದೊರೆಯಲಿದೆ.

ಪುಟ ತೆರೆದಂತೆ...

ಕಾಸರಕ ಎಂಬ ಕಹಿವಸ್ತುವನ್ನು ಬಲ್ಲಿರಾ?
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
ಸಂ.ಪುಟ | 6

ಬೆಂಗಳೂರು ಮಳೆನಾಡೆಂಬ ವಿವೇಕ ನಮಗಿರಲಿ
ಲೋಕಮತ
ಲೋಕೇಶ್ ಕಾಯರ್ಗ
ಸಂ.ಗಮ | 7

ಮಾತಂದ್ರೆ ಮಾತು

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ್ರೆ ಮೇಕೆದಾಟಿಗೆ ಒಂದೇ ದಿನದಲ್ಲಿ ಸಹಿ ಹಾಕಿಸುತ್ತೇನೆಂದು ಕುಮಾರಸ್ವಾಮಿ ಹೇಳಿದ್ದರು. ಸರಕಾರ ಬಂದು 6 ತಿಂಗಳಾದರೂ ಇನ್ನೂ ಯಾಕೆ ಅನುಮತಿ ಕೊಡಿಸಿಲ್ಲ? ಕರ್ನಾಟಕ-ತಮಿಳುನಾಡು ಮಾತನಾಡಿಕೊಂಡು ಬಗೆಹರಿಸಿಕೊಳ್ಳುವುದಾದರೆ, ಕೇಂದ್ರ ಸರಕಾರ ಬರೀ ಟ್ಯಾಕ್ಸ್ ಕಟ್ಟಿಸಿಕೊಳ್ಳೋಕೆ ಇರೋದಾ?

ಕೃಷ್ಣ ಬೈರೇಗೌಡ
ಕಂದಾಯ ಸಚಿವ

ದಾರಿದೀಪೋಕ್ತಿ

ಹೊಸ ಹೊಸ ವಿಷಯ, ವಿಚಾರ, ಯೋಚನೆಗಳ ಬಗ್ಗೆ ಮಾತಾಡುವವರನ್ನು, ಚರ್ಚಿಸುವವರನ್ನು ನಮ್ಮ ಸುತ್ತ ಇಟ್ಟುಕೊಳ್ಳಬೇಕು. ಸದಾ ಬೇರೆಯವರ ಬಗ್ಗೆ ಟೀಕೆ ಮಾಡುವವರನ್ನು ನಿರ್ದಾಕ್ಷಿಣ್ಯವಾಗಿ ದೂರವಿಡಬೇಕು. ನಮ್ಮ ಸುತ್ತ ಇರುವವರು ನಮಗೆ ಬೆಳಕು, ಮಾರ್ಗದರ್ಶನ ನೀಡುವವರಾಗಿರಬೇಕು.

ವಕ್ರತುಂಡೋಕ್ತಿ

ದಾಂಪತ್ಯಕ್ಕೆ ಯಾವ ಗ್ಯಾರಂಟಿಯೂ ಇಲ್ಲ. ಗ್ಯಾರಂಟಿಯೇ ಬೇಕಾಗಿದ್ದರೆ ಕಾರು ಬ್ಯಾಟರಿ ಅಥವಾ ವಾಷಿಂಗ್ ಮಷೀನ್ ಖರೀದಿಸಬಹುದು.

ದರ್ಶನ್ ಆಸ್ಪತ್ರೆಗೆ ಶಿಫ್ಟ್

ಬಳ್ಳಾರಿ: ಬೆನ್ನು ನೋವಿನಿಂದ ಬಳಲುತ್ತಿರುವ ನಟ ದರ್ಶನ್‌ನನ್ನು ಬಳ್ಳಾರಿ ಜೈಲಿನಿಂದ ವಿಮ್ಸ್ ಆಸ್ಪತ್ರೆಗೆ ಸ್ಥಳಾಂತರ ಮಾಡಲಾಗಿದೆ. ದರ್ಶನ್‌ಗೆ ಬೆನ್ನು ನೋವಿನ ಸಮಸ್ಯೆ ಹೆಚ್ಚಾಗಿದ್ದರಿಂದ ವೈದ್ಯರು ಜೈಲಿಗೆ ಬಂದು ಆರೋಗ್ಯ ತಪಾಸಣೆ ಮಾಡಿ, ಅವರಿಗೆ ಎಂಆರ್‌ಐ ಸ್ಕ್ಯಾನಿಂಗ್ ಅವಶ್ಯ ಕತೆ ಇದೆ ಎಂದು ಹೇಳಿದ್ದರು. ಆ ಕಾರಣಕ್ಕಾಗಿ ಆಂಬ್ಯುಲೆನ್ಸ್ ಮೂಲಕ ದರ್ಶನ್ ಅವರನ್ನು ವಿಮ್ಸ್ ಆಸ್ಪತ್ರೆಗೆ ಕರೆದುಕೊಂಡ ಹೋಗಲಾಗಿದೆ. ಬಳ್ಳಾರಿಯ ಪ್ರಮುಖ ಸರ್ಕಲ್‌ಗಳಲ್ಲಿ ಭದ್ರತೆಯ ದೃಷ್ಟಿಯಿಂದ ಪೊಲೀಸರ ನಿಯೋಜನೆ ಮಾಡಲಾಗಿತ್ತು.

ಲಾರೆನ್ಸ್ ಕೊಂದವರಿಗೆ ಬಹುಮಾನ

ದೆಹಲಿ: ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್‌ನ ಕೊಂದವರಿಗೆ 1,11,11,111 ರು. ನಗದು ಬಹುಮಾನ ಕೊಡುವುದಾಗಿ ಕ್ಷತ್ರಿಯ ಕರ್ಣಿ ಸೇನೆ ರಾಷ್ಟ್ರೀಯ ಅಧ್ಯಕ್ಷ ರಾಜ್ ಶೇಖಾವತ್ ಘೋಷಿಸಿದ್ದಾರೆ. ಪೊಲೀಸರಾಗಲೀ, ಬೇರಾರೇ ಆಗಲಿ ಲಾರೆನ್ಸ್‌ನ್ನು ಕೊಂದರೆ ಬಹುಮಾನ ನೀಡುವೆ ಎಂದಿದ್ದಾರೆ.

ಫನ್ ತರಂಗ
- ರಘುಪತಿ ಶೃಂಗೇರಿ -
ಚನ್ನಪಟ್ಟಣ ಉಪಚುನಾವಣೆ



ಮಳೆಗೆ ಮೂವರ ಬಲಿ | ಒಂದೂಕಾಲು ಶತಮಾನದಲ್ಲೇ ಸುರಿದ ದಾಖಲೆಯ ಮಳೆ
ಕೃಷಿ ಚಟುವಟಿಕೆ ಮೇಲೆ ವ್ಯತಿರಿಕ್ತ ಪರಿಣಾಮ | ಇಂದು 13 ಜಿಲ್ಲೆಗಳಲ್ಲಿ ಅಧಿಕ ಮಳೆ

ಮರಣ ಮಳೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಮುಂಗಾರಿಗೆ ಸೆಡ್ಡು ಹೊಡೆಯುವಂತೆ ರಾಜ್ಯಾದ್ಯಂತ ಹಿಂಗಾರು ಮಳೆ ಆರ್ಭಟಿಸುತ್ತಿದ್ದು, ರಾಜಧಾನಿಯಲ್ಲಿ 124 ವರ್ಷಗಳ ನಂತರ ದಾಖಲೆಯ ಮಳೆಯಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಮೂವರು ಬಲಿಯಾಗಿದ್ದು, ಅಪಾರ ಪ್ರಮಾಣದ ಆಸ್ತಿ ಪಾಸ್ತಿ ನಷ್ಟವಾಗಿದೆ. ವಾಯುಯಾನ, ರಸ್ತೆ ಮಾರ್ಗಗಳಲ್ಲಿ ಅಡಚಣೆಯಾಗಿದೆ. ಮಲೆನಾಡು, ಕರಾವಳಿ, ಬಯಲು ಸೀಮೆ ಹಾಗೂ ಬರದ ನಾಡಲ್ಲೂ ಭರ್ಜರಿ ಮಳೆಯಾಗಿ ಜಲಾಶಯಗಳು ಮತ್ತೊಮ್ಮೆ ಮೈದುಂಬಿಕೊಂಡಿದ್ದರೂ, ಕೃಷಿ ಚಟುವಟಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.

ಈ ನಡುವೆ ಹವಾಮಾನ ಇಲಾಖೆಯು ಬುಧವಾರ ರಾಜ್ಯಾದ್ಯಂತ ಭಾರಿ ಮಳೆಯಾಗುವ ಎಚ್ಚರಿಕೆ ನೀಡಿದೆ. ರಾಜಧಾನಿ ಬೆಂಗಳೂರಿನಲ್ಲಿ ಯಲ್ಲೋ ಅಲರ್ಟ್ ಘೋಷಿಸಲಾಗಿದ್ದು, ಸಾಧ್ಯವಾದಷ್ಟು ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಶಾಲೆಗಳಿಗೆ ರಜೆ ಘೋಷಿಸಲಾಗಿದ್ದು, ಕಾಲೇಜುಗಳು ಎಂದಿನಂತೆ ನಡೆಯಲಿದೆ ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಬೋಟ್‌ನಲ್ಲಿ ಸಂಚರಿಸಬೇಕಾದ ಪರಿಸ್ಥಿತಿ ಅಲ್ಲಲ್ಲಿ ಕಂಡು ಬಂದಿದೆ. ನಿರ್ಮಾಣ ಹಂತದ ಕಟ್ಟಡ ಅವಘಡದಿಂದಾಗಿ ಕಾರ್ಮಿಕರೊಬ್ಬರು ಮೃತಪಟ್ಟು ಇನ್ನೂ ಹಲವರು ಕಟ್ಟಡದಡಿ ಸಿಲುಕಿಕೊಂಡಿದ್ದಾರೆ. ತಂಗಿಯನ್ನು ಉಳಿಸಲು ಹೋಗಿ ಅಣ್ಣನೂ ಕೆರೆ ಪಾಲಾದ ದುರ್ಘಟನೆ ನಡೆದಿದ್ದು, ಬಳ್ಳಾರಿಯಲ್ಲಿ ಮಳೆಯಿಂದಾಗಿ ಒಬ್ಬರು ಮೃತಪಟ್ಟಿದ್ದಾರೆ. ಕೆಲ ಖಾಸಗಿ ಕಂಪನಿಗಳು ಮನೆಯಿಂದ ಕೆಲಸ ನಿರ್ವಹಿಸುವಂತೆ ನೌಕರರಿಗೆ ಸೂಚಿಸಿದೆ.

ಮುಂಗಾರು ಮಳೆಯಿಂದಾಗಿ ರಾಜ್ಯಾದ್ಯಂತ ಕೃಷಿ ಚಟುವಟಿಕೆಗಳು ಉತ್ತಮವಾಗಿತ್ತು. ಈಗ ಕೆಲ ಬೆಳೆಗಳು ಕಟಾವಿಗೆ ಬಂದಿರುವುದಲ್ಲದೆ, ಮತ್ತೊಂದಿಷ್ಟು ಬೆಳೆಗಳು ಬೆಳವಣಿಗೆಯ ಹಂತದಲ್ಲಿವೆ. ಈಗಿನ ಮಳೆಯಿಂದ ಬಹುತೇಕ ಎಲ್ಲ ಬೆಳೆಗಳಿಗೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.

ವಿಮಾನ ಸಂಚಾರ ವಿಳಂಬ: ಧಾರಾಕಾರ ಮಳೆಯಿಂದಾಗಿ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 20ಕ್ಕೂ ಹೆಚ್ಚು ವಿಮಾನಗಳು ವಿಳಂಬವಾಗಿದ್ದು, ಪ್ರತಿಕೂಲ ಹವಾಮಾನದಿಂದಾಗಿ ಕೆಲವು ವಿಮಾನಗಳ ಮಾರ್ಗ ಬದಲಾಯಿಸಲಾಗಿದೆ. ಡಾನಾ ಚಂಡಮಾರುತದ ಪರಿಣಾಮ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರಿನಲ್ಲಿ ವಿಮಾನಗಳು ವಿಳಂಬವಾಗಿವೆ. ರಾಜ್ಯದ ಕೆಲ ಪ್ರಮುಖ ರಸ್ತೆಗಳಲ್ಲಿ ಸಂಚಾರ ವ್ಯತ್ಯಯವಾಗಿದೆ.

ಹೆಣ್ಣೂರಿನ ಬಾಬುಸಾಬ್ ಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡ ಕುಸಿದಿರುವುದು.

- ಬುಧವಾರ ಶಾಲೆಗಳಿಗೆ ರಜೆ ಘೋಷಿಸಿದ ಬೆಂಗಳೂರು ಜಿಲ್ಲಾಧಿಕಾರಿ
- ಬೆಂಗಳೂರಿನ ಬಹುತೇಕ ರಸ್ತೆಗಳು ಜಲಾವೃತ, ಜನಜೀವನ ಅಸ್ತವ್ಯಸ್ತ
- ವಾಡಿಕೆ ಮಳೆಯಿಂದ ಬರೋಬ್ಬರಿ ಎರಡು ಪಟ್ಟು ಅಧಿಕ ಮಳೆ
- ತಗ್ಗು ಪ್ರದೇಶದಲ್ಲಿ ನುಗ್ಗಿದ ನೀರು ಹೊರಹಾಕುವಲ್ಲಿ ಜನರು ಹೈರಾಣ
- ಬಹುತೇಕ ಖಾಸಗಿ ಕಂಪನಿ ಗಳಿಂದ ವರ್ಕ್ ಫ್ರಂ ಹೋಂ ಘೋಷಣೆ

ಬೆಂಗಳೂರಿನಲ್ಲಿ ಸುರಿದ ನಾಲ್ಕನೇ ಹೆಚ್ಚು ಮಳೆ

ಬೆಂಗಳೂರಿನಲ್ಲಿ ಸಾರ್ವಕಾಲಿಕ ಪ್ರಮಾಣದಲ್ಲಿ ಮಳೆಯಾಗಿದ್ದು, ಅಕ್ಟೋಬರ್ 1 ರಿಂದ 22ರವರೆಗೆ 241 ಮಿ.ಮೀ ಮಳೆಯಾಗಿದೆ. ಇದು 124 ವರ್ಷಗಳಲ್ಲಿ 4ನೇ ಅತಿ ಹೆಚ್ಚು ಪ್ರಮಾಣದ ಮಳೆಯಾಗಿದೆ. 1901 ರ ಬಳಿಕ ಬೆಂಗಳೂರಿನಲ್ಲಿ ಸುರಿದ ನಾಲ್ಕನೇ ಹೆಚ್ಚು ಮಳೆ ಈ ಬಾರಿ ಸುರಿದಿದೆ. ಈ ಹಿಂದೆ 1943, 1970, 2005 ರ ಹೆಚ್ಚು ಮಳೆಯಾಗಿದ್ದು, ಬಳಿಕ ಈ ವರ್ಷ (2024) ಭಾರಿ ಪ್ರಮಾಣದಲ್ಲಿ ಮಳೆ ಸುರಿದಿದ್ದು, ಬೆಂಗಳೂರಿನ ಬಹುತೇಕ ಬಡಾವಣೆಗಳು ಜಲಾವೃತವಾಗಿವೆ.

ಪ್ರಕೃತಿ ವಿಕೋಪದಿಂದ ಬಿದ್ದಿರುವ ಮಳೆ ಕಾರಣದಿಂದ ಆಗಿರುವ ಅನಾಹುತಗಳಿಗೆ ಪರಿಹಾರ ನೀಡುತ್ತೇವೆ. ಎಲ್ಲ ಸಿದ್ಧತೆ ಮಾಡಿ ಕೊಂಡಿದ್ದೇವೆ. ಮಳೆ ಅನಾಹುತಗಳ ಕುರಿತು ನಿಗಾ ವಹಿಸಿದ್ದೇವೆ. ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಸ್ಥಳ ಸಮೀಕ್ಷೆ ಕೂಡ ನಡೆಯುತ್ತಿದೆ. ಪರಿಹಾರ ನೀಡುತ್ತೇವೆ.
- ಸಿದ್ದರಾಮಯ್ಯ, ಸಿಎಂ

ಬೆಂಗಳೂರಿನ ಕೆಲ ಭಾಗದಲ್ಲಿ ವಾಡಿಕೆಗಿಂತ ಶೇ.300ರಷ್ಟು ಹೆಚ್ಚಿನ ಮಳೆಯಾಗಿದೆ. ಕೆಲ ಪ್ರದೇಶದ ಜನರಿಗೆ ಸ್ಥಳಾಂತರ ಮಾಡಲಾಗುತ್ತಿದ್ದು, ಈಗಾಗಲೇ ಸುಮಾರು 600 ಕುಟುಂಬ ಸ್ಥಳಾಂತರಗೊಳಿಸಲಾಗಿದೆ. ಕೆಲ ಅಪಾರ್ಟ್‌ಮೆಂಟ್‌ಗಳನ್ನು 8 ದಿನ ಮುಚ್ಚಲು ಸೂಚನೆ ನೀಡಲಾಗಿದೆ. ಪ್ರಕೃತಿ ತಡೆದು ನಿಲ್ಲಿಸಲು ಆಗುವುದಿಲ್ಲ.
- ಡಿ.ಕೆ.ಶಿವಕುಮಾರ್ ಡಿಸಿಎಂ

ರಂಗೇರಿದ ಕಣಕ್ಕೆ ಬಾರದ ಕಲಿಗಳು

ನಾಮಪತ್ರ ಸಲ್ಲಿಕೆಗೆ ಎರಡೇ ದಿನ ಬಾಕಿ 3 ಪಕ್ಷಗಳಿಂದ ಸಲ್ಲಿಕೆಯಾಗದ ನಾಮಪತ್ರ

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ಉಪಸಮರದ ಕಣ ಸದ್ದು ಮಾಡುತ್ತಿದೆ. ನಾಮಪತ್ರ ಸಲ್ಲಿಕೆಗೆ ಇನ್ನೆರಡೇ ದಿನ ಬಾಕಿಯಿದ್ದರೂ ಈವರೆಗೆ ಪಕ್ಷೇತರರನ್ನು ಹೊರತುಪಡಿಸಿ ಯಾವುದೇ ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿಲ್ಲ. ಚನ್ನಪಟ್ಟಣದ ಕಣ ಮೂರೂ ಪಕ್ಷಕ್ಕೆ ನುಂಗಲಾರದ ತುತ್ತಾಗಿದ್ದು, ಅಭ್ಯರ್ಥಿ ಆಯ್ಕೆಯ ಕುತೂಹಲಕ್ಕೆ ಬುಧವಾರ ತೆರೆ ಬೀಳುವ ಸಾಧ್ಯತೆ ಇದೆ.

ಬಿಜೆಪಿಯು ಈಗಾಗಲೇ ಸಂಡೂರು ಹಾಗೂ ಶಿಗ್ಗಾಂವಿಯಿಂದ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿದ್ದು, ಚನ್ನಪಟ್ಟಣದ ವಿಷಯದಲ್ಲಿ ಜೆಡಿಎಸ್ ನಡೆಯನ್ನು ನೋಡುತ್ತಿದೆ. ಇನ್ನು ಕಾಂಗ್ರೆಸ್ ಆರಂಭದಲ್ಲಿ ಮೂರು ಕ್ಷೇತ್ರಗಳಿಗೆ ಸುಲಭ ಆಯ್ಕೆ ಎಂದುಕೊಂಡಿದ್ದರೂ, ಇದೀಗ ಚನ್ನಪಟ್ಟಣದಲ್ಲಿ ಯಾರು ಸ್ಪರ್ಧಿಸಲಿದ್ದಾರೆ ಎನ್ನುವ ಪ್ರಶ್ನೆಗೆ ಉತ್ತರ ಹುಡುಕುವಲ್ಲಿ ದಿನದೂಡುತ್ತಿದೆ. ಆದ್ದರಿಂದ ಮೂರೂ ಕ್ಷೇತ್ರಗಳಿಗೆ ಅಧಿಕೃತ ಪಕ್ಷಗಳಿಂದ ಯಾವುದೇ ನಾಮಪತ್ರ ಸಲ್ಲಿಕೆಯಾಗಿಲ್ಲ. ಇದೇ ವೇಳೆ ಕಾದು ನೋಡುವ ತಂತ್ರಕ್ಕೆ ಪಕ್ಷಗಳು ಬಂದಿದ್ದರೂ ಚನ್ನಪಟ್ಟಣದಲ್ಲಿ ಯೋಗೇಶ್ವರ್ ನಡೆಯ ಮೇಲೆ ಕಣ್ಣು ನೆಟ್ಟಿದೆ.

ಮಂಗಳವಾರದವರೆಗೆ ಒಟ್ಟು 18 ಮಂದಿ ನಾಮಪತ್ರ ಸಲ್ಲಿಕೆಯಾಗಿದ್ದು, ಅದರಲ್ಲಿ ಚನ್ನಪಟ್ಟಣದಿಂದ ಆರು, ಶಿಗ್ಗಾಂವಿಯಿಂದ 11 ಹಾಗೂ ಸಂಡೂರಿನಿಂದ ಕೇವಲ ಒಬ್ಬರು ಅರ್ಜಿ ಸಲ್ಲಿಸಿದ್ದಾರೆ. ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆಯ ಅಂತಿಮ ದಿನವಾದ ಗುರುವಾರ ನಾಮಪತ್ರ ಸಲ್ಲಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ಸಿನ ಸಿದ್ಧಾಂತ ಮತ್ತು ಸಂವಿಧಾನದ ಮೌಲ್ಯಗಳನ್ನು ಒಪ್ಪಿ ಬರುವ ಎಲ್ಲರಿಗೂ ಪಕ್ಷಕ್ಕೆ ಸ್ವಾಗತ.
ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಿಜೆಪಿ ಬಿಟ್ಟ ನಂತರ ಯೋಗೇಶ್ವರ್ ಅವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವ ಬಗ್ಗೆ ಸಿಎಂ ಜತೆ ಚರ್ಚೆ ಮಾಡುತ್ತೇನೆ. ಈಗ ಅವರು ಬಿಜೆಪಿಯಲ್ಲೇ ಇದ್ದು, ಬಿಜೆಪಿಯಲ್ಲಿರುವವರ ಬಗ್ಗೆ ನಾನೇಕೆ ಮಾತನಾಡಲಿ?
ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಚನ್ನಪಟ್ಟಣದಲ್ಲಿ ಯೋಗೇಶ್ವರ್ ಅವರೇ ಸ್ಪರ್ಧೆ ಮಾಡಬೇಕು. ಅವರಿಗೆ ಅವಕಾಶ ಸಿಗಬೇಕು ಎಂದು ಆಶಿಸುತ್ತೇನೆ.
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಬಿಜೆಪಿಯ ನಡ್ಡಾ, ಪ್ರಲ್ಹಾದ್ ಜೋಶಿ ಸೇರಿ ಯೋಗೇಶ್ವರ್‌ಗೆ ಜೆಡಿಎಸ್ ಟಿಕೆಟ್ ಕೊಡಿ ಎಂದು ಹೇಳಿದ್ದಾರೆ. ಆದರೆ, ಕಾಂಗ್ರೆಸ್ ನಾಯಕರು ಯೋಗೇಶ್ವರ್ ಸ್ವಾಗತಕ್ಕೆ ಕ್ಯೂ ನಿಂತಿದ್ದಾರೆ.
ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ಉಪಚುನಾವಣೆ ಸಂಬಂಧ ಸಿಎಂ ಹಾಗೂ ಡಿಸಿಎಂ ಅವರೊಂದಿಗೆ ಚರ್ಚಿಸಲು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಬೆಂಗಳೂರಿಗೆ ಆಗಮಿಸಿದ್ದಾರೆ.

ಕಾದು ನೋಡುತ್ತಿರೋ ಸಿ.ಪಿ.ಯೋಗೇಶ್ವರ್

ಚನ್ನಪಟ್ಟಣ ಕ್ಷೇತ್ರದಿಂದ ಬಿಜೆಪಿ ಟಿಕೆಟ್‌ಗಾಗಿ ಪಟ್ಟುಹಿಡಿದಿರುವ ಯೋಗೇಶ್ವರ್‌ಗೆ ಟಿಕೆಟ್ ಸಿಗದಿದ್ದಲ್ಲಿ ಕಾಂಗ್ರೆಸ್ ಪಾಳಯಕ್ಕೆ ಸೆಳೆಯಲು ತೆರೆಮರೆ ಕಸರತ್ತು ನಡೆದಿದೆ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಿದ್ಧಾಂತ ಒಪ್ಪಿ ಬರುವುದಾದರೆ ಸ್ವಾಗತ ಎಂದು ಹೇಳುವ ಮೂಲಕ ಕಾಂಗ್ರೆಸ್ ಸೇರ್ಪಡೆಗೆ ಮುಕ್ತ ಅವಕಾಶ ನೀಡಿದ್ದಾರೆ. ಇದಕ್ಕೆ 'ಬೆಂಬಲಿಗರ ಸಭೆ ನಂತರ ತೀರ್ಮಾನಿಸುವುದಾಗಿ' ತಿಳಿಸಿರುವ ಯೋಗೇಶ್ವರ್ ಕಾದು ನೋಡುವ ತಂತ್ರಕ್ಕೆ ಮೊರೆ ಹೋಗಿದ್ದಾರೆ.

ಯುದ್ಧ ಕೊನೆಗೊಳಿಸುವ ಕುರಿತು ಪುಟಿನ್, ಮೋದಿ ಮಾತು

ರಷ್ಯಾ-ಉಕ್ರೇನ್ ಸಂಘರ್ಷ ಅಂತ್ಯಕ್ಕೆ ಭಾರತ ಶಾಂತಿ ಸೂತ್ರ

ಮಾಸ್ಕೋ: ಉಕ್ರೇನ್-ರಷ್ಯಾ ಸಂಘರ್ಷಕ್ಕೆ ಶಾಂತಿಯುತ ಪರಿಹಾರ ಕಂಡುಕೊಳ್ಳಲು ಭಾರತ ಸರ್ವರೀತಿಯಲ್ಲೂ ನೆರವಾಗಲು ಸಿದ್ಧವಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜತೆಗಿನ ಮಾತುಕತೆ ವೇಳೆ ಪ್ರಧಾನಿ ನರೇಂದ್ರ ಮೋದಿ ವಾಗ್ದಾನ ನೀಡಿದ್ದಾರೆ.

ರಷ್ಯಾದ ಕಜಾನ್‌ನಲ್ಲಿ ಆಯೋಜಿತವಾಗಿರುವ 16ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲು ಮಂಗಳವಾರ ಮಧ್ಯಾಹ್ನ 1ರ ವೇಳೆ ಮಾಸ್ಕೊ ತಲುಪಿದ ಪ್ರಧಾನಿ ಮೋದಿ, ಆಪ್ತ ಮಿತ್ರ ಪುಟಿನ್ ಅವರನ್ನು ಸಂದಿಸಿ ಮಾತುಕತೆ ನಡೆಸಿದರು. ಮೊದಲಿಗೆ ಉಭಯ ನಾಯಕರು ಪರಸ್ಪರ ಆಲಂಗಿಸಿ ಕುಶಲೋಪರಿ ನಡೆಸಿದರು.

ರಷ್ಯಾ-ಉಕ್ರೇನ್ ಸಂಘರ್ಷದ ವಿಚಾರವಾಗಿ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಎರಡೂ ದೇಶಗಳ ನಾಯಕರ ಜತೆ ಭಾರತ ಸತತ ಸಂಪರ್ಕದಲ್ಲಿದೆ. ಯಾವುದೇ ಸಮಸ್ಯೆಗೂ, ಸಂಘರ್ಷಗಳಿಗೂ ಮಾತುಕತೆ ಮೂಲಕವೇ ಶಾಂತಿಯುತ ಪರಿಹಾರ ಕಂಡುಕೊಳ್ಳಬಹುದು ಎಂಬುದು ಭಾರತದ ಸ್ಪಷ್ಟ ನಿಲುವಾಗಿದೆ ಎಂದು ಮೋದಿ ಪುನರುಚ್ಚರಿಸಿದರು.

ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ(ಬಿಆರ್‌ಐಸಿಎಸ್-ಬ್ರಿಕ್ಸ್) ದೇಶಗಳನ್ನು ಒಳಗೊಂಡಿರುವ ಅನೌಪಚಾರಿಕ ಗುಂಪಿನ ಶೃಂಗಸಭೆ ಕಜಾನ್‌ನಲ್ಲಿ ಆಯೋಜಿಸಿರುವುದಕ್ಕೆ ಪುಟಿನ್ ಅವರಿಗೆ ಧನ್ಯವಾದ ಹೇಳಿದ ಮೋದಿ, ಬ್ರಿಕ್ಸ್ ಗುಂಪಿನ ಯಶಸ್ಸನ್ನು ಉಲ್ಲೇಖಿಸಿದರು. ಇದರಿಂದ ಪ್ರೇರಣೆಗೊಂಡ ಹಲವು ರಾಷ್ಟ್ರಗಳು 'ಬ್ರಿಕ್ಸ್' ಸೇರಲು ಬಯಸುತ್ತಿವೆ ಎಂದು ಇದೇ ವೇಳೆ ಗಮನ ಸೆಳೆದರು.

ಬ್ರಿಕ್ಸ್ ಶೃಂಗಸಭೆಗೆಂದು ರಷ್ಯಾಗೆ ತೆರಳಿರುವ ಪ್ರಧಾನಿ ಮೋದಿ ಅವರದು ಈ ವರ್ಷದಲ್ಲಿ 2ನೇ ಮಾಸ್ಕೊ ಭೇಟಿಯಾಗಿದೆ.

- ಮಾಸ್ಕೊ ತಲುಪಿದ ಪ್ರಧಾನಿ ಮೋದಿ
- ಈ ವರ್ಷದಲ್ಲಿ 2ನೇ ಬಾರಿ ಭೇಟಿ

ವಿಶ್ವದೆಲ್ಲೆಡೆ ಶಾಂತಿ ನೆಲೆಸುವಂತೆ ಮಾಡುವುದಕ್ಕೆ ಯಾವುದೇ ರೀತಿಯ ಸಹಾಯ ಮಾಡಲು ಭಾರತ ಸದಾ ಸಿದ್ಧವಾಗಿದೆ.
- ನರೇಂದ್ರ ಮೋದಿ, ಪ್ರಧಾನಿ

85 ಭಾರತೀಯ ಸೈನಿಕರ ಬಿಡುಗಡೆ

ದೆಹಲಿ: ರಷ್ಯಾ ಸೇನೆಯು ಈವರೆಗೆ ಭಾರತ ಮೂಲದ 85 ಸೈನಿಕರನ್ನು ಬಿಡುಗಡೆ ಮಾಡಿದೆ. ಉಳಿದ 20 ಸೈನಿಕರ ಬಿಡುಗಡೆ ಪ್ರಯತ್ನ ಮುಂದುವರಿದಿದ್ದು, ಭಾರತವು ರಷ್ಯಾದ ರಕ್ಷಣಾ ಸಚಿವಾಲಯದೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ತಿಳಿಸಿದರು.

ಪೇಶಾವರ, ದೆಹಲಿ ಮಾಲಿನ್ಯ ನಗರ

ಲಾಹೋರ್: ವಿಶ್ವದ ಅತ್ಯಂತ ಮಾಲಿನ್ಯ ನಗರ ಪಟ್ಟಿಯನ್ನು ಎಕ್ಯೂಐ ಬಿಡುಗಡೆ ಮಾಡಿದ್ದು, ಪಾಕ್‌ನ ಪೇಶಾವರ ಹಾಗೂ ದೆಹಲಿ 2 ಹಾಗೂ 3ನೇ ಸ್ಥಾನದಲ್ಲಿವೆ. ಆಸ್ಟ್ರೇಲಿಯಾದ ಮೌಂಟ್ ಇಸಾ ವಿಶ್ವದ ಅತ್ಯಂತ ಮಾಲಿನ್ಯ ನಗರ ಎಂಬ ಕುಖ್ಯಾತಿಗೆ ಪಾತ್ರವಾಗಿದೆ.

ಚಂಡಮಾರುತ ಸಾಧ್ಯತೆ

ಭುವನೇಶ್ವರ: ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದ ಪರಿಣಾಮ ತೀವ್ರ, ಚಂಡಮಾರುತ ರೂಪಗೊಳ್ಳುವ ಸಾಧ್ಯತೆ ಇರುವುದರಿಂದ ಒಡಿಶಾ ಸರಕಾರ 800ಕ್ಕೂ ಹೆಚ್ಚು ಪರಿಹಾರ ಕೇಂದ್ರಗಳನ್ನು ಸಿದ್ಧಪಡಿಸಿದೆ. ಈಗಾಗಲೇ ತಗ್ಗು ಪ್ರದೇಶದಲ್ಲಿರುವ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಲಾಗಿದೆ.

10 ಗ್ರಾಂ ಅಪರಂಜಿ ಚಿನ್ನಕ್ಕೆ ₹81 ಸಾವಿರ

ಕೆ.ಜಿ. ಬೆಳ್ಳಿಗೆ 1 ಲಕ್ಷ ರು.

ದೆಹಲಿ: ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಬೆಳ್ಳಿ ಧಾರಣೆಯು ಕೆ.ಜಿಗೆ ₹1 ಲಕ್ಷ ದಾಟಿದೆ. 10 ಗ್ರಾಂ ಚಿನ್ನದ ದರವು ₹350 ಏರಿಕೆಯಾಗಿ, ₹81 ಸಾವಿರದಂತೆ ಮಾರಾಟ ವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1,500 ಹೆಚ್ಚಳವಾಗಿ ₹1.01 ಲಕ್ಷಕ್ಕೆ ಮುಟ್ಟಿದೆ. ಬೆಳ್ಳಿಯು ವಿದ್ಯುತ್ ಹಾಗೂ ಶಾಖದ ಅತ್ಯುತ್ತಮ ವಾಹಕವಾಗಿದೆ. ಎಲೆಕ್ಟ್ರಾನಿಕ್ಸ್, ಸರ್ಕಿಟ್ ಬೋರ್ಡ್, ಸೌರ ಫಲಕ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಕೈಗಾರಿಕಾ ವಲಯದಿಂದ ಬೇಡಿಕೆ ಹೆಚ್ಚಳವಾಗಿದೆ ಎಂದು ತಜ್ಞರು ತಿಳಿಸಿದ್ದಾರೆ.

ಹೂಡಿಕೆದಾರರಿಗೆ 9 ಲಕ್ಷ ಕೋಟಿ ನಷ್ಟ

ಷೇರು ಮಾರುಕಟ್ಟೆ ಕುಸಿತ



ಮುಂಬೈ: ಸತತ ಕುಸಿತದ ಹಾದಿಯಲ್ಲಿದ್ದ ಭಾರತೀಯ ಷೇರು ಮಾರುಕಟ್ಟೆ ಮಂಗಳವಾರ ಮತ್ತೊಂದು ಭಾರಿ ಕುಸಿತಕ್ಕೆ ಸಾಕ್ಷಿಯಾಗಿದ್ದು, ಹೂಡಿಕೆದಾರರ 9.19 ಲಕ್ಷ ಕೋಟಿ ರು. ನಷ್ಟವಾಗಿದೆ. ಸೆನ್ಸೆಕ್ಸ್ 930.55 ಅಂಕಗಳನ್ನು ಕಳೆದುಕೊಂಡಿದ್ದು, ದಿನದ ವಹಿವಾಟು ಅಂತ್ಯಕ್ಕೆ 80,220. 72 ಅಂಕಗಳಿಗೆ ಕುಸಿದು ದಿನದ ವಹಿವಾಟು ಅಂತ್ಯಗೊಳಿಸಿದೆ. ಅಂತೆಯೇ ನಿಫ್ಟಿ ಕೂಡ 309.00 ಅಂಕಗಳ ಕುಸಿತಕಂಡಿದ್ದು, 24,472.10 ಅಂಕಗಳಿಗೆ ಕುಸಿದಿದೆ. ಷೇರುಮಾರುಕಟ್ಟೆಯ ಸೆನ್ಸೆಕ್ಸ್ ಸೂಚ್ಯಂಕ ಬರೋಬ್ಬರಿ ಶೇ.1.15ರಷ್ಟು ಕುಸಿದಿದ್ದು, ನಿಫ್ಟಿ ಸೂಚ್ಯಂಕ ಶೇ.1.25 ಕುಸಿದಿದೆ.



ವಯನಾಡ್ ಲೋಕಸಭಾ ಕ್ಷೇತ್ರದ ಉಪ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿರುವ ಪ್ರಿಯಾಂಕಾ ಗಾಂಧಿ ಅವರು ತಮ್ಮ ತಾಯಿ ಸೋನಿಯಾ ಗಾಂಧಿ ಜತೆ ಮೈಸೂರು ವಿಮಾನ ನಿಲ್ದಾಣಕ್ಕೆ ಮಂಗಳವಾರ ಬಂದರು. ಇಬ್ಬರನ್ನೂ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಬರಮಾಡಿಕೊಂಡರು. ಪ್ರಿಯಾಂಕಾ ಅವರು ಬುಧವಾರ ನಾಮಪತ್ರ ಸಲ್ಲಿಸಲಿದ್ದಾರೆ.

ವರುಣ ಕ್ಷೇತ್ರದಲ್ಲಿ ₹501 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ

ನನ್ನ ಜೀವನ ತೆರೆದ ಪುಸ್ತಕ, ಯಾರು ಬೇಕಾದರೂ ಓದಬಹುದು: ಸಿಎಂ

ಮೈಸೂರು: ಸಿದ್ದರಾಮಯ್ಯ 42 ವರ್ಷದ ರಾಜಕಾರಣದಲ್ಲಿ ಎಂದೂ ಬಡವರಿಗೆ ಅನ್ಯಾಯ ಮಾಡಿಲ್ಲ. ಒಂದು ರುಪಾಯಿ ಲಂಚ ಪಡೆದಿಲ್ಲ, ನನ್ನ ಮೇಲಿನ ಸುಳ್ಳು ಆರೋಪವನ್ನು ಸಹಿಸುತ್ತೀರಾ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಕ್ಷೇತ್ರ ವರುಣದ ಮತದಾರರನ್ನು ಪ್ರಶ್ನಿಸಿದರು.

ಕ್ಷೇತ್ರದಲ್ಲಿ ₹501 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿದ ಅವರು, ಸಾರ್ವಜನಿಕರಿಂದ ಹಣ ಪಡೆದಿದ್ದರೆ 9 ಚುನಾವಣೆ ಗೆಲ್ಲಲು ಆಗುತ್ತಿತ್ತಾ? ನನ್ನ ಜೀವನ ತೆರೆದ ಪುಸ್ತಕ, ಯಾರೂ ಬೇಕಾದರೂ ಓದಬಹುದು ಎಂದರು.

ನನ್ನ ಭಾವಮೈದುನ ತಂಗಿಗೆ ಅರಿಶಿನ ಕುಂಕುಮಕ್ಕೆ ಕೊಟ್ಟ ಜಮೀನನ್ನು ವಿವಾದ ಮಾಡಿದರು. ಅದಕ್ಕೇ ನಿವೇಶನವನ್ನೇ ವಾಪಸ್ ಕೊಟ್ಟಿದ್ದೇವೆ. 40 ವರ್ಷಗಳಿಂದ ಶಾಸಕನಾಗಿದ್ದರೂ ಸ್ವಂತ ಮನೆ ಇಲ್ಲ. ಮೈಸೂರಿನಲ್ಲಿ ಮರಿಸ್ವಾಮಿ ಎಂಬುವವರ ಮನೆಯಲ್ಲಿದ್ದೇನೆ. ಮೂರು ವರ್ಷದಿಂದ ಮೈಸೂರಿನ ಕುವೆಂಪು ರಸ್ತೆಯಲ್ಲಿ ಮನೆ ಕಟ್ಟಿಸುತ್ತಿದ್ದೇನೆ. ನೀವೇ ನಮ್ಮ ಮಾಲೀಕರು, ನೀವೇ ಯಜಮಾನರು. ನೀವು ಮಾತನಾಡಿ ಎಂದರು.

- ಕುಮಾರಸ್ವಾಮಿ, ಯಡಿಯೂರಪ್ಪ, ಜೋಶಿ, ವಿಜಯೇಂದ್ರ ಮೊದಲಾದವರಿಗೆ ನನ್ನನ್ನು ಕಂಡರೆ ಹೊಟ್ಟೆ ಉರಿ.
- ಒಬ್ಬ ಸಿಎಂ ಮೇಲೆ ಗೂಬೆ ಕೂರಿಸುವ ಕೆಲಸ ಆಗುತ್ತಿದೆ. ಕಾಯಾ ವಾಚಾ ಮನಸಾ ಪ್ರಾಮಾಣಿಕವಾಗಿ ಇದ್ದೇನೆ.
- ನನಗೆ ಜಾತಿ-ಧರ್ಮದ ಹಂಗಿಲ್ಲ. ಎಲ್ಲರಿಗೂ ನ್ಯಾಯ ಕೊಡಿಸುವ ಕೆಲಸ ಮಾಡಲಿದ್ದೇನೆ.

ಸಿಎಂ ಸಿದ್ದರಾಮಯ್ಯ ಅವರು ವರುಣ ಕ್ಷೇತ್ರದಲ್ಲಿ ₹501 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿದರು.

ನಿಮ್ಮ ಆಶೀರ್ವಾದ ಇರುವವರೆಗೆ ಬಿಜೆಪಿ-ಜೆಡಿಎಸ್ ಅನ್ನು ಸಮರ್ಥವಾಗಿ ಎದುರಿಸಲಿದ್ದೇನೆ. ಅವರ ಸುಳ್ಳು ಆರೋಪಗಳಿಗೆ ಜಗ್ಗುವುದಿಲ್ಲ, ಬಗ್ಗುವುದು ಇಲ್ಲ. ಕಾನೂನಿನ ಮೇಲೆ ಗೌರವ ಇದ್ದು, ಅಲ್ಲಿಯೇ ನ್ಯಾಯ ಸಿಗುವ ವಿಶ್ವಾಸ ಇದೆ. ನಾನು ಇರುವವರೆಗೂ ಬಡವರಿಗೆ ನ್ಯಾಯ ಕೊಡಿಸುತ್ತೇನೆ. ಎಂದೂ ಮತದಾರರಿಗೆ ಅಗೌರವ ತರುವ ಕೆಲಸ ಮಾಡುವುದಿಲ್ಲ.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ಮುಸ್ಲಿಂ ಪುರುಷರು ಒಂದಕ್ಕಿಂತ ಹೆಚ್ಚು ಮದುವೆಯಾಗಬಹುದು

ಬಾಂಬೆ ಹೈಕೋರ್ಟ್‌ನಿಂದ ಮಹತ್ವದ ತೀರ್ಪು | ಮೂರನೇ ವಿವಾಹ ನೋಂದಣಿ ಮಾಡಿಕೊಳ್ಳಲು ಅನುಮತಿ ಕೋರಿದ್ದ ಅರ್ಜಿ ಪುರಸ್ಕಾರ

ಮುಂಬೈ: ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ ಪುರುಷನಿಗೆ ಒಂದಕ್ಕಿಂತ ಹೆಚ್ಚು ವಿವಾಹವಾಗುವ ಅವಕಾಶವಿದ್ದು, ಅದನ್ನು ನೋಂದಾಯಿಸಿಕೊಳ್ಳ ಬಹುದು ಎಂದು ಬಾಂಬೆ ಹೈಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದೆ.

ಮುಸ್ಲಿಂ ವ್ಯಕ್ತಿಯೊಬ್ಬ ಅಲ್ಜೀರಿಯಾದ ತನ್ನ ಮೂರನೇ ಪತ್ನಿ ನಡುವಿನ ಮದುವೆಯ ನೋಂದಣಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾ.ಬಿ.ಪಿ. ಕೊಲಬವಾಲಾ ಹಾಗೂ ನ್ಯಾ.ಸೋಮಶೇಖರ ಸುಂದರೇಶನ್ ಅವರಿದ್ದ ಪೀಠವು, ಇದರ ಸಾಧ್ಯತೆ ಕುರಿತು ವಿವಾಹ ಉಪನೋಂದಣಾಧಿಕಾರಿಗೆ ಅ.15ರಂದು ನಿರ್ದೇಶಿಸಿತ್ತು.

'ಅರ್ಜಿದಾರ ಮೂರನೇ ಮದುವೆಯಾಗುತ್ತಿದ್ದು, ಮಹಾರಾಷ್ಟ್ರ ವಿವಾಹ ನಿಯಂತ್ರಣ ಹಾಗೂ ನೋಂದಣಿ ಕಾಯಿದೆಯಡಿ ಸಿಂಧುವಲ್ಲ' ಎಂದು ಪ್ರಾಧಿಕಾರವು ಹೈಕೋರ್ಟ್‌ಗೆ ತಿಳಿಸಿತ್ತು. ಜತೆಗೆ, 'ಯಾವುದೇ ವ್ಯಕ್ತಿಗೆ ಒಂದು ವಿವಾಹಕ್ಕಷ್ಟೇ ಅವಕಾಶವಿದ್ದು, ಬಹು ಪತ್ನಿತ್ವಕ್ಕೆ ಅವಕಾಶವಿಲ್ಲ' ಎಂದಿತ್ತು. ಇದನ್ನು ಪ್ರಶ್ನಿಸಿದ್ದ ದಂಪತಿ, ತಾವು ಠಾಣೆಯ ಪಾಲಿಕೆಗೆ ಅರ್ಜಿ ಸಲ್ಲಿಸಿದ್ದು, ವಿವಾಹ ನೋಂದಣಿ ಪ್ರಮಾಣಪತ್ರವನ್ನು ವಿತರಿಸುವಂತೆ ಪ್ರಾಧಿಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು.

- ಮೂರನೇ ಪತ್ನಿಯ ಮದುವೆಯ ನೋಂದಣಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸಿದ್ದ ಬಾಂಬೆ ಹೈಕೋರ್ಟ್
- ಮುಸ್ಲಿಮರ ವೈಯಕ್ತಿಕ ಕಾನೂನಿನಲ್ಲಿ ನಾಲ್ಕು ಪತ್ನಿಯರನ್ನು ಏಕಕಾಲಕ್ಕೆ ಹೊಂದಬಹುದು ಎಂದು ಹೇಳಲಾಗಿದೆ ಎಂದ ಪೀಠ
- ಮುಸ್ಲಿಮರ ವೈಯಕ್ತಿಕ ಕಾನೂನನ್ನು ಪರಿಗಣಿಸಲಾಗದು ಎಂದು ಹೇಳಲು ಕಾನೂನಿನಲ್ಲಿ ಅವಕಾಶವಿಲ್ಲ ಎಂದ ನ್ಯಾಯಾಲಯ

ಸಮಾಚಾರ ಸಣ್ಣದಲ್ಲ

ಶ್ರೀ ಪುಟ್ಟರಾಜ ಸಂಗೀತ ಶಾಲೆ ಉತ್ಸವಕ್ಕ ಆಯ್ಕೆ

ಗುಳೇದಗುಡ್ಡ: ಜಿಲ್ಲಾಡಳಿತ ಬೆಳಗಾವಿ,ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಅ.23ರಿಂದ 25ರ ವರೆಗೆ ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ನಡೆಯಲಿರುವ ಕಿತ್ತೂರು ರಾಣಿ ಚೆನ್ನಮ್ಮಾಜಿ ಅವರ 200ನೇ ವರ್ಷದ ವಿಜಯೋತ್ಸವದ ಚೆನ್ನಮ್ಮನ ಕಿತ್ತೂರು ಉತ್ಸವ 2024ಕ್ಕೆ ಪಟ್ಟಣದ ಶ್ರೀಗುರುಪುಟ್ಟರಾಜ ಸಂಗೀತ ಪಾಠಾಶಾಲೆಯ ಪ್ರಾಚಾರ್ಯ ಬಸವರಾಜ ಸಿಂದಗಿಮಠ, ವೈಷ್ಣವಿ ಗೂಳಿ, ಮೌನೇಶ ಬಡಿಗೇರ, ಚಂದ್ರಶೇಖರ ಆಲೂರ, ಬಸವರಾಜ ಜಿಡಿಗಿ, ಶಂಕರ ಬಸುದೆ ಆಯ್ಕೆಯಾಗಿದ್ದಾರೆ.

ವಾಲ್ಮೀಕಿ ಜಯಂತಿ ಆಚರಣೆ

ಗುಳೇದಗುಡ್ಡ: ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಪಟ್ಟಣದ ಸಂಗೊಂದಿ ಓಣಿಯ ಹಿರಿಯರು ಹಾಗೂ ಯುವಕ ಮಿತ್ರರಿಂದ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಜಯಂತಿ ಆಚರಿಸಲಾಯಿತು. ಸಮಾಜದ ಮಹಾಗುಂಡಪ್ಪ ದಂಡೀನ, ನಾಗಪ್ಪ ತಳವಾರ, ರಾಮಣ್ಣ ಆಡಗಲ್ಲ, ಶಿವಲಿಂಗಪ್ಪ ಯತ್ತಿನಮನಿ, ಬಸಪ್ಪ ಸಂಗೊಂದಿ, ಶಿವಪ್ಪ ಸಂಗೊಂದಿ, ಬಸವರಾಜ ತಳವಾರ, ಶಿವು ಕಬ್ಬಲಗೇರಿ, ಪರಶುರಾಮ ಸಂಗೊಂದಿ, ರಮೇಶ ಅಮರಾವತಿ, ಪಡಿಯಪ್ಪ ತಳವಾರ, ಪರಸಪ್ಪ ಸಂಗೊಂದಿ, ಸಂಗಪ್ಪ ಸಂಗೊಂದಿ, ಸೋಮಶೇಖ ಆಡಗಲ್ಲ ಮತ್ತಿತರರು ಇದ್ದರು.

ಮಳೆಗೆ ನಾಲ್ಕು ಮನೆಗಳಿಗೆ ಹಾನಿ

ರಬಕವಿ-ಬನಹಟ್ಟಿ: ರಬಕವಿ ಬನಹಟ್ಟಿ ನಗರಸಭೆಯ ವ್ಯಾಪ್ತಿಯಲ್ಲಿ ಈಚೆಗೆ ಸುರಿದ ಭಾರಿ ಮಳೆಗೆ ಬನಹಟ್ಟಿ ನಗರದ ನಾಲ್ಕು ಮನೆಗಳಿಗೆ ಭಾಗಶಃ ಹಾನಿಯಾಗಿದೆ ಎಂದು ರಬಕವಿ ಬನಹಟ್ಟಿ ಪೌರಾಯುಕ್ತ ಜಗದೀಶ ಈಟಿ ತಿಳಿಸಿದರು. ಬನಹಟ್ಟಿ ನಗರದ ಹರಿಜನ ಕೇರಿಯಲ್ಲಿ ಮೂರು ಮತ್ತು ಕೊಳಕಿ ಓಣಿಯಲ್ಲಿ ಒಂದು ಮನೆಗೆ ಹಾನಿಯಾಗಿದೆ. ನಗರಸಭೆಯ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಹಾನಿಯಾದ ಮನೆಗಳಿಗೆ ಭೇಟಿ ನೀಡಿ ವರದಿಯನ್ನು ಸಲ್ಲಿಸಲಾಗಿದೆ ಎಂದು ಜಗದೀಶ ಈಟಿ ತಿಳಿಸಿದರು. ನಗರಸಭೆಯ ಎಂಜಿನಿಯರ್ ವೈಶಾಲಿ ಹಿಪ್ಪರಗಿ, ಪವಾರ, ಗ್ರಾಮ ಲೆಕ್ಕಾಧಿಕಾರಿ ಸದಾಶಿವ ಕುಂಬಾರ, ಪ್ರವೀಣ ಬಾರಟಕ್ಕೆ ಇದ್ದರು.

ಬೂತ್ ಮಟ್ಟದಿಂದ ಪಕ್ಷ ಬಲಪಡಿಸೋಣ

ರಬಕವಿ-ಬನಹಟ್ಟಿ: ಬೂತ್ ಮಟ್ಟದಲ್ಲಿ ಪಕ್ಷ ಬಲಪಡಿಸಲು ಕೆಪಿಸಿಸಿ 'ಕಾಂಗ್ರೆಸ್ ಕುಟುಂಬ ಹೊಸ ಉಪಕ್ರಮವನ್ನು ಪ್ರಾರಂಭಿಸಿದೆ. ಇದರಂಗವಾಗಿ ಪ್ರತಿ ಬೂತ್‌ನಲ್ಲಿ 50 ಪಕ್ಷದ ಕಾರ್ಯಕರ್ತರನ್ನು ಗುರ್ತಿಸಿ ದಾಖಲಿಸುವದು. ಪಕ್ಷದ ಎಲ್ಲಾ ಚಟುವಟಿಕೆಗಳು ಒಳಗೊಂಡಿದ್ದು ಈಗಾಗಲೇ ರಾಜ್ಯದಲ್ಲಿ ಯಶಸ್ವಿ ಕಾಣುತ್ತಿದ್ದು, ಇನ್ನುಳಿದ ಬೂತ್‌ಗಳಲ್ಲಿಯೂ ಈ ಕಾರ್ಯ ಶೀಘ್ರ ಜಾರಿಯಾಗಬೇಕೆಂದು ವಿಧಾನಪರಿಷತ್ ಸದಸ್ಯ ಸನೀಲಗೌಡ ಪಾಟೀಲ ಹೇಳಿದರು. ರಬಕವಿಯ ಶಿವದಾಸಿಮಯ್ಯ ಸಮುದಾಯ ಭವನದಲ್ಲಿ ಕಾಂಗ್ರೆಸ್ ಮುಖಂಡರ ಹಾಗು ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪಕ್ಷವನ್ನು ತಳಮಟ್ಟದಲ್ಲಿ ಬಲಪಡಿಸಲು ಕಾಂಗ್ರೆಸ್ ಈ ಹೊಸ ಯೋಜನೆ ಹಾಕಿಕೊಂಡಿದ್ದು, ಬೂತ್ ಮಟ್ಟದಲ್ಲಿ ಪಕ್ಷದ ಕಾರ್ಯಕರ್ತರನ್ನು ಕಟ್ಟಿ ಬೆಲೆಸಬೇಕು. ಸರಕಾರ ಕೇವಲ 4 ವರ್ಷವಲ್ಲ 10 ವರ್ಷದ ಸರಕಾರ, ಈಗಿನಿಂದಲೇ ಇದಕ್ಕೆ ಸಿದ್ದತೆ ಮಾಡಿಕೊಳ್ಳಬೇಕು. ಮುಖಂಡರು ಹಾಗು ಕಾರ್ಯಕರ್ತರು ಈಗಿನಿಂದಲೇ ಸಿದ್ದತೆ ನಡೆಸಿ ತೇರದಾಳ ಕ್ಷೇತ್ರವನ್ನೂ ಕಾಂಗ್ರೆಸ್ ತೆಕ್ಕೆಗೆ ಪಡೆಯಲು ಯಾವ ರೀತಿ ಕಾರ್ಯ ಮಾಡಬೇಕೆಂಬುದನ್ನು ಸುನೀಲಗೌಡ ಪಾಟೀಲ ಹೇಳಿದರು. ಭೀಮಶಿ ಮಗದುಮ್, ನೀಲಕಂಠ ಮುತ್ತೂರ, ಮಲ್ಲಪ್ಪ ಸಿಂಗಾಡಿ, ಲಕ್ಷ್ಣ ದೇಸಾರಟ್ಟಿ, ದೇವಲ ದೇಸಾಯಿ, ಬಸವರಾಜ ಕೊಕಟನೂರ, ಹರ್ಷವರ್ಧನ ಪಟವರ್ಧನ, ಸಂಗಪ್ಪ ಕುಂದಗೋಳ, ಗೌತಮ ರೋಡಕರ, ನೀಲೇಶ ದೇಸಾಯಿ, ರೇಣುಕಾ ಮಡ್ಡಿಮನಿ, ಎಸ್.ಎಂ. ಪಾಟೀಲ, ರಂಗನಗೌಡ ಪಾಟೀಲ, ಅನೀಲ ಬೀಳಗಿ, ಬರಮು ಉಳ್ಳಾಗಡ್ಡಿ, ಪಿಂಟು ಕುಂಬಾರ, ರವಿ ಚನ್ನಬಸನ್ನವರ, ಕಿರಣ ಕರಲಟ್ಟಿ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ವಿರಾಮ
ಪ್ರತಿ ಭಾನುವಾರ

ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಮಾಹಿತಿ | ಮೂರು ದಿನ ವಿವಿಧ ವಸ್ತುಗಳ ಪ್ರದರ್ಶನ, ಮಾರಾಟ

ಬಿವಿವಿ ಸಂಘದ ಆರ್‌ಸೆಟ್‌ನ ಮಹೋತ್ಸವ 26ಕ್ಕೆ

ಬಾಗಲಕೋಟೆ: ನಗರದ ಬಿವಿವಿ ಸಂಘದ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ, ಕೊಟಕ್ ಮಹೀಂದ್ರಾ ಬ್ಯಾಂಕ್‌ನ ಆರ್‌ಸೆಟ್ ಸಂಸ್ಥೆಯ ರಜತ ಮಹೋತ್ಸವ ಸಮಾರಂಭವನ್ನು ಅ.26 ರಂದು ಹಮ್ಮಿಕೊಳ್ಳಲಾಗಿದೆ ಎಂದು ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಆರ್‌ಸೆಟ್ ಸಂಸ್ಥೆ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ 1999ರ ಅ.2 ರಂದು ಸ್ಥಾಪಿತವಾಗಿದ್ದು, ಈಗ ರಜತ ಮಹೋತ್ಸವ ಆಚರಿಸಿಕೊಳ್ಳುತ್ತಿದೆ ಎಂದರು.

26 ರಂದು ಬೆಳಿಗ್ಗೆ 10.30ಕ್ಕೆ ಬಸವೇಶ್ವರ ಎಂಜನಿಯರಿಂಗ್ ಕಾಲೇಜಿನ ಆಡಿಟೋರಿಯಂನಲ್ಲಿ ರಜತ ಮಹೋತ್ಸವ ಸಮಾರಂಭ ನಡೆಯಲಿದ್ದು, ಸಂಸದ ಪಿ.ಸಿ.ಗದ್ದಿಗೌಡರ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿಪಂ ಸಿಇಒ ಶಶಿಧರ ಕುರೇರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಆರ್‌ಸೆಟ್ ರಜತ ಮಹೋತ್ಸವದ ಅಂಗವಾಗಿ ಅ.26 ರಿಂದ 28ರ ವರೆಗೆ ಮೂರು ದಿನ ಗೌರಿಶಂಕರ ಕಲ್ಯಾಣ ಮಂಟಪದಲ್ಲಿ ವಿವಿಧ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮಳಿಗೆಗಳನ್ನು ಹಾಕಲಾಗುವುದು ಎಂದು ತಿಳಿಸಿದ ಅವರು, ಔಪಚಾರಿಕ ಶಿಕ್ಷಣದ ಜತೆಗೆ

ಬಾಗಲಕೋಟೆಯ ಬಿವಿವಿ ಸಂಘದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಮಾತನಾಡಿದರು.

ಶಿಕ್ಷಣವಿಲ್ಲದೇ ವಿಶೇಷವಾಗಿ ಬಡ ತನ ರೇಖೆಗಿಂತ ಕೆಳಗಿರುವ ವರ್ಗಕ್ಕೆ ಸೇರಿದ 18 ರಿಂದ 45 ವರ್ಷ ವಯಸ್ಸಿನ ನಿರುದ್ಯೋಗಿ ಗ್ರಾಮೀಣ ಯುವ ಸಮೂಹಕ್ಕೆ ಕೌಶಲ ತರಬೇತಿ ನೀಡುತ್ತ ಬಂದಿದ್ದು, ಈತನಕ ಒಟ್ಟು 1,236 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ ಎಂದು ತಿಳಿಸಿದರು.

30 ಸಾವಿರ ಮಹಿಳೆಯರು, 10,600 ಪುರುಷರು ಹಾಗೂ 260 ಜನ ತೃತೀಯ ಲಿಂಗಿಗಳು ಸೇರಿ ಈವರೆಗೆ 41 ಸಾವಿರ ಅಭ್ಯರ್ಥಿಗಳಿಗೆ ಸಂಸ್ಥೆಯಿಂದ ತರಬೇತಿ ನೀಡಿದ್ದು, ಇದರಲ್ಲಿ 31 ಸಾವಿರ ಜನ ಸ್ವಯಂ ಉದ್ಯೋ ಗ ಕೈಗೊಂಡು ಬದುಕಿಗೆ ನೆಲೆ ಕಂಡುಕೊಂಡಿದ್ದಾರೆ. ಸರಕಾರದ ಪ್ರಾಯೋಜಕತ್ವದಲ್ಲಿ ವಿವಿಧ ರೀತಿಯ ತರಬೇತಿಗಳನ್ನು ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನದ ಕಾರ್ಯನಿರ್ವಾಹಕ ನಿರ್ದೇಶಕ ಬಿ.ಎಸ್.ಅಂಗಡಿ ಮಾತನಾಡಿ, ಆರ್‌ಸೆಟ್ ಸಂಸ್ಥೆ 60 ವಿಷಯಗಳಲ್ಲಿ ತರಬೇತಿ ನೀಡುತ್ತಿದ್ದು, ಈ ವರ್ಷ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಟೇಲರಿಂಗ್, ಬ್ಯೂಟಿ ಪಾರ್ಲರ್, ಪಾಲ್ಟ್ರಿ ಫಾರ್ಮ, ಸಾವಯವ ಕೃಷಿ ಹೀಗೆ ಅನೇಕ ರೀತಿಯ ತರಬೇತಿ ನೀಡಲಾಗುತ್ತಿದ್ದು, ಸುಸಜ್ಜಿತ ವರ್ಕಶಾಪ್ ಇವೆ. ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಲಾಗುತ್ತಿದೆ. ಊಟ, ವಸತಿ ಉಚಿತವಾಗಿದ್ದು, ತರಬೇತಿಯ ನಂತರ ಪ್ರಮಾಣ ಪತ್ರ ನೀಡುವುದಲ್ಲದೇ, ಆರ್ಥಿಕ ಸಹಾಯ ಸಿಗುವಂತೆಯೂ ಸಂಸ್ಥೆ ಮಾಡುತ್ತಿದೆ ಎಂದು ತಿಳಿಸಿದರು.

ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನದ ಆಡಳಿತ ಮಂಡಳಿ ಸದಸ್ಯರಾದ ಮಹೇಶ ಅಥಣಿ, ಶಿವಾನಂದ ಶಾಬಾದಿ, ಬಸವರಾಜ ದೇಸಾಯಿ, ಎಸ್.ಆರ್. ಮನಹಳ್ಳಿ, ಆರ್‌ಸೆಟ್ ನಿರ್ದೇಶಕ ಶರಣಬಸವ ಹೂನೂರ ಇದ್ದರು.

ಕಾಟಾಚಾರಕ್ಕೆ ಪ್ರಕರಣ ದಾಖಲು

ಬಿಟಿಡಿಎದಲ್ಲಿ ನಿವೇಶನ ಪಡೆಯಲು ನಕಲಿ ಮತದಾರರ ಪಟ್ಟಿ ಸೃಷ್ಟಿಸಿದವರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಪ್ರಭಾವಿಗಳನ್ನು ಕೈ ಬಿಟ್ಟಿದ್ದಾರೆ. ಪ್ರಕರಣದಲ್ಲಿ ಇದ್ದವರು ಈಗಾಗಲೇ ಜಾಮೀನು ಪಡೆದು ಹೊರಗೆ ಬಂದಿದ್ದಾರೆ. ಇದರ ಹಿಂದೆ ದೊಡ್ಡವರಿದ್ದು, ಅವರ ಹೆಸರು ತೆಗೆದು ಕಾಟಾಚಾರಕ್ಕೆ ಪ್ರಕರಣ ದಾಖಲಿಸಿದ್ದಾರೆ. ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡುತ್ತಿದ್ದಾರೆ. ಬಿಟಿಡಿಎ ಬೋರ್ಡ್ ಮಿಟಿಂಗ್ ಗೌಪ್ಯವಾಗಿ ನಡೆಯುತ್ತಿದೆ. ಸಿಎಂ ನಮ್ಮವರು ಇದ್ದಾರೇ ಎನ್ನುವ ಕಾರಣಕ್ಕೆ ಎಲ್ಲವು ಗುಪ್ತ ಗುಪ್ತ ಆಗಿದೆ. ನಮ್ಮ ಅವಧಿಯಲ್ಲಿ ಬೋರ್ಡ್ ಸಭೆಯಲ್ಲಿ ಮಾಧ್ಯಮದವರಿಗೆ, ಸಾರ್ವಜನಿಕರಿಗೆ ಅತ್ಯಂತ ಮುಕ್ತವಾಗಿ ಇತ್ತು ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ತಿಳಿಸಿದರು.

ಜಾತಿ ಗಣತಿಗೆ ವಿರೋಧವಿದೆ

ಬಾಗಲಕೋಟೆ: ರಾಜ್ಯ ಸರಕಾರದ ಜಾತಿ ಗಣತಿ ಅವೈಜ್ಞಾನಿಕವಾಗಿದೆ. ವೀರಶೈವ ಲಿಂಗಾಯತ, ಒಕ್ಕಲಿಗ ಸಮಾಜದಲ್ಲಿ ಒಳ ಪಂಡಗಳಿವೆ. ಅವುಗಳನ್ನು ಒಡೆಯುವ ಹುನ್ನಾರ ಜಾತಿ ಗಣತಿಯಲ್ಲಿ ಅಡಗಿದೆ. ಹೀಗಾಗಿ ವೀರಶೈವ ಲಿಂಗಾಯತ ಮಹಾಸಭಾ ವಿರೋಧವಿದೆ. ಈ ವಿರೋಧಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಜಾತಿಗಣತಿಯಿಂದ ಯಾರಿಗೂ ಲಾಭವಿಲ್ಲ. ಒಡಕು ಸೃಷ್ಟಿಸಿ ತಪ್ಪು ದಾರಿಗೆ ಎಳೆಯುವ ಪ್ರಯತ್ನ ಅಡಗಿದೆ. ಸರಕಾರದಿಂದ ಸೌಲಭ್ಯ ದೊರೆಯುತ್ತದೆ ಎಂದು ಉಪಜಾತಿಗಳನ್ನು ಓಲೈಕೆ ಮಾಡುತ್ತಿದ್ದಾರೆ. ಇದರಿಂದ ಒಳ ಪಂಗಡ ಹೈಲೆಟ್ ಮಾಡುತ್ತಿದ್ದಾರೆ. ಲಿಂಗಾಯತ, ಒಕ್ಕಲಿಗ ಪ್ರಭಲ ಸಮುದಾಯ ಹಾಗೂ ಜನಸಂಖ್ಯೆ ಹೊಂದಿವೆ. ಉಪಜಾತಿಗಳ ಮೂಲಕ ಒಗ್ಗಟ್ಟು ಮುರಿಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಆರೋಪಿಸಿದರು.

ಬಿಜೆಪಿ ನೋಂದಣಿಯಲ್ಲಿ ಜಿಲ್ಲೆಗೆ 3ನೇ ಸ್ಥಾನ

ಬಾಗಲಕೋಟೆ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾರವರ ಸೂಚನೆ ಮೇರೆಗೆ ಸೆ.2ರಿಂದ ದೇಶಾದ್ಯಂತ ಆರಂಭಗೊಂಡ ಬಿಜೆಪಿ ಸದಸ್ಯತ್ವ ಅಭಿಯಾನದಲ್ಲಿ ಹೆಚ್ಚು ಕಾರ್ಯಕರ್ತರು, ಸದಸ್ಯರನ್ನು ಹೊಂದಿದ ಪಕ್ಷವಾಗಿ ಹೊರಹೊಮ್ಮಿದ್ದು,

ರಾಜ್ಯದಲ್ಲಿ ಜಿಲ್ಲೆಯ ಹೆಚ್ಚು ಸದಸ್ಯರನ್ನು ನೋಂದಣಿ ಮಾಡಿದ ಜಿಲ್ಲೆಯಾಗಿ ಮೂರನೇ ಸ್ಥಾನದಲ್ಲಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ತಿಳಿಸಿದರು.

ನವನಗರದ ಪತ್ರಿಕಾಭವನದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ 10 ಕೋಟಿ ಸದಸ್ಯರು ನೋಂದಣಿಯಾಗಿದ್ದು ಇದರ ಪೈಕಿ ರಾಜ್ಯದಲ್ಲಿ 55 ರಿಂದ 60 ಲಕ್ಷ ಸದಸ್ಯರು ನೋಂದಣಿ ಮಾಡಿಕೊಂಡಿದ್ದು ಜಿಲ್ಲೆಯಲ್ಲಿ ಕೂಡು 2,90,832 ಸದಸ್ಯರು ನೋಂದಣಿಯಾಗಿದ್ದಾರೆ ಎಂದು ತಿಳಿಸಿದರು.

ಗಣೇಶ ಹಾಗೂ ನವರಾತ್ರಿ ಹಬ್ಬದ ಮಧ್ಯೆಯೂ ಕಾರ್ಯಕರ್ತರು ಕ್ರೀಯಾಶೀಲವಾಗಿ ಹೆಚ್ಚೆಚ್ಚು ಸದಸ್ಯರನ್ನು ಪಕ್ಷಕ್ಕೆ ನೋಂದಣಿ ಮಾಡಿದ್ದಾರೆ. ಬಿಜೆಪಿ ಸದಸ್ಯತ್ವ ನೋಂದಣಿ ಅಕ್ಟೋಬರ್ 30ರವರೆಗೆ ವಿಸ್ತರಣೆ ಮಾಡಲಾಗಿದ್ದು ಜಿಲ್ಲೆಗೆ 4,66,000 ಸದಸ್ಯರನ್ನು ನೋಂದಣಿ ಮಾಡುವ ಗುರಿಯನ್ನು ನೀಡಲಾಗಿದ್ದು ಇದನ್ನು ನಿಶ್ಚಿತವಾಗಿ ತಲುಪುತ್ತೇವೆ. ಪ್ರತಿ ವಿಧಾನಸಭೆ ಮತಕ್ಷೇತ್ರದಲ್ಲಿ 500 ರಿಂದ 700 ವರೆಗೆ ಸಕ್ರೀಯ ಸದಸ್ಯರನ್ನು ನೋಂದಣಿ ಮಾಡುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಯಾವುದೇ ವರ್ಗಕ್ಕೆ ಸೀಮಿತವಾಗದೇ ಎಲ್ಲರನ್ನು ಸಂಪರ್ಕಿಸಿ ಭಾರತೀಯ ಪಕ್ಷದ ಸದಸ್ಯತ್ವವನ್ನು ಪಡೆದುಕೊಳ್ಳಲು ಕಾರ್ಯಕರ್ತರು

ಬಾಗಲಕೋಟೆಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿದರು.

ಕೆಲಸ ಮಾಡುತ್ತಿದ್ದು ಇನ್ನೂ ಸಾಕಷ್ಟು ಸಂಖ್ಯೆಯ ಜನ ಸ್ವಯಂ ಪ್ರೇರಣೆಯಿಂದ ಸದಸ್ಯತ್ವ ಕೂಡ ಪಡೆದುಕೊಳ್ಳಲು ಮುಂದಾಗಿದ್ದಾರೆ. ಜಿಲ್ಲೆಯ ಮುಧೋಳ ಕ್ಷೇತ್ರದಲ್ಲಿ 24,772, ತೇರದಾಳದಲ್ಲಿ 61,765, ಜಮಖಂಡಿ 46030, ಬೀಳಗಿ 67,073, ಬಾದಾಮಿ 25,691, ಬಾಗಲಕೋಟೆ 39,908, ಹುನಗುಂದ ಮತಕ್ಷೇತ್ರದಲ್ಲಿ 25,243 ಸದಸ್ಯರ ನೋಂದಣಿಯಾಗಿದ್ದಾರೆ. ಈ ಮೂಲಕ ಬೀಳಗಿ ಮತಕ್ಷೇತ್ರದಲ್ಲಿ ಹೆಚ್ಚು ಸದಸ್ಯರು ನೋಂದಣಿಯಾಗಿದ್ದಾರೆ ಎಂದರು.

ಮುಖಂಡರಾದ ಬಸವರಾಜ ಯಂಕಂಚಿ, ಸತ್ಯನಾರಾಯಣ ಹೇಮಾದ್ರಿ, ಈಶ್ವರಪ್ಪ ಆದಪ್ಪನವರ, ಶಂಕರ ಹುನ್ನೂರ, ನಾಗಪ್ಪ ಅಂಬಿ, ರಾಜಶೇಖರ ಮುದೇನೂರ, ಶಿವಾನಂದ ಸುರಪುರ ಇದ್ದರು.

ರಬಕವಿ ಬನಹಟ್ಟಿ ಸರಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯ ವಿಠ್ಠಲ ಚಿಕ್ಕಲಕಿ ಇವರು 2024–25 ನೇ ಸಾಲಿನ ರಬಕವಿ ಬನಹಟ್ಟಿ ತಾಲೂಕು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘಕ್ಕೆ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಗೊಂಡಿದ್ದರಿಂದ ಕಾಲೇಜು ಸಿಬ್ಬಂದಿ ವರ್ಗದವರು ಸನ್ಮಾನಿಸಿದರು. ಲಕ್ಷ್ಮಿಬಾಯಿ ಕಲ್ಯಾಣಕರ, ರವಿ ಹೊಸಮನಿ, ಪ್ರಶಾಂತ್ ನಾಯಕ, ಮಹಾದೇವ ದೊನವಾಡೆ, ಅವಿನಾಶ ಹಟ್ಟಿ, ಮಮತಾ ಸೇರಿದಂತೆ ಅನೇಕರು ಇದ್ದರು.

ಸ್ವಾರ್ಥಕ್ಕಾಗಿ ಈಶ್ವರಪ್ಪ ಬ್ರಿಗೇಡ್: ಯಲ್ಲಪ್ಪ ಹೆಗಡೆ

ಬಾಗಲಕೋಟೆ: ತಮ್ಮ ಸ್ವಾರ್ಥಕ್ಕಾಗಿ ಹಿಂದುಳಿತ, ದಲಿತ ಸಮುದಾಯಗಳನ್ನು ದಾರಿ ತಪ್ಪಿಸುವ ಕೆಲಸವನ್ನು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪನವರು ಮಾಡುತ್ತಿದ್ದಾರೆ. ಇವರು ಯಾವುದೇ ದಲಿತ, ಹಿಂದುಳಿತ ಸಮುದಾಯದ ನಾಯಕರನ್ನು ಗುರುತಿಸುವ, ಬೆಳೆಸುವಂತಹ ಕೆಲಸ ಮಾಡಿಲ್ಲ ಎಂದು ವಕೀಲ ಯಲ್ಲಪ್ಪ ಹೆಗಡೆ ಆರೋಪಿಸಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಶ್ವರಪ್ಪನವರು ಅಧಿಕಾರ ವಂಚಿತರಾದ ಮೇಲೆ ಅವರಿಗೆ ಹಿಂದುಳಿದ, ದಲಿತ ಸಮುದಾಯಗಳ ಎಲ್ಲಿಲ್ಲದ ಕಾಳಜಿ, ಅಕ್ಕರೆ, ಅತಿಯಾದ ಪ್ರೀತಿ ಬಂದಿದೆ. ಪ್ರಸಕ್ತ ರಾಜಕಾರಣದಲ್ಲಿ ಕೆ.ಎಸ್. ಈಶ್ವರಪ್ಪನವರ ಕುಟುಂಬವು ಎದುರಿಸುತ್ತಿರುವ ಸವಾಲು ಮತ್ತು ಸಮಸ್ಯೆಗಳ ಬಗೆ ಚಿಂತನ ಮಂಥನ ಸಭೆ ಮಾಡಬೇಕಿತ್ತು. ಸಚಿವರಾಗಿ, ಮಾಜಿ ಡಿಸಿಎಂ ಸೇವೆ ಮಾಡಿದ್ದಾರೆ. ಆದರೆ, ಅವರಿಗೆ ಕಳೆದ ಚುನಾವಣೆಯಲ್ಲಿ ಟಿಕೆಟ್ ಸಿಗದೇ ಅನ್ಯಾಯವಾಯಿತು. ಅದರ ವಿರುದ್ಧ ರಾಜ್ಯಾದ್ಯಂತ ಎಷ್ಟು ಪ್ರತಿಭಟನೆಗಳಾದವು ಎಂಬುದು ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕು ಎಂದು ಲೇವಡಿ ಮಾಡಿದರು.

ಬಾಗಲಕೋಟೆಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ವಕೀಲ ಯಲ್ಲಪ್ಪ ಹೆಗಡೆ ಮಾತನಾಡಿದರು.

ಖಾತ್ರಿಗೆ ಬಲ ತುಂಬಲು ಕ್ರಿಯಾಯೋಜನೆ

ಬಾಗಲಕೋಟೆಯ ಜಿಪಂ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ನರೇಗಾ ಯೋಜನೆ ಕ್ರಿಯಾ ಯೋಜನೆಗಳ ತಯಾರಿಕೆ ಕಾರ್ಯಾಗಾರವನ್ನು ಗಣ್ಯರು ಉದ್ಘಾಟಿಸಿದರು.

ಬಾಗಲಕೋಟೆ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಪಾರದರ್ಶಕತೆಯನ್ನು ಹೊಂದಿದ್ದು, ಅದಕ್ಕೆ ಬಲ ತುಂಬಲು ಕ್ರಿಯಾ ಯೋಜನೆಯ ಪ್ರಕ್ರಿಯೆಯನ್ನು ಆನ್‌ಲೈನ್‌ಗೊಳಿಸಲಾಗಿದೆ ಎಂದು ಜಿಪಂ ಸಿಇಒ ಶಶೀಧರ ಕುರೇರ್ ಹೇಳಿದರು.

ಇಲ್ಲಿನ ಜಿಪಂ ಸಭಾಭವನದಲ್ಲಿ 2025–26ನೇ ಸಾಲಿನ ನರೇಗಾ ಯೋಜನೆಯ ಕ್ರಿಯಾ ಯೋಜನೆಯ ತಯಾರಿಕೆ ಕುರಿತ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಸರಕಾರದ ನಿರ್ದೇಶನದಂತೆ ನಿಗದಿತ ವೇಳಾಪಟ್ಟಿ ಅನ್ವಯ ಕ್ರಿಯಾ ಯೋಜನೆಗೆ ಸಿದ್ಧಮಾಡಿಕೊಳ್ಳಲಾಗಿದೆ. ಈ ಬಾರಿಯ ಕ್ರಿಯಾ ಯೋಜನೆಯ ಪ್ರಕ್ರಿಯೆ ಸಂಪೂರ್ಣ ಆನ್‌ಲೈನ್‌ದಿಂದ ಕೂಡಿರುತ್ತದೆ. ಗ್ರಾಮೀಣ ಜನರು ತಮಗಿಷ್ಟವಾದ ಕಾಮಗಾರಿಯನ್ನು ಕ್ಯೂ ಆರ್ ಕೋಡ ಸ್ಕ್ಯಾನ್ ಮಾಡುವುದರ ಮುಖಾಂತರ ಕಾಮಗಾರಿ ಹೊಂದಲು ಅವಕಾಶವಿದೆ ಎಂದರು.

ಆಫ್‌ಲೈನ್ ಮುಖಾಂತರವು ಕಾಮಗಾರಿ ಬೇಡಿಕೆಗೆ ಅವಕಾಶ ಕಲ್ಪಿಸಲಾಗಿದೆ. ಸ್ವೀಕೃತವಾದ ಬೇಡಿಕೆಗಳನ್ನು ತಾಂತ್ರಿಕ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪೂರ್ವ ಅಳತೆಗೈದು ಅನುಮೋದನೆ ನೀಡುತ್ತಾರೆ. ಅಧಿಕಾರಿಗಳು ಕಾಮಗಾರಿ ಬೇಡಿಕೆ ಅರ್ಜಿಗಳನ್ನು ಪರಿಶೀಲಿಸಿ ಆನ್‌ಲೈನ್ ಕಾಮಗಾರಿ ಬೇಡಿಕೆಯನ್ನು ಹೊಂದುವ ಬಗೆಗೆ ಕುರಿತು ಮಾಹಿತಿ, ಶಿಕ್ಷಣ, ಸಂವಹನ ಚಟುವಟಿಕೆಗಳ ಮುಖಾಂತರ ಇನ್ನಷ್ಟು ವ್ಯಾಪಕ ಪ್ರಚಾರವನ್ನು ಕೈಗೊಳ್ಳಲು ಬ್ಯಾನರ್ ಅಳವಡಿಸಲಾಗಿದೆ ಎಂದ ಅವರು, ಗ್ರಾಪಂ ಸಿಬ್ಬಂದಿ ಕರ ಪತ್ರಗಳ ಮೂಲಕ ಮನೆ ಮನೆಗೆ ತೆರಳಿ ಈ ಬಗೆಗೆ ಇನ್ನಷ್ಟು ಪರಿಣಾಮವಾಗಿ ಜಾಗೃತಿ ಮೂಡಿಸಬೇಕೆಂದು ಸೂಚಿಸಿದರು.

> ಸರಕಾರ ನೀಡಿದ ವೇಳಾಪಟ್ಟಿ ಅನ್ವಯ ವಾರ್ಡ್ ಸಭೆ, ಗ್ರಾಮ ಸಭೆಗಳನ್ನು ಕೈಗೊಳ್ಳಬೇಕು. ಗ್ರಾಮ ಸಭೆಯ ವಿವರಗಳನ್ನು ಕಡ್ಡಾಯವಾಗಿ ಅನಲೈನ್‌ನಲ್ಲಿ ಭರ್ತಿ ಮಾಡಬೇಕು. ಕ್ರಿಯಾಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಿಬ್ಬಂದಿಗಳು ಶ್ರಮಿಸಬೇಕು.
> -ಎನ್.ವೈ.ಬಸರಿಗಿಡದ, ಉಪ ಕಾರ್ಯದರ್ಶಿ

ಕ್ರಿಯಾ ಯೋಜನೆಯಲ್ಲಿ ಮಾಹಿತಿ, ಶಿಕ್ಷಣ, ಸಂವಹನದ ಮಹತ್ವವನ್ನು ಡಿ.ಐ.ಇ.ಸಿ. ಅಜೇಯ ಸೂಳಿಕೇರಿ ತಿಳಿಸಿದರು. ಕ್ರಿಯಾ ಯೋಜನೆಯ ತಯಾರಿಕೆ ವಿವಿಧ ಹಂತಗಳ ಬಗ್ಗೆ ಎ.ಡಿ.ಪಿ.ಸಿ. ರಾಜೇಶ್ವರಿ ಗಡೇದ ಮಾಹಿತಿ ನೀಡಿದರು. ಅನ್‌ಲೈನ್ ಮೂಲಕ ಕಾಮಗಾರಿ ಬೇಡಿಕೆಯನ್ನು ಸಲ್ಲಿಸುವ ಕುರಿತು ಡಿ.ಎಂ.ಐ.ಎಸ್ ಉಜ್ವಲ ಪ್ರಾತಕ್ಷಿತೆ ನೀಡಿದರು. ತಾಂತ್ರಿಕ ವಿಷಯಗಳ ಕುರಿತು ಬಾಹುಬಲಿ ಹಾಗೂ ಸಿದ್ದಯ್ಯ ಹಿರೇಮಠ ವಿಷಯ ಮಂಡಿಸಿದರು. ಜಿಲ್ಲಾ ಹಾಗೂ ತಾಲೂಕು ಮಟ್ಟದ ಅನುಷ್ಠಾನ ಇಲಾಖೆಯ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ನರೇಗಾ ಸಿಬ್ಬಂದಿ ಹಾಜರಿದ್ದರು.

ಶಾಲೆಯ ಸುತ್ತಮುತ್ತ ಕಸದ ರಾಶಿ

ಇಳಕಲ್: ಹೌದು ಇಳಕಲ್ ನಗರದ ಶ್ರೀ ವಿಜಯ ಮಹಾಂತೇಶ್ವರ ಕರ್ತೃ ಗದ್ದುಗೆ ಸಾಗುವ ಮಾರ್ಗದಲ್ಲಿ ಬರುವ ಹಳ್ಳದ ಬದಿಯಲ್ಲಿ ಅಂದರೆ ಎ ಸಿ ಓ ಶಾಲೆಯ ಹಿಂಬಾಗದಲ್ಲಿ ಸ್ವಚ್ಛತೆಯ ಕೊರತೆಯಿಂದಾಗಿ ಅಲ್ಲಿಯ ನಿವಾಸಿಗಳು ಹಾಗೂ ಶಾಲಾ ವಿದ್ಯಾರ್ಥಿಗಳು ನರಕಯಾತನೇ ಅನುಭವಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಎ ಸಿ ಓ ಶಾಲೆಯ ಮುಂಭಾಗದಲ್ಲಿರುವ ಮಟನ್ ಮಾರ್ಕೆಟ್ ಈ ಎಲ್ಲ ಸಮಸ್ಯೆಗೆ ಕಾರಣವಾಗಿದೆ ಎನ್ನುವುದು ಶಾಲಾ ಆಡಳಿತ ಮಂಡಳಿಯವರ ಆರೋಪ. ಶಾಲೆಯ ಹಿಂಬಾಗದಲ್ಲಿ ಮಟನ್ ಮಾರ್ಕೆಟ್ ವ್ಯಾಪಾರಸ್ಥರು ಮತ್ತು ಸಾರ್ವಜನಿಕರು ಅನುಪಯುಕ್ತ ತ್ಯಾಜ್ಯವನ್ನು ನಿತ್ಯ ಹಾಕುತ್ತಿದ್ದು, ಇದರಿಂದ ಅಲ್ಲಿನ ವಾತವರಣ ಬಹಳ ಕಲುಷಿತವಾಗಿದೆ, ಅಲ್ಲಿಂದ ಬರುವ ದುರ್ವಾಸನೆ ಸಹಿಸಿಕೊಳ್ಳಲು ಸಹ ಸಾಧ್ಯವಿಲ್ಲ. ಅಂತಹ ದುರ್ವಾಸನೆಯ ಮಧ್ಯೆಯೇ ಪ್ರತಿನಿತ್ಯ ಶಾಲಾ ಮಕ್ಕಳು ಮತ್ತು ಸಿಬ್ಬಂದಿ ಕಾಲ ಕಳೆಯುವ ಅನಿವಾರ್ಯತೆ ಇದೆ.

ಆ ದುರ್ವಾಸನೆಯುಕ್ತ ವಾತಾವರಣವನ್ನು ಪಕ್ಕದ ಕೊಠಡಿಯಲ್ಲಿ ಕುಳಿತು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸಹಿಸಿಕೊಳ್ಳುಲು ಆಗದಿದ್ದರೂ ಅನಿವಾರ್ಯವಾಗಿ ಅದನ್ನು ಅನುಭವಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ಮಧ್ಯಾಹ್ನದ ಊಟದ ಸಮಯದಲ್ಲಿಯೂ ಸಹ ಈ ದುರ್ವಾಸನೆಯ ಮಧ್ಯೆಯೇ ಊಟ ಮಾಡುವಂತಹ ಪರಿಸ್ಥಿತಿ ನೋಡತಿರದು. ಈ ಕುರಿತು ಶಾಲಾ ಆಡಳಿತ ಮಂಡಳಿಯವರು ನಗರಸಭೆಗೆ ಹಲವಾರು ಬಾರಿ ಮನವಿ ಮಾಡಿದ್ದರು ಯಾವುದೇ ಪ್ರಯೋಜನವಾಗಿಲ್ಲ. ಎಸಿಓ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಸಾವಿರಾರು ವಿದ್ಯಾರ್ಥಿಗಳ ಹಾಗೂ ಅಲ್ಲಿಯ ನಿವಾಸಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದಂತೂ ಸತ್ಯ.

ಶಾಲೆಯ ಸುತ್ತಮುತ್ತಲು ಕಸದ ರಾಶಿ ತುಂಬಿರುವುದು.

{ಬಸನಗೌಡ ಪಾಟೀಲ್ ಯತ್ನಾಳ್} ಶಾಸಕ

ರೈತರ ಮಾರಣಹೋಮ ಮಾಡುವುದೇ ಕಾಂಗ್ರೆಸ್ ಸರಕಾರದ ಗುರಿಯಾಗಿದೆ. ಸಿದ್ಧಸಿರಿ ಸಕ್ಕರೆ ಮತ್ತು ಎಥೆನಾಲ್ ಕಾರ್ಖಾನೆ ಶುರುವಾಗದಿದ್ದರೆ, ಜಿಲ್ಲೆಯ ನಾಲ್ಕೈದು ತಾಲೂಕುಗಳಲ್ಲಿ ರೈತರ ಸಂಕಷ್ಟ ಹೆಚ್ಚಲಿದೆ.

ಗಣಾಚಾರಿಯವರ ಅಭಿನಂದನೆ 27ಕ್ಕೆ

ಬಾಗಲಕೋಟೆ: ಪ್ರಾಥಮಿಕ ಶಾಲೆ, ಪ್ರೌಢ ಶಾಲೆಯ ಶಿಕ್ಷಕರಾಗಿ ಹಾಗೂ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿಗೆ ಪುರಸ್ಕೃತರಾಗಿರುವ ಹಾಗೂ ನೂರಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ತಾಲೂಕಿನ ಮುಚಖಂಡಿ ಗ್ರಾಮದ ಗುರುಸ್ವಾಮಿ ಗಣಾಚಾರಿ ಅವರ ಸಹಸ್ರ ಚಂದ್ರದರ್ಶನ ಮತ್ತು ಅಭಿನಂದನ ಸಮಾರಂಭವನ್ನು ಅ.27ರಂದು ಬೆಳಗ್ಗೆ 10.25ಕ್ಕೆ ಮುಚಖಂಡಿ ಗ್ರಾಮದ ಗೌರಿಶಂಕರ ಕಲ್ಯಾಣ ಮಂಟಪದಲ್ಲಿ ಮುಚಖಂಡಿಯ ಗುರುಸ್ವಾಮಿ ಗಣಾಚಾರಿ ಅಭಿನಂದನ ಸಮಿತಿಯಿಂದ ಆಯೋಜಿಸಲಾಗಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಚರಂತಿಮಠದ ಪ್ರಭುಸ್ವಾಮೀಜಿ ವಹಿಸುವರು. ಅಧ್ಯಕ್ಷತೆಯನ್ನು ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಭುಸ್ವಾಮಿ ಸರಗಣಾಚಾರಿ ವಹಿಸುವರು. ಕಾರ್ಯಕ್ರಮವನ್ನು ಮಾಜಿ ಶಾಸಕರು, ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ನೆರವೇರಿಸುವರು. ಗುರುಪಥ ಅಭಿನಂದನ ಗ್ರಂಥವನ್ನು ಬೆಳಗಾವಿಯ ಹಿರಿಯ ಲೇಖಕಿ ಡಾ. ಗುರುದೇವಿ ಹುಲ್ಲೆಪ್ಪನವರಮಠ ಲೋಕಾರ್ಪಣೆ ಮಾಡಲಿದ್ದಾರೆ. ಅಭಿನಂದನ ನುಡಿಗಳನ್ನು ಶಾಲಾ ಶಿಕ್ಷಣ ಇಲಾಖೆಯ ವಿಶ್ರಾಂತ ನಿರ್ದೇಶಕ ಸಿದ್ಧರಾಮ ಮನಹಳ್ಳಿ ಹೇಳಲಿದ್ದಾರೆ. ಬಿವ್ಹಿವ್ಹಿ ಸಂಘದ ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ ಆಗಮಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಫಾಸ್ಟ್‌ಫುಡ್ ಬಿಡಿ, ರೊಟ್ಟಿ-ಚಟ್ನಿ ತಿನ್ನಿ

ಮುಧೋಳ: ಜೀವನದಲ್ಲಿ ನಮ್ಮ ನಡೆ-ನುಡಿ, ಆಹಾರ ಪದ್ದತಿ ಮೇಲೆ ಉತ್ತಮ ಆರೋಗ್ಯ ಅವಲಂತಿತ ಆಗಿದೆ. ಎಂದು ಹಿರಿಯ ನಾಗರಿಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಪಾಂಡಪ್ಪ ಮಾಸರಡ್ಡಿ ಹೇಳಿದರು. ಸಾಯಿ ನಗರದ ಜಯಾ ಸಂಸ್ಥೆ ವತಿಯಿಂದ 7.ದಿನಗಳ ಉಚಿತ ಯೋಗ ತರಬೇತಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಹಿರಿಯರು ನುಡಿದಂತೆ ಮಾತು ಬಲ್ಲವನಿಗೆ ಜಗಳವಿಲ್ಲ, ಆಹಾರ ಮತ್ತು ಯೋಗ ಬಲ್ಲವನಿಗೆ ರೋಗವಿಲ್ಲ ಎಂಬುದು ಯುವಜನತೆ ಅರಿತು ನಡೆಯಬೇಕಾಗಿದೆ, ಶಾರೀರಿಕವಾಗಿ ಗಟ್ಟಿಯಾಗಿರಲು ಫಾಸ್ಟ್ ಫುಡ್ ಬಿಡಿ, ರೊಟ್ಟಿ-ಚಟ್ನಿ ತಿನ್ನಿ ಎಂದು 90.ರ ಇಳಿ ವಯಸ್ಸಿನ ಮಾಸರಡ್ಡಿ ಅವರು ಯುವಕರಿಗೆ ಕಿವಿ ಮಾತು ಹೇಳಿದರು.

ವೇದಿಕೆ ಖಜಾಂಚಿ ದೇವೆಂದ್ರಪ್ಪ ಬಡಿಗೇರ, ಛಾಯಾಗ್ರಾಹಕ ಸಂಘದ ಅಧ್ಯಕ್ಷ ಲೋಕೇಶ ಪೂಜಾರಿ, ಪತ್ರಕರ್ತ ಬಿ. ಎಚ್. ಬೀಳಗಿ ಮಾತನಾಡಿದರು, ಪುರಾತನ ಯುಗದ ಸರಳ ರೀತಿಯ ವ್ಯಾಯಾಮಕ್ಕೆ ಅನುಕೂಲ ಆಗುವ ಯೋಗದತ್ತ ಯುವಕರ ಚಿತ್ತ ತರಬೇಕಾಗಿದೆ, ಈ ಶಿಬಿರದ ಸಂಪೂರ್ಣ ಉಪಯೋಗ ಯುವಕರು ಮಾಡಿಕೊಳ್ಳಬೇಕು ಎಂದು ತಮ್ಮ ಅಭಿಪ್ರಾಯ ತಿಳಿಸಿದರು.

ಆಸನ ಪ್ರದರ್ಶನ: ಬಿಪಿ, ಶುಗರ್, ಕಿಡ್ನಿ, ಲಿವರ್‌ಗೆ ಅನುಕೂಲ ಆಗುವ ಕೆಲವು ಯಾಗಾಸನಗಳನ್ನು ಯೋಗ ಶಿಕ್ಷಕ ಗುರು ಜಡಿ ಪ್ರದರ್ಶಿಸಿ, ಈ ಆಸನಗಳಿಂದಾಗುವ ಮುದ್ರೆಯ ಕುರಿತಾದ ಪ್ರಯೋಜನಗಳನ್ನು ಅವರು ವಿವರಿಸಿದರು.

ಉಡುಗರೆ: ಯೋಗ ತರಬೇತಿಗೆ ಆಗಮಿಸುವ ಕೆಲವು ಯೋಗ ಶಿಬಿರಾರ್ಥಿಗಳಿಗೆ ಜಯಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಮುರಗೆಪ್ಪ ಜಡಿ, ಗುರು ಜಡಿ ಮತ್ತು ಗಣ್ಯರು ಸೇರಿ ಹೋಗ ಕಿಟ್‌ಗಳನ್ನು ಉಡುಗರೆಯಾಗಿ ನೀಡಿದರು.

ಎಂ.ಆರ್. ಜಡಿ ಅಧ್ಯಕ್ಷತೆ ವಹಿಸಿದ್ದರು, ಅತಥಿ ಯು. ಎಸ್. ಶಿಂಧೆ, ಆಯ್.ಎನ್. ಬಿಸ್ತಿ, ಬಿ.ಎಚ್. ಬೀಳಗಿ, ಎ.ಎಸ್. ಗುರಿಕಾರ, ಆನಂದ ನಲವಡೆ, ಎಲ್.ಎಸ್. ಪೂಜಾರಿ, ಮಂಜು ಹಳ್ಳಿ, ಕಿರಣ ಚಂದುಕರ, ಸಂದಿಪ ಕೊಡಗ, ಕಿರಣ ಕುಮಕಾಲೆ ಇತರರಿದ್ದರು.



ಸಾಯಿ ನಗರದ ಜಯಾ ಸಂಸ್ಥೆ ಹಮ್ಮಿಕೊಂಡ 7 ದಿನಗಳ ಉಚಿತ ಯೋಗ ತರಬೇತಿಗೆ ಸಸಿಗೆ ನೀರುಣಿಸಿ ಮಾಸರಡ್ಡಿ ಚಾಲನೆ ನೀಡಿದರು. ಅತಿಥಿಗಳಿದ್ದರು.

ಹೊನಲು ಬೆಳಕಿನ ಪಗಡೆ ಪಂದ್ಯಾವಳಿ

ರಬಕವಿ-ಬನಹಟ್ಟಿ: ಸಮೀಪದ ಜಗದಾಳ ಗ್ರಾಮದ ಬ್ರಹ್ಮದೇವರ ಜಾತ್ರೆಯ ಅಂಗವಾಗಿ 28 ರಿಂದ 30 ರವರೆಗೆ ಅಂತರರಾಜ್ಯ ಮಟ್ಟದ ಹೊನಲು ಬೆಳಕಿನ ಮುಕ್ತ ಪಗಡೆ ಆಟಗಳ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. ದಿ. 28 ರಂದು ರಾತ್ರಿ 8 ಕ್ಕೆ ಗ್ರಾಮದ ಶಿವಲಿಂಗಯ್ಯ ಹಿರೇಮಠ ಮತ್ತು ಬಸುಯ್ಯ ಕಾಡದೇವರಮಠ ಇವರು ಪಗಡೆ ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ. ಹೊನಲು ಬೆಳಕಿನ ಪಗಡೆ ಪಂದ್ಯಾವಳಿಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ ಎಚ್.ಎಫ್ ಡಿಲಕ್ಸ್ ದ್ವಿಚಕ್ರ ವಾಹನ, ರು. 30001 ದ್ವಿತೀಯ ಬಹುಮಾನ ಮತ್ತು ರೂ. 20001 ತೃತೀಯ ಮತ್ತು ಚತುರ್ಥ ರು. 10000 ಬಹುಮಾನಗಳನ್ನು ನೀಡಲಾಗುವುದು. ಅದೇ ರೀತಿಯಾಗಿ ಅ. 29 ರಂದು ಮಧ್ಯಾಹ್ನ 12 ಕ್ಕೆ ಚೆಸ್, ಸಂಜೆ 4 ಕ್ಕೆ ಇಲೆಕ್ಟ್ರಿಕ್ ಟ್ರ್ಯಾಕ್ಟರ್ ಜಿದ್ದಾಜಿದ್ದಿ, ಅ 30 ರಂದು ಬೆಳಗ್ಗೆ 9 ಕ್ಕೆ ಪುರುಷರ ಬ್ಯಾಕ್ ಹ್ಯಾಂಡಲ್ ಸೈಕಲ್, ಮುಂಜಾನೆ 10 ಕ್ಕೆ, ಕುದರೆ ಗಾಡಿ ಸ್ಪರ್ಧೆ, 11 ಕ್ಕೆ, ನಿಮಿಷದ ಜೋಡಿ ಮನುಷ್ಯರ ಗಾಡಿ ಸ್ಪರ್ಧೆ, 1 ಗಂಟೆಗೆ ಲೋಡೋ ಸ್ಪರ್ಧೆಗಳು ನಡೆಯಲಿವೆ. ಅರಣ್ಯ ಸಿದ್ದೇಶ್ವರ ಗಾಯನ ಸಂಘ ಮತ್ತು ಕರಿಸಿದ್ದೇಶ್ವರ ಗಾಯನ ಸಂಘದಿಂದ ನಿರಂತರವಾಗಿ ಡೊಳ್ಳಿನ ಪದಗಳ ಗಾಯನಗಳು ನಡೆಯಲಿವೆ ಎಂದು ಜಾತ್ರಾ ಮಹೋತ್ಸವ ಸಮಿತಿಯ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 87460 38788 ಮತ್ತು 63603 57698 ಸಂಪರ್ಕಿಸಲು ಕೋರಲಾಗಿದೆ.

ಸಮಾಚಾರ ಸಣ್ಣದಲ್ಲ

ಹೋರಾಟಗಾರರಿಗೆ ಸನ್ಮಾನ: ಅರ್ಜಿ ಆಹ್ವಾನ

ಬೆಳಗಾವಿ: ಕರ್ನಾಟಕ ರಾಜ್ಯೋತ್ಸವ ಹಿನ್ನೆಲೆಯಲ್ಲಿ ಕನ್ನಡ ನಾಡು-ನುಡಿ ಹೋರಾಟಗಾರರನ್ನು ಜಿಲ್ಲಾಡಳಿತದ ವತಿಯಿಂದ ಗುರುತಿಸಿ ಸನ್ಮಾನಿಸಲು ತೀರ್ಮಾನಿಸಲಾಗಿದ್ದು, ಬೆಳಗಾವಿ ಜಿಲ್ಲೆಯ ಅರ್ಹ ಕನ್ನಡಪರ ಹೋರಾಟಗಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಅಧ್ಯಕ್ಷರು, ಕನ್ನಡ ಹೋರಾಟಗಾರರ ಸನ್ಮಾನ ಆಯ್ಕೆ ಸಮಿತಿ ಹಾಗೂ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅವರು ತಿಳಿಸಿದ್ದಾರೆ. ಕನ್ನಡ ನಾಡು ನುಡಿಗಾಗಿ ಹೋರಾಡಿದ 40 ವರ್ಷ ಮೇಲ್ಪಟ್ಟವರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಕನಿಷ್ಠ 5 ವರ್ಷಗಳ ಕಾಲ ಕನ್ನಡಪರ ಹೋರಾಟಗಳ ನೇತೃತ್ವ ವಹಿಸಿದವರು ಅಥವಾ ಮುಂಚೂಣಿಯಲ್ಲಿದ್ದವರು ಮತ್ತು ಯಾವುದೇ ವೈಯಕ್ತಿಕ ಕ್ರಿಮಿನಲ್ ಮೊಕದ್ದಮೆಗಳು ಹೊಂದಿರದವರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಆಸಕ್ತರು, ತಮ್ಮ ಸ್ವ-ವಿವರ ಮಾಹಿತಿ, ಛಾಯಾಚಿತ್ರಗಳು, ಪತ್ರಿಕಾ ವರದಿ ಇನ್ನಿತರ ಲಭ್ಯ ದಾಖಲೆಗಳ ಸಮೇತ ಅಕ್ಟೋಬರ್ 26 ರೊಳಗಾಗಿ ಉಪ ವಿಭಾಗಾಧಿಕಾರಿಗಳ ಕಚೇರಿ, ನ್ಯಾಯಾಲಯ ಆವರಣ, ಬೆಳಗಾವಿ ಇಲ್ಲಿ ಸಲ್ಲಿಸಬಹುದು ಎಂದು ಅಧ್ಯಕ್ಷರು, ಕನ್ನಡ ಹೋರಾಟಗಾರರ ಸನ್ಮಾನ ಆಯ್ಕೆ ಸಮಿತಿ ಹಾಗೂ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅವರು ತಿಳಿಸಿದ್ದಾರೆ.

ಶ್ರೀಸಿದ್ರಾಯಜ್ಜನಿಗೆ ಭಕ್ತಿಯ ಸಮರ್ಪಣೆ

ಯರಗಟ್ಟಿ: ಸಮಿಪದ ಕಟಕೋಳ ಶ್ರೀಸಿದ್ದರಾಯಜ್ಜನವರ ಭಂಡಾರ ಜಾತ್ರೆಯಲ್ಲಿ ಶ್ರೀಅಭಿನವ ಸಿದ್ರಾಯಜ್ಜನವರಿಗೆ ಸಾವಿರಾರು ಭಕ್ತರು ಭಂಡಾರ ಹಾರಿಸುವುದರ ಮೂಲಕ ತಮ್ಮ ಭಕ್ತಿ ಸಮರ್ಪಿಸಿದರು. ವಾಲಗ, ಡೋಳ್ಳುಗಳೊಂದಿಗೆ ಚಾಂಗ ಬಲೂ, ಶ್ರೀಗಳ ಜೈ ಘೋಷದೊಂದಿಗೆ ಭಂಡಾರ ಜಾತ್ರೆಯು ಅತಿ ವಿಜೃಂಭನೆಯಿಂದ ನೆರವೇರಿತು. ನಂತರ ಅಭಿನವ ಶ್ರೀಗಳು ಸುಡುವ ಹುಗ್ಗಿಯಲ್ಲಿ ಕೈ ಹಾಕಿದ ತರವಾಯ ಎಲ್ಲಾ ಭಕ್ತಾಧಿಗಳು ಮಹಾಪ್ರಸಾದ ಸೇವಿಸಿ ಪುಣಿತರಾದರು.

ಗ್ರಾಪಂ ಸದೃಢತೆಯಿಂದ ದೇಶದ ಅಭಿವೃದ್ಧಿ ಸಾಧ್ಯ

ಬೆಳಗಾವಿ: ತಾರತಮ್ಯವಿಲ್ಲದೆ ಎಲ್ಲ ಗ್ರಾಮಗಳ ಅಭಿವೃದ್ಧಿ ಮಾಡುತ್ತೇನೆ. ಬೆಳಗಾವಿ ಗ್ರಾಮೀಣ ಕ್ಷೇತ್ರವನ್ನು ತಲೆಎತ್ತಿ ನೋಡುವಂತೆ ಮಾಡುವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಶಪಥ ಮಾಡಿದ್ದಾರೆ. ಬೆಳಗಾವಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲೂಕ್ ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಹಿರೇ ಬಾಗೇವಾಡಿ ಇವರ ಸಂಯುಕ್ತಾಶ್ರಯದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ನಿರ್ಮಿಸಿರುವ 'ಭಾರತ ನಿರ್ಮಾಣ ರಾಜೀವ್ ಗಾಂಧಿ ಸೇವಾ ಕೇಂದ್ರ ಹಾಗೂ ಹಿರೇ ಬಾಗೇವಾಡಿಯ ನೂತನ ಗ್ರಾಮ ಪಂಚಾಯತ್ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಸಚಿವರು, ಗ್ರಾಮ ಪಂಚಾಯಿತಿಗಳು ಬಲಿಷ್ಠಗೊಂಡರೆ ಮಹಾತ್ಮ ಗಾಂಧೀಜಿ ಅವರ ಕನಸು ನನಸಾದಂತೆ ಎಂದರು. ಗ್ರಾಮ ಪಂಚಾಯಿತಿಗಳನ್ನು ಬಲಿಷ್ಠಗೊಳಿಸುವುದು, ಸ್ಥಳೀಯರಿಗೆ ಅಧಿಕಾರ ನೀಡಿ, ಅವರಿಗೆ ಶಕ್ತಿ ತುಂಬಬೇಕು ಎಂಬುದು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಉದ್ದೇಶವಾಗಿತ್ತು. ಅವರ ದೂರದೃಷ್ಟಿಯ ಫಲವಾಗಿ ಇಂದು ಪಂಚಾಯತಿಗಳಿಗೆ ಹೆಚ್ಚು ಅನುದಾನ ಬರುವಂತಾಗಿದೆ. ಹಿರೇಬಾಗೇವಾಡಿ ಗ್ರಾಮದ ಬಗ್ಗೆ ನನಗೆ ವಿಶೇಷ ಅಭಿಮಾನವಿದ್ದು, ಗ್ರಾಮದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ ಎಂದು ಸಚಿವರು ಹೇಳಿದರು.

ಅಗಲಿದ ಜೀವ

ಶಾಂತಾ ಗೋಕಾಕ

ಮೂಡಲಗಿ: ಪಟ್ಟಣದ ಲಕ್ಷ್ಮೀ ನಗರದ ನಿವಾಸಿ ಶ್ರೀಮತಿ ಶಾಂತಾ ಶಿವಬೋಧ ಗೋಕಾಕ (47) ಸೋಮವಾರ ನಿಧನರಾದರು.

ಮೃತರು ಪತಿ, ಒಬ್ಬ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲ್ಲಿದಾರೆ.

{ಡಿ.ಕೆ.ಶಿವಕುಮಾರ್} ಉಪ ಮುಖ್ಯಮಂತ್ರಿ

ಜಾತಿ ಗಣತಿ ವರದಿಯನ್ನು ಸಚಿವ ಸಂಪುಟದ ಮುಂದೆ ಇಡುತ್ತೇವೆ. ಅದರ ಸಾಧಕ - ಭಾದಕ ಚರ್ಚೆ ಮಾಡುತ್ತೇವೆ. ನಂತರ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇವೆ. ಮೊದಲು ಚರ್ಚೆ ಮಾಡುತ್ತೇವೆ. 160 ಕೋಟಿ ರು. ಹಣ ಖರ್ಚು ಮಾಡಲಾಗಿದೆ.

3 ದಿನ ವೈವಿಧ್ಯಮಯ ಸಾಂಸ್ಕೃತಿಕ ಸಂಭ್ರಮ | ಡಿಸಿ ಮೊಹಮ್ಮದ್ ರೋಷನ್

ಕಿತ್ತೂರು ಉತ್ಸವದ ಅದ್ದೂರಿ ಆಚರಣೆಗೆ ಸರ್ವ ಸಿದ್ಧತೆ

ಬೆಳಗಾವಿ: ಕಿತ್ತೂರ ಉತ್ಸವ ಹಾಗೂ ಚನ್ನಮ್ಮನ ವಿಜಯೋತ್ಸವದ 200ನೇ ವರ್ಷಾಚರಣೆ ಕಾರ್ಯಕ್ರಮ ಅದ್ದೂರಿ ಆಚರಣೆಗೆ ಸರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ತಿಳಿಸಿದರು.

ಕಿತ್ತೂರು ಉತ್ಸವದ ಅಂಗವಾಗಿ ಮಂಗಳವಾರ ಕಿತ್ತೂರಿನಲ್ಲಿ ಉತ್ಸವದ ಪೂರ್ವಸಿದ್ಧತೆಗಳನ್ನು ಪರಿಶೀಲಿಸಿ ಅವರು ಮಾತನಾಡಿದರು. ಚನ್ನಮ್ಮನ ವಿಜಯೋತ್ಸವದ 200ನೇ ವರ್ಷದ ವರ್ಷಾಚರಣೆ ಹಾಗೂ ಕಿತ್ತೂರು ರಾಣಿ ಚನ್ನಮ್ಮನ ಉತ್ಸವವನ್ನು ಅದ್ದೂರಿ ಹಾಗೂ ಅರ್ಥಪೂರ್ಣ ಆಚರಣೆಗೆ ಅನೇಕ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಅಕ್ಟೋಬರ್ 23,24 ಮತ್ತು 25 ಮೂರು ದಿನಗಳ ಕಾಲ ಜರುಗಲಿರುವ ಚನ್ನಮ್ಮನ ಉತ್ಸವ ಕಾರ್ಯಕ್ರಮದಲ್ಲಿ ರಾಜ್ಯ, ರಾಷ್ಟ್ರ ಮಟ್ಟದ ಕಲಾವಿದರುಗಳ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮೂರು ದಿನಗಳ ಕಾಲ ಜರುಗಲಿರುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಸಚಿವರುಗಳು ಆಗಮಿಸುವ ನೀರಿಕ್ಷೆಯಿದೆ ಎಂದರು.ಕಾರ್ಯಕ್ರಮದ ಮುಖ್ಯ ವೇದಿಕೆ, ಸಮಾನಂತರ ವೇದಿಕೆ, ಆಸನಗಳ ವ್ಯವಸ್ಥೆ, ಮಾಧ್ಯಮ ಕೇಂದ್ರ, ಮೆರವಣಿಗೆ ಮಾರ್ಗ ಸೇರಿದಂತೆ ಇತರೆ ಸಿದ್ದತೆಗಳನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಉತ್ಸವದ ಅದ್ದೂರಿ ಆಚರಣೆಗಾಗಿ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯತ್ಸವವನ್ನು ಯಶಸ್ವಿಗೊಳಿಸಲು ಮನವಿ ಮಾಡಿದರು.

ಚನ್ನಮ್ಮನ ಕಿತ್ತೂರ ಶಾಸಕರಾದ ಬಾಬಾಸಾಹೇಬ್ ಪಾಟೀಲ ಅವರು, ಮಾತನಾಡಿ ಉತ್ಸವದ ವಿಜೃಂಭಣೆ ಆಚರಣೆಗೆ ಎಲ್ಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಶಿಕ್ಷಣಾರ್ಥಿ ಆಯ್.ಎ.ಎಸ್ ಅಧಿಕಾರಿ ದಿನೇಶಕುಮಾರ ಮೀನಾ ಉಪಸ್ಥಿತರಿದ್ದರು. ಕಿತ್ತೂರು ಉತ್ಸವ, ವಿಜಯೋತ್ಸವದ 200ನೇ ವರ್ಷದ ವರ್ಷಾಚರಣೆಯ ಅಂಗವಾಗಿ ಕಿತ್ತೂರು ಪಟ್ಟಣ ಮದುವಣಗಿತ್ತಿಯಂತೆ ಸಿಂಗಾರಗೊಂಡಿದೆ. ಕಿತ್ತೂರಿನ ರಾಣಿ ಚನ್ನಮ್ಮನ ಪ್ರತಿಮೆ, ವೃತ್ತ, ಮೆರವಣಗೆ ಮಾರ್ಗ, ಕೋಟೆ ಆವರಣ ಸೇರಿದಂತೆ ಇಡೀ ಕಿತ್ತೂರು ಪಟ್ಟಣ ದೀಪಾಲಂಕಾರದಿಂದ ಕಂಗೊಳಿಸುತ್ತಿದೆ.

ಚನ್ನಮ್ಮನ ವಿಜಯೋತ್ಸವದ ಆಚರಣೆಗೆ ಸರ್ವ ಸಿದ್ಧತೆಗಳ ಕುರಿತು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಪರಿಶೀಲನೆ ನಡೆಸಿದರು.

ವೇದಿಕೆಯ ಸಿದ್ದತೆ ಅಂತಿಮ ಹಂತದಲ್ಲಿ

ಕಾರ್ಯಕ್ರಮದ ಮುಖ್ಯ ವೇದಿಕೆಯ ಸಿದ್ಧತೆ ಅಂತಿಮ ಹಂತದಲ್ಲಿದ್ದು, ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆಗಳು ಆಗದಂತೆ ಎಲ್ಲ ರೀತಿಯ ಸಿದ್ಧತೆಗಳು ಭರದಿಂದ ಸಾಗಿವೆ. ಬುಧವಾರ ಬೆಳಗ್ಗೆ ವೀರಜ್ಯೋತಿ ಸ್ವಾಗತ, ಧ್ವಜಾರೋಹಣ, ಮೆರವಣಿಗೆ, ವಸ್ತುಪ್ರದರ್ಶನ ಮಳಿಗೆ ಉದ್ಘಾಟನೆ ಮತ್ತಿತರ ಕಾರ್ಯಕ್ರಮಗಳು ಜರುಗಲಿವೆ. ಸಂಜೆ ಉದ್ಘಾಟನಾ ಸಮಾರಂಭ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಉದ್ಯೋಗ ವಾಹಿನಿಗೆ ಚಾಲನೆ

ಉದ್ಯೋಗ ವಾಹಿನಿಗೆ ತಾಪಂ ಇಓ ಎಫ್.ಜಿ.ಚಿನ್ನನವರ ಹಸಿರು ನಿಶಾನೆ ತೋರಿ ಚಾಲನೆ ನೀಡಿದರು.

ಮೂಡಲಗಿ: ಮನರೇಗಾ ಯೋಜನೆಯ 2025-26ನೇ ಸಾಲಿನ ಕಾರ್ಮಿಕ ಆಯವ್ಯಯ ತಯಾರಿಸುವ ನಿಟ್ಟಿನಲ್ಲಿ ಉದ್ಯೋಗ ಖಾತರಿ ನಡಿಗೆ ಸಬಲತೆಯಡೆಗೆ ಅಭಿಯಾನದ ಉದ್ಯೋಗ ವಾಹಿನಿಗೆ ಚಾಲನೆ ನೀಡಲಾಗಿದ್ದು, ಈ ವಾಹಿನಿ ಮೂಡಲಗಿ ತಾಲೂಕು ವ್ಯಾಪ್ತಿಯಲ್ಲಿನ ಎಲ್ಲ ಗ್ರಾಪಂಗಳಲ್ಲಿ ಸಂಚರಿಸಿ ಪ್ರಚಾರ ಕೈಗೊಳ್ಳಲಿದೆ ಎಂದು ತಾಪಂ ಇಓ ಎಫ್.ಜಿ.ಚಿನ್ನನವರ ಹೇಳಿದರು.

ಅವರು ಪಟ್ಟಣದ ತಾಲೂಕಾ ಪಂಚಾಯತ ಕಾರ್ಯಾಲಯದ ಆವರಣದಲ್ಲಿ ಸೋಮವಾರ ಉದ್ಯೋಗ ಖಾತರಿ ನಡಿಗೆ ಸಬಲತೆಯಡೆಗೆ ಅಭಿಯಾನದ ಉದ್ಯೋಗ ವಾಹಿನಿಗೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ತಾಪಂ ಸಹಾಯಕ ನಿರ್ದೇಶಕರು ಸಂಗಮೇಶ ರೊಡ್ಡನ್ನವರ ಅವರು ಮಾತನಾಡಿ, ಮುಂದಿನ ವರ್ಷದ ಆಯವ್ಯಯ ತಯಾರಿಸುವ ಅರ್ಹ ಫಲಾನುಭವಿಗಳ ಹಾಗೂ ಸಾರ್ವಜನಿಕ ಕಾಮಗಾರಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. ಹಾಗಾಗಿ ಗ್ರಾಮೀಣ ಭಾಗದ ಜನರಿಗೆ ಮನರೇಗಾ ಯೋಜನೆಯ ಕುರಿತು ಜಾಗೃತಿ ಮೂಡಿಸಲು ಉದ್ಯೋಗ ವಾಹಿನಿ ಮೂಲಕ ಪ್ರಚಾರ ನಡೆಸಲಾಗುತ್ತಿದೆ. ಅರ್ಹರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಈ ಸಮಯದಲ್ಲಿ ಪಿಡಿಓಗಳಾದ ಅಂಜನಾ ಗಚ್ಚಿ, ಶ್ರೀಶೈಲ ತಡಸನ್ನವರ, ಅನುರಾಧಾ ಭಜಂತ್ರಿ, ಆರತಿ ಪತ್ತಾರ, ತಾಂತ್ರಿಕ ಸಂಯೋಜಕ ನಾಗಾರ್ಜುನ ಇಳಗೇರ, ಎಂಐಎಸ್ ಸಂಯೋಜಕ ನಿರಂಜನ ಮಲ್ಲವ್ವಗೋಳ, ತಾಪಂ ಸಿಬ್ಬಂದಿ ಮಲ್ಲಿಕಾರ್ಜುನ ತೆರದಾಳ, ಗಂಗಾಧರ ಹಾಗೂ ಬಿಎಫ್ ಟಿಗಳಾದ ಅಶೋಕ ದೊಡ್ಡಮನಿ, ಬಸವರಾಜ ಇಟ್ನಾಳ, ಜುಬೇರ ಎನ್., ರವಿ ಡಿ. ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಸದಸ್ಯತ್ವ ಅಭಿಯಾನ



ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಶಾಸಕ ರಮೇಶ ಜಾರಕಿಹೊಳಿ ಚಾಲನೆ ನೀಡಿದರು.

ಗೋಕಾಕ: ಬಿಜೆಪಿ ವಿಶ್ವದಲ್ಲೇ ಅತಿಹೆಚ್ಚಿನ ಸದಸ್ಯರನ್ನು ಒಳಗೊಂಡಿರುವ ಪಕ್ಷವಾಗಿದೆ. ಈ ಬಾರಿ ಹೆಚ್ಚಿನ ಸದಸ್ಯತ್ವವನ್ನು ನಾವೆಲ್ಲರೂ ಮಾಡಬೇಕಿದೆ. ಈಗಾಗಲೇ ದೇಶದಲ್ಲಿ 10ಕೋಟಿಗೂ ಅಧಿಕ ಸದಸ್ಯರನ್ನು ಒಳಗೊಂಡಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು. ಅವರು, ಮಂಗಳವಾರಂದು ನಗರದ ತಮ್ಮ ಕಾರ್ಯಾಲಯದಲ್ಲಿ ಬಿಜೆಪಿ ಸಕ್ರೀಯ ಸದಸ್ಯತ್ವ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಗೋಕಾಕ ವಿಧಾನಸಭಾ ಕ್ಷೇತ್ರದ ಎಲ್ಲ ಬೂತ್ ಗಳಲ್ಲಿ ಈಗಾಗಲೇ 50ಕ್ಕೂ ಅಧಿಕ ಸದಸ್ಯತ್ವ ಹೊಂದಿದೆ. ಇನ್ನೂ ಪ್ರತಿ ಬೂತ್‌ನಲ್ಲಿ ಕನಿಷ್ಠ 300ಕ್ಕೂ ಅಧಿಕ ಸದಸ್ಯತ್ವವನ್ನು ಮಾಡುವ ಮೂಲಕ ದಾಖಲೆ ನಿರ್ಮಿಸುವಂತೆ ಎಲ್ಲ ಕಾರ್ಯಕರ್ತರಿಗೆ ಕರೆ ನೀಡಿದರು.

ಬಿಜೆಪಿ ಬೆಳಗಾವಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಸುಭಾಸ ಪಾಟೀಲ, ನಗರ ಮಂಡಳ ಅಧ್ಯಕ್ಷ ಭೀಮಶಿ ಭರಮಣ್ಣವರ, ಒಬಿಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಲಕ್ಷ್ಮಣ ತಪಸಿ, ಜಿಲ್ಲಾ ಉಪಾಧ್ಯಕ್ಷ ಶಾಮಾನಂದ ಪೂಜೇರಿ, ಶಾಸಕರ ಆಪ್ತ ಸಹಾಯಕ ಭೀಮಗೌಡ ಪೋಲಿಸಗೌಡ್ರ ಸೇರಿದಂತೆ ಅನೇಕರು ಇದ್ದರು.

ಲಸಿಕಾ ಅಭಿಯಾನ ಯಶಸ್ಸಿಗೆ ಸಚಿವೆ ಹೆಬ್ಬಾಳ್ಕರ್ ಹಾರೈಕೆ

ಲಸಿಕಾ ಅಭಿಯಾನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್‌ರಿಂದ ಚಾಲನೆ.

ಬೆಳಗಾವಿ: ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಮತ್ತು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ಸಹಯೋಗದಲ್ಲಿ 6ನೇ ಸುತ್ತಿನ ಕಾಲುಬಾಯಿ ರೋಗ ಲಸಿಕಾ ಅಭಿಯಾನಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಂಗಳವಾರ ಚಾಲನೆ ನೀಡಿದರು. ರೈತರಿಗೆ ಆರ್ಥಿಕ ಸಂಕಷ್ಟ ಉಂಟು ಮಾಡುವ ಕಾಲುಬಾಯಿ ರೋಗದಿಂದ ರಾಜ್ಯವನ್ನು ಮುಕ್ತ ಮಾಡುವ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಅಭಿಯಾನ ಯಶಸ್ವಿಯಾಗಲಿ ಎಂದು ಹಾರೈಸಿದ ಸಚಿವರು, ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಪಶುಪಾಲನಾ ಮತ್ತು ವೈದ್ಯಕೀಯ ಇಲಾಖೆಯ ಉಪ ನಿರ್ದೇಶಕರಾದ ಡಾ.ರಾಜು ಎನ್ ಕೂಲರ್, ಬೆಳಗಾವಿಯ ಮುಖ್ಯ ಪಶು ವೈದ್ಯಾಧಿಕಾರಿ ಡಾ.ರೆಹಮತ್ತುಲ್ಲಾ, ಮುಖ್ಯ ಪಶು ವೈದ್ಯಾಧಿಕಾರಿ (ಆಡಳಿತ) ಡಾ.ಆನಂದ ಪಾಟೀಲ, ಉಚಗಾಂವ ಗ್ರಾಮದ ಮುಖ್ಯ ಪಶು ವೈದ್ಯಾಧಿಕಾರಿ ಡಾ.ದೀಪಕ್ ಯಲಿಗಾರ್, ಅಂಬೇವಾಡಿ ಗ್ರಾಮದ ಮುಖ್ಯ ಪಶು ವೈದ್ಯಾಧಿಕಾರಿ ಡಾ.ಪ್ರತಾಪ್ ಹನೂರಕರ್ ಉಪಸ್ಥಿತರಿದ್ದರು.

ಸಾಹಿತ್ಯ ಸಮ್ಮೇಳನಕ್ಕೆ ಶಾಸಕ ಸಹಕಾರ

ಸಭೆಯಲ್ಲಿ ಯುವ ಮುಖಂಡ ಸರ್ವೋತ್ತಮ ಜಾರಕಿಹೊಳಿ ಮಾತನಾಡಿದರು.

ಮೂಡಲಗಿ: ಮೂಡಲಗಿ ಪಟ್ಟಣದಲ್ಲಿ ಬರುವ ನ.23 ಮತ್ತು 24 ರಂದು ನಡೆಯುವ ಬೆಳಗಾವಿ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಗೋಳಿಸಲ್ಲು ಶಾಸಕ ಹಾಗೂ ಬೆಮ್ಯುಲ್ ಅಧ್ಯಕ್ಷರಾದ ಬಾಲಚಂದ್ರ ಜಾರಕಿಹೊಳಿ ಅವರು ಎಲ್ಲ ರೀತಿಯಿಂದ ಸಹಾಯ ಸಹಕಾರ ನೀಡುವರು ಎಂದು ಯುವ ಮುಖಂಡ ಸರ್ವೋತ್ತಮ ಜಾರಕಿಹೊಳಿ ಹೇಳಿದರು.

ಅವರು ಪಟ್ಟಣ ಶ್ರೀಶಿವಬೋಧರಂಗ ಮಠದ ಆವರಣದಲ್ಲಿ ಜರುಗಿದ ನ.23 ಮತ್ತು 24 ರಂದು ಮೂಡಲಗಿಯಲ್ಲಿ ಹಮ್ಮಿಕೊಂಡ ಬೆಳಗಾವಿ ಜಿಲ್ಲಾ 16ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವ ಭಾವಿ ಸಭೆಯ ಭಾಗವಹಿಸಿ ಮಾತನಾಡಿ, ಅರಭಾವಿ ಕ್ಷೇತ್ರದ ಮೂಡಲಗಿ ಪಟ್ಟಣದಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ಹಮ್ಮಿಕೊಂಡಿರುವುದು ಸಂತದ ವಿಷಯ, ಸಮ್ಮೇಳನಕ್ಕೆ ಬರುವ ಸಾಹಿತ್ಯಾಸಕ್ತರಿಗೆ ಯಾವುದೇ ರೀತಿ ತೊಂದರೆ ಯಾಗದಂತೆ ಎಲ್ಲರೂ ಕೂಡಿ ಕೊಂಡು ಕೆಲಸ ಮಾಡೋಣ ಎಂದರು.

ಸಾನ್ನಿಧ್ಯ ವಹಿಸಿದ್ದ ಶಿವಬೋಧರಂಗ ಮಠದ ಪೀಠಾಧಿಪತಿಗಳಾದ ಶ್ರೀದತ್ತಾತ್ರೇಯಬೋಧ ಸ್ವಾಮೀಜಿ ಹಾಗೂ ಶ್ರೀ ಶ್ರೀಧರಬೋಧ ಸ್ವಾಮೀಜಿಗಳು ಮಾತನಾಡಿ, ಕನ್ನಡ ಜಾತ್ರೆಯಲ್ಲಿ ಪ್ರತಿಯೊಬ್ಬರು ಭಾಗವಹಿಸಬೇಕು, ಸಮ್ಮೇಳನದ ಯಶಸ್ವಿಗೆ ಸಂಘಟಕರು ವಿವಿಧ ಸಮೀತಿಗಳನ್ನು ರಚನೆ ಮಾಡಿ ತಮ್ಮಗೆ ವಹಿಸಿರುವ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದರು.

ಮೂಡಲಗಿ ತಾಲೂಕಾದ ಕೆಲವೇ ವರ್ಷಗಳಲ್ಲಿ ಕಳೆದ ಎರಡು ತಾಲೂಕಾ ಸಮ್ಮೇಳನಗಳು ಯಶಸ್ವಿಯಾಗಿ ಜರುಗಿವೆ, ಮೂರನೇ ವರ್ಷಕ್ಕೆ ಮೂಡಲಗಿ ಜಿಲ್ಲಾ ಸಾಹಿತ್ಯ ಸಮ್ಮೇಳನ ಸಿಕ್ಕಿರುವ ಈ ಭಾಗದ ಜನರ ಸೌಭಾಗ್ಯ.

ಮಂಗಳಾ ಮೆಟಗುಡ್ಡ, ಜಿಲ್ಲಾ ಕಸಾಪ ಅಧ್ಯಕ್ಷೆ

ಸಭೆಯಲ್ಲಿ ಮಕ್ಕಳ ಸಾಹಿತಿ ಸಂಗಮೇಶ ಗುಜಗೊಂಡ, ಬಿಇಓ ಅಜೀತ ಮನ್ನಿಕೇರಿ, ಜಯಕರ್ನಾಟಕ ಸಂಘಟನೆಯ ಜಿಲ್ಲಾಧ್ಯಕ್ಷ ಶಿವರಡ್ಡಿ ಹುಚರಡ್ಡಿ, ರಾಮದುರ್ಗ ತಾಲೂಕಾ ಕಸಾಪ ಅಧ್ಯಕ್ಷ ಜಟಗನ್ನವರ, ಸಾಯಿ ಸೇವಾ ಸಮಿತಿಯ ಎಸ್.ಎಮ್. ಹಂಜಿ, ಉಮೇಶ ಬೇಳಕೂಡ ಸೇರಿದಂತೆ ಅನೇಕರು ಸಲಹೆ ಸೂಚನೆಗಳನ್ನು ನೀಡಿದರು.

ವೇದಿಕೆಯಲ್ಲಿ ನಿವೃತ್ತ ಪ್ರಾಚಾರ್ಯ ಸುಭಾಸ ಕಮದಾಳ, ಪಿ.ಎಸ್.ಐ ರಾಜು ಪೂಜೇರಿ, ಅನ್ವರ ನದಾಫ, ಡಾ.ಸಚೀನ ಟಿ, ಪ್ರಾಚಾರ್ಯ ಸುರೇಶ ಹನಗಂಡಿ ಮತ್ತಿತರು ಉಪಸ್ಥಿತರಿದ್ದರು.

ಸಭೆಯಲ್ಲಿ ಮೂಡಲಗಿ ತಾಲೂಕಾ ಕಸಾಪ ಅಧ್ಯಕ್ಷ ಸಂಜಯ ಶಿಂಧಿಹಟ್ಟಿ, ಕಸಾಪ ಪದಾಧಿಕಾರಿಗಳು, ಸದಸ್ಯರು, ಕನ್ನಡಪರ ಸಂಘಟನೆಯ, ಸಹಕಾರಿ ಸಂಘಗಳ ಪದಾಧಿಕಾರಿಗಳು, ವಿವಿಧ ಇಲಾಖೆಯ ಅಧಿಕಾರಿಗಳು, ಮಹಿಳಾ ಸಂಘಟನೆ ಪದಾಧಿಕಾರಿಗಳು ಭಾಗವಹಿಸಿದ್ದರು. ಬಿ.ಆರ್.ತರಕಾರ ನಿರೂಪಿಸಿದರು. ಎ.ಎಚ್.ವಂಟಗೋಡಿ ಸ್ವಾಗತಿಸಿ ವಂದಿಸಿದರು.

ಗ್ರಾಪಂಗೆ ಅಧ್ಯಕ್ಷ ಮುಕ್ಕಣ್ಣವರ ಆಯ್ಕೆ

ಮೂಡಲಗಿ: ತಾಲೂಕಿನ ಗುಜನಟ್ಟಿ ಗ್ರಾಮ ಪಂಚಾಯಿತಿಗೆ ಮಂಗಳವಾರದಂದು ಜರುಗಿದ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯಲ್ಲಿ ಶಾಸಕ ಹಾಗೂ ಬೆಮ್ಯುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರ ಮಾರ್ಗದರ್ಶನದಲ್ಲಿ ಅಧ್ಯಕ್ಷರಾಗಿ ಸಾಮಾನ್ಯ ವರ್ಗದಿಂದ ಕಲ್ಲಪ್ಪ ನಿಂಗಪ್ಪ ಮುಕ್ಕಣ್ಣವರ, ಉಪಾಧ್ಯಕ್ಷರಾಗಿ ಸಾಮಾನ್ಯ ಮಹಿಳೆ ವರ್ಗದಿಂದ ಲಕ್ಷ್ಮೀ ಮಂಜುನಾಥ ಹೇಳವರ ಅವರು ಅವಿರೋಧವಾಗಿ ಆಯ್ಕೆಗೊಂಡರು.

ಗುಜನಟ್ಟಿ ಗ್ರಾಮ ಪಂಚಾಯತಿಗೆ ನೂತನವಾಗಿ ಅಧ್ಯಕ್ಷ, ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಕಲ್ಲಪ್ಪ ಮುಕ್ಕಣ್ಣವರ ಮತ್ತು ಲಕ್ಷ್ಮೀ ಹೇಳವರ ಅವರಿಗೆ ಅಭಿನಂದನೆಗಳು. ಗ್ರಾಮದ ಅಭಿವೃದ್ಧಿಗೆ ಸದಸ್ಯರು ಮತ್ತು ಹಿರಿಯರನ್ನು ವಿಶ್ವಾಸಕ್ಕೆ ಪಡೆದುಕೊಂಡು ಶ್ರಮಿಸಬೇಕು. ನಾಗರಿಕರ ಮೂಲ ಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು. ಪಕ್ಷ ಬೇಧ ಮರೆತು ಅಭಿವೃದ್ಧಿಗೆ ದುಡಿಯಬೇಕು. ಗುಜನಟ್ಟಿ ಗ್ರಾ.ಪಂ ವ್ಯಾಪ್ತಿಯ ಪ್ರಗತಿಗಾಗಿ ಸರ್ಕಾರದ ವಿವಿಧ ಯೋಜನೆಗಳನ್ನು ಅನುಷ್ಠಾನ ಮಾಡುವೆ. ಪ್ರಗತಿಯ ಕಾರ್ಯಗಳಿಗೆ ಸರಕಾರದ ಅನುದಾನವನ್ನು ಸದ್ಭಳಕೆ ಮಾಡಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳುವೆ.

-ಬಾಲಚಂದ್ರ ಜಾರಕಿಹೊಳಿ, ಶಾಸಕ

ಈ ಸಮಯದಲ್ಲಿ ಗ್ರಾ.ಪಂ ಸದಸ್ಯರಾದ ಮಹಾದೇವಿ ಅರಭಾವಿ, ಕಾಶವ್ವ ನಾಂವಿ, ಹಣಮಂತ ರೊಡಲಕ್ಕಣ್ಣವರ, ಕಾಶವ್ವ ಅಜ್ಜನ್ನವರ, ಮಾಲವ್ವ ಮಾದರ, ಲಕ್ಷ್ಮಣ ಕಂಬಳಿ, ಕಾಡಪ್ಪ ನಿಡಸೋಸಿ, ಮುಖಂಡರಾದ ರಾಮಪ್ಪ ಅರಭಾವಿ, ಭೀಮಪ್ಪ ನಾವಿ, ಶಂಭುಲಿಂಗ ಮುಕ್ಕಣ್ಣವರ. ಲಕ್ಷ್ಮಣ್ ಬಂಡ್ರೋಳಿ. ಶಿವಪುತ್ರ ಬಂಡಿನವರ. ಗುರುನಾಥ ಗಂಗಣ್ಣವರ. ಗುಂಡೂರಾವ್ ಗುಜನಟ್ಟಿ. ಹನುಮಂತ ರೋಡಲಕ್ಕನವರ. ವೆಂಕಪ್ಪ ಶಿರಗನ್ನವರ. ಮಂಜುನಾಥ್ ಹೇಳವರ. ಪಿಡಿಓ ರವಿ ಮರೆನ್ನವರ ಮತ್ತಿತರರು ಉಪಸ್ಥಿತರಿದ್ದರು.

ನೂತನವಾಗಿ ಆಯ್ಕೆಗೊಂಡ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನ ಗ್ರಾಮಸ್ಥರು ಸತ್ಕರಿಸಿ ಅಭಿನಂದಿಸಿದರು. ಚುನಾವಣಾ ಅಧಿಕಾರಿಯಾಗಿ ಶ್ರೀಮತಿ ಆರ್.ಪಿನಾರಾಯಣಕರ ಕಾರ್ಯನಿರ್ವಹಿಸಿದರು.

ಅಧ್ಯಕ್ಷ ಕಲ್ಲಪ್ಪ, ಉಪಾಧ್ಯಕ್ಷೆ ಲಕ್ಷ್ಮೀ ಹೇಳವರ ಹಾಗೂ ಸದಸ್ಯರನ್ನು ಸತ್ಕರಿಸಿ ಗೌರವಿಸಿದರು.

ಶ್ರೀಶೈಲ ದರ್ಶನ ಪಡೆದ ರಮೇಶ ಕತ್ತಿ

ಹುಕ್ಕೇರಿ: ಮಾಜಿ ಸಂಸದರು, ಬಿಡಿಸಿಸಿ ಬ್ಯಾಂಕ ನಿರ್ದೇಶಕರಾದ ರಮೇಶ ಕತ್ತಿ ಅವರು 60 ವರ್ಷ ಪೂರೈಸಿ 61 ನೇ ಹುಟ್ಟು ಹಬ್ಬದ ನಿಮಿತ್ಯ ಶ್ರೀಶೈಲ್ ದೇವಸ್ಥಾನಕ್ಕೆ ತೆರಳಿ ದರ್ಶನ ಪಡೆದುಕೊಂಡರು. ರಮೇಶ ಕತ್ತಿ ಅವರ ಜನ್ಮದಿನದ ನಿಮಿತ್ಯ ರಮೇಶ ಕತ್ತಿ ಅವರ ಅಭಿಮಾನಿ ಬಳಗ, ಸ್ನೇಹಿತರು, ಹಿತೈಷಿಗಳು, ಆತ್ಮಿಯರು ಸೇರಿದಂತೆ ವಿವಿಧ ಸಮಾಜದ ಮುಖಂಡರು, ತಾಲೂಕಿನ ವಿವಿಧ ದೇಸ್ಥಾನಕ್ಕೆ ತೆರಳಿ ಪೂಜೆಸಲ್ಲಿಸಿದ್ದರು. ರೋಗಿಗಳಿಗೆ ಹಣ್ಣು ಹಂಪಲ ವಿತರಿಸಿದರು.

ರಮೇಶ ಕತ್ತಿ ಅವರು ಶ್ರೀಶೈಲ ದೇವಸ್ಥಾನದಲ್ಲಿ ದರ್ಶನ ಪಡೆದುಕೊಳ್ಳುತ್ತಿರುವುದು.

ಶೌರ್ಯದ ಕಥೆ ಗರ್ವದಿಂದ ಹೇಳುವ ಸಮಯವಿದು

ವಿನಾಯಕ ಮಠಪತಿ ಬೆಳಗಾವಿ

ಬೆಳಗಾವಿ: 1824 ಅಕ್ಟೋಬರ್ 23ರ ಕಾಲಘಟ್ಟ, ಬ್ರಿಟಿಷ್ ವಸಾಹತುಶಾಹಿ ವಿರುದ್ಧ ಕಿತ್ತೂರು ಸಂಸ್ಥಾನ ಸಮರ ಸಾರಿತ್ತು. ದತ್ತು ಪ್ರಕ್ರಿಯೆ ಹಾಗೂ ಭಾರತೀಯರ ಮೇಲೆ ನಡೆಯುತ್ತಿದ್ದ ದೌರ್ಜನ್ಯ ಖಂಡಿಸಿ ಸಿಡಿದೆದ್ದ ಮಹಿಳಾ ನಾಯತ್ವದ ಸೇನೆ ಆಂಗ್ಲರನ್ನು ಬಗ್ಗು ಬಡಿದಿತ್ತು. ಅಂದಿನ ಧಾರವಾಡ ಕಲೆಕ್ಟರ್ ಆಗಿದ್ದ ಬ್ರಿಟಿಷ್ ಅಧಿಕಾರಿ ಸೈಂಟ್ ಜಾನ್ ಥ್ಯಾಕರೆಯನ್ನು ಕಿತ್ತೂರು ರಾಣಿ ಚನ್ನಮ್ಮನ ಅಂಗರಕ್ಷಕ ಅಮಟೂರು ಬಾಳಪ್ಪ ಗುಂಡಿಕ್ಕಿ ಸಾಯಿಸಿದ. ಈ ಕಾಳಗ ನಡೆದು ಅಕ್ಟೋಬರ್ 23 ಕ್ಕೆ ಭರ್ತಿ 200 ವರ್ಷ ತುಂಬಿದೆ.

ಸಾಮಾನ್ಯವಾಗಿ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದರೆ ನಮಗೆ ತಕ್ಷಣ ನೆನಪಿಗೆ ಬರುವುದು 1857 ಸೈನಿಕರ ಹೋರಾಟ. ಆದರೆ ಇದಕ್ಕೂ 30 ವರ್ಷಗಳ ಮುಂಚಿತವಾಗಿ ಕರ್ನಾಟಕ ನೆಲದ ವೀರರಾಣಿ ಕಿತ್ತೂರು ರಾಣಿ ಚನ್ನಮ್ಮ ತನ್ನ ಶಕ್ತಿಯಿಂದ ಬ್ರಿಟಿಷ್ ಸಾಮ್ರಾಜ್ಯಕ್ಕೆ ನೀರು ಕುಡಿಸಿದ್ದರು ಎಂಬ ಇತಿಹಾಸ ಇನ್ನೂ ನಮ್ಮ ದೇಶಾದ್ಯಂತ ತಲುಪುತ್ತಿಲ್ಲ. ಒಬ್ಬ ಮಹಿಳೆ ತನ್ನ ಸಾಮ್ರಾಜ್ಯದ ಜನರಿಗಾಗಿ ಅಂದಿನ ಬ್ರಿಟಿಷ್ ಸರ್ಕಾರವನ್ನೇ ಎದುರುಹಾಕಿಕೊಂಡಿದ್ದು ಮಾತ್ರವಲ್ಲದೆ, ಅವರನ್ನು ಯುದ್ಧದಲ್ಲಿ ಸೋಲಿಸಿ ವಿಜೃಂಭಿಸಿದ್ದು ನಮ್ಮ ನೆಲದಲ್ಲಿ ಎಂಬುದುನ್ನು ತಲೆ ಎತ್ತಿ ಹೇಳುವಂತಾಗಬೇಕು.



ಕಿತ್ತೂರು ರಾಣಿ ಚನ್ನಮ್ಮ ತನ್ನ ಸೈನ್ಯದೊಂದಿಗೆ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿ ಗೆದ್ದ ಸಂದರ್ಭದಲ್ಲಿ ಉತ್ತರದ ಮಹಾನ್ ನಾಯಕಿ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಕೇವಲ ಐದು ವರ್ಷದವರು. ಹಾಗೆಂದು ಝಾನ್ಸಿ ರಾಣಿಯವರು ಕಡಿಮೆ ಎಂದು ಹೇಳಲಾಗದು, ಆದರೆ ಇತಿಹಾಸದಲ್ಲಿ ಅಡಗಿರುವ ಕೆಲವು ಮಹತ್ವದ ಘಟನೆಗಳನ್ನು ದೇಶದ ಜನರ ಮುಂದಿಡುವ ಪ್ರಾಮಾಣಿಕ ಪ್ರಯತ್ನ ಆಗದಿರುವುದು ವಿಪರ್ಯಾಸ. ನಮ್ಮ ಇತಿಹಾಸ ಮಾತ್ರ ಕಿತ್ತೂರು ರಾಣಿ ಚನ್ನಮ್ಮನ ಶೌರ್ಯ ಹೇಳುವಲ್ಲಿ ಹಲವುಬಾರಿ ಎಡವಿರುವುದರಲ್ಲಿ ಯಾವ ಸಂಶಯವೂ ಇಲ್ಲ.

ಕಿತ್ತೂರು ಸಂಸ್ಥಾನದ 11 ನೇ ದೊರೆ ಮಲ್ಲಸರ್ಜ ದೇಸಾಯಿ:

1816ರಲ್ಲಿ ಅಕಾಲಿಕ ನಿದನ ಹೊಂದಿದ್ದನ್ನು. ಈತನಿಗೆ ರುದ್ರಮ್ಮ ಹಾಗೂ ಚನ್ನಮ್ಮ ಎಂಬ ಇಬ್ಬರು ಪತ್ನಿಯರಿದ್ದರು. ಮೊದಲ ಪತ್ನಿ ರುದ್ರಮ್ಮನ ಪುತ್ರ ಶಿವಲಿಂಗ ರುದ್ರಸರ್ಜ ಪಟ್ಟಕ್ಕೆ ಏರಿದ. ಆದರೆ ಈತನೂ 1824 ಸಪ್ಟೆಂಬರ್ 12 ರಂದು ಸಾವಣಪ್ಪಿದ. ಈತನ ತರುವಾಯ ಅಧಿಕಾರಕ್ಕೆ ಬಂದವನೇ ಮಾಸ್ತಮರಡಿಯ ಬಾಳನಗೌಡನ ಮಗ ಶಿವಲಿಂಗಪ್ಪ (ಸವಾಯಿ ಮಲ್ಲಸರ್ಜ). ಆದರೆ ದತ್ತು ಪಡೆದಿದ್ದನ್ನೇ ಕಾನೂನು ಬಾಹಿರ ಎಂದು ಅಂದಿನ ಧಾರವಾಡದ ಕಲೆಕ್ಟರ್ ಥ್ಯಾಕರೆ ಕಿತ್ತೂರು ಸಂಸ್ಥಾನದ ವಿರುದ್ಧ ಷಡ್ಯಂತ್ರ ಪ್ರಾರಂಭಿಸಿದ.

ಸವಾಯಿ ಮಲ್ಲಸರ್ಜ ಪಟ್ಟಕ್ಕೇರಿದ ನಂತರ ಇಡೀ ಕಿತ್ತೂರು ಸಾಮ್ರಾಜ್ಯದ ಆಡಳಿತ ಚುಕ್ಕಾಣಿ ರಾಣಿ ಚನ್ನಮ್ಮನ ಕೈಗೆ ಬಂತು. ಈ ಸಂದರ್ಭದಲ್ಲಿ ರಾಣಿ ಚನ್ನಮ್ಮ ತನ್ನ ಬಲಾಢ್ಯ ಸೈನ್ಯದ ಪಹರೆ ಕಟ್ಟಿಕೊಂಡು ವಿನಾಕಾರಣ ಕಿರುಕುಳ ನೀಡುತ್ತಿದ್ದ ಬ್ರಿಟಿಷ್ ಅಧಿಕಾರಿ ಕ್ಯಾಥರೆ ವಿರುದ್ಧ ಸಮರ ಸಾರಿದ್ದಳು. ಹೋರಾಟದ ಕಿಚ್ಚು ಹೆಚ್ಚಿಸುವ ಮೂಲಕ ಮೊದಲ ಯುದ್ಧದಲ್ಲೇ ಆಂಗ್ಲರನ್ನು ಬಗ್ಗುಬಡಿಯುವ ಮೂಲಕ ಸ್ವಾತಂತ್ರ್ಯ ಹೋರಾಟದ ಬೆಳ್ಳಿಚುಕ್ಕಿಯಾಗಿ ಕಿತ್ತೂರು ರಾಣಿ ಚನ್ನಮ್ಮ ಇತಿಹಾಸದ ಪುಟದಲ್ಲಿ ತನ್ನದೇ ಒಂದು ಅಧ್ಯಾಯ ರಚಿಸಿದಳು.

ಆದರೆ ವಿಪರ್ಯಾಸವೆಂದರೆ ನಮ್ಮ ನೆಲದ ಒಬ್ಬ ವೀರ ಮಹಿಳೆ ಸ್ವತಂತ್ರವಾಗಿ ಸೈನ್ಯ ಕಟ್ಟಿಕೊಂಡು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ರಣಕಹಳೆ ಮೊಳಗಿಸಿದ್ದು ಇಂದಿನ ಪೀಳಿಗೆಗೆ ಅಷ್ಟಾಗಿ ತಿಳಿದಿಲ್ಲ. ಭಾರತೀಯ ಸ್ವಾತಂತ್ರ್ಯ ಇತಿಹಾಸದಲ್ಲಿ ಮಹಿಳೆಯೊಬ್ಬರು ಹೋರಾಡಿ ವೀರಮರನ ಹೊಂದಿದ್ದರು ನಾವು ಅವರ ಪರಿಚಯವನ್ನು ಕತ್ತಲೆಯ ಕೋಣೆಗೆ ತಳಿದ್ದು ಯಾವ ನ್ಯಾಯ. ಅಂದಿನ ಕಾಲಘಟ್ಟದಲ್ಲಿ ಕಿತ್ತೂರು ಸಾಮ್ರಾಜ್ಯ ಬ್ರಿಟಿಷರ ವಿರುದ್ಧ ತೋರಿಸಿದ್ದ ಧೈರ್ಯ ದೇಶದ ಅದೆಷ್ಟೋ ವಿವಿಧ ಭಾಗದ ಭಾರತೀಯರಿಗೆ ಹೋರಾಟದ ಕಿಚ್ಚು ಹಚ್ಚಿಸಿತ್ತು. ಆದರೆ ಇದ್ಯಾವುದು ನಮ್ಮ ನೆಲದವರಿಗೆ ತಿಳಿಸುವ ಪ್ರಯತ್ನವನ್ನು ಹೆಚ್ಚಾಗಿ ಮಾಡಲಿಲ್ಲ ಎಂಬುದು ನೋವಿನ ಸಂಗತಿ.

1824 ಅಕ್ಟೋಬರ್ 23 ರಂದು ಬ್ರಿಟಿಷರ ವಿರುದ್ಧ ಹೋರಾಡಿ ಗೆಲುವು ಸಾಧಿಸಿದ ಕಿತ್ತೂರು ಸಂಸ್ಥಾನದ ವೈಭವಕ್ಕೆ ಇಂದಿಗೆ 200 ವರ್ಷ ವಾಗಿದೆ. ಸ್ವಾತಂತ್ರ್ಯ ನಂತರದಲ್ಲಿ ಭಾರತ ಸಾಕಷ್ಟು ಬದಲಾಗಿದೆ. ಬ್ರಿಟಿಷರ ಹಿಡಿತದಿಂದ ನಮ್ಮನ್ನು ಪಾರು ಪಾಡಿದ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಸ್ಮರಣೆ ಕೇವಲ ಆಡಂಬರದ ಸಂಕೇತವಾಗಿದ್ದು ಬಿಟ್ಟರೆ ಬೇರೆ ಏನಿಲ್ಲ. ಸರ್ಕಾರಗಳು ಬರುತ್ತವೆ, ಹೋಗುತ್ತವೆ. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ನಮಗಾಗಿ ಪ್ರಾಣ ನೀಡಿದ ಮಹನಿಯರ ಇತಿಹಾಸ ತಿಳಿಯದಿದ್ದರೆ ಹೇಗೆ. ಮುಂದಿನ ಪೀಳಿಗೆಗೆ ನಮ್ಮ ಹಿರಿಯರ ತ್ಯಾಗ, ಬಲಿದಾನದ ಕಥೆಗಳನ್ನು ಹೇಳಬೇಕು.

ಸಮಾಚಾರ ಸಣ್ಣದಲ್ಲ

ಮೂವರು ಬಾಂಗ್ಲಾ ಪ್ರಜೆಗಳ ಬಂಧನ

ಹಾಸನ: ನಕಲಿ ಆಧಾರ್ ಕಾರ್ಡ್ ಬಳಸಿ ಹಾಸನದಲ್ಲಿ ವಾಸವಿದ್ದ ಮೂವರು ಬಾಂಗ್ಲಾ ಪ್ರಜೆಗಳನ್ನು ಡಿಸಿಆರ್‌ಬಿ ಪೊಲೀಸರು ಬಂಧಿಸಿದ್ದಾರೆ. ಜಮಾಲ್ ಅಲಿ, ಫಾರೂಕ್ ಅಲಿ, ಅಕ್ಮಲ್ ಹೊಕ್ಕು ಬಂಧಿತರು. ಹಾಸನ ನಗರದ 80 ಅಡಿ ರಸ್ತೆಯ, ಗದ್ದೆಹಳ್ಳದ, ನಾಲ್ಕನೇ ಅಡ್ಡ ರಸ್ತೆಯ ಜುಬೇರ್ ಮನೆಯಲ್ಲಿ ಈ ಮೂವರು ವಾಸವಿದ್ದರು. ಜುಬೇರ್ ಮನೆಯ ಕಟ್ಟಡ ಕಾಮಗಾರಿ ಕೆಲಸ ಮಾಡುತ್ತಿದ್ದರು. ಈ ಮೂವರು ಪಶ್ಚಿಮ ಬಂಗಾಳದ ವಿಳಾಸವಿರುವ ನಕಲಿ ಆಧಾರ್‌ಕಾರ್ಡ್ ಹೊಂದಿದ್ದರು. ನುಸುಳುಕೋರರನ್ನು ಡಿಸಿಆರ್‌ಬಿ ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಈ ಕುರಿತು ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಮಗನ ಸಾವಿನ ಸುದ್ದಿ ಕೇಳಿ ತಂದೆಯೂ ಸಾವು

ಹಾವೇರಿ/ಹುಬ್ಬಳ್ಳಿ: ಮಗ ಹೃದಯಾಘಾತದಿಂದ ಮೃತಪಟ್ಟ ಸುದ್ದಿ ಕೇಳಿ, ತಂದೆಯೂ ಹೃದಯಾಘಾತದಿಂದ ಮೃತಪಟ್ಟ ಹೃದಯವಿದ್ರಾವಕ ಘಟನೆ



ಹಾವೇರಿ ಜಿಲ್ಲೆಯ ಬಸವೇಶ್ವರ ನಗರದಲ್ಲಿ ನಡೆದಿದೆ. ಡಾ. ವಿನಯ್ ಗುಂಡಗಾವಿ (38) ಹೃದಯಾಘಾತ ದಿಂದ ಸಾವನ್ನಪ್ಪಿದ ಮಗ. ಡಾ. ವೀರಭದ್ರಪ್ಪ ಗುಂಡಗಾವಿ (68) ಮೃತ ತಂದೆ. ಒಂದೇ ದಿನ ತಂದೆ-ಮಗ ಮೃತಪಟ್ಟಿದ್ದು, ವೃತ್ತಿಯಲ್ಲಿ ಇಬ್ಬರು ವೈದ್ಯರಾಗಿದ್ದರು. ಮಗನ ಸಾವಿನ ಸುದ್ದಿ ಕೇಳಿದ ತಂದೆ ಡಾ.ವೀರಭದ್ರಪ್ಪ ಗುಂಡಗಾವಿಗೆ ಹಾವೇರಿಯಲ್ಲಿ ಹೃದಯಾಘಾ ತವಾಗಿ, ಕೊನೆಯುಸಿರೆಳೆದಿದ್ದಾರೆ. ಮಗ ಡಾ. ವಿನಯ ಹುಬ್ಬಳ್ಳಿಯಲ್ಲಿ ವೈದ್ಯರಾಗಿ ಕೆಲಸ ಮಾಡು ತ್ತಿದ್ದರು. ತಂದೆ ಡಾ. ವೀರಭದ್ರಪ್ಪ ಹಾವೇರಿಯಲ್ಲಿ ವೈದ್ಯರಾಗಿದ್ದರು. ಮೃತರ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿದೆ.

ಎರಡು ದಿನಗಳಲ್ಲಿ ಅಭ್ಯರ್ಥಿ ಆಯ್ಕೆ: ಸಿಎಂ ಸಿದ್ದರಾಮಯ್ಯ

ಚನ್ನಪಟ್ಟಣ ಅಭ್ಯರ್ಥಿ: ವರಿಷ್ಠರ ನಿರ್ಧಾರ

ಮೈಸೂರು: ಚನ್ನಪಟ್ಟಣ ಕ್ಷೇತ್ರಕ್ಕೆ ಡಿ.ಕೆ. ಸುರೇಶ್ ಹೆಸರು ಕೇಳಿ ಬಂದಿದೆ. ಪಕ್ಷದ ಅಧ್ಯಕ್ಷರೇ ಅಲ್ಲಿರುವ ಕಾರಣ, ಅವರೇ ಸೂಕ್ತ ಅಭ್ಯರ್ಥಿ ಆಯ್ಕೆಯ ಬಗ್ಗೆ ತೀರ್ಮಾನ ಮಾಡುತ್ತಾರೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣಕ್ಕೆ ಒಳ್ಳೆಯ ಅಭ್ಯರ್ಥಿಯನ್ನು ಕಣಕ್ಕಿಳಿಸುವಂತೆ ಮನವಿ ಮಾಡಿದ್ದೇನೆ ಎಂದರು. ಕಾಂಗ್ರೆಸ್ಸಿನ ಸಿದ್ಧಾಂತ ಮತ್ತು ಸಂವಿಧಾನದ ಮೌಲ್ಯಗಳನ್ನು ಒಪ್ಪಿ ಬರುವ ಎಲ್ಲರಿಗೂ ಪಕ್ಷಕ್ಕೆ ಸ್ವಾಗತ ಎಂದು ಹೇಳುವ ಮೂಲಕ ಸಿ.ಪಿ. ಯೋಗೇಶ್ವರ್ ಕಾಂಗ್ರೆಸ್ ಸೇರ್ಪಡೆಯ ಮುನ್ಸೂಚನೆ ನೀಡಿದರು.

ಡಿ.ಕೆ.ಸುರೇಶ್ ಪ್ರಬಲ ಅಭ್ಯರ್ಥಿ: ಚನ್ನಪಟ್ಟಣದಲ್ಲಿ ಸೂಕ್ತ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎನ್ನುವ ಚರ್ಚೆ ಆಗಿದೆ. ಡಿ.ಕೆ. ಸುರೇಶ್ ಅವರೂ ಕೂಡ ಪ್ರಬಲ ಅಭ್ಯರ್ಥಿ ಆಗಿದ್ದಾರೆ. ಒಂದೆರಡು ದಿನದಲ್ಲಿ ಚನ್ನಪಟ್ಟಣ ಮತ್ತು ಶಿಗ್ಗಾವಿ ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ಎನ್ನುವುದು ಸ್ಪಷ್ಟವಾಗಲಿದೆ. ಸಂಡೂರು ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಂಸದ ಈ. ತುಕಾರಾಂ ಅವರ ಪತ್ನಿಗೆ ಟಿಕೆಟ್ ನೀಡಲಾಗುವುದು ಎಂದರು.

ಪ್ರಕೃತಿ ವಿಕೋಪದಿಂದ ಬಿದ್ದಿರುವ ಮಳೆ ಕಾರಣದಿಂದ ಆಗಿರುವ ಅನಾಹುತಗಳಿಗೆ ಪರಿಹಾರ ನೀಡುತ್ತೇವೆ. ಎಲ್ಲ ಸಿದ್ಧತೆ ಮಾಡಿಕೊಂಡಿದ್ದು, ಮಳೆ ಅನಾಹುತಗಳ ಕುರಿತು ನಿಗಾ ವಹಿಸಿದ್ದೇವೆ. ಸ್ಥಳ ಸಮೀಕ್ಷೆ ಕೂಡ ನಡೆಯುತ್ತಿದೆ. ಪರಿಹಾರ ನೀಡುತ್ತೇವೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಿಜೆಪಿಯಿಂದ ತನಿಖಾ ಸಂಸ್ಥೆಗಳ ದುರ್ಬಳಕೆ

ಬಿಜೆಪಿಯವರು ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ರಾಜ್ಯ ಸರಕಾರವನ್ನು ಅಸ್ಥಿರಗೊಳಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಎಂಎಲ್ ಸಿ

ಡಾ.ಯತೀಂದ್ರ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು. ವರುಣಾ ಕ್ಷೇತ್ರದಲ್ಲಿ ಮಂಗಳವಾರ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇದು ಇದೇ ರೀತಿ ಮುಂದುವರಿದರೆ ಸರ್ವಾಧಿಕಾರಿ ಧೋರಣೆ ಹೆಚ್ಚಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು. ಇಂದು ವರುಣಾ ಕ್ಷೇತ್ರದ ಜನ ಸಂತಸಪಡುವ ದಿನ. ಗ್ಯಾರಂಟಿ ಕೊಟ್ಟದ್ದರಿಂದ ಅಭಿವೃದ್ಧಿಗೆ ಹಿನ್ನಡೆ ಆಯಿತು ಎಂದು ಹೇಳುತ್ತಿದ್ದರು. ಆದರೆ ಸಿಎಂ ಸಿದ್ದರಾಮಯ್ಯ, ಕ್ಷೇತ್ರಕ್ಕೆ ಅತಿ ಹೆಚ್ಚು ಅನುದಾನ ಕೊಟ್ಟಿದ್ದಾರೆ. ನಿಮ್ಮೆಲ್ಲರ ಆಶೀರ್ವಾದ ದಿಂದ ಸಿದ್ದರಾಮಯ್ಯ ಅವರು ಎರಡನೇ ಬಾರಿ ಸಿಎಂ ಆಗಿದ್ದಾರೆ. ಹೀಗಾಗಿ ಕ್ಷೇತ್ರಕ್ಕೆ ಭರಪೂರ ಕೊಡುಗೆ ಕೊಟ್ಟಿದ್ದಾರೆ ಎಂದು ಯತೀಂದ್ರ ನುಡಿದರು.

ಕೊಪ್ಪಳ ಜಿಲ್ಲೆಯಲ್ಲಿ ಅಸ್ಪೃಶ್ಯತೆ ಆಚರಣೆ ಗಲಭೆ ಪ್ರಕರಣ

101 ಮಂದಿ ತಪ್ಪಿತಸ್ಥರೆಂದ ಕೋರ್ಟ್ ನಾಳೆ ಶಿಕ್ಷೆಯ ಪ್ರಮಾಣ ಪ್ರಕಟ

ಕೊಪ್ಪಳ: 10 ವರ್ಷಗಳ ಹಿಂದೆ ನಡೆದಿದ್ದ ಗಲಭೆ ಪ್ರಕರಣದಲ್ಲಿ ಭಾಗಿಯಾಗಿದ್ದ 101 ಜನರನ್ನು ತಪ್ಪಿತಸ್ಥರು ಎಂದು ನ್ಯಾಯಾಲಯ ಮಂಗಳವಾರ ತೀರ್ಪು ನೀಡಿದೆ.

ಅಸ್ಪೃಶ್ಯತೆ ಆಚರಣೆಯ ಹಿನ್ನೆಲೆಯಲ್ಲಿ ನಡೆದ ಗಲಭೆಯಲ್ಲಿ ಭಾಗಿಯಾದ 101 ಜನರ ವಿರುದ್ಧ ಆರೋಪ ಸಾಬೀತಾಗಿದ್ದು, ಅ.24ರಂದು ಆರೋಪಿಗಳಿಗೆ ಶಿಕ್ಷೆಯ ಪ್ರಮಾಣವನ್ನು ನ್ಯಾಯಾಧೀಶರು ಪ್ರಕಟಿಸಲಿದ್ದಾರೆ.

ಪ್ರಕರಣದ ಹಿನ್ನೆಲೆ: 2014ರಲ್ಲಿ ಅಸ್ಪೃಶ್ಯತೆ ಪ್ರಕರಣದಲ್ಲಿ ಗಂಗಾವತಿ ತಾಲೂಕಿನ ಮರಕುಂಬಿ ಗ್ರಾಮದಲ್ಲಿ ಹೊಟೇಲ್ ಹಾಗೂ ಕ್ಷೌರದ ಅಂಗಡಿಯನ್ನು ದುಷ್ಕರ್ಮಿಗಳು ಧ್ವಂಸ ಮಾಡಿದ್ದರು. ಜೊತೆಗೆ ದಲಿತರ ಕೇರಿಯ 4 ಗುಡಿಸಲುಗಳನ್ನು ಸುಟ್ಟು ಹಾಕಿದ್ದರು. ಈ ಕುರಿತು ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಇದೇ ವೇಳೆ ದಲಿತರ ಮೇಲೆಯೂ ಪ್ರಕರಣ ದಾಖಲಿಸಲಾಗಿತ್ತು.

ಈ ಪ್ರಕರಣದ ವಿಚಾರಣೆ ನಡೆಸಿದ ಕೊಪ್ಪಳ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಪ್ರಕರಣದ ಆರೋಪ ಸಾಬೀತಾಗಿದೆ ಎಂದು ಪ್ರಕಟಿಸಿದರು. ಅದರಲ್ಲಿ ಕೆಲವರು ಸಾವನ್ನಪ್ಪಿದ್ದು, 101 ಜನರು ಮಾತ್ರ ಜೀವಂತವಾಗಿದ್ದಾರೆ. ಅವರಲ್ಲಿ ನ್ಯಾಯಲಯಕ್ಕೆ ಹಾಜರಾಗಿದ್ದ 100 ಜನರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. ಅಸ್ಪೃಶ್ಯತೆಯ ಕಾರಣಕ್ಕೆ ಶಿಕ್ಷೆಯಾಗುತ್ತಿರುವುದು ಇದು ದೊಡ್ಡ ಪ್ರಕರಣವಾಗಿದೆ ಎಂದು ಅಭಿಯೋಜಕರು ತಿಳಿಸಿದ್ದಾರೆ.

ಅಮಾಯಕರಿಗೂ ಶಿಕ್ಷೆ

ಆದರೆ ಕೆಲವರು ಮಾಡಿರುವ ದೌರ್ಜನ್ಯದಿಂದಾಗಿ ಉಳಿದ ಅಮಾಯಕರು ಶಿಕ್ಷೆ ಅನುಭವಿಸುವಂತಾಗಿದೆ ಎಂಬ ಮಾತುಗಳು ಕೇಳಿಬಂದಿವೆ. ನ್ಯಾಯಲಯದ ತೀರ್ಪಿಗೆ ಎಲ್ಲರೂ ಬದ್ಧರಾಗಿರಬೇಕು. ಮುಂದಿನ ದಿನಗಳಲ್ಲಿ ಅಮಾಯಕರು ಹೊರಬರಲಿ ಎಂದು ಗ್ರಾಮಸ್ಥರು ಹೇಳಿದ್ದಾರೆ. ಅ.24 ರಂದು ನ್ಯಾಯಾಧೀಶರು ಶಿಕ್ಷೆ ಪ್ರಮಾಣ ಪ್ರಕಟಿಸಲಿದ್ದು, ತೀರ್ಪಿನ ಬಗ್ಗೆ ಕುತೂಹಲ ಉಂಟಾಗಿದೆ.

ದಂಪತಿ ಆತ್ಮಹತ್ಯೆಗೆ ಯತ್ನ ಪತಿ ಸಾವು, ಪತ್ನಿ ಗಂಭೀರ

ತುಮಕೂರು: ಸಾಲಬಾಧೆ ತಾಳಲಾರದೆ ಮಾತ್ರೆ ಸೇವಿಸಿ ದಂಪತಿ ಆತ್ಮಹತ್ಯೆಗೆ ಯತ್ನಿಸಿದ ಪರಿಣಾಮ ಪತಿ ಸಾವನ್ನಪ್ಪಿದ ಘಟನೆ ತುಮಕೂರು ಜಿಲ್ಲೆ ಕುಣಿಗಲ್ ಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿ ನಡೆದಿದೆ.

ಅನಿಲ್ (47) ಹಾಗೂ ಉಮಾ (45) ಆತ್ಮಹತ್ಯೆಗೆ ಯತ್ನಿಸಿದ ದಂಪತಿ. ಮಾತ್ರೆ ಸೇವಿಸಿದ ಪರಿಣಾಮ ಅನಿಲ್ ಮೃತಪಟ್ಟಿದ್ದು, ಪತ್ನಿ ಗಂಭೀರ ಸ್ಥಿತಿಯಲ್ಲಿದ್ದಾರೆ. ಅನಿಲ್ ಕಗ್ಗೆರೆ ಗ್ರಾಮದವರಾಗಿದ್ದು, ಹೌಸಿಂಗ್ ಬೋರ್ಡ್‌ನಲ್ಲಿ ಬಾಡಿಗೆ ಮನೆಯಲ್ಲಿ ಪತ್ನಿ ಜೊತೆ ವಾಸವಿದ್ದರು. ಹಲವು ವರ್ಷಗಳಿಂದ ಕುಣಿಗಲ್ ಪಟ್ಟಣದಲ್ಲಿ ಎಲೆಕ್ಟ್ರಾನಿಕ್ಸ್ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದರು. ಇತ್ತೀಚೆಗೆ ಆನ್‌ಲೈನ್‌ನಲ್ಲಿ ಹಣ ಹೂಡಿಕೆ ಮಾಡಿ ಅನಿಲ್ ಸುಮಾರು 8-10 ಲಕ್ಷ ರು. ಸಾಲ ಮಾಡಿಕೊಂಡಿದ್ದರು. ಸಾಲಗಾರರ ಕಿರುಕುಳಕ್ಕೆ ಬೇಸತ್ತು ಸೋಮವಾರ ಸಂಜೆ ತಮ್ಮ ಮನೆಯಲ್ಲಿ ಮಾತ್ರೆ ಸೇವಿಸಿ ಪತಿ, ಪತ್ನಿ ಇಬ್ಬರೂ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಗಂಡ ಅನಿಲ್ ಮನೆಯಲ್ಲಿ ಸಾವನ್ನಪ್ಪಿದ್ದಾರೆ. ಪತ್ನಿ ಉಮಾಗೆ ಕುಣಿಗಲ್ ಸರಕಾರಿ ತಾಲೂಕು ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಘಟನಾ ಸ್ಥಳಕ್ಕೆ ತುಮಕೂರು ಎಸ್ಪಿ ಅಶೋಕ್ ಕೆವಿ ಹಾಗೂ ಕುಣಿಗಲ್ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಯೋಗೇಶ್ವರ್ ಕಾಂಗ್ರೆಸ್‌ಗೆ ಬಂದ್ರೆ ಸ್ವಾಗತ: ಸಚಿವ ಲಾಡ್

ಧಾರವಾಡ: ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಪಕ್ಷಕ್ಕೆ ಬಂದರೆ ಸ್ವಾಗತ ಮಾಡುತ್ತೇವೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಗೇಶ್ವರ್ ಅವರಿಗೆ ನಮ್ಮ ಪಕ್ಷಕ್ಕೆ ನಾನು ವೈಯಕ್ತಿಕವಾಗಿ ಸ್ವಾಗತ

ಮಾಡುತ್ತೇನೆ. ನಮ್ಮ ಪಕ್ಷದ ಹೈಕಮಾಂಡ್, ಅಧ್ಯಕ್ಷರು ಹಾಗೂ ಸಿಎಂ ಅವರ ಒಪ್ಪಿಗೆ ಮೇರೆಗೆ ಅವರು ನಮ್ಮ ಪಕ್ಷಕ್ಕೆ ಬರಬಹುದು. ನಮ್ಮ ಪಕ್ಷಕ್ಕೆ ಬಂದರೆ ವೆಲ್ ಕಮ್ ಮಾಡುತ್ತೇನೆ ಎಂದಿದ್ದಾರೆ.

ಸಂಡೂರು ಉಪಚುನಾವಣೆಗೆ ಕಾಂಗ್ರೆಸ್ ಟಿಕೆಟ್ ವಿಚಾರವಾಗಿ, ಟಿಕೆಟ್ ವಿಚಾರ ಬಗೆಹರಿದಿದೆ. ಆದರೆ, ಯಾರಿಗೆ ಫೈನಲ್ ಆಗುತ್ತದೆ ಎನ್ನುವುದನ್ನು ನೋಡಬೇಕು. ಸಂಸದ ತುಕಾರಾಂ ಅವರ ಪತ್ನಿಯ ಹೆಸರು ಇದೆ. ಇನ್ನೂ ಅಧಿಕೃತವಾಗಿ ಹೊರಗೆ ಬಂದಿಲ್ಲ. ನಮ್ಮ ತೀರ್ಮಾನವನ್ನು ನಾವು ಹೇಳಿದ್ದೇವೆ. ಪಕ್ಷ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ ನೋಡಬೇಕು ಎಂದು ಹೇಳಿದ್ದಾರೆ.

ಶಿಗ್ಗಾವಿ ಉಪಚುನಾವಣೆ ವಿಚಾರವಾಗಿ, ನಮ್ಮ ಪಕ್ಷದಲ್ಲಿ ಲಿಂಗಾಯತ ಹಾಗೂ ಮುಸ್ಲಿಂ ಅಂತಾ ಏನೂ ಇಲ್ಲ. ನಮ್ಮದು ಸೆಕ್ಯುಲರ್ ಪಕ್ಷ. ನಾವೆಲ್ಲರನ್ನೂ ಒಂದೇ ರೀತಿ ನೋಡುತ್ತೇವೆ. ಯಾರಿಗೇ ಟಿಕೆಟ್ ಕೊಟ್ಟರೂ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸುತ್ತೇವೆ. ನಮ್ಮ ಅನಿಸಿಕೆಗಳನ್ನು ಬಹಿರಂಗವಾಗಿ ಹೇಳಲು ಬರುವುದಿಲ್ಲ. ಎಲ್ಲಾ ವಿಚಾರಗಳನ್ನೂ ಪಕ್ಷದಲ್ಲಿ ಹೇಳಿಕೊಂಡಿರುತ್ತೇವೆ ಎಂದಿದ್ದಾರೆ.

ಯುವತಿ ಸಾವಿನ ಪ್ರಕರಣ: ಆಪರೇಟರ್ ಬಂಧನ

ರೇಂಜರ್ ಸ್ವಿಂಗರ್‌ನಿಂದ ಬಿದ್ದು ಸಾವು

ವಿಜಯಪುರ: ನಗರದಲ್ಲಿ ಬೀಡುಬಿಟ್ಟಿರುವ ಫಿಶ್ ಟನಲ್ ಎಕ್ಸ್ ಪೋ ಆಯೋಜಕರ ನಿರ್ಲಕ್ಷ್ಯಕ್ಕೆ ಯುವತಿಯೊಬ್ಬಳು ಬಲಿಯಾಗಿದ್ದಾಳೆ. ತಲೆಕೆಳಗಾಗಿ ತಿರುಗಿಸುವ ರೇಂಜರ್ ಸ್ವಿಂಗರ್‌ನಲ್ಲಿ ಕುಳಿತಿದ್ದ ಯುವತಿ ಕಳಪೆ ಬೆಲ್ಟ್ ಹಾಕಿದ್ದ ಪರಿಣಾಮ ಕೆಳಗೆ ಬಿದ್ದು ಸಾವನ್ನಪ್ಪಿದ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ನವಭಾಗ್ ರಸ್ತೆಯಲ್ಲಿರುವ ಫಿಶ್‌ಟನಲ್ ಎಕ್ಸಪೋಗೆ ಬಸವನಬಾಗೇವಾಡಿ ತಾಲೂಕಿನ ಇಂಗಳೇಶ್ವರದ ಶಿಕ್ಷಕ ಅರವಿಂದ ಬಿರಾದಾರ್ ಪತ್ನಿ ಗೀತಾ ,ಪುತ್ರಿ ಜಿಖಿತಾ ಮೊದಲಾದವರು ಅ. 20 ರಂದು ಆಗಮಿಸಿದ್ದರು. ಈ ವೇಳೆ ನಿಖಿತಾ ಹಾಗೂ ಆಕೆಯ ಇಬ್ಬರು ಗೆಳತಿ ಯರು ತಲೆಕೆಳಗಾಗಿ ತಿರುಗಿಸುವ ರೇಂಜರ್ ಸ್ವಿಂಗ್ ನಲ್ಲಿ ಕುಳಿತುಕೊಳ್ಳುವಾಗಲೇ ನಿಖಿತಾ ತಾಯಿ ಗೀತಾ ಆಪರೇಟರ್‌ಗೆ ಬೆಲ್ಟ್ ಹಾಗೂ ಇತರ ಸುರಕ್ಷತಾ ಸಾಧನಗಳು ಸಮರ್ಪಕತೆ ಬಗ್ಗೆ ಪ್ರಶ್ನಿಸಿದಾಗ ಆಪರೇಟರ್ ರಮೇಶ ರಾಯ್ ಎಲ್ಲ ಸರಿಯಾಗಿದೆ ಎಂದಿದ್ದ.

ಕಳಚಿಬಿದ್ದ ಬೆಲ್ಟ್: ರೇಂಜರ್ ಸ್ವಿಂಗ್ ಆನ್ ಆಗಿ ತಲೆಕೆಳಗಾಗಿ ತಿರುಗುತ್ತಿದ್ದಂತೇ ಅದರಲ್ಲಿದ್ದವರು ಭಯದಿಂದ ಕಿರುಚಿದರು. ಆಗ ನಿಖಿತಾ ತಾಯಿ ರೇಂಜರ್ ಸ್ವಿಂಗ್ ಬಂದ್ ಮಾಡಿ ಎಂದು ಆಪರೇಟರ್‌ಗೆ ಹಲವಾರು ಬಾರಿ ಮನವಿ ಮಾಡಿದರೂ ಆಪರೇಟರ್ ಕಿವಿಗೊಡಲಿಲ್ಲ. ಇದೇ ವೇಳೆ ನಿಖಿತಾಗೆ ಹಾಕಿದ್ದ ಸುರಕ್ಷತಾ ಬೆಲ್ಟ್ ಸಡಿಲಾಗಿ ಆಕೆ ಮೇಲಿಂದ ಕೆಳಗೆ ಬಿದ್ದು ತಲೆ ಹಾಗೂ ಕಾಲುಗಳಿಗೆ ತೀವ್ರ ಗಾಯವಾಗಿತ್ತು. ಇಡೀ ದೃಶ್ಯ ಮೊಬೈಲ್ ನಲ್ಲಿ ಸೆರೆಯಾಗಿದೆ.

ರಕ್ತಸ್ರಾವದಿಂದ ಮೃತಪಟ್ಟ ಯುವತಿ

ತಕ್ಷಣವೇ ನಿಖಿತಾಳ ತಂದೆ ಪುತ್ರಿಯನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದೊಯ್ದರಾದರೂ ತಲೆಗೆ ಬಿದ್ದ ತೀವ್ರಪೆಟ್ಟಿನಿಂದ ರಕ್ತಸ್ರಾವವಾಗಿ ಆಕೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾಳೆ. ಫಿಶ್‌ಟನಲ್ ಎಕ್ಸ್‌ಪೋ ಮ್ಯಾನೇಜರ್ ಹಾಗೂ ಇತರ ಸಿಬ್ಬಂದಿ ಪ್ರಾಥಮಿಕ ಚಿಕಿತ್ಸೆಗೂ ನೆರವಾಗದೆ, ಆಂಬ್ಯುಲೆನ್ಸ್ ತರಿಸದೆ ಉದಾಸೀನ ವಹಿಸಿದ್ದರಿಂದ ನಿಖಿತಾಳ ತಂದೆ ದೂರಿದ್ದು, ವಿಜಯಪುರದ ಗಾಂಧಿಚೌಕ ಠಾಣೆಯ ಪೊಲೀಸರು ಆಪರೇಟರ್ ರಾಯ್‌ನನ್ನು ಬಂಧಿಸಿದ್ದಾರೆ. ಮ್ಯಾನೇಜರ್‌ನನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಎಕ್ಸ್‌ಪೋದಲ್ಲಿ ಸುರಕ್ಷತಾ ಬೆಲ್ಟ್‌ಗಳು ಹಾಳಾಗಿದ್ದು, ಆಡಳಿತ ಮಂಡಳಿಯ ನಿರ್ಲಕ್ಷ್ಯವೇ ದುರಂತಕ್ಕೆ ಕಾರಣ. ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ನಿಖಿತಾ ಕುಟುಂಬ ಒತ್ತಾಯಿಸಿದೆ.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123.
ಇ-ಮೇಲ್: nelamangala.pa@gmail.com Phone: 9663046622

ಸಂಖ್ಯೆ: ನೆಯೋಪ್ರಾ:CLU:34:2024-25 ದಿನಾಂಕ: 15-10-2024

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13-02-2007 ರನ್ವಯ **ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಕಸಬಾ ನಿಜಗಲ್** ಗ್ರಾಮವು "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ:01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ 'ವಾಣಿಜ್ಯ'** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ" ವಲಯದಿಂದ "ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು ಶ್ರೀ / ಶ್ರೀಮತಿ	ತಾಲ್ಲೂಕು/ಹೋಬಳಿ/ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಕೆ.ಕೃಷ್ಣಮೂರ್ತಿ ಬಿನ್ ಲೇಟ್ ವೈ.ಕೆಂಪಯ್ಯ	ನೆಲಮಂಗಲ/ ಸೋಂಪುರ/ ಕಸಬಾ ನಿಜಗಲ್	38/14	01-07	ವ್ಯವಸಾಯ	ವಾಣಿಜ್ಯ
		ಒಟ್ಟು	01-07		

ಷರಾ:- ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಾಣಿಜ್ಯ ಸಮುಚ್ಚಯ ಇಲ್ಲದೆ ಇರುವುದರಿಂದ ಪ್ರಶ್ನಿತ ಜಮೀನಿನಲ್ಲಿ ಉತ್ತಮ ಸೌಲಭ್ಯಗಳನ್ನೊಳಗೊಂಡ ವಾಣಿಜ್ಯ ಸಮುಚ್ಚಯ ಸ್ಥಾಪಿಸಿದಲ್ಲಿ, ಸ್ಥಳೀಯ ಹುದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾಪ್ರ/2665/ಸ್ಪ್ಯಾನ್/2024-25

ಕರ್ನಾಟಕ ಸರಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾದಗಿರಿ ಜಿಲ್ಲೆ, ಯಾದಗಿರಿ

(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ: 08473 253288 ಫ್ಯಾಕ್ಸ್: 08473 253701
E-mail: ka.yadgiri.dudc@gmail.com : dudc_yadgiri@yahoo.com

ಕಡತ ಸಂಖ್ಯೆ/ಜಿನಕೋ/ಯೋಜನೆ/ನ.ಹಂ-4/ /2024-25 ದಿನಾಂಕ: 22.10.2024

~: ಅಲ್ಪಾವಧಿ ಇ-ಟೆಂಡರ ಪ್ರಕಟಣೆ :~ (ಇ-ಪ್ರೋಕ್ಯುರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು - 1999 ಹಾಗೂ ನಿಯಮಾವಳಿಗಳು -2000 ರಂತೆ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಿಯಿಸಿದ (ರೆಜಿಸ್ಟ್ರೇಷನ್) ಏಜೆನ್ಸಿದಾರರಿಂದ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರಕ್ಯೂರ್‌ಮೆಂಟ್‌ನಲ್ಲಿ kppp.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ತಾಂತ್ರಿಕ ಅಧಿಕಾರಿಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

01) ಟೆಂಡರ್‌ಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: 22.10.2024 02) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 30.10.2024 Time : 17.30 03) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 04.11.2024 Time : 11.00 04) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 06.11.2024 Time: 11.00.

01) ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT19082/Call-3. **ವಿವರ:** Construction of Toilet Room in Rakangera area Community ward No-21,Samudaya Bhavana Ganganagara at Ward No-16, Samudaya Bhavana Ganganagara at Ward No-19, Bus Shelter Near Degree College at Ward No-08, Providing Street light From BB Main Road CB Kaman to diggi Agasi Road at Ward No-07 and From Sangameshwara school (Halabhavi Road Near Nala Culvert) to Palki House at Ward No-31 and Arch Construction of the Road Leading Bapunagar at Ward No-08 in Shahapur Town **ಅಂದಾಜು ಮೊತ್ತ** (ಲಕ್ಷಗಳಲ್ಲಿ): 107.81. ಇ.ಎಂ.ಡಿ. **ಮೊತ್ತ** (ರೂ.ಗಳಲ್ಲಿ) : 1,34,150/-.

ಷರತ್ತು: ಟೆಂಡರ್ ಡಾಕ್ಯೂಮೆಂಟ್‌ನ ಷರತ್ತಗಳ ಪ್ರಕಾರ ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/247/ಕೆ.ಎಸ್.ಎಂ.ಸಿ.&ಎ/2024-25

ದರ್ಶನ್ ಭೇಟಿಯಾದ ವಿಜಯಲಕ್ಷ್ಮೀ

ಬಳ್ಳಾರಿ: ಕೊಲೆ ಪ್ರಕರಣದಲ್ಲಿ ಜೈಲುಪಾಲಾಗಿರುವ ದರ್ಶನ್ ನೋಡಲು ಬಳ್ಳಾರಿ ಜೈಲಿಗೆ ಪತ್ನಿ ವಿಜಯಲಕ್ಷ್ಮೀ 10ನೇ ಬಾರಿ ಭೇಟಿ ನೀಡಿದ್ದರು. ಬೆನ್ನುನೋವಿನಿಂದ ಬಳಲುತ್ತಿರುವ ದರ್ಶನ್ ಆರೋಗ್ಯ ವಿಚಾರಿಸಲು ವಿಜಯಲಕ್ಷ್ಮೀ ಮತ್ತು ಸಂಬಂಧಿ ಸುಶಾಂತ್ ನಾಯ್ಡು ಜೈಲಿಗೆ ಭೇಟಿ ಕೊಟ್ಟಿದ್ದರು. ಈ ವೇಳೆ, ಬ್ಯಾಗ್‌ನಲ್ಲಿ ದರ್ಶನ್‌ಗೆ ಅಗತ್ಯವಿರುವ ಬಟ್ಟೆ, ತಿಂಡಿ ತಿನಿಸುಗಳನ್ನು ತಂದಿದ್ದರು. ಬಳಿಕ ದರ್ಶನ್‌ಗೆ ಸ್ಕ್ಯಾನಿಂಗ್ ಮಾಡಿಸುವ ಕುರಿತು ಮತ್ತು ಕಾನೂನು ಸಮರದ ಕುರಿತು ಚರ್ಚಿಸಿದ್ದಾರೆ.

ನದಿಯಲ್ಲಿ ಜಾರಿಬಿದ್ದು ಇಬ್ಬರ ಸಾವು

ಯಾದಗಿರಿ: ಹುಣಸಗಿ ತಾಲೂಕಿನ ಬೆಂಚಿಗಡ್ಡಿ ಸಮೀಪದ ಸ್ನಾನಕ್ಕೆ ಹೋಗಿ ಕೃಷ್ಣಾನದಿಯಲ್ಲಿ ಕಾಲುಜಾರಿ ಇಬ್ಬರು ಯುವಕರು ಮೃತಪಟ್ಟಿದ್ದಾರೆ. ಪಿಪಿಸಿಎಲ್ ವಿದ್ಯುತ್

ಪೂರೈಕೆ ಘಟಕದಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದ ನಾಗಲ್ಯಾಂಡ್ ಮೂಲದ ಆಲಮ್ (23), ವಿಜಯಪುರ ಮೂಲದ ಮಾರುತಿ ಮುತ್ತಗಿ(24) ಮೃತ ದುರ್ದೈವಿ ಗಳು. ಕೃಷ್ಣಾನದಿಯಲ್ಲಿ ಸೋಮವಾರ ಸ್ನಾನಕ್ಕಾಗಿ ತೆರಳಿದಾಗ ಆಲಮ್ ಜಾರಿ ನೀರಿಗೆ ಬಿದ್ದಿದ್ದಾನೆ. ಪಕ್ಕದಲ್ಲಿಯೇ ಇದ್ದ ಮಾರುತಿ ಎಂಬಾತ ರಕ್ಷಣೆಗೆ ನದಿಗೆ ಇಳಿದಾಗ ಇಬ್ಬರೂ ನೀರು ಪಾಲಾಗಿದ್ದಾರೆ . ಮಂಗಳವಾರ ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹಗಳನ್ನು ಹೊರತೆಗೆದಿದ್ದಾರೆ. ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿದ್ದು, ಕೊಡೆಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ: ಅಇಂ(ವಿ)/ಪ್ರ(ನಿ)/ಬೆಂಮಕ್ಷೇವ(ದ)/ಸಕಾನಿಇಂ(ಕಾ)/2024-25/5288-89 ದಿ: 21.10.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮುಖಾಂತರ)

ಕವಿಪ್ರನಿನಿಯು ಅರ್ಹ ಬಿಡ್ಡರ್‌ಗಳಿಂದ ವಿವಿಧ ರಿಪೇರಿ ಮತ್ತು ನಿರ್ವಹಣೆ ಸಿವಿಲ್ ಕಾಮಗಾರಿಗಳನ್ನು ಸೋಮನಹಳ್ಳಿ ವಿಭಾಗದ ವ್ಯಾಪ್ತಿಯಲ್ಲಿ ನಿರ್ವಹಿಸಲು KPP ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 23.10.2024ರ** ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ (ನಿರ್ವಹಣೆ),
ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತ, ನೆಲಮಹಡಿ, ಕವಿಪ್ರನಿನಿ ಕಚೇರಿ ಸಂಕೀರ್ಣ,
ಆನಂದರಾವ್ ವೃತ್ತ, ಬೆಂಗಳೂರು-560 009. ದೂ: 080-22386686/85.

ಕರ್ನಾಟಕ ಗೃಹ ಮಂಡಳಿ

Karnataka Housing Board Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

Notification No: KHB/CE/AEF/S&S/Tavaragere-Kalburgi/KHB/2024-25/SE0175 Dated: 19.10.2024
ಕಲಬುರಗಿ ಜಿಲ್ಲೆ, ಕಲಬುರಗಿ ತಾಲ್ಲೂಕು, ಔರಾದ್ ಹೋಬಳಿ, ತಾವರೆಗೆರೆ ಗ್ರಾಮದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನ ಮತ್ತು ಸೇವೆಗಳ ಯೋಜನೆಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಮೂಲಕ ಟೆಂಡರ್ ಕರೆಯಲಾಗಿದೆ.
ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 04.11.2024 ಸಂಜೆ 4.00 ಗಂಟೆಯವರೆಗೆ.
ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿಭವನ, ಬೆಂಗಳೂರು Tel: 080-22273511, 22100077
website: https://kppp.karnataka.gov.in

ಸಹಿ/- ಮುಖ್ಯ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/2683/ಆಕಾರ್/2024-25

ತಾಲ್ಲೂಕು ಪಂಚಾಯತಿ ಕಾರ್ಯಾಲಯ ಚಿಕ್ಕಬಳ್ಳಾಪುರ

ಇ-ಮೇಲ್:eochikballapur@gmail.com, ದೂರವಾಣಿ: 08156-272615
ಸಂಖ್ಯೆ:ತಾಪಂಚಿ/ಕಾನಿಅ/ಅಂ.ಮ.ಬ.ಹ/ಸಿಆರ್-1/2024-25
ದಿನಾಂಕ: 21.10.2024

ಅಧಿಸೂಚನೆ

ವಿವರ: (1) ಟೆಂಡರ್ ಅಂಗೀಕಾರ ಪ್ರಾಧಿಕಾರ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ. **(2)** ಟೆಂಡರ್ ಆಹ್ವಾನಿಸುವ ಪ್ರಾಧಿಕಾರ: ಕಾರ್ಯನಿರ್ವಾಹಕ ಅಧಿಕಾರಿಗಳು,ತಾಲ್ಲೂಕು ಪಂಚಾಯತ್, ಚಿಕ್ಕಬಳ್ಳಾಪುರ. **(3)** ಟೆಂಡರ್ ಉಲ್ಲೇಖ ಮತ್ತು ಪ್ರಕಟಣೆ: ಕಾ.ನಿ.ಅ.ಕ/ ತಾ.ಪಂ/ ಚಿ.ಪುರ/ ಹೊ.ಸಿ.ಟೆಂ/ 2024-25 ದಿನಾಂಕ: 21.10.2024. **(4)** ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು **ಆನ್‌ಲೈನ್ ಮೂಲಕ ಸಲ್ಲಿಕೆಗೆ ಕೊನೆಯ ದಿನಾಂಕ: 30.10.2024, ಸಾಯಂಕಾಲ 05:00.** **(5)** ಟೆಂಡರ್ ತೆರೆಯುವುದು: (ಅ) ತಾಂತ್ರಿಕ ಲಕೋಟೆ **ದಿನಾಂಕ: 04.11.2024, ಬೆಳಿಗ್ಗೆ 11:00 ಗಂಟೆ ನಂತರ.** (ಡಿ) ಆರ್ಥಿಕ ಲಕೋಟೆ **ದಿನಾಂಕ: 06.11.2024, ಬೆಳಿಗ್ಗೆ 11:00 ಗಂಟೆ ನಂತರ.** (6) ಕಾರ್ಯಾದೇಶ ನೀಡುವುದು: ಆರ್ಥಿಕ ಬಿಡ್ ಅನುಮೋದನೆಗೊಂಡ ನಂತರ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಅಧಿಕಾರಿ
ತಾಲ್ಲೂಕು ಪಂಚಾಯಿತಿ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:247/ಕೆಎಸ್ಎಂಸಿಎ/2024-25

ಅತ್ತಿಬೆಲೆ ಪುರಸಭೆ ಕಾರ್ಯಾಲಯ

ಸ್ವಚ್ಛ ಭಾರತ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562107
ಫೋನ್: 080-27821501, E-Mail: itstaff_ulb_attibele@yahoo.com

ಸಂ:ಅ.ಪು.ಸ/ಆಶಾ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಸಮೀಕ್ಷೆ/ಸಿ.ಆರ್/15/2024-25 ದಿನಾಂಕ: 21.10.2024

ಸಾರ್ವಜನಿಕ ಪ್ರಕಟಣೆ

ಮ್ಯಾನ್ಯುಯಲ್ ಸ್ಕ್ಯಾವೆಂಜರ್ ವಿಶೇಷ ಮರು ಸಮೀಕ್ಷೆ

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಗುರುತಿಸುವ ಮತ್ತು ಪುನರ್ವಸತಿಗೆ ರಾಜ್ಯಾದ್ಯಂತ ವಿಶೇಷ ಮರು ಸಮೀಕ್ಷೆಯನ್ನು ಹಮ್ಮಿಕೊಳ್ಳಲಾಗಿದೆ. ಮ್ಯಾನುಯಲ್ ಸ್ಕ್ಯಾವೆಂಜರ್‌ಗಳ ಮತ್ತು ಅವಲಂಬಿತರ ನಿಖರವಾದ ಸಂಖ್ಯೆಯನ್ನು ಮತ್ತು ಅವರನ್ನು ಸದರಿ ವೃತ್ತಿಯಿಂದ ವಿಮುಕ್ತಗೊಳಿಸಿ ಪುನರ್ವಸತಿಗೊಳಿಸಲು ಕೇಂದ್ರ ಸರ್ಕಾರವು ಸಮೀಕ್ಷೆಯನ್ನು ನಡೆಸಲು ಉದ್ದೇಶಿಸಿದೆ.

ಸಮೀಕ್ಷೆಯ ಉದ್ದೇಶ ಮತ್ತು ವ್ಯಾಪ್ತಿ

1) ಕೈಯಿಂದ ಮಲ ಸ್ವಚ್ಛಗೊಳಿಸುವ ವೃತ್ತಿಯಲ್ಲಿ ತೊಡಗಿಕೊಂಡವರನ್ನು (ಅವರ ಅವಲಂಬಿತರ ವಯಸ್ಸು ಮತ್ತು ಅಪ್ರಾಪ್ತ) ಗುರುತಿಸುವುದು ಅಂದರೆ:
* ಎಸ್.ಆರ್.ಎಂ.ಎಸ್. ಯೋಜನೆಯಡಿ ಗುರುತಿಸಿ ಇನ್ನೂ ಅದೇ ಕೆಲಸ ಮುಂದುವರೆಸುವುದು.
* ಎಸ್.ಆರ್.ಎಂ.ಎಸ್. ಯೋಜನೆಯಡಿ ಸೌಲಭ್ಯ ಪಡೆಯದೇ ಇರುವುದು.

2) ನೈಜ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸುವಿಕೆಯನ್ನು ಖಾತರಿಪಡಿಸಿಕೊಳ್ಳುವುದು ಮತ್ತು ಇದೇ ಸಮಯದಲ್ಲಿ ಅನೈಜ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಕಡಿಮೆ ಮಾಡುವುದು ಅಥವಾ ನಿರ್ಮೂಲನೆ ಮಾಡುವುದು. 3) ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲಿರುವ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ ಮತ್ತು ಕೌಶಲ್ಯ ಸ್ಥಿತಿಗಳನ್ನು ಗುರುತಿಸುವುದು ಮತ್ತು ಅವರನ್ನು ಬದಲಿ ಸ್ವಯಂ ಉದ್ಯೋಗ ಚಟುವಟಿಕೆಗಳಲ್ಲಿ ತೊಡಗಿಸುವುದು. 4) ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಸ್ವಚ್ಛಗೊಳಿಸಲು ತೊಡಗಿಕೊಂಡಿರುವ ಒಣ ಶೌಚಾಲಯಗಳು, ತೆರೆದ ಚರಂಡಿಗಳು ಇತ್ಯಾದಿ ವಿವರ ಕಂಡುಹಿಡಿಯುವುದು. (ಅವರ ಅವಲಂಬಿತರ ವಯಸ್ಸು ಮತ್ತು ಅಪ್ರಾಪ್ತ) ಗುರುತಿಸುವುದು ಅಂದರೆ:
* ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅಂದರೆ ಯಾರು?
* ಮ್ಯಾನುಯಲ್ ಸ್ಕ್ಯಾವೆಂಜರ್ ಎಂದರೆ ಯಾವುದೇ ಆಧುನಿಕ ಸಲಕರಣೆಗಳಿಲ್ಲದೆ ಕೈಯಿಂದ ಸ್ವಚ್ಛಗೊಳಿಸುವ ಕೆಲಸದಲ್ಲಿ ತೊಡಗಿರುವ ಅಥವಾ ಖಾಸಗಿ ಏಜೆನ್ಸಿಯಿಂದ ತೊಡಗಿಸಲಾದ ವ್ಯಕ್ತಿ ಅಥವಾ ಒಣ ಶೌಚಾಲಯ ಅಥವಾ ಒಣ ಶೌಚಾಲಯದಿಂದ ಹೊಮ್ಮುವ ಮಲವನ್ನು ಅಥವಾ ರೈಲು ಹಳಿಯ ಮೇಲೆ ಕೊಳೆಯದಿರುವ ಮಲವನ್ನು ಕೈಯಿಂದ ತೆಗೆಯುವ ವ್ಯಕ್ತಿ.
* ಪಟ್ಟಣ ಪಂಚಾಯಿತಿ, ಪುರಸಭೆ, ಸರ್ಕಾರಿ ಮತ್ತು ಖಾಸಗಿ ಕಛೇರಿಗಳಲ್ಲಿ ಕಸ ಗುಡಿಸುವ ಅಥವಾ ಸ್ಯಾನಿಟರಿ/ಸ್ವಚ್ಛ ಮಾಡುವ ಕೆಲಸಗಾರರು ಸಫಾಯಿ ಕರ್ಮಚಾರಿಗಳಾಗಿದ್ದು ಅವರು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲ.

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸ್ವಯಂ ಘೋಷಣೆ

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಾಗಿ ಕೆಲಸ ನಿರ್ವಹಿಸುತ್ತಿರುವ ವ್ಯಕ್ತಿಗಳು ಅತ್ತಿಬೆಲೆ ಪುರಸಭೆಯಲ್ಲಿ ಡೆಸಿಗ್ನೇಟೆಡ್ ಅಧಿಕಾರಿಯಾಗಿ ನೇಮಕವಾಗಿರುವ ಈ ಕೆಳಕಂಡ ಅಧಿಕಾರಿಗಳಿಗೆ ಸ್ವಯಂ ಘೋಷಣೆಯನ್ನು ಕಚೇರಿಯ ವೇಳೆಯಲ್ಲಿ ನಿಗಧಿತ ನಮೂನೆಯಲ್ಲಿ ಮಾಡಿಕೊಳ್ಳಬಹುದಾಗಿದೆ.

ನಗರ ಸ್ಥಳಿಯ ಸಂಸ್ಥೆಯ ಹೆಸರು	ಡೆಸಿಗ್ನೇಟೆಡ್ ಅಧಿಕಾರಿಯ ಹೆಸರು	ಡೆಸಿಗ್ನೇಟೆಡ್ ಅಧಿಕಾರಿಯ ಮೊಬೈಲ್ ನಂಬರ್	ಕಾರ್ಯಾಲಯದ ದೂರವಾಣಿ ಸಂಖ್ಯೆ
ಪುರಸಭೆ, ಅತ್ತಿಬೆಲೆ	ಹಿರಿಯ ಆರೋಗ್ಯ ನಿರೀಕ್ಷಕರು	97409 00223	080-27821501
	ಕಿರಿಯ ಆರೋಗ್ಯ ನಿರೀಕ್ಷಕರು	82173 44918	

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು **ದಿನಾಂಕ: 24.10.2024 ರಿಂದ 12.11.2024ರ ಒಳಗಾಗಿ** ಅತ್ತಿಬೆಲೆ ಪುರಸಭಾ ಕಛೇರಿಯಲ್ಲಿ ನೇಮಕವಾಗಿರುವ ಡೆಸಿಗ್ನೇಟೆಡ್ ಅಧಿಕಾರಿಗಳನ್ನು ಭೇಟಿಯಾಗಿ ಸ್ವಯಂ ಘೋಷಣೆ ಮಾಡಿಕೊಳ್ಳಲು ಕೋರಲಾಗಿದೆ.

ಸಹಿ/- ಆಡಳಿತಾಧಿಕಾರಿಗಳು ಪುರಸಭೆ, ಅತ್ತಿಬೆಲೆ

ಸಹಿ/- ಮುಖ್ಯಾಧಿಕಾರಿಗಳು ಪುರಸಭೆ, ಅತ್ತಿಬೆಲೆ

ವಾಸಾಸಂಇ/ವಾಪ್ರ/ಜಿಎ/2675/2024-25

ಟ್ವೀಟೂ-ಖಾರಾ

ಜಾತ್ಯತೀತ ಜನತಾ ದಳ, ಕರ್ನಾಟಕ

ಬೆಂಗಳೂರು ನಗರವನ್ನು ಬ್ರ್ಯಾಂಡ್ ಬೆಂಗಳೂರು ಮಾಡುವೆ ಎಂದಿದ್ದ ಡಿ.ಕೆ.ಶಿವಕುಮಾರ್, ನಮ್ಮ ಹೆಮ್ಮೆಯ ನಗರವನ್ನು ಇಟಲಿಯ ವೆನಿಸ್ ಮಾಡಿ ಕೃತಾರ್ಥರಾಗಿದ್ದಾರೆ. ಭಾರತದ ಸಿಲಿಕಾನ್ ವ್ಯಾಲಿ, ಉದ್ಯಾನನಗರಿಯಾಗಿದ್ದ ಬೆಂಗಳೂರಿನ ಕೆರೆಗಳನ್ನು ಒಂದಾದ ಮೇಲೆ ಒಂದರಂತೆ ನುಂಗಿದ ಪರಿಣಾಮ ಬೆಂಗಳೂರಿಗೆ ಬೆಂಗಳೂರೇ ಕೆರೆಯಾಗಿಬಿಟ್ಟಿದೆ. ಕೆರೆಗಳ್ಳರ ಕೈಗೆ ಅಧಿಕಾರ ಸಿಕ್ಕರೆ ಇನ್ನೇನಾದೀತು..? ಮಳೆ ನೀರನ್ನು ಆಕಾಶಕ್ಕೆ ವಾಪಸ್ ಕಳುಹಿಸುತ್ತೀರಾ..ಅಥವಾ ಬೆಂಗಳೂರು ರಸ್ತೆಗಳ ಮೇಲೆ ದೋಣಿ ಸಾರಿಗೆ ಮಾಡುತ್ತೀರಾ..?

ಜೈಶಂಕರ್ ಮರಾಠೆ, ಬೆಂಗಳೂರು

ನಗರದ ರಾಜಕಾಲುವೆಗಳನ್ನು ನುಂಗಿರುವುದೇ ಈಗಿನ ಸಮಸ್ಯೆಗೆ ಕಾರಣ.ರಾಜಕಾಲುವೆಗಳ ಮೇಲೆ ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್ ಮತ್ತು ಕಟ್ಟಡಗಳನ್ನು ನಿರ್ಮಿಸುವ ಮೂಲಕ ಮಳೆಗಾಲದಲ್ಲಿ ಜನರ ಸಂಕಷ್ಟಕ್ಕೆ ಕಾರಣವಾಗಿದೆ. ಮೊದಲು ಈ ಸಮಸ್ಯೆ ಬಗೆಹರಿಸದಿದ್ದರೆ ಈ ಪರಿಸ್ಥಿತಿ ಹೀಗೇ ಮುಂದುವರಿಯುತ್ತದೆ.

ಸಮಾಚಾರ ಸಣ್ಣದಲ್ಲ

10 ಅಡಿ ಜಾಗಕ್ಕಾಗಿ ಗಲಾಟೆ: ಕೊಲೆ

ಕಲಬುರಗಿ: ಹತ್ತು ಅಡಿ ಜಾಗಕ್ಕಾಗಿ ಆರಂಭವಾದ ಗಲಾಟೆ ಕೊಲೆಯಲ್ಲಿ ಅಂತ್ಯವಾದ ಘಟನೆ ಕಲಬುರಗಿಯ ಹೊರವಲಯದ ಆಜಾದಪುರದಲ್ಲಿ ಮಂಗಳವಾರ ನಡೆದಿದೆ. ಚಂದ್ರಕಾಂತ ಜಮಾದರ್ (48) ಕೊಲೆಯಾದ ದುರ್ದೈವಿ. ಮನೆ ಬಳಿಯ ಹತ್ತು ಅಡಿ ಜಾಗದ ವಿಚಾರವಾಗಿ ಗ್ರಾಮದ ಮೌನೇಶ್ ಗುತ್ತಿಗೆದಾರ್ ಹಾಗೂ ಚಂದ್ರಕಾಂತ ಮಧ್ಯೆ ಗಲಾಟೆ ನಡೆದಿತ್ತು. ಈ ಜಗಳ ವಿಕೋಪಕ್ಕೆ ತಿರುಗಿ, ಕಟ್ಟಿಗೆಯಿಂದ ತಲೆಗೆ ಹೊಡೆದು ಕೊಲೆ ಮಾಡಲಾಗಿದೆ. ಈ ಘಟನೆಗೆ ಸಂಬಂಧ ಮೌನೇಶ್ ಗುತ್ತೆದಾರ್ ಸೇರಿದಂತೆ ಹಲವರ ವಿರುದ್ಧ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಜಯಪುರದಲ್ಲಿ ಕಂಪಿಸಿದ ಭೂಮಿ



ವಿಜಯಪುರ: ಜಿಲ್ಲೆಯ ವಿವಿಧೆಡೆ ಭೂಮಿ ಕಂಪಿಸಿದ ಅನುಭವ ಆಗಿದೆ. ಭಾರಿ ಸದ್ದಿನೊಂದಿಗೆ ಭೂಮಿ ಕಂಪಿಸಿದ್ದು, ಇದರಿಂದ ಗ್ರಾಮಸ್ಥರು ಭಯಭೀತರಾಗಿದ್ದಾರೆ. ವಿಜಯಪುರ ಜಿಲ್ಲೆಯ ತಿಕೋಟಾ ತಾಲೂಕಿನ ಟಕ್ಕಳಕಿ, ಸೋಮದೇವರಹಟ್ಟಿ, ಮಲಕನ ದೇವರ ಹಟ್ಟಿ, ಕಳ್ಳಕವಟಗಿ, ಘೋಣಸಗಿ, ಹುಬನೂರ ಗ್ರಾಮಗಳಲ್ಲಿ ಭೂಮಿ ಕಂಪಿಸಿದ ಅನುಭವ ಆಗಿದೆ. ಜೊತೆಗೆ ಮಹಾರಾಷ್ಟ್ರ ಗಡಿಭಾಗದ ಮೊರಬಗಿ, ತಿಕ್ಕುಂಡಿ, ಆಸಂಗಿಯಲ್ಲೂ ಭೂಮಿ ನಡುಗಿದ ಅನುಭವ ಆಗಿದೆ. ಮಂಗಳವಾರ ಬೆಳಗ್ಗೆ 11:29ಕ್ಕೆ ಜೋರಾದ ಶಬ್ದದೊಂದಿಗೆ ಭೂಮಿ ಕಂಪಿಸಿದೆ.ಈ ಹಿನ್ನೆಲೆ ಅಡುಗೆ ಮನೆಯಲ್ಲಿನ ಪಾತ್ರೆಗಳು ಕೆಳಗೆ ಬಿದ್ದಿವೆ. ಇದರಿಂದ ಭಯ ಭೀತರಾದ ಜನರು ಮನೆಯಿಂದಾಚೆಗೆ ಓಡಿಬಂದಿದ್ದಾರೆ.

ಹಾಸ್ಟೆಲ್ ಕಟ್ಟಡದಿಂದ ಬಿದ್ದು ವಿದ್ಯಾರ್ಥಿನಿ ಸಾವು

ಹುಕ್ಕೇರಿ: ವಸತಿ ಶಾಲೆಯ ಮೊದಲ ಮಹಡಿಯಿಂದ ಬಿದ್ದು ವಿದ್ಯಾರ್ಥಿನಿ ಸಾವನ್ನಪ್ಪಿದ ಘಟನೆ ಸೋಮವಾರ ತಡರಾತ್ರಿ ಹುಕ್ಕೇರಿ ತಾಲೂಕಿನ ಹಿರೇಕೊಡಿ ಗ್ರಾಮದಲ್ಲಿ ನಡೆದಿದೆ. ಗೋಕಾಕ ತಾಲೂಕಿನ ಶಿಂದಿ ಕುರಬೇಟ್ ಗ್ರಾಮದ ಆಫ್ರೀನ್ ಜಮಾದಾರ (17) ಮೃತ ವಿದ್ಯಾರ್ಥಿನಿ. ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕಿನ ಹಿರೇಕೋಡಿ ಗ್ರಾಮದ ಮೊರಾರ್ಜಿ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿನಿ, ಪರೀಕ್ಷೆ ಹಿನ್ನೆಲೆ ಮಧ್ಯ ರಾತ್ರಿ ಮೊದಲ ಮಹಡಿಯಲ್ಲಿ ಓದುತ್ತ ಕುಳಿತಿದ್ದಳು. ಈ ಸಂದರ್ಭದಲ್ಲಿ ಆಯತಪ್ಪಿ ಬಿದ್ದು ಮೃತಪಟ್ಟಿದ್ದಾಳೆ. ಚಿಕ್ಕೋಡಿ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು ಸ್ಥಳಕ್ಕೆ ಪೊಲೀಸರು ಭೇಟಿನೀಡಿ ಪರಿಶೀಲನೆ ನಡೆಸಿದರು. ಮೃತ ವಿದ್ಯಾರ್ಥಿನಿ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು.

ಅನೇಕ ಹಳ್ಳಿಗಳು ಜಲಮಯ | ಸಂಚಾರ ಕಡಿತ, ಜನರ ಸಂಕಷ್ಟ ಹೆಚ್ಚಳ | ಹಲವೆಡೆ ಜಲಪ್ರಳಯ

ರಾಜ್ಯದಲ್ಲಿ ನಿಲ್ಲದ ಮಳೆ ಅವಾಂತರ

ಬೆಂಗಳೂರು: ಚಂಡಮಾರುತದ ಪರಿಣಾಮವಾಗಿ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಕೆಲ ಜಿಲ್ಲೆಗಳಲ್ಲಿ ಮಳೆ ಪರಿಸ್ಥಿತಿ ಮುಂದುವರಿದಿದೆ. ಕರಾವಳಿ, ಮಲೆನಾಡಿನಲ್ಲಿ ಬಿರುಸಿನ ಮಳೆಯಾಗುತ್ತಿದ್ದು, ಉತ್ತರ ಕರ್ನಾಟಕದ 15 ಜಿಲ್ಲೆಗಳಲ್ಲಿ ಹಿಂಗಾರು ಮಳೆಯ ಅಬ್ಬರದಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಬಳ್ಳಾರಿಯಲ್ಲಿ ಹಳ್ಳಕ್ಕೆ ಟ್ರ್ಯಾಕ್ಟರ್ ಬಿದ್ದು ಒಬ್ಬರು ಸಾವಿಗೀಡಾಗಿದ್ದಾರೆ. ರಾಜ್ಯದಲ್ಲಿ ಇನ್ನೂ ಐದು ದಿನ ಮಳೆ ಮುಂದುವರಿಯಲಿದ್ದು,. ಅ. 24 ರವರೆಗೆ ಉತ್ತರ ಮತ್ತು ದಕ್ಷಿಣ ಒಳನಾಡಿನಲ್ಲಿ ಗುಡುಗು-ಮಿಂಚಿನಿಂದ ಕೂಡಿದ ಬಿರುಸಿನ ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

20 ಎಕರೆಗೂ ಹೆಚ್ಚು ಅಡಿಕೆ ತೋಟಕ್ಕೆ ಹಾನಿ

ಶಿರಸಿಯಲ್ಲಿ ಸೋಮವಾರ ಸುರಿದ ಭಾರಿ ಮಳೆಗೆ ಹಲವು ಭಾಗದಲ್ಲಿ ಪ್ರವಾಹ ಸ್ಥಿತಿ ಉಂಟಾಗಿದ್ದು, ಇಸಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಣಗೇರಿಯಲ್ಲಿ ಉಪೇಂದ್ರ ಹೆಗಡೆಗೆ ಸೇರಿದ ಅಡಕೆ ಬೆಳೆ ನೀರಿನಲ್ಲಿ ಕೊಚ್ಚಿ ಹೋಗಿದೆ. ಅಡಕೆ ಸುಗ್ಗಿ ನಡೆಸಿ ಕೆಂಪಡಿಕೆಯನ್ನು ಮನೆ ಮುಂದೆ ಒಣಗಿಸಲು ಹಾಕಿದ್ದರು. ಮಳೆ ಅಬ್ಬರಕ್ಕೆ ಲಕ್ಷಾಂತರ ರು. ಮೌಲ್ಯದ ಅಡಿಕೆ ನೀರು ಪಾಲಾಗಿದೆ. ಮಳೆಯಿಂದ 20 ಎಕರೆಗೂ ಹೆಚ್ಚು ಅಡಕೆತೋಟಕ್ಕೆ ಹಾನಿಯಾಗಿದ್ದು, ಭತ್ತದ ಬೆಳೆಗಳು ಸಹ ಮಳೆಗೆ ಹಾನಿಯಾಗಿದೆ. ಶಿರಸಿಯಲ್ಲಿ ಸೋಮವಾರ ಸಂಜೆ ಸುರಿದ ಮಳೆಯಿಂದ ತಾಲೂಕಿನ ಲಂಡಕನಹಳ್ಳಿ, ನರೇಬೈಲಿನಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿತ್ತು. ನರೇಬೈಲಿನ ಕಿರುಸೇತುವೆ ಮುಳುಗಡೆಯಾಗಿದ್ದು, ವಾಹನಗಳ ಸಂಚಾರ ಸ್ಥಗಿತಗೊಂಡಿದೆ.

ರಸ್ತೆ ಕಾಣದೆ ಕಾರುಗಳು ಮುಖಾಮುಖಿ ಡಿಕ್ಕಿ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಭಾರೀ ಮಳೆಯ ಕಾರಣ ರಸ್ತೆ ಕಾಣದೆ ಕಾರುಗಳೆರಡು ಮುಖಾಮುಖಿ ಡಿಕ್ಕಿಯಾದ ಘಟನೆ ನಡೆದಿದೆ.

ಎನ್.ಆರ್.ಪುರ ತಾಲೂಕಿನ ದೇವದಾನ ಎಸ್ಟೇಟ್ ಬಳಿ ಘಟನೆ ನಡೆದಿದ್ದು ಅದೃಷ್ಟವಶಾತ್ 2 ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಾಗುಂಡಿ, ಬಾಳೆಹೊನ್ನೂರು ಸುತ್ತಮುತ್ತಾ ಕಳೆದೊಂದು ವಾರದಿಂದ ನಿರಂತರವಾಗಿ ಸುರಿಯುತ್ತಿರೋ ಮಳೆ ಯಿಂದಾಗಿ ಜನಜೀವನ ಸಂಪೂರ್ಣ ಅಸ್ತವ್ಯಸ್ತ ಗೊಂಡಿದ್ದು, ಮನೆಗಳಿಗೆ ನೀರು ನುಗ್ಗುವ ಆತಂಕ ಹೆಚ್ಚಾಗಿದೆ.

ಅನೇಕ ಕಡೆ ಒಡೆದ ಕೆರೆ ಏರಿ: ಅಪಾರ ಹಾನಿ

ಹಾಸನ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಕಳೆದ ರಾತ್ರಿ ಸುರಿದ ಹುಚ್ಚು ಮಳೆಗೆ ಅಪಾರ ಪ್ರಮಾಣದ ಹಾನಿ ಸಂಭವಿಸಿದೆ.

ಅಷ್ಟೇ ಅಲ್ಲ ಮುಳುಗಿದ ರಸ್ತೆಯ ಗುಂಡಿಯಲ್ಲಿ ಸಿಲುಕಿ ಹತ್ತಾರು ಬೈಕ್ ಸವಾರರು ಗಾಯ ಮಾಡಿಕೊಂಡಿದ್ದಾರೆ. ಮತ್ತೆ ಕೆಲವು ಕಡೆಗಳಲ್ಲಿ ಬಡಾವಣೆಗಳು ಜಲಾವೃತವಾಗಿ ನಿವಾಸಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದರೆ, ಕೆರೆಗಳು ತುಂಬಿ ಕೋಡಿ ಬಿದ್ದು, ಎಲ್ಲೆಂದರಲ್ಲಿ ನೀರು ಹರಿಯುತ್ತಿದೆ. ಮಳೆಯ ಅವಾಂತರದಿಂದ ತೇಜೂರು ಮತ್ತು ಉದ್ದೂರು ಕೆರೆಯ ದೊಡ್ಡ ಪ್ರಮಾಣದ ನೀರು ರಸ್ತೆಯ ಮೇಲೆಯೇ ಹರಿಯುತ್ತಿರುವುದರಿಂದ ನಗರದಿಂದ ಬೇಲೂರು ರಸ್ತೆಗೆ ಸಂಪರ್ಕ ಕಲ್ಪಿಸುವ ರಿಂಗ್ ರಸ್ತೆ ಸಂಚಾರ ಬಂದ್ ಆಗಿದೆ. ಇದರಿಂದ ಬದಲಿ ಮಾರ್ಗದಲ್ಲಿ ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.

ತುಂಗಾ ಮೇಲ್ದಂಡೆ ಕಾಲುವೆ ಒಡೆದು ಅಪಾರ ಹಾನಿ

ಹಾವೇರಿ ಜಿಲ್ಲೆಯಲ್ಲಿ ಹಿಂಗಾರು ಮಳೆ ಅನ್ನದಾತರನ್ನು ಅಕ್ಷರಶಃ ಕಂಗಾಲು ಮಾಡಿದೆ. ಹಾವೇರಿ ಜಿಲ್ಲೆಯಲ್ಲಿ ನಿರಂತರ ಮಳೆಗೆ ಯು.ಟಿ.ಪಿ ಕಾಲುವೆ ಒಡೆದು ಅಪಾರ ಪ್ರಮಾಣದ ಬೆಳೆಹಾನಿಯಾಗಿದೆ. ದೇವಿಹೊಸೂರು ಗ್ರಾಮದ ಬಳಿ ಯು.ಟಿ.ಪಿ ಕಾಲುವೆ ಒಡೆದು ರೈತರ ಬೆಳೆಗಳು ಕೊಚ್ಚಿಕೊಂಡು ಹೋಗಿವೆ. ಮೆಕ್ಕೆಜೋಳ, ಹತ್ತಿ, ಜೋಳ ಸೇರಿದಂತೆ ಸೋಯಾಬೀನ್ ಬೆಳೆಯು ಹಾನಿಯಾಗಿದ್ದು. ರೈತರು ಕಂಗಾಲಾಗಿದ್ದಾರೆ. ಕಾಲುವೆ ಒಡೆದರೂ ಅಧಿಕಾರಿಗಳು ಬಂದು ನೋಡಿಲ್ಲ. ಕೆಲ ದಿನಗಳ ಹಿಂದಷ್ಟೇ ಹಾವೇರಿ ತಾಲೂಕು ಕನಕಾಪುರ ಬಳಿ ಯು.ಟಿ.ಪಿ ಕಾಲುವೆ ಒಡೆದು ರೈತರ ಜಮೀನುಗಳು ಹಾಳಾಗಿದ್ದವು. ಈಗ ಮತ್ತೆ ದೇವಿಹೊಸೂರು ಬಳಿಯೂ ಒಡೆದ ಯು.ಟಿ.ಪಿ ಕಾಲುವೆಯಿಂದ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ.

ಕಾಲುವೆಯಲ್ಲಿ ಕೊಚ್ಚಿಹೋದ 2 ಕಾರು

ಧಾರಾಕಾರ ಮಳೆಗೆ ಎರಡು ಕಾರುಗಳು ಕಾಲುವೆ ನೀರಿನಲ್ಲಿ ಕೊಚ್ಚಿಹೋದ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಬೆಂಗಳೂರು-ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ಸೋಮವಾರ ರಾತ್ರಿ ಸುರಿದ ಮಳೆಗೆ ಕಾರುಗಳು ಕಾಲುವೆಯಲ್ಲಿ ಕೊಚ್ಚಿ ಹೋಗಿವೆ. ದೇವನಹಳ್ಳಿ ತಾಲೂಕಿನ ನಾಗಾರ್ಜುನ ಕಾಲೇಜು ಸಮೀಪದ ಅಂಡರ್‌ಪಾಸ್‌ನಲ್ಲಿ ಒಂದು ಮಾರುತಿ ಕಾರು ಸಂಪೂರ್ಣ ಮುಳುಗಡೆಯಾಗಿತ್ತು. ಇನ್ನೊಂದು ಕಾರು ದಡದಲ್ಲಿ ಸಿಲುಕಿಕೊಂಡಿತ್ತು. ಭಾರಿ ಮಳೆಗೆ ರಸ್ತೆಯಲ್ಲಿ ನೀರು ತುಂಬಿತ್ತು. ಹುರಳಗುರ್ಕಿ ಗ್ರಾಮದ ಕಾರಿನ ಮಾಲೀಕ ಆಸ್ಪತ್ರೆಗೆ ತೆರಳುತ್ತಿದ್ದಾಗ ವೇಳೆ ಈ ಘಟನೆ ನಡೆದಿದೆ. ಅದೃಷ್ಟವಶಾತ್ ಕಾರುಗಳಲ್ಲಿದ್ದ ಆರು ಜನರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ತುಂಗಭದ್ರಾ ಡ್ಯಾಂ ಹೊರಹರಿವು ಹೆಚ್ಚಳ

ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾಗುತ್ತಿರುವುರಿಂದ ಡ್ಯಾಂನ ಒಳಹರಿವಿನಲ್ಲಿ ಭಾರಿ ಏರಿಕೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ನದಿಗೆ ಬಿಡುತ್ತಿರುವ ನೀರಿನ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಈವರೆಗೆ 90 ಸಾವಿರ ಕ್ಯುಸೆಕ್ ನೀರು ಹೊರಗೆ ಬಿಡಲಾಗುತ್ತಿತ್ತು. ಈ ಪ್ರಮಾಣವನ್ನು ಮಂಗಳವಾರ ಬೆಳಗ್ಗೆ 9 ರಿಂದ 1,20,000 ಕ್ಯುಸೆಕ್‌ಗೆ ಹೆಚ್ಚಿಸಲಾಗಿದೆ. ಅಲ್ಲದೆ, ಒಳಹರಿವಿನ ಪ್ರಮಾಣ ಆಧರಿಸಿ ಹೊರಹರಿವು ನಿರ್ಧರಿಸಲಾಗುವುದು ಎಂದು ಜಲಾಶಯದ ಅಧಿಕಾರಿಗಳು ತಿಳಿಸಿದ್ದಾರೆ. ಇದೇ ವೇಳೆ, ಡ್ಯಾಂನಿಂದ ಅಪಾರ ಪ್ರಮಾಣದ ನೀರು ಹೊರಗೆ ಬಿಡುತ್ತಿರುವುದರಿಂದ ತುಂಗಭದ್ರಾ ನದಿಪಾತ್ರದ ಜನರು ಮುನ್ನೆಚ್ಚರಿಕೆ ವಹಿಸಬೇಕೆಂದು ಅಧಿಕಾರಿಗಳು ಸೂಚಿಸಿದ್ದಾರೆ.

ಹಳ್ಳದಲ್ಲಿ ಮಗುಚಿಬಿದ್ದ ಟ್ರ್ಯಾಕ್ಟರ್

ಬಳ್ಳಾರಿಯ ಸಂಡೂರು ತಾಲೂಕಿನ ತೋರಣಗಲ್ಲು ಬಳಿಯ ಜಿಂದಾಲ್ ಕಾರ್ಖಾನೆಗೆ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಟ್ರ್ಯಾಕ್ಟರ್ ಹಳ್ಳದಲ್ಲಿ ಮಗುಚಿ ಬಿದ್ದಿದೆ. ಟ್ರ್ಯಾಕ್ಟರ್ ಅಡಿಯಲ್ಲಿ ಹಲವರು ಸಿಲುಕಿರುವ ಶಂಕೆ ಇದ್ದು, ಶೋಧಾ ಕಾರ್ಯ ನಡೆಯುತ್ತಿದೆ. ತೋರಣಗಲ್ಲು ಹೋಬಳಿಯ ವಿಠಲಾಪುರ, ಮೆಟ್ರಿಕಿ, ರಾಜಾಪುರ, ಅಂತಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸೋಮವಾರ ತಡರಾತ್ರಿ, ಭಾರಿ ಮಳೆಯಾಗಿದೆ. ಹೀಗಾಗಿ ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿವೆ. ಜಿಂದಾಲ್ ಬಳಿಯ ಹಳ್ಳದ ಪಕ್ಕದಲ್ಲಿ ವಾಸವಿರುವ ಕಾರ್ಮಿಕರು ಎಂದಿನಂತೆ ಟ್ರ್ಯಾಕ್ಟರ್‌ನಲ್ಲಿ ಕೆಲಸಕ್ಕೆ ತೆರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ. ಕೆಲ ಕಾರ್ಮಿಕರು ಈಜಿ ಹೊರ ಬಂದಿದ್ದಾರೆ. ಇನ್ನೂ ಕೆಲ ಕಾರ್ಮಿಕರು ಸಿಲುಕಿರುವ ಶಂಕೆ ಇದೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳ ಪೊಲೀಸ್ ಇಲಾಖೆ ಹಾಗೂ ಮುಳುಗು ತಜ್ಞರು ಆಗಮಿಸಿ ಹಳ್ಳಕ್ಕೆ ಬಿದ್ದ ಟ್ರ್ಯಾಕ್ಟರ್ ಶೋಧನಾ ಕಾರ್ಯ ನಡೆಸುತ್ತಿದ್ದಾರೆ.

ಮನೆಗಳಿಗೆ ನುಗ್ಗಿದ ನೀರು, ಗ್ರಾಮಸ್ಥರ ಪರದಾಟ

ಚಿಂತಾಮಣಿ ತಾಲೂಕಿನಾದ್ಯಂತ ಸುರಿದ ಭಾರಿ ಮಳೆಯಿಂದಾಗಿ ಕಸಬಾ ಹೋಬಳಿ ಆನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ದೊಡ್ಡ ಬೊಮ್ಮನಹಳ್ಳಿ ಗ್ರಾಮದ ಸುಮಾರು ಮನೆಗಳಿಗೆ ನೀರು ಹಾಗೂ ಚರಂಡಿ ನೀರು ನುಗ್ಗಿ, ಗ್ರಾಮಸ್ಥರಿಗೆ ಪರದಾಡುವಂತಾಯಿತು.

ಸೋಮವಾರ ರಾತ್ರಿ ಬಿದ್ದ ಮಳೆಗೆ ಮನೆಗಳಿಗೆ ನುಗ್ಗಿದ ನೀರನ್ನು ಹೊರ ಹಾಕಲು ಹಾಗೂ ರಾತ್ರಿವಿಡೀ ನಿದ್ದೆ ಇಲ್ಲದಂತೆ ಗ್ರಾಮಸ್ಥರು ಹರಸಾಹಸಪಟ್ಟರು. ಮಂಗಳವಾರ ಬೆಳಗ್ಗೆ ಗ್ರಾಮದ ಮುಖ್ಯ ರಸ್ತೆಯಲ್ಲಿ ಮರಗಳು, ಮನೆಗಳ ಸಾಮಗ್ರಿಗಳು ರಸ್ತೆ ಮಧ್ಯದಲ್ಲಿ ಇಟ್ಟು ರಸ್ತೆ ತಡೆದು ಗ್ರಾಮಸ್ಥರು ಗ್ರಾಮ ಪಂಚಾಯತಿ ಅಧಿಕಾರಿಗಳು ಹಾಗೂ ಕಂದಾಯ ಅಧಿಕಾರಿಗಳ ವಿರುದ್ಧ ಧಿಕ್ಕಾರಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸಿದರು.

ಗ್ರಾಮದ ಎಲ್ಲಾ ಚರಂಡಿಗಳ ಕೊಳಚೆ ನೀರು ಮುಖ್ಯ ಕಾಲುವೆಗೆ ಹೋಗಿ ಅಲ್ಲಿಂದ ಹೊರಗೆ ಹೋಗುವ ಕಾಲುವೆ ಅವೈಜ್ಞಾನಿಕವಾಗಿದ್ದು ಅದರಲ್ಲಿ ಸರಾಗವಾಗಿ ನೀರು ಹೋಗಲು ಸಾಧ್ಯವಾಗದೇ,ಹರಿಜನರು ವಾಸ ಮಾಡುವ ತಗ್ಗು ಪ್ರದೇಶಗಳಿಗೆ ನುಗ್ಗಿ ವಾಸದ ಮನೆಗಳಿಗೆ ನೀರು ನುಗ್ಗಿ ಮನೆಗಳಲ್ಲಿರುವ ದವಸ ಧಾನ್ಯ ಪಶು ಆಹಾರಗಳು ಗಲೀಜಾಗಿ ತುಂಬಾ ನಷ್ಟ ಅನುಭವಿಸುತ್ತಿದ್ದಾರೆ ಎಂದು ಬಿ.ಎಂ. ಮಂಜುನಾಥ್, ಮುಖಂಡರಾದ ವೆಂಕಟರೆಡ್ಡಿ, ವೇದಾವತಿ,ನೀಲಮ್ಮ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಳೆ ಆರ್ಭಟಕ್ಕೆ ಕುಸಿದ ಮನೆಗಳು

ರಾಮನಗರ ಜಿಲ್ಲೆಯ ಕುದೂರು ಪಟ್ಟಣ ಸೇರಿದಂತೆ ಹೋಬಳಿಯಾದ್ಯಂತ ಕಳೆದೊಂದು ವಾರದಿಂದ ಸುರಿಯುತ್ತಿರುವ ಮಳೆಯಿಂದಾಗಿ ಸೋಮವಾರ ಪಟ್ಟಣದಲ್ಲಿ ಎರಡು ಮನೆಗಳು ಕುಸಿದಿವೆ.

ಪಟ್ಟಣದ ಪೇಟೆ ಆಂಜನೇಯ ದೇವಾಲಯದ ಪಕ್ಕದಲ್ಲಿರುವ ಶ್ರೀನಿವಾಸ್ ಶೆಟ್ಟಿ ಅವರ ಮನೆ ಮತ್ತು ಮಾರುತಿ ಕಲ್ಯಾಣ ಮಂಟಪ ಸಮೀಪದ ಗಂಗಾರ್ಚಾ ಎಂಬುವವರ ಮನೆ ಸೋಮವಾರ ಮುಂಜಾನೆ ಕುಸಿದಿದೆ. ಘಟನೆಯಲ್ಲಿ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ.

ಮಳೆಯಿಂದಾಗಿ ಶಿವಗಂಗೆ ರಸ್ತೆಯು ಗುಂಡಿಬಿದ್ದು ಹದಗೆಟ್ಟಿದೆ. ರಸ್ತೆಗಳಲ್ಲಿ ಮಳೆ ನೀರು ನಿಂತಿತ್ತು. ಕೆಲವೆಡೆ ಕೆಸರಿನ ರಾಡಿಯಾಗಿದ್ದರಿಂದ ವಾಹನಗಳ ಸವಾರರು ಮತ್ತು ಪಾದಚಾರಿಗಳು ಪರದಾಡಿದರು.

ಸಂಸದ ತುಕಾರಾಂ ಅನರ್ಹತೆಗೆ ಮುಖ್ಯ ಚುನಾವಣಾ ಆಯುಕ್ತರಿಗೆ ಬಿಜೆಪಿ ದೂರು

ದೆಹಲಿ: ಅಕ್ರಮವಾಗಿ ಚುನಾವಣೆಯಲ್ಲಿ ಗೆದ್ದಿರುವ ಬಳ್ಳಾರಿ ಸಂಸದ ಇ.ತುಕಾರಾಂ ರನ್ನು ಅನರ್ಹಗೊಳಿಸಬೇಕೆಂದು ಮುಖ್ಯ ಚುನಾವಣಾ ಆಯುಕ್ತರಿಗೆ ಮನವಿ ಮಾಡಿದ್ದೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ದೆಹಲಿಯಲ್ಲಿ ಸುದ್ದಿಗಾರ ರೊಂದಿಗೆ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಮುಂದಿಟ್ಟು ಹೋರಾಟ ನಡೆಸಲಾಗಿದೆ. ತನಿಖೆ ಆಧಾರ ದಲ್ಲಿ ಕಳೆದ ತಿಂಗಳು ಜಾರಿ ನಿರ್ದೇಶನಾಲಯ (ಇಡಿ) 187 ಕೋಟಿ ರು. ಲೂಟಿ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ 187 ಕೋಟಿ ಲೂಟಿ ಮಾಡಿದ ಕಾಂಗ್ರೆಸ್ ಸರಕಾರ ಬಳ್ಳಾರಿ, ಇತರ ಲೋಕಸಭಾ ಕ್ಷೇತ್ರಕ್ಕೆ ಆ ಹಣ ಬಳಸಿದ್ದು ಬೆಳಕಿಗೆ ಬಂದಿದೆ. ಈ ಸಂಬಂಧ ತನಿಖೆ ನಡೆಸಿ ಸಂಸದರನ್ನು ಅನರ್ಹಗೊಳಸಿಬೇಕೆಂದು ಕೋರಿ, ವಿಧಾನ ಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಅವರು ಇವತ್ತು ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಇ.ತುಕಾರಾಂ ಅನರ್ಹತೆ ಸಂಬಂಧ ಮನವಿ ಸಲ್ಲಿಸಿದ್ದೇವೆ ಎಂದರು.

ಇಡಿ ಯು ಬಳ್ಳಾರಿ ಲೋಕಸಭಾ ಕ್ಷೇತ್ರದ ಅಕ್ರಮ ಕುರಿತು ತಿಳಿಸಿದೆ. ನಮಗಿರುವ ಮಾಹಿತಿ ಪ್ರಕಾರ ಬಳ್ಳಾರಿ, ರಾಯಚೂರು, ಕೊಪ್ಪಳದಲ್ಲೂ ವಾಲ್ಮೀಕಿ ನಿಗಮದ ಅವ್ಯವಹಾರದ ಹಣ ದುರ್ಬಳಕೆ ಆಗಿದೆ ಎಂಬ ವಿಚಾರಗಳು ಗಮನಕ್ಕೆ ಬರುತ್ತಿವೆ. ಆ ಕ್ಷೇತ್ರಗಳಲ್ಲಿ ಗೆದ್ದವರ ಅನರ್ಹತೆ ಕುರಿತು ಮನವಿ ವಿಷಯದಲ್ಲಿ ಮುಂದಿನ ದಿನಗಳಲ್ಲಿ ಗಮನ ಹರಿಸುತ್ತೇವೆ ಎಂದರು.

ಅಕ್ರಮ ಜಾಹೀರಾತು

ಸಂಡೂರು, ಚನ್ನಪಟ್ಟಣ, ಶಿಗ್ಗಾವಿ ಉಪ ಚುನಾವಣೆ ನಡೆಯುತ್ತಿದೆ. ಮಾದರಿ ನೀತಿಸಂಹಿತೆ ಅನುಷ್ಠಾನಗೊಂಡಿದೆ. ಇದರ ನಡುವೆ ರಾಜ್ಯ ಸರಕಾರ ಅಕ್ರಮವಾಗಿ ಜಾಹೀರಾತು ನೀಡುವುದರ ಮೂಲಕ ಎಲ್ಲ ಮಾದರಿ ನೀತಿಸಂಹಿತೆ ಗಾಳಿಗೆ ತೂರುತ್ತಿದೆ. ಈ ವಿಚಾರದಲ್ಲಿ ರಾಜ್ಯ ಸರಕಾರದ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿದ್ದೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಸನ್ಯಾಸತ್ವ ಸ್ವೀಕಾರಕ್ಕೆ ಯುವತಿಯರ ಸಂಕಲ್ಪ

ದಾವಣಗೆರೆ: 26 ವರ್ಷದ ಇಬ್ಬರು ಜೈನ ಸಮುದಾಯದ ಯುವತಿ ಯರು ಸನ್ಯಾಸತ್ವ ಸ್ವೀಕಾರಕ್ಕೆ ಮುಂದಾಗಿದ್ದಾರೆ.

ದಾವಣಗೆರೆ ಮೂಲದ ಮಾನಸಿ ಕುಮಾರಿ ಹಾಗೂ ಗೋಕಾಕ್‌ನ ಮುಮುಕ್ಷ ಭಕ್ತಿ ಕುಮಾರಿಯವರು ಸನ್ಯಾಸತ್ವ ಸ್ವೀಕರಿಸಲಿದ್ದಾರೆ. ಮಾನಸಿ ಕುಮಾರಿ ಎಂಎ ಸೈಕಾಲಜಿ ವ್ಯಾಸಂಗ ಮಾಡಿದ್ದು, ಮುಮುಕ್ಷ ಭಕ್ತಿ ಕುಮಾರಿ ಎಲ್‌ಎಲ್‌ಬಿ ಓದಿದ್ದಾರೆ. ಮುಂದಿನ ತಿಂಗಳು 17ರಂದು ಜಾರ್ಖಂಡ್ ರುಜುಬಾಲಿಕ ಎಂಬಲ್ಲಿ ಸನ್ಯಾಸತ್ವ ಸ್ವೀಕಾರಕ್ಕೆ ಸಿದ್ಧತೆ ನಡೆದಿದೆ. ಲೌಕಿಕ ಜೀವನ ತೊರೆದು ಅಲೌಕಿಕ ಜೀವನದತ್ತ ಮುಖಮಾಡಿದ ಯುವತಿಯರನ್ನು ದಾವಣಗೆರೆಯ ಪ್ರಮುಖ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ಮಾಡಲಾಯಿತು. ಕುಟುಂಬಸ್ಥರು ಹಾಗೂ ಜೈನ ಸಮುದಾಯದಿಂದ ಔತಣ ಕೂಟ ಏರ್ಪಡಿಸಲಾಗಿತ್ತು. ದಾವಣಗೆರೆಯಲ್ಲಿ ಈವರೆಗೂ 64 ಯುವಜನರು ಸನ್ಯಾಸತ್ವ ಸ್ವೀಕರಿಸಿರುವುದು ವಿಶೇಷ.

ದೂರಿನ ಬೆನ್ನಲ್ಲೇ ಸಚಿವ ಬೋಸರಾಜು ಸ್ಪಷ್ಟನೆ

ಅರಣ್ಯಭೂಮಿ ಒತ್ತುವರಿ ಮಾಡಿಲ್ಲ

ರಾಯಚೂರು: ನಾನು ಯಾವುದೇ ಅರಣ್ಯಭೂಮಿಯನ್ನು ಒತ್ತುವರಿ ಮಾಡಿಲ್ಲ ಎಂದು ಸಣ್ಣನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಸ್ಪಷ್ಟನೆ ನೀಡಿದ್ದಾರೆ.



ತಮ್ಮ ಪತ್ನಿ ಹೆಸರಿನಲ್ಲಿ ರಾಯಚೂರಿನಲ್ಲಿ 5 ಎಕರೆ ಮೀಸಲು ಅರಣ್ಯ ಪ್ರದೇಶ ಒತ್ತುವರಿ ಮಾಡಿದ್ದಾರೆ ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಸೋಮವಾರ ರಾಜ್ಯಪಾಲರಿಗೆ ದೂರು ನೀಡಿದ್ದರು.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಸಚಿವ ಎನ್.ಎಸ್.ಬೋಸರಾಜು , ತಮ್ಮ ಪತ್ನಿ ಮೇಲಿನ ಆರೋಪ ಸತ್ಯಕ್ಕೆ ದೂರವಾದದ್ದು. 1987ರಲ್ಲಿ ಪಟ್ಟಾದಾರರಿಂದ ಕೃಷಿಭೂಮಿ ಖರೀದಿಸಿದ್ದೇನೆ ಎಂದು ಹೇಳಿದ್ದಾರೆ. 2022ರಲ್ಲಿ ಅರಣ್ಯ ಇಲಾಖೆಯವರು ನೋಟಿಸ್ ಕಳುಹಿಸಿದ್ದರು. ನೋಟಿಸ್ ವಿರುದ್ಧ ಕಲಬುರಗಿ ಹೈಕೋರ್ಟ್ ಮೊರೆಹೋಗಿದ್ದೆವು. ಕೋರ್ಟ್‌ನಲ್ಲಿ ಆ ಕೇಸ್ ರದ್ದುಗೊಂಡಿದೆ. ಹೀಗಾಗಿ ಸಮಸ್ಯೆ ಬಗೆಹರಿದಿದೆ ಎಂದಿದ್ದಾರೆ.

ಪ್ರಭಾವ ಬೀರಿಲ್ಲ

ನಮಗೆ ಮಾತ್ರವಲ್ಲ ಒಟ್ಟು 1700 ಎಕರೆ ಪ್ರದೇಶದ ಸರ್ವೇ ನಂಬರ್‌ಗಳಿಗೆ ನೋಟಿಸ್ ಕಳುಹಿಸಿದ್ದರು. ಎಲ್ಲಾ ಸರ್ವೇ ನಂ.ನವರು ನ್ಯಾಯಾಲಯಕ್ಕೆ ಹೋಗಿದ್ದಾರೆ. 1987ರಲ್ಲಿ ಭೂಮಿ ಖರೀದಿ ಮಾಡುವಾಗ ಆಗಲಿ, ಭೂಪರಿವರ್ತನೆ ವೇಳೆ ನಾನು ಯಾವುದೇ ಅಧಿಕಾರದಲ್ಲಿ ಇರಲಿಲ್ಲ. ಪ್ರಥಮ ಬಾರಿಗೆ ನಾನು ಶಾಸಕನಾಗಿದ್ದೇ 1999ರಲ್ಲಿ, ಮಂತ್ರಿಯಾಗಿದ್ದು ಒಂದೂವರೆ ವರ್ಷದ ಹಿಂದೆ. ಮಂತ್ರಿಯಾಗಿ ಪ್ರಭಾವ ಬೀರಿದ್ದಾರೆ ಎನ್ನುವ ಆರೋಪ ಸತ್ಯಕ್ಕೆ ದೂರ ಎಂದು ಬೋಸರಾಜು ಸ್ಪಷ್ಟಪಡಿಸಿದ್ದಾರೆ.

ಸರಕಾರ ಉರುಳಿಸುವುದೇ ಕುಮಾರಸ್ವಾಮಿ ಕೆಲಸ

ಮಂಡ್ಯ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ರಾತ್ರಿ ಕನಸು ಬೀಳುತ್ತದೆ ಅಂತ ಕಾಣುತ್ತದೆ. ಇರುವ ಸರಕಾರ ತೆಗೆಯಬೇಕು, ಮತ್ತೆ ಏನಾದರೂ ಮಾಡಬೇಕು ಎನ್ನುವುದೇ ಅವರ ಕೆಲಸವಾಗಿದೆ ಎಂದು ಸಚಿವ ಚಲುವರಾಯಸ್ವಾಮಿ ಕಟುಟೀಕೆ ಮಾಡಿದ್ದಾರೆ.



2028ರವರೆಗೆ ರಾಜ್ಯ ಕಾಂಗ್ರೆಸ್ ಸರಕಾರ ಇರುವುದಿಲ್ಲ ಎಂಬ ಕುಮಾರಸ್ವಾಮಿ ಹೇಳಿಕೆಗೆ ಸಚಿವ ಚಲುವರಾಯಸ್ವಾಮಿ ಪ್ರತಿಕ್ರಿಯಿಸಿ, ಯಾರಿಗಾದರೂ ಭವಿಷ್ಯ ಕೇಳಬೇಕಿದ್ದರೆ ಕುಮಾರಸ್ವಾಮಿ ಬಳಿ ಹೋಗುವಂತೆ ಹೇಳೋಣ ಎಂದು ವ್ಯಂಗ್ಯವಾಡಿದರು. ಸರಕಾರ ರಚನೆ ಆದಾಗಿನಿಂದಲೂ ಈ ಸರಕಾರ ಇರಲ್ಲ ಅಂತ ಹೇಳುತ್ತಿದ್ದಾರೆ. ಕಾಂಗ್ರೆಸ್ ಶಾಸಕರು ಅವರ ಮನೆಯಲ್ಲಿದ್ದಾರೆಯೇ ಎಂದು ಪ್ರಶ್ನಿಸಿದರು.

ಡಿ.ಕೆ. ಸುರೇಶ್‌ಗೆ ಒತ್ತಡ: ಸಿ.ಪಿ. ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಸೆಳೆಯುವ ಪ್ರಯತ್ನಿಸಿಲ್ಲ. ಡಿ.ಕೆ. ಸುರೇಶ್ ಅವರನ್ನು ಅಭ್ಯರ್ಥಿಯಾಗಿಸಲು ಒತ್ತಡ ಇದೆ. ಅಲ್ಲದೇ ಪುಟ್ಟಣ್ಣ, ಅಶ್ವತ್ಥ್, ರಘುನಂದನ್ ರಾಮಣ್ಣ ಪಟ್ಟಿಯಲ್ಲಿದ್ದಾರೆ. ಅಂತಿಮ ತೀರ್ಮಾನ ಸಿಎಂ, ಡಿಸಿಎಂ ಕೈಗೊಳ್ಳುತ್ತಾರೆ ಎಂದು ಸಚಿವರು ಸ್ಪಷ್ಟಪಡಿಸಿದರು.

ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕಳವಳ

ಕಾರ್ಖಾನೆ ಆರಂಭವಾಗದಿದ್ದರೆ ರೈತರಿಗೆ ಸಂಕಷ್ಟ

ಕಲಬುರಗಿ: ರೈತರ ಮಾರಣಹೋಮ ಮಾಡುವುದೇ ಕಾಂಗ್ರೆಸ್ ಸರಕಾರದ ಗುರಿಯಾಗಿದೆ. ಸಿದ್ಧಸಿರಿ ಸಕ್ಕರೆ ಮತ್ತು ಎಥೆನಾಲ್ ಕಾರ್ಖಾನೆ ಶುರುವಾಗದಿದ್ದರೆ, ಜಿಲ್ಲೆಯ ನಾಲ್ಕೈದು ತಾಲೂಕುಗಳಲ್ಲಿ ರೈತರ ಸಂಕಷ್ಟ ಹೆಚ್ಚಲಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕಳವಳ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ಧಸಿರಿ ಸಕ್ಕರೆ ಮತ್ತು ಎಥೆನಾಲ್ ಕಾರ್ಖಾನೆಯನ್ನು ಜವಳಿ, ಕೃಷಿ ಉತ್ಪನ್ನ ಮಾರುಕಟ್ಟೆ ಹಾಗೂ ಸಕ್ಕರೆ ಸಚಿವ ಶಿವಾನಂದ್ ಪಾಟೀಲ್, ಅರಣ್ಯ ಸಚಿವ ಈಶ್ವರ್ ಖಂಡ್ರೆ ಹಾಗೂ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರೇ ಬಂದ್ ಮಾಡಿಸಿದ್ದಾರೆ ಎಂದು ಗಂಭೀರ ಆರೋಪಿಸಿದರು.

ಸಕ್ಕರೆ ಕಾರ್ಖಾನೆ ಪುನರ್ ಪ್ರಾರಂಭಿಸುವ ಕುರಿತು ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದೇನೆ. ಅದು ನನ್ನ ವೈಯಕ್ತಿಕ ಕೆಲಸಕ್ಕಾಗಿ ಅಲ್ಲ. ನಾನು ಯಾರೊಂದಿಗೂ ಹೊಂದಾಣಿಕೆ ಆಗುವುದಿಲ್ಲ. ಕಾರ್ಖಾನೆಗೆ ಸಂಬಂಧಪಟ್ಟಂತೆ ಸಚಿವರಾದ ಪ್ರಿಯಾಂಕ್ ಖರ್ಗೆ ಮತ್ತು ಡಾ. ಶರಣಪ್ರಕಾಶ್ ಪಾಟೀಲ್ ಅವರೊಂದಿಗೂ ಮಾತನಾಡಿದ್ದೇನೆ ಎಂದು ಅವರು ಹೇಳಿದರು.

ನೀವು ರಾಜಕೀಯ ಮಾಡೋದಿದ್ದರೆ, ನಮ್ಮ ಜತೆಗೆ ಮಾಡ್ರಿ, ನೀವು ನಮಗೆ ಬಯ್ಯಿರಿ, ನಾನು ನಿಮಗೆ ಬೈಯ್ತಿನಿ, ಆದರೆ, ನೀವು ಮೋದಿಗೆ ಬೈದ್ರೆ ನಾ ಸುಮ್ಮನೆ ಕೂಡುವ ಮಗನೇ ಅಲ್ಲ. ಸಚಿವ ಪ್ರಿಯಾಂಕ್ ಖರ್ಗೆ ಅವರೇನಾದ್ರೂ ನರೇಂದ್ರ ಮೋದಿ ಬಗ್ಗೆ ಬಾಯಿ ಬಿಟ್ಟರೆ ನಾನು ಡೋಜ್ ಕೊಡುವುದು ಗ್ಯಾರೆಂಟಿ. ಈಗಾಗಲೇ, ಸಚಿವ ಈಶ್ವರ್ ಖಂಡ್ರೆ ಮೋದಿ ಬಗ್ಗೆ ಹಗುರವಾಗಿ ಮಾತನಾಡಿದ್ದ ಅವನಿಗೂ ಡೋಸ್ ಕೊಟ್ಟಿದ್ದೇನೆ.

– **ಬಸನಗೌಡ ಪಾಟೀಲ್ ಯತ್ನಾಳ್,** ಶಾಸಕ

ತಾಕತ್ತಿದ್ದರೆ ಸಕ್ಕರೆ ಕಾರ್ಖಾನೆ ಖರೀದಿಸಿ

ನಿಮಗೆ ತಾಕತ್ತಿದರೆ, 850 ಕೋಟಿ ರು. ಕೊಟ್ಟು ಸಕ್ಕರೆ ಕಾರ್ಖಾನೆ ಖರೀದಿಸಿ ರೈತರ ಉದ್ಧಾರ ಮಾಡಿ. ಈಶ್ವರ್ ಖಂಡ್ರೆ, ಖರ್ಗೆ ನಿಮ್ಮಲ್ಲಿ ದುಡ್ಡಿಲ್ವಾ.? ಹತ್ತು ವರ್ಷಗಳಿಂದ ಕಾರ್ಖಾನೆ ಟೆಂಡರ್ ಕರಿತಾನೆ ಇದ್ದರು ಯಾರೂ ತಗೊಳ್ಳಿಲ್ಲ ಅದಕ್ಕೆ ನಾನು ತಗೊಂಡಿದ್ದೆ. ನೀವೆಲ್ಲ ದೊಡ್ಡ ದೊಡ್ಡ ರಾಜಕಾರಣಿಗಳು ದುಬೈ, ಕೋಲ್ಕತ್ತಾ, ಮುಂಬೈಗಳಲ್ಲಿ ಆಸ್ತಿ ಮಾಡ್ತೀರಿ , ಕಲಬುರಗಿಯಲ್ಲಿ 850 ಕೋಟಿ ರು. ಕೊಟ್ಟು ಕಾರ್ಖಾನೆ ಮಾಡೋಕಾಗಲ್ಲವೇ ಎಂದು ಯತ್ನಾಳ್ ಖಾರವಾಗಿ ಪ್ರಶ್ನಿಸಿದರು.

ನಿಷ್ಠರಾಗಿರುವವರು ಕಾಂಗ್ರೆಸ್‌ಗೆ ಬರಬಹುದು

ಕೋಲಾರ: ನಿಯತ್ತಾಗಿ ಇರುವವರು ಯಾರು ಬೇಕಾದರೂ ಕಾಂಗ್ರೆಸ್‌ಗೆ ಬರಬಹುದು. ನಿಯತ್ತಿಲ್ಲದವರು ಪಕ್ಷಕ್ಕೆ ಬರುವುದು ಬೇಡ ಎಂದು ಶಾಸಕ ಕೊತ್ತೂರು ಮಂಜುನಾಥ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ನಡೆಯುವ ಮೂರು ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಜಯಗಳಿಸಲಿದೆ. ಇದರಲ್ಲಿ ಅನುಮಾನ ಬೇಡ. ಚನ್ನಪಟ್ಟಣದಲ್ಲಿ ಕಡಿಮೆ ಅಂತರದಲ್ಲಿ ಗೆಲ್ಲುತ್ತೇವೆ. ಶಿಗ್ಗಾವಿ ಮತ್ತು ಸಂಡೂರು ಕ್ಷೇತ್ರಗಳನ್ನು ಗೆಲ್ಲುತ್ತೇವೆ. ಸಂಡೂರಿ ನಲ್ಲಿ ಜೆಡಿಎಸ್ ಎರಡು ಬಾರಿ ಗೆದ್ದಿದೆಯಷ್ಟೇ. ಉಳಿದಂತೆ ಎಲ್ಲಾ ಬಾರಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಚನ್ನಪಟ್ಟಣಕ್ಕೆ ಅಚ್ಚರಿಯ ಅಭ್ಯರ್ಥಿ ಕಣಕ್ಕಿಳಿಯಲಿದ್ದಾರೆ. ನಮಗೆ ಅಭ್ಯರ್ಥಿ ಯಾರು ಎಂದು ಗೊತ್ತಿದ್ದರೂ ಈಗ ಬಹಿರಂಗಪ ಡಿಸುವುದಿಲ್ಲ. ನಾಳೆ ನಾಡಿದ್ದು ಎಲ್ಲರಿಗೂ ಗೊತ್ತಾಗಲಿದೆ ಎಂದರು.

ಪಕ್ಷಕ್ಕೆ ಯೋಗೇಶ್ವರ್ ಬಂದರೆ ಸ್ವಾಗತ: ಯೋಗೇಶ್ವರ್‌ಗೆ ಕಾಂಗ್ರೆಸ್ ಬರುವ ಕುರಿತು ಪ್ರತಿಕ್ರಿಯಿಸಿದ ಮಂಜುನಾಥ್,ಯೋಗೇಶ್ವರ್ ಬಂದರೆ ಸ್ವಾಗತ. ಅವರು ಒಳ್ಳೆಯ ಮನುಷ್ಯ. ಅವರಿಗೆ ಅವರದೇ ಮತಬ್ಯಾಂಕ್ ಇದೆ. ಮುಸ್ಲಿಂ ಬಂಧುಗಳು ಸಹ ಮತ ಹಾಕುತ್ತಾರೆ. ಅವರಿಗೆ ಒಳ್ಳೆಯ ಹೆಸರು ಇದೆ. ಜೆಡಿಎಸ್ ತೀರ್ಮಾನ ನೋಡಿಕೊಂಡು ಅಭ್ಯರ್ಥಿ ಆಯ್ಕೆ ಮಾಡಲಾಗುವುದು ಎಂದರು.

ವಿಶ್ವವಾಣಿ

ಸಂಪಾದಕೀಯ

ಕರುನಾಡಿಗೆ ಕೆಡುಕು ಬಯಸುವಿರೇಕೆ?

ಸಾಯೋ ತನಕ ಶನಿಕಾಟವಾದರೆ ಬಾಳೋದ್ಯಾವಾಗ? ಎಂಬ ಮಾತನ್ನು ಕೇಳದಿರುವವರು ಅಪರೂಪ. ದೈನಂದಿನ ಜೀವನದ ಬಹುಭಾಗವನ್ನು ಕಿರಿಕಿರಿಯ ನಡುವೆಯೇ ಕಳೆಯಬೇಕಾಗಿ ಬರುವವರಿಂದ ಅಪ್ರಯತ್ನವಾಗಿ ಹೊಮ್ಮುವ ಮಾತಿದು. ನಮ್ಮ ಗಡಿಭಾಗದಲ್ಲಿ ಸಕ್ರಿಯವಾಗಿರುವ ರಾಜಕೀಯ ಪಕ್ಷವೊಂದರ ಕಿರಿಕಿರಿ ಮತ್ತು ಆಟಾಟೋಪವನ್ನು ನೋಡಿದಾಗೆಲ್ಲ ಈ ಮಾತು ನೆನಪಾಗುತ್ತದೆ. ಆ ಪಕ್ಷದ ಹೆಸರು 'ಮಹಾರಾಷ್ಟ್ರ ಏಕೀಕರಣ ಸಮಿತಿ', ಸಂಕ್ಷಿಪ್ತವಾಗಿ 'ಎಂಇಎಸ್'. ವಿಪರ್ಯಾಸವೆಂದರೆ, ಇದು ಏಕೀಕರಣಕ್ಕೆ ಅಥವಾ ಒಗ್ಗಟ್ಟಿಗೆ ವಿರುದ್ಧವಾಗಿರುವ ಕೆಲಸಗಳಲ್ಲೇ ಕೆಲವೊಮ್ಮೆ ತೊಡಗಿಸಿಕೊಳ್ಳುವುದಿದೆ! ಅದರಲ್ಲೂ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುವ ನವೆಂಬರ್ 1ರ ದಿನ ಬಂದಾಗಲೆಲ್ಲ ಎಂಇಎಸ್‌ನವರಲ್ಲಿ ಅದೇನೋ ವಿಲಕ್ಷಣ ತುಡಿತ ಶುರುವಾಗಿಬಿಡುತ್ತದೆ. ಈ ವರ್ಷವೂ ಇದಕ್ಕೆ ಹೊರತಾಗಿಲ್ಲ ಎನಿಸುತ್ತದೆ. ಕಾರಣ, ''ನವೆಂಬರ್ 1ರಂದು ಜಿಲ್ಲಾಡಳಿತವು ಕರಾಳ ದಿನಾಚರಣೆಗೆ ಅನುಮತಿ ಕೊಡಲಿ ಬಿಡಲಿ, ಕರಾಳ ದಿನಾಚರಣೆಗೆ ಎಲ್ಲರೂ ಸಿದ್ಧತೆ ಮಾಡಿಕೊಂಡು ಸೈಕಲ್ ರ‍್ಯಾಲಿಯಲ್ಲಿ ಭಾಗವಹಿಸಬೇಕು'' ಎಂಬುದಾಗಿ ಎಂಇಎಸ್‌ನ ತಥಾಕಥಿತ ಮುಖಂಡರೊಬ್ಬರು ಬೆಳಗಾವಿಯಲ್ಲಿ ಫರ್ಮಾನು ಹೊರಡಿಸಿದ್ದಾರೆ. ತನ್ಮೂಲಕ ಎಂಇಎಸ್‌ನ ಹಳೆ ಚಾಳಿಯ ಮುಂದುವರಿಕೆಗೆ ತಿದಿಯೊತ್ತಿದ್ದಾರೆ. ಬೆಳಗಾವಿಯು ಕರ್ನಾಟಕದ ಅವಿಭಾಜ್ಯ ಅಂಗ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಅಲ್ಲಿ ಠಿಕಾಣಿ ಹೂಡಿರುವ ಎಂಇಎಸ್‌ನವರು ಹೀಗೆ ಕರ್ನಾಟಕ ವಿರೋಧಿ ಮತ್ತು ಕನ್ನಡ ವಿರೋಧಿ ಧೋರಣೆಗಳನ್ನು ತಳೆಯುವುದು, ತನ್ಮೂಲಕ ಕನ್ನಡಿಗರನ್ನು ವಿನಾಕಾರಣ ಕೆರಳಿಸುವುದು ಸಮಾಜದ ಶಾಂತಿ-ನೆಮ್ಮದಿಗೆ ಸಂಚಕಾರ ತರುವ ಯತ್ನವಲ್ಲದೆ ಇನ್ನೇನು? ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವೆ ಇರುವ ಗಡಿವಿವಾದವನ್ನು ಬಗೆಹರಿಸುವುದಕ್ಕೆಂದೇ ಪ್ರತ್ಯೇಕ ವೇದಿಕೆಯಿದೆ, ಸಂದರ್ಭವಿದೆ, ವ್ಯವಸ್ಥೆಗಳಿವೆ. ಆ ಸಂಬಂಧದ ಮಾತುಕತೆಗೆ, ಚರ್ಚೆಗಳಿಗೆ ಅದರದ್ದೇ ಆದ ಸಂಭಾವಿತ ರೀತಿಯಿದೆ, ಯಥೋಚಿತ ಶಿಷ್ಟಾಚಾರಗಳಿವೆ. 'ಬೆಂಕಿ ಉಗುಳುವ ಮಾತು'ಗಳಿಂದ ಸಮಸ್ಯೆಯು ಉಲ್ಬಣವಾಗುವುದೇ ವಿನಾ ಇತ್ಯರ್ಥವಾಗುವುದಿಲ್ಲ. ಹೀಗಾಗಿ ಎಂಇಎಸ್‌ನ ನಾಯಕರೆನಿಸಿಕೊಂಡವರು ಸೂಕ್ಷ್ಮ ವಿಷಯಗಳ ಕುರಿತು ಮಾತಾಡುವಾಗ ಸಂಯಮವನ್ನು ಕಾಯ್ದುಕೊಳ್ಳಬೇಕು. ಕನ್ನಡಿಗರ ಸಹಜ ಸ್ವಭಾವವಾದ ಸೌಜನ್ಯವನ್ನು ಅವರು ದೌರ್ಬಲ್ಯವೆಂದು ಪರಿಗಣಿಸಬಾರದು.

ಸೊಂಪಾದಕೀಯ

ಮದುವೆ ಮತ್ತು ಡಿವೋರ್ಸ್

ಇಂದು ಸಾಮಾಜಿಕ ಜಾಲತಾಣಗಳು ಮತ್ತು ಕೆಲವು ಮಿಸ್‌ಲೀಡಿಂಗ್ ನ್ಯೂಸ್ ಪೋರ್ಟಲ್‌ಗಳನ್ನು ನೋಡಿದಾಗ ಒಂದು ವಿಷಯ ಗಮನಕ್ಕೆ ಬರುತ್ತೆ. ಅದೆಂದರೆ ನಮ್ಮ ಸಮಾಜದಲ್ಲಿ ಮುಖ್ಯವಾಗಿ, ಅತಿ ಶೀಘ್ರದಲ್ಲೇ ಆಗಬೇಕಾಗಿರುವ 2 ಸಂಗತಿಗಳೆಂದರೆ, ಒಂದು ಆಂಕರ್ ಅನುಶ್ರೀ ಮದುವೆ ಮತ್ತು ಐಶ್ವರ್ಯಾ ರೈ ಡಿವೋರ್ಸ್. ಇದ್ಯಾಕೆ ಹಿಂಗೆ ಅಂದ್ರೆ ಅದಕ್ಕೆ ಉತ್ತರ, ಪ್ರತಿನಿತ್ಯ ಜಾಲತಾಣಗಳಲ್ಲಿ ಕಾಣಬರುತ್ತಿರೋ ಫೇಕ್ ನ್ಯೂಸ್‌ಗಳು ಮತ್ತು ಊಹಾತ್ಮಕ ಸುದ್ದಿಗಳ ಹಾವಳಿ. ಬಹುಶಃ ಈ ಜಾಲತಾಣಗಳ ಅಡ್ಮಿನ್‌ಗಳು, ನ್ಯೂಸ್ ಪೇಜುಗಳ ಬರಹಗಾರರು ಬೆಳಗ್ಗೆ ಎದ್ದು ಇವತ್ತು ಬರೆಯೋಕೆ ಏನೂ ಸುದ್ದಿ ಸಿಗ್ತಾ ಇಲ್ಲ



ಅಂದಕೂಡಲೇ ತಿರುಗಿ ನೋಡೋದು ಸೆಲೆಬ್ರಿಟಿಗಳ ಕಡೆಗೆ. ಅವರ ವಿಷಯದಲ್ಲಿ ಏನಾದರೂ ಸಣ್ಣ ಸುದ್ದಿ ಇದ್ದರೆ ಅದನ್ನೇ ದೊಡ್ಡದು ಮಾಡೋದು ಅಥವಾ ಸುದ್ದಿ ಇರದಿದ್ದರೂ ಕ್ರಿಯೇಟ್ ಮಾಡೋದು. ಇಲ್ಲವೇ, ಯಾವುದೋ ಸುದ್ದಿಯನ್ನು ಇನ್ಯಾವುದೋ ಸುದ್ದಿಗೆ ಲಿಂಕ್ ಮಾಡೋದು. ಇದೇ ಅವರ ಕೆಲಸ. ಅದರಲ್ಲೂ ನಮ್ಮ ಆಂಕರ್ ಅನುಶ್ರೀ ಅವರಿಗಂತೂ ಈ ಪೇಜು ಮತ್ತು ಜಾಲತಾಣಗಳಲ್ಲಿ ಅದೆಷ್ಟು ಬಾರಿ, ಯಾರ‍್ಯಾರ ಜತೆಗೆ ಮದುವೆ ಆಗಿದೆಯೋ ಬಹುಶಃ ಅವರಿಗೇ ಗೊತ್ತಿಲ್ಲ. 'ಅಂತೂ ಅನುಶ್ರೀ ಮದುವೆ ಫಿಕ್ಸ್' ಅನ್ನೋ ಸುದ್ದಿ ವಾರಕ್ಕೆ 3 ಸಲ ಇಂಟರ್‌ನೆಟ್‌ನಲ್ಲಿ ಕಾಣಸಿಗುತ್ತದೆ. ಜತೆಗೆ ಪಾಪರಾಜಿಗಳು ಸೇರಿದಂತೆ ಅನೇಕ ನೆಟ್ಟಿಗರು ದುರ್ಬಳಕೆ ಮಾಡ್ತಾ ಇರೋ ಇನ್ನೊಂದು ವಿಷಯ ಅಂದ್ರೆ, ಅದು ಅಭಿಷೇಕ್ ಬಚ್ಚನ್ ಮತ್ತು ಐಶ್ವರ್ಯಾ ರೈ ಡಿವೋರ್ಸ್. ಇಬ್ಬರೂ ಇನ್ನೇನು ಡಿವೋರ್ಸ್ ಕೊಟ್ಟೇ ಬಿಟ್ರು ಅನ್ನೋ ಸುದ್ದಿ ಕಳೆದ 1 ವರ್ಷದಿಂದ ಅಭಿಷೇಕ್ ಅವರನ್ನೇ ಶೇಕ್ ಮಾಡುವ ನಿತ್ಯದ 'ಶೇಕಿಂಗ್ ನ್ಯೂಸ್' ಆಗಿ ಕಾಡುತ್ತಿದೆ. ಪಬ್ಲಿಕ್ ಆಗಿ ಈ ಜೋಡಿಯಲ್ಲಿ ಯಾರಾದರೂ ಕಾಣಿಸಿಕೊಂಡರೆ, ಅಲ್ಲಿ ಅವರು ಒಂದು ಸಣ್ಣ ಸನ್ನೆ ಮಾಡಿದರೂ, ಸೊನ್ನೆಯಿಂದ ಏನು ಬೇಕಾದರೂ ಸೃಷ್ಟಿ ಮಾಡ್ತೀವಿ ಎನ್ನುವಂತೆ ಈ ಇಂಟರ್‌ನೆಟ್ಟಿಗರು ಅದನ್ನು ಡಿವೋರ್ಸ್‌ಗೆ ಲಿಂಕ್ ಮಾಡ್ತಾ ಇರೋದನ್ನು ನೋಡಿ ಎಲ್ಲರಿಗೂ ಈ ಎರಡು ಕೆಲಸ ಬೇಗ ಆಗಿ ಹೋಗಲಪ್ಪಾ ಅನ್ನಿಸಿರೋದು ಸುಳ್ಳಲ್ಲ.

ಸಂಪಾದಕರ ಸದ್ಯಶೋಧನೆ

ಡಿಜೆಐ ನಿಯೋ ಡ್ರೋನ್

ಡಿಜೆಐ ಒಂದು ವಾರದ ಹಿಂದೆ, ನಿಯೋ (Neo) ಎಂಬ 135 ಗ್ರಾಂ ಭಾರದ ಹೊಸ ಡ್ರೋನ್ ಅನ್ನು ಬಿಡುಗಡೆ ಮಾಡಿದ್ದು, ಅದು ಈಗ ನನ್ನ ಟೇಬಲ್ ಮೇಲೆ ಬಂದು ಕುಳಿತಿದೆ. ಇದು ಇಲ್ಲಿ ತನಕ ಡಿಜೆಐ ಬಿಡುಗಡೆ ಮಾಡಿರುವ ಡ್ರೋನ್‌ಗಳ ಪೈಕಿ ಅತ್ಯಂತ lightest and most compact aerial videographer ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ. ಈ ಡ್ರೋನ್‌ನ ಟೇಕಾಫ್ ಮತ್ತು ಲ್ಯಾಂಡಿಂಗ್ ಅನ್ನು ಸುರಕ್ಷಿತವಾಗಿ ನಿಮ್ಮ ಹಸ್ತದಿಂದಲೇ ಮಾಡಬಹುದು. ಇದು ಸದಾ ನಮ್ಮನ್ನೇ ಫೋಕಸ್ ಮಾಡುತ್ತದೆ. ಈ ಡ್ರೋನನ್ನು ಅಂಗೈಯಲ್ಲಿಟ್ಟುಕೊಂಡು, ಕೆಮರಾವನ್ನು ನಮ್ಮ ಕಡೆಗೆ ಮುಖಮಾಡಿ ಹಿಡಿದರೆ, ಅದು ನಮ್ಮನ್ನೇ ಕೇಂದ್ರೀಕರಿಸಿ, ಸಿನಿಮ್ಯಾಟಿಕ್ ದೃಶ್ಯಗಳನ್ನು ಶೂಟ್ ಮಾಡುತ್ತದೆ. ಇಲ್ಲಿ ತನಕ ಡಿಜೆಐ ಅಭಿವೃದ್ಧಿಪಡಿಸಿದ ಡ್ರೋನ್‌ನ ಅತಿ ಕಡಿಮೆ ತೂಕ 249 ಗ್ರಾಂ ಇತ್ತು. ನಿಯೋ ಅದಕ್ಕಿಂತ 114 ಗ್ರಾಂ ಕಡಿಮೆ ಭಾರ ಅಥವಾ ಹಗುರ! ಡಿಜೆಐ ನಿಯೋ ಡ್ರೋನನ್ನು ಇನ್ಸ್ಟಾ ಅಥವಾ ಸೋಷಿಯಲ್ ಮೀಡಿಯಾ ಕಂಟೆಂಟ್ ಕ್ರಿಯೇಟರುಗಳಿಗಾಗಿಯೇ ಅಭಿವೃದ್ಧಿಪಡಿಸಲಾಗಿದೆ. ಇದನ್ನು ಮನೆಯೊಳಗೂ ಸುಲಭವಾಗಿ ಹಾರಿಸಬಹುದು. ಗೋಡೆ, ಮರ, ಕಂಬ ಅಥವಾ ಇನ್ನಿತರ ಅಡೆ-ತಡೆಗೆ ಡಿಕ್ಕಿ ಹೊಡೆಯಬಹುದು ಎಂಬ ಚಿಂತೆಯಿಲ್ಲ. ಕಾರಣ ಇದರ ರೆಕ್ಕೆಗಳಿಗೆ ಕವಚಗಳಿವೆ. ಡಿಕ್ಕಿ ಹೊಡೆದರೂ ಏನೂ ಆಗುವುದಿಲ್ಲ. ಒಂದು ವೇಳೆ ಮನುಷ್ಯರಿಗೆ ಡಿಕ್ಕಿ ಹೊಡೆದರೂ ಗಾಯವಾಗುವುದಿಲ್ಲ. ಅಸಲಿಗೆ ಈ ಡ್ರೋನ್ ಹಾರಿಸಲು ರಿಮೋಟ್ ಕಂಟ್ರೋಲರ್ (RC) ಬೇಕಾಗಿಲ್ಲ. ನಮ್ಮ ಮೊಬೈಲನ್ನೇ RC ಆಗಿ ಪರಿವರ್ತಿಸಿಕೊಳ್ಳಬಹುದು. RC ಸಹಾಯದಿಂದಲೂ ಹಾರಿಸಬಹುದು. ಇದಕ್ಕಿಂತ ಸರಳವಾಗಿ ಒಂದು ಡ್ರೋನನ್ನು ರೂಪಿಸಲು ಸಾಧ್ಯವೇ ಇಲ್ಲ. 16 ವರ್ಷಕ್ಕಿಂತ ಮೇಲ್ಪಟ್ಟವರು ಇದನ್ನು ಬಳಸಬಹುದು ಎಂದು ಡಿಜೆಐ ಸಂಸ್ಥೆ ಹೇಳಿದ್ದರೂ, ಅಸಲಿಗೆ ಇದು ಅದಕ್ಕಿಂತ ಕಡಿಮೆ ವಯಸ್ಸಿನವರಿಗೇ ಹೆಚ್ಚು ಖುಷಿ ಕೊಡಬಹುದು. ಡಿಜೆಐ ನಿಯೋ ಡ್ರೋನ್ RC ಸಹಾಯದಿಂದ, ಸೆಕೆಂಡಿಗೆ 8 ಮೀಟರ್ ವೇಗದಲ್ಲಿ ಸುಮಾರು 7 ಕಿ.ಮೀ. ದೂರದವರೆಗೆ ಹಾರಬಲ್ಲುದು. ಇದು ಅತ್ಯಂತ ಹಗುರಾದ ಡ್ರೋನ್ ಆಗಿರುವುದರಿಂದ ಬಲವಾದ ಗಾಳಿ ಬೀಸಿದರೆ, ಕ್ರ್ಯಾಶ್ ಆಗುವ ಸಂಭವವಿರುತ್ತದೆ. ನಮ್ಮ ಸುತ್ತಮುತ್ತ 10 ಮೀ. ಒಳಗೆ, 10 ಮೀ. ಎತ್ತರದವರೆಗೆ ಈ ಡ್ರೋನ್ ಬಳಸುವುದು ವಾಸಿ. ಅಷ್ಟಕ್ಕೂ ಇದರ ರೇಂಜ್ 50 ಮೀಟರ್. ಸೈಕ್ಲಿಂಗ್, ಸ್ಕೇಟ್ ಬೋರ್ಡಿಂಗ್, ರನ್ನಿಂಗ್, ಹೈಕಿಂಗ್ ಮಾಡುವಾಗ ಈ ಡ್ರೋನ್ ಬಳಸಬಹುದು. ಅದು ನಿಮ್ಮ ವೇಗದಲ್ಲಿಯೇ ನಿಮ್ಮನ್ನು ಹಿಂಬಾಲಿಸುತ್ತಾ ಅದ್ಭುತ ಎನಿಸುವ ದೃಶ್ಯಗಳನ್ನು ಸೆರೆಹಿಡಿಯಬಲ್ಲುದು. ಈ ಡ್ರೋನ್ ದೃಶ್ಯಗಳನ್ನು ಹಾರಿಜಾಂಟಲ್ ಮತ್ತು ವರ್ಟಿಕಲ್ ರೂಪದಲ್ಲಿ ಚಿತ್ರೀಕರಿಸಬಲ್ಲುದು. ಡಿಜೆಐ ನಿಯೋಗೆ ಕೆಲವು ಮಿತಿಗಳೂ ಇವೆ. ಇದರ ದೊಡ್ಡಣ್ಣಂದಿರಿಗೆ ಫಾರ್ವರ್ಡ್, ಬ್ಯಾಕ್‌ವರ್ಡ್ ಮತ್ತು ಸೈಡ್ ಸೆನ್ಸರ್‌ಗಳಿವೆ. ಆದರೆ ಆ ಭಾಗ್ಯ ಇದಕ್ಕಿಲ್ಲ. ಹೀಗಾಗಿ ಇದನ್ನು ಜಾಗರೂಕವಾಗಿ ಹಾರಿಸಬೇಕು. ಅಂದ ಹಾಗೆ ಈ ಡ್ರೋನ್‌ನ ಗರಿಷ್ಠ ಹಾರಾಟದ ಸಮಯ 18 ನಿಮಿಷ. ನಂತರ ಬ್ಯಾಟರಿ ಬದಲಿಸಿಕೊಳ್ಳಬೇಕು. ಸಾಮಾನ್ಯವಾಗಿ ಎಲ್ಲರೂ ಅವಶ್ಯ ಕೇಳುವ ಪ್ರಶ್ನೆ- ಈ ಡ್ರೋನ್ ಬೆಲೆ ಎಷ್ಟು, ಎಲ್ಲಿ ಸಿಗುತ್ತದೆ? ರಿಮೋಟ್ ಕಂಟ್ರೋಲ್ ಮತ್ತು ಹೆಚ್ಚುವರಿ ಬ್ಯಾಟರಿ ಇರುವ (ಇದಕ್ಕೆ Fly By Combo ಅಂತಾರೆ) ಡ್ರೋನ್‌ಗೆ (ಅಮೆರಿಕದಲ್ಲಿ) 30 ಸಾವಿರ ರುಪಾಯಿ. ಆದರೆ ಬೆಂಗಳೂರಿನಲ್ಲಿ 45 ಸಾವಿರ ರುಪಾಯಿ. ರಿಮೋಟ್ ಕಂಟ್ರೋಲ್ ಮತ್ತು ಹೆಚ್ಚುವರಿ ಬ್ಯಾಟರಿ ಇರದ ಡ್ರೋನ್‌ಗೆ 15 ಸಾವಿರ ರುಪಾಯಿ, ಬೆಂಗಳೂರಿನಲ್ಲಿ 28-30 ಸಾವಿರ ರುಪಾಯಿ. ಇದು ಪಿಕ್‌ನಿಕ್‌ಗೆ ಹೇಳಿ ಮಾಡಿಸಿದ ಡ್ರೋನ್. ಇದನ್ನು ಬಳಸಲು ಯಾರ ಅನುಮತಿ ಬೇಕಿಲ್ಲ. ಮನೆಯೊಳಗಿನ ಸಣ್ಣ-ಪುಟ್ಟ ಸಮಾರಂಭಗಳ ದೃಶ್ಯ ಸೆರೆಹಿಡಿಯಲು ಸಹ ಉಪಯುಕ್ತ.

ಕಾಸರಕ ಎಂಬ ಕಹಿವಸ್ತುವನ್ನು ಬಲ್ಲಿರಾ?

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
vveditoped@gmail.com

ಭೂಮಿಯ ಮೇಲಿರುವ ಅತ್ಯಂತ ಕಹಿವಸ್ತು ಯಾವುದು? ಖಂಡಿತ ಹಾಗಲಕಾಯಿಯೂ ಅಲ್ಲ, ಬೇವಿನಕಾಯಿಯಂತೂ ಅಲ್ಲವೇ ಅಲ್ಲ. ಅದು ಕಾಸರಕ!

ಕನ್ನಡದಲ್ಲಿ ಕಾಸರಕ, ಇಂಗ್ಲಿಷಿನಲ್ಲಿ 'ಕ್ವಾಕರ್ ಬಟನ್ಸ್' ಹಾಗೂ ಸಸ್ಯಶಾಸ್ತ್ರೀಯವಾಗಿ 'ಸ್ಟ್ರಿಕ್ನಸ್ ನಕ್ಸ್ ವೋಮಿಕ' ಎಂದು ಹೆಸರುವಾಸಿಯಾಗಿರುವ ಈ ಮರದ ತವರು ಭಾರತ. ಶ್ರೀಲಂಕಾ, ಬಾಂಗ್ಲಾ ಮತ್ತು ಬರ್ಮಾ ದೇಶಗಳಲ್ಲಿ, ಕರ್ನಾಟಕದ ಮಲೆನಾಡಿನಲ್ಲಿ ಹೇರಳವಾಗಿ ಬೆಳೆಯುತ್ತದೆ. ಈ ಮರದ ಬೀಜಗಳಲ್ಲಿ 'ಸ್ಟ್ರಿಕ್ನಿನ್' ಎಂಬ ರಾಸಾಯನಿಕವಿದೆ. ಇದು ಎಷ್ಟು ಕಹಿಯೆಂದರೆ, ಒಂದು ಎಂ.ಎಲ್. ಸ್ಟ್ರಿಕ್ನಿನ್ನನ್ನು 700 ಲೀಟರ್ ನೀರಿನಲ್ಲಿ ಬೆರೆಸಿದರೂ, ತನ್ನ ಕಹಿಲಕ್ಷಣವನ್ನು ತೋರುತ್ತದೆ.

ಕಾಸರಕವು ಮಧ್ಯಮ ಗಾತ್ರದ ಮರ. ಸುಮಾರು 20 ಮೀಟರ್ ಎತ್ತರ ಬೆಳೆಯುತ್ತದೆ. ಎಲೆಗಳು 10 ಸೆಂ.ಮೀ. ಉದ್ದ, 7 ಸೆಂ.ಮೀ. ಅಗಲವಿರುತ್ತದೆ. ಪುಟ್ಟ ಪುಟ್ಟ ಹೂವುಗಳು. ತೆಳುಹಸಿರು ಬಣ್ಣ. ತುತ್ತೂರಿಯ ಹಾಗಿರುತ್ತವೆ. ಸಾಮಾನ್ಯವಾಗಿ ಚಳಿಗಾಲದಲ್ಲಿ ಹೂ ಬಿಡುವುದುಂಟು. ಹೂ ಬಿಟ್ಟಾಗ ಅದರಿಂದ ಅತ್ಯಂತ ಕೆಟ್ಟ ವಾಸನೆಯು ಹೊಮ್ಮುತ್ತದೆ. ಸಣ್ಣ ಸೇಬಿನ ಗಾತ್ರದ ಹಣ್ಣುಗಳನ್ನು ಬಿಡುತ್ತದೆ. ಹಣ್ಣು ಕಿತ್ತಳೆಯಿಂದ ಕೆಂಪು ಬಣ್ಣದವರೆಗೆ ವಿವಿಧ ಛಾಯೆಗಳಲ್ಲಿರುತ್ತದೆ. ಹಣ್ಣಿನ ಒಳಗೆ ಮಾಂಸಲವಾದ ಲೋಳೆಯುಕ್ತ ಬಿಳಿಯ ಭಾಗವಿರುತ್ತದೆ. ಅದರ ಒಳಗೆ ಐದು ಬೀಜಗಳಿರುತ್ತವೆ. ಒಂದೊಂದು ಬೀಜವೂ ಚಪ್ಪಟೆಯಾಗಿದ್ದು, ನಮ್ಮ ಕೋಟಿನ ಗುಂಡಿಯನ್ನು ಹೋಲುತ್ತದೆ.

ಬೀಜದ ಮೈಮೇಲೆ ನವಿರಾದ ರೋಮರಾಶಿಯಿರುತ್ತದೆ. ಕಾಸರಕದ ಕುಲಕ್ಕೆ ಸೇರಿದ 58 ಪ್ರಭೇದಗಳು ಏಷ್ಯಾದಲ್ಲಿ, 64 ಪ್ರಭೇದಗಳು ಅಮೆರಿಕದಲ್ಲಿ ಹಾಗೂ 75 ಪ್ರಭೇದಗಳು ಆಫ್ರಿಕದಲ್ಲಿ ಇವೆ.

ಕಾಸರಕವು ನಮಗೆ ತಿಳಿದಿರುವ ಉಗ್ರ ವಿಷಗಳಲ್ಲಿ ಒಂದು. ಕಾಸರಕದಲ್ಲಿರುವ ಸ್ಟ್ರಿಕ್ನಿನ್ ಒಂದು ಆಲ್ಕಲಾಯ್ಡ್. ಸಸ್ಯವು ತನ್ನ ಆತ್ಮರಕ್ಷಣೆಗೆ ಸಿದ್ಧಪಡಿಸಿಟ್ಟುಕೊಂಡಿರುವ ವಸ್ತು. ಕೆಫೀನ್, ನಿಕೋಟಿನ್, ಕೊಕೇನ್, ಕ್ವಿನೈನ್, ಮಾರ್ಫಿನ್, ಕಾಲ್ಚಿಸಿನ್ ಈ ಎಲ್ಲ ವಸ್ತುಗಳೂ ಆಲ್ಕಲಾಯ್ಡುಗಳೇ! ಇವೆಲ್ಲವೂ ಮೂಲತಃ ಕಹಿವಸ್ತುಗಳಾದರೂ ವಿಷ ಪದಾರ್ಥಗಳಲ್ಲ. ಹಿತ-ಮಿತ ಪ್ರಮಾಣದಲ್ಲಿ ಇವು ಉತ್ತಮ ಔಷಧಗಳಾಗಿ ವರ್ತಿಸುತ್ತವೆ. ಆದರೆ ಸ್ಟ್ರಿಕ್ನಿನ್ ಮಾತ್ರ ಈ ಸರ್ವನಿಯಮಕ್ಕೆ ಒಂದು ಅಪವಾದ. ಇದು ಪ್ರಧಾನವಾಗಿ ನರವಿಷ. ಅಂದರೆ ಮನುಷ್ಯನ ನರಮಂಡಲದ ಮೇಲೆ ದುಷ್ಪರಿಣಾಮವನ್ನು ಬೀರಿ, ಸ್ನಾಯುಗಳನ್ನು ನಿಶ್ಚೇಷ್ಟಿತಗೊಳಿಸಿ, ಉಸಿರನ್ನು ನಿಲ್ಲಿಸಿ ಸಾವನ್ನು ತರುತ್ತದೆ. ಹಾಗಾಗಿ ಮಧ್ಯ ಮತ್ತು ದಕ್ಷಿಣ ಅಮೆರಿಕದ ಬುಡಕಟ್ಟಿನ ಜನರು 'ಕ್ಯುರೇರ್' ಎಂಬ ವಿಷವನ್ನು ಬಾಣಗಳಿಗೆ ಸವರಿ ಬೇಟೆಯಾಡುತ್ತಿದ್ದರು. 'ಕ್ಯುರೇರ್' ಎನ್ನುವುದು ಹಲವು ಸಸ್ಯಗಳ ರಸದಿಂದ ತಯಾರಾದ ಲೇಪನ. ಈ ಬಾಣಕ್ಕೆ ತುತ್ತಾದ ಪ್ರಾಣಿಗಳು ಸಾಯುತ್ತಿರಲಿಲ್ಲ, ಆದರೆ ಚಲಿಸಲಾಗದೆ ನಿಶ್ಚೇಷ್ಟಿತವಾಗುತ್ತಿದ್ದವು. ಅಂಥ ಸಸ್ಯಗಳಲ್ಲಿ ಕಾಸರಕದ ಸೋದರ ಸಂಬಂಧಿಯಾದ ಹಾಗೂ ಅಮೆರಿಕದಲ್ಲಿ ಬೆಳೆಯುವ 'ಸ್ಟ್ರಿಕ್ನಸ್ ಟಾಕ್ಸೆಫೆರ' ಸಹ ಸೇರಿದೆ.

ವ್ಯಕ್ತಿಯ ದೇಹದಲ್ಲಿ ಸ್ಟ್ರಿಕ್ನಿನ್ ವಿಷವು ಪ್ರವೇಶಿಸಿದ 15-60 ನಿಮಿಷಗಳಲ್ಲಿ ರೋಗಲಕ್ಷಣಗಳು ಆರಂಭವಾಗುತ್ತವೆ. ಮೊದಲು ವ್ಯಕ್ತಿಯಲ್ಲಿ ತಳಮಳವು ಕಂಡುಬರುತ್ತದೆ. ವಿನಾಕಾರಣ ಭಯಗ್ರಸ್ತನಾಗುತ್ತಾನೆ. ಸಣ್ಣಪುಟ್ಟ ಶಬ್ದಕ್ಕೆಲ್ಲ ಬೆಚ್ಚಿ ಬೀಳುತ್ತಾನೆ. ಚಡಪಡಿಕೆ ತೀವ್ರವಾಗುತ್ತದೆ. ಸ್ನಾಯುಗಳು ಸೆಟೆದುಕೊಳ್ಳತೊಡಗುತ್ತವೆ. ಜ್ವರವು ಆರಂಭವಾಗುತ್ತದೆ. ಇದರೊಡನೆ ವ್ಯಕ್ತಿಯ ಮೂತ್ರಪಿಂಡಗಳು ಹಾಗೂ ಯಕೃತ್ತು ನಾಶವಾಗಲಾರಂಭಿಸುತ್ತವೆ. ಮೊದಲು ಮುಖ ಮತ್ತು ಕುತ್ತಿಗೆಯಲ್ಲಿ ಸ್ನಾಯುಸೆಡೆತವು ಆರಂಭವಾಗುತ್ತವೆ. ನಂತರ ಎದೆ, ಹೊಟ್ಟೆ, ಸೊಂಟ ಮತ್ತು ಕಾಲುಗಳತ್ತ ಹರಡುತ್ತದೆ. ಸೆಟೆದುಕೊಂಡ ತಲೆ ಮತ್ತು ಕುತ್ತಿಗೆಯು ನೆಲೆಬಿಟ್ಟು ಮೇಲೇಳುತ್ತವೆ. ಎದೆ, ಹೊಟ್ಟೆ ಮತ್ತು ಸೊಂಟದ ಸ್ನಾಯುಗಳು ಸೆಟೆದುಕೊಂಡು ಬಿಲ್ಲಿನ ಆಕಾರವನ್ನು ತಳೆಯುತ್ತವೆ. ಬೆನ್ನುಮೂಳೆಯೂ ಬಾಗುತ್ತದೆ. ಸೆಡೆತವು ಕಾಲುಗಳಿಗೆ ಸಂಪೂರ್ಣ ವ್ಯಾಪಿಸಿದಾಗ, ಬಾಗಿದ ಬಿಲ್ಲಿನಂಥ ದೇಹವು ತಲೆ ಮತ್ತು ಕಾಲ್ಬೆರಳುಗಳ ಮೇಲೆ ಮಾತ್ರ ನಿಂತಿರುತ್ತವೆ. ವ್ಯಕ್ತಿಗೆ ಪ್ರಜ್ಞೆಯಿರುತ್ತದೆ, ತನಗೇನಾಗುತ್ತಿದೆ ಎನ್ನುವುದು ನಿಚ್ಚಳವಾಗಿ ತಿಳಿಯುತ್ತಿರುತ್ತದೆ. ಕಣ್ಣುಗುಡ್ಡೆಗಳು ಹೊರಬೀಳುತ್ತಿವೆಯೇನೋ ಎನ್ನಿಸುವಷ್ಟು ಹೊರಬಂದಿರುತ್ತವೆ, ಪಾಪೆಗಳು ಅರಳಿರುತ್ತವೆ. ಆದರೆ ಕ್ರಮೇಣ ಉಸಿರಾಟದ ಸ್ನಾಯುಗಳು ನಿಶ್ಚೇಷ್ಟಿತವಾಗಲಾರಂಭಿಸುತ್ತವೆ. ತುಟಿಗಳು ಅರ್ಧಚಂದ್ರಾಕೃತಿಯಲ್ಲಿ ಬಾಗುತ್ತವೆ. ದವಡೆ ಸ್ನಾಯುಗಳು ಸೆಟೆದುಕೊಂಡು, ನೋಡಿದರೆ ನಗುತ್ತಿರುವನೋ ಎಂಬಂತೆ ಭಾಸವಾಗುತ್ತದೆ. ಆದರೆ ಅದು ಸಾಮಾನ್ಯ ನಗುವಲ್ಲ, ಮೃತ್ಯುಸೂಚಕ ನಗು. ಇದನ್ನು 'ಅಣಕುವಾಡಿನ ನಗು' ಅಥವಾ 'ರಿಸಸ್ ಸಾರ್ಡೋನಿಕಸ್' ಎನ್ನುತ್ತಾರೆ. ಹಾಗೆಯೇ ಬಿಲ್ಲಿನಂತೆ ಬಾಗಿರುವ ದೇಹವನ್ನು 'ಬೆಂಬಾಗುವಿಕೆ' ಅಥವಾ 'ಒಫಿಸ್ಥೋಟೋನಸ್' ಎನ್ನುವುದುಂಟು. ಹೀಗೆ ಬಾಗಿರುವ ವ್ಯಕ್ತಿಯ ಉಸಿರಾಟದ ಸ್ನಾಯುಗಳು ವಿಫಲವಾಗುವುದರ ಜತೆಗೆ ತೀವ್ರ ಸೆಳವು ಬಂದು, ಮಿದುಳಿನ ಕೆಲಸ ಸ್ಥಗಿತಗೊಳ್ಳುವ ಕಾರಣ ವ್ಯಕ್ತಿ ಸಾಯುತ್ತಾನೆ.

ಇಂಥ ಉಗ್ರವಿಷವನ್ನು ವೈದ್ಯಕೀಯದಲ್ಲಿ ಬಳಸುತ್ತಿದ್ದರು ಎಂದರೆ ಆಶ್ಚರ್ಯವಾಗುತ್ತದೆ. ಆಯುರ್ವೇದದ ಪ್ರಮುಖ ಗ್ರಂಥಗಳಾದ ವಾಗ್ಭಟನ 'ರಸರತ್ನಾಕರ', ಭಾವಮಿಶ್ರನ 'ಭಾವಪ್ರಕಾಶ' ಕಾಸರಕವನ್ನು 'ಕುಚಿಲ' ಅಥವಾ 'ವಿಷತಿಂಡುಕ' ಎಂದು ಕರೆದಿವೆ. 'ಭಾವಪ್ರಕಾಶ'ವು ಕಾಸರಕವನ್ನು ಶುದ್ಧೀಕರಿಸಿದ ನಂತರವೇ ಔಷಧದ ರೂಪದಲ್ಲಿ ಬಳಸಬೇಕು ಎನ್ನುತ್ತದೆ ಹಾಗೂ ಶುದ್ಧೀಕರಣದ ಈ 3 ವಿಧಾನಗಳನ್ನು ಸೂಚಿಸುತ್ತದೆ:

1. ಕಾಸರಕದ ಬೀಜಗಳನ್ನು ಹಾಲು/ನೀರು ಅಥವಾ ಮೂಲಿಕೆಗಳ ಕಷಾಯದಲ್ಲಿ ಹಲವು ದಿನ ನೆನೆಯಿಸಬೇಕು.
2. ಬೀಜಗಳನ್ನು ಹಾಲಿನಲ್ಲಿ ಅಥವಾ ಮೂಲಿಕೆಗಳ ಕಷಾಯದಲ್ಲಿ ಕುದಿಸಬೇಕು.
3. ಕೆಲವು ಸಲ, ಕಾಸರಕದ ಬೀಜಗಳನ್ನು ನೆನೆಯಿಸಿ, ಮತ್ತೆ ಮತ್ತೆ ತೊಳೆದು ಬಿಸಿಲಿನಲ್ಲಿ ಒಣಗಿಸಿ ನಂತರ ಔಷಧ ನಿರ್ಮಾಣದಲ್ಲಿ ಬಳಸಬೇಕು.

ಆಯುರ್ವೇದ ವಿಧಿವಿಧಾನಗಳನ್ನು ಚೆನ್ನಾಗಿ ಬಲ್ಲ ಹಿರಿಯ ವೈದ್ಯರು ಮಾತ್ರ ಕಾಸರಕವನ್ನು ಶುದ್ಧೀಕರಿಸಿ ಔಷಧರೂಪದಲ್ಲಿ ಬಳಸಬಲ್ಲರು. ಶುದ್ಧೀಕರಿಸಿದ ಕಾಸರಕವನ್ನು ಅಜೀರ್ಣ, ಮಲಬದ್ಧತೆ ಮತ್ತು ಹಸಿವಿಲ್ಲದಿರುವಿಕೆಯನ್ನು ಸುಧಾರಿಸಲು ಬಳಸಬಹುದು. ಲಕ್ವ ಮತ್ತು ಅಪಸ್ಮಾರದಲ್ಲಿ ನರಗಳು ಹಾಗೂ ನರಮಂಡಲ ರೋಗಗಳಲ್ಲಿ ಇದನ್ನು ಪ್ರಚೋದಕವಾಗಿ (ಸ್ಟಿಮ್ಯುಲೆಂಟ್) ಬಳಸಬಹುದು. ಕೀಲುನೋವನ್ನು (ಆರ್ಥ್ರೈಟಿಸ್) ಶಮನಗೊಳಿಸಲು, ಮಲೇರಿಯ ಒಳಗೊಂಡಂತೆ ವಿವಿಧ ಜ್ವರಗಳಲ್ಲಿ ಉಪಯೋಗಿಸಬಹುದು. 19ನೇ ಶತಮಾನದ 'ಆಯುರ್ವೇದ ಸಾರಸಂಗ್ರಹ'ವು ಸಹ ಶುದ್ಧೀಕರಿಸಿದ ಕಾಸರಕವನ್ನು ಲಕ್ವ, ಸೆಳವು, ಕೀಲುವಾತಕಿ ಮತ್ತು ಜೀರ್ಣಾಂಗ ಸಮಸ್ಯೆಗಳ ನಿವಾರಣೆಗೆ ಬಳಸಬಹುದು ಎನ್ನುತ್ತದೆ. ಜತೆಗೆ ಕಾಸರಕವು ಔಷಧವಾಗಿ ಹಾಗೂ ವಿಷವಾಗಿ ವರ್ತಿಸಬಲ್ಲ ಅಂತರ ಅತ್ಯಂತ ಸೂಕ್ಷ್ಮ ಪ್ರಮಾಣದಲ್ಲಿ ಇರುವುದರಿಂದ ಬಹಳ ಎಚ್ಚರಿಕೆಯಿಂದ ಬಳಸಬೇಕು ಎನ್ನುವ ಕಿವಿಮಾತನ್ನೂ ಹೇಳುತ್ತದೆ. ಸಿದ್ಧವೈದ್ಯಕೀಯದಲ್ಲಿ ಇದನ್ನು ಶೂಲಹರವಾಗಿ (ಕೀಲು ನೋವನ್ನು ನಿಯಂತ್ರಿಸಲು), ಅಗ್ನಿದೀಪನವಾಗಿ (ಜೀರ್ಣ ಶಕ್ತಿ ಹೆಚ್ಚಿಸಲು), ವಾತಹರವಾಗಿ (ನರಸಮಸ್ಯೆ ನಿವಾರಿಸಲು) ಹಾಗೂ ಮೇಧ್ಯವಾಗಿ (ನರಮಂಡಲವನ್ನು ಪ್ರಚೋದಿಸಿ, ಎಲ್ಲ ಕೆಲಸ ಕಾರ್ಯಗಳನ್ನು ಚುರುಕಾಗಿ, ಪರಿಣಾಮಕಾರಿಯಾಗಿ ನಿರ್ವಹಿಸಲು) ಬಳಸಲಾಗುತ್ತದೆ.

ಆಧುನಿಕ ಒಲಿಂಪಿಕ್ ಸ್ಪರ್ಧೆಗಳು ಆರಂಭವಾದ ಮೇಲೆ, 3ನೇ ಒಲಿಂಪಿಕ್ ಸ್ಪರ್ಧೆಗಳು 1904ರಲ್ಲಿ ಸೈಂಟ್ ಲೂಯಿಸಿ, ಮಿಸ್ಸೌರಿಯಲ್ಲಿ ನಡೆದವು. ಇಲ್ಲಿ ಅತ್ಯಂತ ಕಠಿಣವಾದ ಮ್ಯಾರಥಾನ್ ಓಟವು ಆರಂಭವಾಯಿತು. ವಿಪರೀತ ಬಿಸಿಲು, ಸೆಕೆ. ಹಳ್ಳ ದಿಣ್ಣೆಗಳಿಂದ ಕೂಡಿದ ರಸ್ತೆ. 32 ಜನರು ಭಾಗವಹಿಸಿದರು, ಆದರೆ 14 ಜನರು ಮಾತ್ರ ಸ್ಪರ್ಧೆಯನ್ನು ಪೂರ್ಣಗೊಳಿಸಿದರು. ಥಾಮಸ್ ಹಿಕ್ಸ್ ಅಮೆರಿಕದ ಮ್ಯಾರಥಾನ್ ಓಟಗಾರ. ಈತನ ತರಬೇತುದಾರರು ಬ್ರ್ಯಾಂಡಿಯಲ್ಲಿ ಸ್ಟ್ರಿಕ್ನಿನ್ ಬೆರೆಸಿ ನೀಡಿದರು. ಅಂದಿನ ಮ್ಯಾರಥಾನ್ ಓಟದಲ್ಲಿ ಬ್ರ್ಯಾಂಡಿಯಂಥ ಪ್ರಚೋದಕ ಪಾನೀಯಗಳಿಗೆ ನಿರ್ಬಂಧವಿರಲಿಲ್ಲ. ಹಾಗಾಗಿ, ಕೇಂದ್ರ ನರಮಂಡಲವನ್ನು ಪ್ರಚೋದಿಸಬಲ್ಲ ಸ್ಟ್ರಿಕ್ನಿನ್‌ನನ್ನು ನಿಗದಿತ ಪ್ರಮಾಣದಲ್ಲಿ ನೀಡಲು ತರಬೇತುದಾರರು ನಿರ್ಧರಿಸಿದರು. 19 ಮೈಲಿ ದೂರ ಓಡಿದ್ದ ಹಿಕ್ಸ್ ಸುಸ್ತಾದವನಂತೆ ಕಂಡಾಗ ಮೊಟ್ಟೆಯ ಬಿಳಿಯ ಭಾಗದಲ್ಲಿ ಸ್ಟ್ರಿಕ್ನಿನ್ ಬೆರೆಸಿ ಅವನಿಗೆ ತಿನ್ನಲು ನೀಡಿದರು ಹಾಗೂ ಕುಡಿಯಲು ಬ್ರ್ಯಾಂಡಿಯನ್ನು ಕೊಟ್ಟರು. ಹಿಕ್ಸ್ ಚೈತನ್ಯ ಬಂದವನಂತೆ ಓಡಲಾರಂಭಿಸಿದ. 23ನೇ ಮೈಲಿಯನ್ನು ತಲುಪಿದ. ಇನ್ನೊಂದು ಡೋಸ್ ಸ್ಟ್ರಿಕ್ನಿನ್ ಬ್ರ್ಯಾಂಡಿಯನ್ನು ನೀಡಿದರು. ಸ್ಪರ್ಧೆ ಮುಗಿಯುವ ವೇಳೆಗೆ ಹಿಕ್ಸ್ ಸಂಪೂರ್ಣ ದಣಿದಿದ್ದ, ಅಂತೂ ಇಂತೂ ತೂರಾಡುತ್ತಾ ಬಂದು ವಿಜಯದ ಗೆರೆ ಮುಟ್ಟಿದ. ಕೂಡಲೆ ಕುಸಿದುಬಿದ್ದ, ನಂತರ ಭ್ರಮಾವಸ್ಥೆಗೆ ಒಳಗಾದ. ಥಾಮಸ್ ಹಿಕ್ಸ್‌ನನ್ನು ವಿಜಯಿಯೆಂದು ಘೋಷಿಸಿದರು. ಆದರೆ ತದನಂತರದ ಒಲಿಂಪಿಕ್ ಸ್ಪರ್ಧೆಗಳಲ್ಲಿ ಸ್ಟ್ರಿಕ್ನಿನ್ ಒಳಗೊಂಡಂತೆ ಹಲವು ಮಾದಕವಸ್ತುಗಳನ್ನು ನಿಷೇಧಿಸಿದರು.

ಬ್ರಿಟಿಷರು 15ನೇ ಶತಮಾನದಲ್ಲಿ ಕಾಸರಕವನ್ನು ಇಲಿಪಾಷಾಣ ರೂಪದಲ್ಲಿ ಭಾರತದಿಂದ ಬ್ರಿಟನ್ನಿಗೆ ಕೊಂಡೊಯ್ದರು. ಅಲ್ಲಿನ ಇಲಿಗಳನ್ನು ಪರಿಣಾಮಕಾರಿಯಾಗಿ ನಿಗ್ರಹಿಸಿದರು (ನೆನಪಿಸಿಕೊಳ್ಳಿ: ಕುವೆಂಪು ಅವರ ಕವನ 'ಬೊಮ್ಮನಹಳ್ಳಿಯ ಕಿಂದರಿಜೋಗಿ'). ಜತೆಗೆ ಬೀದಿನಾಯಿ, ಬೆಕ್ಕುಗಳನ್ನೂ ಕೊಂದರು. 1818ರಲ್ಲಿ, ಫ್ರೆಂಚ್ ರಸಾಯನ ವಿಜ್ಞಾನಿಗಳಾದ ಪಿಯರಿ-ಜೋಸೆಫ್ ಪೆಲ್ಲೆಟಿಯರ್ ಮತ್ತು ಜೋಸೆಫ್ ಬೈನೈಮ್ ಕೆವಂಟು, ಕಾಸರಕದಲ್ಲಿನ ಪ್ರಮುಖ ಆಲ್ಕಲಾಯ್ಡ್ ಸ್ಟ್ರಿಕ್ನಿನ್‌ನನ್ನು ಪ್ರತ್ಯೇಕಿಸಿ, ಇದರ ವಿಷ ಗುಣಲಕ್ಷಣಗಳನ್ನು ವಿವರಿಸಿದರು. ನಂತರ ಸರ್ ರಾಬರ್ಟ್ ರಾಬಿನ್ಸನ್ 1946ರಲ್ಲಿ ಇದರ ರಾಸಾಯನಿಕ ಸ್ವರೂಪವನ್ನು ಪತ್ತೆ ಹಚ್ಚಿದರು.

ಕಾಸರಕವು ಬ್ರಿಟನ್ನಿನವರ ಮೇಲೆ ಎಂಥ ಪರಿಣಾಮವನ್ನು ಬೀರಿತೆಂದರೆ, ಅಲ್ಲಿನ ಸಾಹಿತಿಗಳು ತಮ್ಮ ಕಥೆ, ಕಾದಂಬರಿಗಳಲ್ಲಿ ಕಾಸರಕ/ಸ್ಟ್ರಿಕ್ನಿನ್ ಲಕ್ಷಣಗಳನ್ನು ಬಳಸಲಾರಂಭಿಸಿದರು. ಎಚ್.ಜಿ.ವೆಲ್ಸ್ 1895ರಲ್ಲಿ ಬರೆದ 'ದಿ ಇನ್ವಿಸಿಬಲ್ ಮ್ಯಾನ್' ಎಂಬ ಕಥೆಯಲ್ಲಿ ''ಡಾ.ಗ್ರಿಫಿನ್ ಅವರಿಗೆ ಸ್ಟ್ರಿಕ್ನಿನ್ ತುಂಬಾ ಉಪಯುಕ್ತವೆನಿಸಿತು. ತಮಗೆ ಹತಾಶೆಯಾದಾಗ, ಕೆಟ್ಟ ಕನಸು ಬಿದ್ದಾಗ, ಕೆಲಸ ಮಾಡಲು ಉತ್ಸಾಹವಿಲ್ಲದಾದಾಗ ಸ್ಟ್ರಿಕ್ನಿನ್ ತೆಗೆದುಕೊಳ್ಳುತ್ತಿದ್ದರು. ಆಗ ಅವರಲ್ಲಿ ನವಶಕ್ತಿ ಮೂಡುತ್ತಿತ್ತು'' ಎಂದು ಉಲ್ಲೇಖಿಸಿದರು. ಸರ್ ಆರ್ಥರ್ ಕಾನನ್ ಡಾಯ್ಲ್ ವೃತ್ತಿಯಿಂದ ವೈದ್ಯರು. ಹಾಗಾಗಿ ಅವರಿಗೆ ಅಂದಿನ ವಿಷವಸ್ತುಗಳ ಪರಿಚಯವಿದ್ದು, ತಮ್ಮ ಕಥೆಗಳಲ್ಲಿ ಸ್ಟ್ರಿಕ್ನಿನ್ ಒಳಗೊಂಡಂತೆ ಹಲವು ವಿಷಗಳ ಬಳಕೆಯ ಬಗ್ಗೆ ಬರೆದರು. ತಮ್ಮ 'ದಿ ಅಡ್ವೆಂಚರ್ ಆಫ್ ಸ್ಪೆಕಲ್ಡ್ ಬ್ಯಾಂಡ್' ಮತ್ತು 'ದಿ ಸೈನ್ ಆಫ್ ಫೋರ್' ಕಥೆಗಳಲ್ಲಿ ಸ್ಟ್ರಿಕ್ನಿನ್ ವಿಷವನ್ನು ಅವರು ಪ್ರಸ್ತಾಪಿಸಿದ್ದಾರೆ. ಈ ವಿಷದ ಪರಿಪೂರ್ಣ ಸ್ವರೂಪವನ್ನು ನಿಖರವಾಗಿ ವರ್ಣಿಸಿದವರು ಅಗಾಥ ಕ್ರಿಸ್ಟಿ. ವೃತ್ತಿಯಿಂದ ನರ್ಸ್ ಆಗಿದ್ದ ಅವರಿಗೆ ವಿಷವಸ್ತುಗಳ ಪರಿಚಯವಿತ್ತು. 'ದಿ ಮಿಸ್ಟೀರಿಯಸ್ ಅಫೇರ್ಸ್ ಅಟ್ ಸ್ಟೈಲ್ಸ್' ಎಂಬ ತಮ್ಮ ಮೊದಲ ಕಾದಂಬರಿಯಲ್ಲಿಯೇ ಚಾಣಾಕ್ಷ ಪತ್ತೆದಾರ 'ಹರ್ಕ್ಯೂಲ್ ಪಾಯ್ರಟ್'ನನ್ನು ಅವರು ಪರಿಚಯಿಸಿದರು. 'ಎಮಿಲಿ ಇಂಗಲ್ಥಾರ್ಪ್' ಎಂಬ ಮಹಿಳೆ ಸ್ಟ್ರಿಕ್ನಿನ್ ವಿಷಪ್ರಾಶನಕ್ಕೆ ಒಳಗಾಗುತ್ತಾಳೆ. ಈಕೆಯ ಸಾವಿನ ವರ್ಣನೆಯು, ಮೇಲೆ ವಿವರಿಸಿದ ಸ್ಟ್ರಿಕ್ನಿನ್ ವಿಷಲಕ್ಷಣಗಳನ್ನು ಹೋಲುತ್ತದೆ. ಎಮಿಲಿ ಹೇಗೆ ವಿಷಪ್ರಾಶನಕ್ಕೆ ಒಳಗಾದಳು ಎನ್ನುವುದನ್ನು ಪಾಯ್ರಟ್ ಪತ್ತೆಹಚ್ಚುತ್ತಾನೆ. 'ಡಂಬ್ ವಿಟ್ನೆಸ್' ಎಂಬ ತಮ್ಮ ಕಥೆಯಲ್ಲಿ ಅಗಾಥ 'ಎಮಿಲಿ ಅರುಂಡೇಲ್' ಎಂಬುವವಳ ಮೇಲೆ ಕಾಸರಕದ ವಿಷಪ್ರಯೋಗವಾಗುವುದನ್ನು ಪ್ರಸ್ತಾಪಿಸಿ, ಆಕೆ ಹೇಗೆ ತಪ್ಪಿಸಿಕೊಳ್ಳುತ್ತಾಳೆ ಎಂಬುದನ್ನು ವಿವರಿಸಿದ್ದಾರೆ.

ಆಧುನಿಕ ವೈದ್ಯಕೀಯದಲ್ಲಿ ಕಾಸರಕವನ್ನು ಅಥವಾ ಸ್ಟ್ರಿಕ್ನಿನ್‌ನನ್ನು ಯಾವುದೇ ಚಿಕಿತ್ಸೆಯಲ್ಲಿ ಬಳಸುವುದಿಲ್ಲ. ಅಕಸ್ಮಾತ್ತಾಗಿ ಕಾಸರಕವನ್ನು ಸೇವಿಸಿದವರನ್ನು ತಕ್ಷಣವೇ ಆಸ್ಪತ್ರೆಗೆ ಸಾಗಿಸಬೇಕಾಗುತ್ತದೆ. ಆದರೆ ಲಂಗೂರ್ ಮಂಗ, ಮಂಗಟ್ಟೆ ಹಕ್ಕಿ ಮತ್ತು ಹಣ್ಣುಗಳನ್ನು ತಿನ್ನುವ ಬಾವಲಿ ಕಾಸರಕದ ಹಣ್ಣನ್ನು ಆರಾಮವಾಗಿ ತಿನ್ನುತ್ತವೆ! ಕಾಸರಕವು ಯಾವುದೇ ವಿಷ ಪ್ರಭಾವವನ್ನು ಬೀರದಂತೆ ಪ್ರಕೃತಿಯು ಅವುಗಳಿಗೆ ರಕ್ಷಣೆಯನ್ನು ನೀಡಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ತರವಲ್ಲ ಈ ತಾರತಮ್ಯ

ಇತ್ತೀಚೆಗೆ ಸಂಪನ್ನಗೊಂಡ ಮೈಸೂರು ದಸರಾ ಮಹೋತ್ಸವದಲ್ಲಿ ನಾಡಿನ ಹಲವು ಕಲಾವಿದರು ಅನುಭವಿಸಿದ ಒಂದಷ್ಟು ತಾರತಮ್ಯ, ಕುಂದುಕೊರತೆಗಳನ್ನು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ಅವಗಾಹನೆಗೆ ತರಲಿಚ್ಛಿಸುತ್ತೇನೆ. ಮೊದಲಿಗೆ, ಬಹಳ ವರ್ಷಗಳ ನಂತರ ಅತ್ಯಂತ ವಿಜೃಂಭಣೆಯಿಂದ ಜರುಗಿದ ದಸರಾ ಮಹೋತ್ಸವವು ವಿಶ್ವವ್ಯಾಪಿ ಜನಮನ ಸೂರೆಗೊಂಡಿದ್ದು ಈ ಬಾರಿಯ ವಿಶೇಷ. ಇದಕ್ಕಾಗಿ ಸರಕಾರವನ್ನು ಅಭಿನಂದಿಸುತ್ತೇನೆ. ಇಂದ್ರನ ಅಮರಾವತಿಯೇ ಧರೆಗಿಳಿದಂತೆ ಭಾಸವಾಗುತ್ತಿದ್ದ ವಿದ್ಯುದ್ದೀಪಾಲಂಕಾರದ ವ್ಯವಸ್ಥೆ ಮಾಡಿದವರಿಗೆ, ನಗರದ ಸ್ವಚ್ಛತೆ ಹಾಗೂ ಕಾನೂನು-ಸುವ್ಯವಸ್ಥೆಯನ್ನು ಕ್ರಮವಾಗಿ ನಿರ್ವಹಿಸಿದ ಪಾಲಿಕೆ ಮತ್ತು ಪೊಲೀಸ್ ಸಿಬ್ಬಂದಿಗೆ ಶಹಬ್ಬಾಸ್ ಹೇಳಲೇಬೇಕು. ಆದರೆ, ಈ ನಾಡಹಬ್ಬದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕನ್ನಡದ ಜನಪ್ರಿಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಕಲಾವಿದರನ್ನು ನಡೆಸಿಕೊಂಡ ರೀತಿ ಅತ್ಯಂತ ಅವಮಾನಕಾರಿ ಹಾಗೂ ವಿಷಾದನೀಯ. ಒಟ್ಟು 11 ವಿವಿಧ ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಯಾವ ಕಲಾವಿದರಿಗೂ ನ್ಯಾಯ ದೊರಕಲಿಲ್ಲ. ಪ್ರತಿ ವೇದಿಕೆಯಲ್ಲೂ 6ರಿಂದ 8 ಕಾರ್ಯಕ್ರಮಗಳನ್ನು ತುರುಕಿ, ಒಂದೊಂದು ಕಾರ್ಯಕ್ರಮಕ್ಕೆ 1 ಗಂಟೆ ಸಮಯ ನಿಗದಿಗೊಳಿಸಿ, ಪೂರ್ವಸಿದ್ಧತೆಗೂ ಅವಕಾಶ ನೀಡದೆ ಕೇವಲ 30 ನಿಮಿಷದಲ್ಲಿ ಕಾರ್ಯಕ್ರಮ ಮುಗಿಸುವಂತೆ ಕಲಾವಿದರ ಮೇಲೆ ಒತ್ತಡ ಹೇರಿ, ಗಾಯನ ನಡೆಯುತ್ತಿರುವುದರ ನಡುವೆಯೇ ವಂದನಾರ್ಪಣೆ ಮಾಡಿ ಕಾರ್ಯಕ್ರಮ ಮೊಟಕುಗೊಳಿಸಿದ್ದು ಕಲಾವಿದರ ಸಮೂಹಕ್ಕೆ ಮಾಡಿದ ಅವಮಾನವೇ ಸರಿ.

ಅದರಲ್ಲೂ ಅರಮನೆಯ ಆವರಣದಲ್ಲಿ ಎಂದೂ ಮೂರು ಕಾರ್ಯಕ್ರಮಗಳ ಮೇಲೆ ಅವಕಾಶ ಇದ್ದಿಲ್ಲ. ಅಂಥದ್ದರಲ್ಲಿ ಅಕ್ಟೋಬರ್ 6ರಂದು 8 ತಂಡಗಳಿಗೆ ಅವಕಾಶ ಮಾಡಿ ಕೊಟ್ಟಿದ್ದು ಸೂಕ್ತವಲ್ಲ. ಅಂದು ಹೊರರಾಜ್ಯದ ಕಲಾವಿದೆಯೊಬ್ಬರನ್ನು ವಿಶಿಷ್ಟ ಜಾನಪದ ಶೈಲಿಯ ಗೀತೆಗಳನ್ನು ಹಾಡಲು ಬರಮಾಡಿ ಕೊಂಡಿದ್ದರೂ ಅವರು ವೇದಿಕೆ ಮೇಲೆ ಸಿನಿಮಾ ಹಾಡುಗಳನ್ನು ಸಾದರಪಡಿಸಿದ್ದನ್ನು ಯಾರೂ ಗಮನಿಸಲಿಲ್ಲವೇಕೆ?

ಯುವ ದಸರಾದ ನೆಪದಲ್ಲಿ ಹೊರರಾಜ್ಯದಿಂದ ಕರೆಸಿಕೊಂಡಿದ್ದ ಕಲಾವಿದರಿಗೆ ವಿಮಾನ ಪ್ರಯಾಣ ಸೌಲಭ್ಯ ಕಲ್ಪಿಸಿ, ಕೋಟಿ ಕೋಟಿ ಸಂಭಾವನೆಯೊಂದಿಗೆ ರತ್ನಗಂಬಳಿ ಸ್ವಾಗತ, ರಾಜಾತಿಥ್ಯ ನೀಡಿದ ಆಯೋಜಕರಿಗೆ, ಕನ್ನಡದ ಖ್ಯಾತ ಕಲಾವಿದರಿಗೆ ಕನಿಷ್ಠ ಉತ್ತಮ ಊಟ-ವಸತಿ ವ್ಯವಸ್ಥೆಯನ್ನು ಕಲ್ಪಿಸುವ ಸೌಜನ್ಯ, ಕಲಾವಿದರ ಉಭಯಕುಶಲೋಪರಿ ವಿಚಾರಿಸುವ ಔದಾರ್ಯ ಇಲ್ಲದಿದ್ದುದು ಶೋಚನೀಯ. ನಮ್ಮ ರಾಜ್ಯದ ಕಲಾವಿದರಿಗೆ ಸಂಭಾವನೆ ನೀಡುವ ವಿಚಾರದಲ್ಲಾಗಿರುವ ತಾರತಮ್ಯವೂ ಖಂಡನಾರ್ಹ. ಇನ್ನು, ಬನ್ನಿಮಂಟಪದಲ್ಲಿ ನಡೆದ ಕಾರ್ಯಕ್ರಮಗಳ ಬಗ್ಗೆ ಹೇಳುವುದಾದರೆ, ನಮ್ಮ ಪೊಲೀಸ್ ಪಡೆಯವರು ನೀಡಿದ ಪ್ರತಿಯೊಂದು ಕಾರ್ಯಕ್ರಮವೂ ನೆರೆದಿದ್ದ ಸಾವಿರಾರು ಪ್ರೇಕ್ಷಕರಿಗೆ ರೋಮಾಂಚಕಾರಿ ಅನುಭವ ನೀಡಿದರೆ, ಅಲ್ಲಿ ಬಳಸಿಕೊಂಡಂಥ ಚಂಡೆ, ಆರ್ಕೆಸ್ಟ್ರಾ ಕಾರ್ಯಕ್ರಮಗಳು ತೀರಾ ಕಳಪೆಯಾಗಿದ್ದವು. ನಮ್ಮ ರಾಜ್ಯದಲ್ಲಿಯೇ ಹಾಸು ಹೊಕ್ಕಾಗಿರುವ ಹಾಗೂ ವಿಶ್ವಾದ್ಯಂತ ಜನಪ್ರಿಯತೆ ಗಳಿಸಿಕೊಂಡಿರುವ ಜಾನಪದ ಕಲಾವಿದರನ್ನು ಕಲಾತ್ಮಕವಾಗಿ ಬಳಸಿಕೊಳ್ಳದೆ ಕೇವಲ ಮೆರವಣಿಗೆಯಲ್ಲಿ ಬಳಸಿಕೊಂಡಿದ್ದು ವಿಪರ್ಯಾಸ.

ಈ ಎಲ್ಲಾ ಅಂಶಗಳನ್ನು ಸಚಿವರ ಗಮನಕ್ಕೆ ತರುತ್ತಾ, ನಮ್ಮ ಅಭಿಪ್ರಾಯಗಳನ್ನು ಜನರ ಧ್ವನಿಯಾಗಿ ಗುಣಾತ್ಮಕವಾಗಿ ಪರಿಗಣಿಸಿ, ಮುಂದೆ ಬರುವ ಎಲ್ಲಾ ಉತ್ಸವಗಳಲ್ಲಿ ಇಂಥ ಅವಘಡಗಳು ಮರುಕಳಿಸದಂತೆ ಎಚ್ಚರ ವಹಿಸಿ, ಕನ್ನಡದ ಕೀರ್ತಿಪತಾಕೆ ಬಾನೆತ್ತರದಲ್ಲಿ ಹಾರುವುದಕ್ಕೆ ಅನುವುಮಾಡಿಕೊಡಬೇಕೆಂದು ಕೋರುತ್ತೇನೆ.

-ವೈ.ಕೆ.ಮುದ್ದುಕೃಷ್ಣ, ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ನಿರೀಕ್ಷೆಗಳನ್ನು ಬುಡಮೇಲು ಮಾಡಿದ ಚುನಾವಣಾ ಫಲಿತಾಂಶ

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಹರಿಯಾಣ ಮತ್ತು ಜಮ್ಮು-ಕಾಶ್ಮೀರ ವಿಧಾನಸಭಾ ಚುನಾವಣೆಗಳ ಅಬ್ಬರ ಇತ್ತೀಚೆಗಷ್ಟೇ ಮುಗಿದಿದೆ. ಈ ಪೈಕಿ ಹರಿಯಾಣ ಚುನಾವಣೆಯ ಮತಗಳ ಎಣಿಕೆಯು ಬೆಳಗ್ಗೆ 8 ಗಂಟೆಗೆ ಆರಂಭವಾದಾಗ, ಅಂಚೆಮತದಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿತ್ತು. ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಮತ ಎಣಿಕೆಯು ಪ್ರಾರಂಭವಾಗಿ, 9 ಗಂಟೆಯ ವೇಳೆಗೆ ಕಾಂಗ್ರೆಸ್ 62 ಕ್ಷೇತ್ರಗಳಲ್ಲಿ ಮುಂದಿದ್ದರೆ, ಬಿಜೆಪಿ 16 ಕ್ಷೇತ್ರದಲ್ಲಿ ಮಾತ್ರ ಮುನ್ನಡೆ ಸಾಧಿಸಿತ್ತು. ಫಲಿತಾಂಶವು ಚುನಾವಣಾ ವಿಶ್ಲೇಷಕರ ಅಂದಾಜು ಮತ್ತು 'ಎಕ್ಸಿಟ್ ಪೋಲ್' ನುಡಿದ ಭವಿಷ್ಯವಾಣಿಯ ಹಾದಿಯಲ್ಲೇ ಸಾಗಿತ್ತು. ಗೆಲುವಿನ ಬರಗಾಲ ಎದುರಿಸುತ್ತಿದ್ದ ಕಾಂಗ್ರೆಸ್‌ನ ದೆಹಲಿ ಕಚೇರಿಯಲ್ಲಿ ಪಟಾಕಿಗಳು ಸಿಡಿದವು. ಮನೆಯಲ್ಲಿದ್ದ ಕಾಂಗ್ರೆಸ್ ವಕ್ತಾರ ಪವನ್ ಖೇರ ಮತ್ತು ಜೈರಾಂ ರಮೇಶ್ ಅವರು ಅಪರೂಪದ ಗೆಲುವಿನ ಕ್ಷಣಗಳ ಆನಂದ ಅನುಭವಿಸಲು ಎಐಸಿಸಿ ಕಚೇರಿಗೆ ಧಾವಿಸಿ ಬಂದರು.

ವಾಹಿನಿಗಳಲ್ಲಿ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್‌ನ ವಕ್ತಾರರು ಮೋದಿ ಸರಕಾರದ ಮೇಲೆ ವಾಗ್ದಾಳಿಗೆ ಮುಂದಾದರು. ಕಾಂಗ್ರೆಸ್‌ನ ಸಂವಹನ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನಾತೆ ಅವರಂತೂ, ''ಹರಿಯಾಣದಲ್ಲಿ ಬಿಜೆಪಿಗೆ ಇಪ್ಪತ್ತಕ್ಕಿಂತ ಹೆಚ್ಚು ಸ್ಥಾನ ಬಂದರೆ ನನ್ನ ಹೆಸರನ್ನು ಬದಲಾಯಿಸಿಕೊಳ್ಳುತ್ತೇನೆ'' ಎಂದು ಘೋಷಿಸಿಬಿಟ್ಟರು.

ಮತ ಎಣಿಕೆಗೂ ಮುನ್ನ, ಹರಿಯಾಣದಲ್ಲಿ ಪಕ್ಷವು ಗೆಲ್ಲುವುದರ ಕುರಿತು ಬಿಜೆಪಿಯವರಿಗೇ ವಿಶ್ವಾಸವಿರಲಿಲ್ಲ. ಮಿಕ್ಕಂತೆ ಕೆಲವರು, ''ಮೋದಿ ಜನಪ್ರಿಯತೆ ಕುಗ್ಗಿದೆ, ಮೂರನೆಯ ಅವಧಿಯಲ್ಲಿ ಅವರಿಗೆ ಆಡಳಿತ-ವಿರೋಧಿ ಅಲೆಯನ್ನು ಹಿಮ್ಮೆಟ್ಟಿಸುವ ಶಕ್ತಿಯಿಲ್ಲ. ಹೀಗಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ'' ಎಂದಿದ್ದರು. ಚುನಾವಣೋತ್ತರ ಸಮೀಕ್ಷೆ ಕೈಗೊಂಡ ಆರು ಸಂಸ್ಥೆಗಳು, ''ಹರಿಯಾಣದಲ್ಲಿ ಕಾಂಗ್ರೆಸ್ ನಿಶ್ಚಿತವಾಗಿ ಗೆಲ್ಲುತ್ತದೆ ಮತ್ತು ಬಿಜೆಪಿ ಗೆಲುವಿನ ಸಮೀಪಕ್ಕೂ ಬರುವುದಿಲ್ಲ'' ಎಂದಿದ್ದವು. ಚುನಾವಣಾ ವಿಶ್ಲೇಷಕರಾದ ರಾಜದೀಪ್ ಸರ್‌ದೇಸಾಯಿ, ಯೋಗೇಂದ್ರ ಯಾದವ್, ಅಜಿತ್ ಅಂಜುಂ, ಪ್ರೀತಿ ಚೌಧರಿ, ಇತರ ಪತ್ರಕರ್ತರು ಹರಿಯಾಣದಲ್ಲಿ ಬಿಜೆಪಿಯ ಸೋಲನ್ನು ನಿರ್ಧರಿಸಿಯಾಗಿತ್ತು. ಈ ಪೈಕಿ ಯೋಗೇಂದ್ರ ಯಾದವ್ ''ಹರಿಯಾಣದಲ್ಲಿ ಇರುವುದು ಕಾಂಗ್ರೆಸ್ ಅಲೆ, ಇಲ್ಲವೇ ಬಿರುಗಾಳಿ ಮತ್ತು ಸುನಾಮಿ ಮಾತ್ರ'' ಎಂದು ಅತಿಯಾದ ಆತ್ಮವಿಶ್ವಾಸವನ್ನು ಪ್ರಕಟ ಮಾಡಿದರು. ಈ ಹೇಳಿಕೆ ಅವರನ್ನು ಅನೇಕ ವರ್ಷಗಳವರೆಗೆ ಕಾಡುವುದರಲ್ಲಿ ಸಂಶಯವಿಲ್ಲ.

2024ರ ಲೋಕಸಭಾ ಚುನಾವಣಾ ಫಲಿತಾಂಶದ ತರುವಾಯದಲ್ಲಿ ಚುನಾವಣೋತ್ತರ ಸಮೀಕ್ಷೆಗಳು ತಮ್ಮ ವಿಶ್ವಾಸಾರ್ಹತೆಯನ್ನು ಸಾಕಷ್ಟು ಕಳೆದುಕೊಂಡಿವೆ. ಇಷ್ಟಾಗಿಯೂ ಕೆಲವರು ಛಲ ಬಿಡದೆ ಮತ್ತೆ ಹರಿಯಾಣದ ಚುನಾವಣೋತ್ತರ ಸಮೀಕ್ಷೆಗೆ ಮುಂದಾದರು. ಆದರೆ ಫಲಿತಾಂಶ ತಿರುವು-ಮುರುವಾದ್ದರಿಂದ, ಇವರೆಲ್ಲಾ ಕೈ ಮಾತ್ರ ಸುಟ್ಟುಕೊಂಡಿಲ್ಲ, ಜನರ ವಿಶ್ವಾಸವನ್ನೂ ಕಳೆದುಕೊಳ್ಳುವ ಅಪಾಯದಲ್ಲಿದ್ದಾರೆ.

ಆಮ್ ಆದ್ಮಿ ಪಾರ್ಟಿಯ ಅರವಿಂದ ಕೇಜ್ರಿವಾಲ್ ಚುನಾವಣಾ ಪ್ರಚಾರದ ಸಭೆಗಳಲ್ಲಿ, ''ಹರಿಯಾಣದ ಮಗನನ್ನು ಜೈಲಿಗೆ ಕಳುಹಿಸಿದ ಪಕ್ಷಕ್ಕೆ ತಕ್ಕ ಪಾಠ ಕಲಿಸುತ್ತೀರಾ? ನಾನು ಭ್ರಷ್ಟನಲ್ಲ ಎಂದು ಸಂದೇಶ ಕಳುಹಿಸುತ್ತೀರಾ?'' ಎಂದು ಭಾವನಾತ್ಮಕವಾಗಿ ಮಾತಾಡಿ ವೋಟು ಪಡೆಯಲು ಹವಣಿಸಿದರು. ಫಲಿತಾಂಶ ಬಂದಾಗ, ಆಮ್ ಆದ್ಮಿ ಸ್ಪರ್ಧಿಸಿದ್ದ 88 ಕ್ಷೇತ್ರಗಳ ಪೈಕಿ 87ರಲ್ಲಿ ಅಭ್ಯರ್ಥಿಗಳಿಗೆ ಠೇವಣಿ ನಷ್ಟವಾಗಿ, ಅವರೆಲ್ಲ ಕೇವಲ ಶೇ.1.8ರಷ್ಟು ಮತ ಪಡೆದು ಹೀನಾಯ ಸೋಲು ಕಂಡಿದ್ದರು. ಬೆಳಗ್ಗೆ 10 ಗಂಟೆಯ ನಂತರ ಬಿಜೆಪಿ ಮೇಲುಗೈ ಸಾಧಿಸತೊಡಗಿತು. ಗೆದ್ದೆವೆಂದು ಬೀಗುತ್ತಿದ್ದ ಕಾಂಗ್ರೆಸ್ಸಿಗರಿಗೆ ಅನಿರೀಕ್ಷಿತ ಆಘಾತವಾಗಿತ್ತು. ಅವರ ಕೆಂಗಣ್ಣು ಚುನಾವಣಾ ಆಯೋಗದ ಮೇಲೆ ಹರಿಯತೊಡಗಿ, ''ಆಯೋಗದ ವೆಬ್‌ಸೈಟಿನಲ್ಲಿ ಮತ ಎಣಿಕೆಯ ವಿವರವನ್ನು ನಿಧಾನವಾಗಿ ಅಪ್‌ಲೋಡ್ ಮಾಡಿ ಆಡಳಿತದ ಮೇಲೆ ಒತ್ತಡ ಹಾಕುತ್ತಿದ್ದಾರೆ'' ಎಂದೂ, ಹನ್ನೆರಡು ಗಂಟೆ ವೇಳೆಗೆ ಕಾಂಗ್ರೆಸ್ಸಿನ ಸೋಲು ಖಚಿತವಾಗುತ್ತಿದ್ದಂತೆ, ''ಇವಿಎಂಗಳನ್ನು ಅದಲು-ಬದಲು ಮಾಡಲಾಗಿದೆ'' ಎಂದೂ ಆಯೋಗಕ್ಕೆ ದೂರು ಸಲ್ಲಿಸಿದರು. ಹರಿಯಾಣದ ಜತೆಗೆ ಜಮ್ಮು-ಕಾಶ್ಮೀರದ ವಿಧಾನಸಭಾ ಚುನಾವಣೆಯ ಮತ ಎಣಿಕೆಯೂ ನಡೆದಿತ್ತು. ಅದರಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಮೈತ್ರಿಕೂಟವು ಬಹುಮತ ಪಡೆದಿತ್ತು. ಆದರೆ, ಇಲ್ಲಿ ಆಯೋಗದ ನಿಷ್ಪಕ್ಷಪಾತತೆಯ ಕುರಿತು ಅವರು ಸೊಲ್ಲೆತ್ತಲಿಲ್ಲ, ಇವಿಎಂಗಳ ಬಗ್ಗೆ ತಕರಾರು ತೆಗೆಯಲಿಲ್ಲ. ಹೀಗೆ, ಇಬ್ಬಗೆಯ ನೀತಿಯನ್ನು ಎಗ್ಗಿಲ್ಲದೆ ತೋರ್ಪಡಿಸಿಕೊಂಡರು ಈ ಕಾಂಗ್ರೆಸ್ಸಿಗರು!

ರಾಜದೀಪ್ ಸರ್‌ದೇಸಾಯಿ, ಬರ್ಖಾದತ್ ಹಾಗೂ ಇತರ ಪತ್ರಕರ್ತರು, ''ಹರಿಯಾಣದಲ್ಲಿ ಕಾಂಗ್ರೆಸ್ ಸೋಲಿಗೆ ಬಣ ರಾಜಕೀಯವೇ ಕಾರಣ; ಪ್ರಮುಖ ಹಾಗೂ ಜಾಟ್ ಕೇಂದ್ರೀಕೃತ ಪ್ರಚಾರ ಕೈಗೊಂಡು ದಲಿತ ನಾಯಕಿ ಶೆಲ್ಜ ಕುಮಾರಿ ಅವರನ್ನು ಅಲ್ಲಿ ನಿರ್ಲಕ್ಷಿಸಲಾಗಿತ್ತು'' ಎಂದು ಅಭಿಪ್ರಾಯಪಟ್ಟಿದ್ದಾರೆ. ಭೂಪಿಂದರ್ ಹೂಡಾರ ಹಿಡಿತ ಹೇಗಿತ್ತೆಂದರೆ, ಅವರು ಹೇಳಿದ 72 ಅಭ್ಯರ್ಥಿಗಳಿಗೆ ಹೈಕಮಾಂಡ್ ಮಣೆ ಹಾಕಿತ್ತು. ಇತ್ತ ಬಿಜೆಪಿಯು ಸದ್ದಿಲ್ಲದೆ ದಲಿತ ಮತ್ತು ಹಿಂದುಳಿದ ಸಮುದಾಯಗಳ ಮತದಾರರ ಮನವೊಲಿಸುವ ಕಾರ್ಯದಲ್ಲಿ ತೊಡಗಿತ್ತು. ಹತ್ತು ವರ್ಷದ ಭ್ರಷ್ಟಾಚಾರ-ರಹಿತ ಆಡಳಿತ ಹಾಗೂ ಸಮಾಜದ ಕಟ್ಟಕಡೆಯ ವ್ಯಕ್ತಿಯವರೆಗೆ ಸರಕಾರದ ಯೋಜನೆಗಳನ್ನು ತಲುಪಿಸಿದ್ದು ಇಲ್ಲಿ ಬಿಜೆಪಿಗೆ ಪ್ಲಸ್ ಪಾಯಿಂಟ್ ಆಗಿತ್ತು. ಜತೆಗೆ, ಮನೋಹರಲಾಲ್ ಖಟ್ಟರ್‌ರನ್ನು ಬದಲಾಯಿಸಿ ಹಿಂದುಳಿದ ವರ್ಗದ ನಯಾಬ್ ಸಿಂಗ್ ಸೈನಿಯವರನ್ನು ಮುಖ್ಯಮಂತ್ರಿ ಮಾಡಿದ್ದು ಬಿಜೆಪಿಯ ಗೆಲುವಿಗೆ ಮತ್ತಷ್ಟು ಬಲ ನೀಡಿತು.

ಹರಿಯಾಣ ಕಾಂಗ್ರೆಸ್‌ನಲ್ಲಿ ಭೂಪಿಂದರ್ ಹೂಡಾ, ಶೆಲ್ಜಾ ಕುಮಾರಿ ಮತ್ತು ರಣದೀಪ್‌ಸಿಂಗ್ ಸುರ್ಜೇವಾಲಾ ಹೀಗೆ 3 ಬಣಗಳ ಪ್ರಾಬಲ್ಯವಿದೆ, ಒಬ್ಬರ ಮುಖವನ್ನು ಮತ್ತೊಬ್ಬರು ನೋಡದಷ್ಟು ಆತ್ಮೀಯತೆಯಿದೆ! ಹೀಗಾಗಿ ಚುನಾವಣಾ ಸಮಯದಲ್ಲಿ ಈ ಬಣಗಳ ನಡುವೆ ಸಾಮರಸ್ಯ ಮೂಡಿಸಲು ಸಾಧ್ಯವಾಗಲಿಲ್ಲ. 'ಕಿಸಾನ್-ಜವಾನ್-ಪೈಲ್ವಾನ್' ಅಜೆಂಡಾ ಯಶಸ್ವಿಯಾಗುತ್ತದೆ ಎಂದು ಕಾಂಗ್ರೆಸ್ ನಂಬಿತ್ತು. ಆದರೆ ಈ ಮೂರೂ ಸಂಗತಿಗಳು ಅದರ ಕೈಹಿಡಿಯಲಿಲ್ಲ. ಪಂಜಾಬ್ ಮತ್ತು ಹರಿಯಾಣ ನಡುವಿನ ಶಂಭು ಬಾರ್ಡರ್‌ನಲ್ಲಿ ಹೆದ್ದಾರಿ ಅಡ್ಡಗಟ್ಟಿ ಧರಣಿ ಕುಳಿತ ರೈತ ಚಳವಳಿ ತಮಗೆ ಲಾಭ ತರುತ್ತದೆ ಎಂಬುದು ಕಾಂಗ್ರೆಸ್ಸಿಗರ ನಿರೀಕ್ಷೆಯಾಗಿತ್ತು. ಅಗ್ನಿವೀರ್ ಯೋಜನೆಯನ್ನು ಚುನಾವಣೆಯ ಚರ್ಚಾವಿಷಯವಾಗಿಸಿ ಯುವಮತದಾರರನ್ನು ಸೆಳೆಯುವ ಅವರ ಯತ್ನವೂ ವಿಫಲವಾಯಿತು. ಇನ್ನು, ಕುಸ್ತಿಪಟುಗಳ ಮೇಲಿನ ದೌರ್ಜನ್ಯದ ಘಟನೆ ಬಿಜೆಪಿಗೆ ಮುಳುವಾಗಬಹುದು ಎಂಬ ಗ್ರಹಿಕೆಯಲ್ಲಿ ವಿನೇಶ್ ಫೋಗಟ್‌ರಿಗೆ ಕಾಂಗ್ರೆಸ್ ಟಿಕೆಟ್ ನೀಡಿದ್ದರೂ, ಆಕೆ ಪ್ರಯಾಸಪಟ್ಟು ಅಲ್ಪ ಅಂತರದಿಂದ ಆಯ್ಕೆಯಾಗುವಂತಾಯಿತು. ಕಾಂಗ್ರೆಸ್‌ನಲ್ಲಿನ ಆಂತರಿಕ ಗೊಂದಲಗಳ ಕುರಿತು ಈಗಾಗಲೇ ಪುಟಗಟ್ಟಲೆ ಲೇಖನಗಳು ಪ್ರಕಟವಾಗಿದ್ದು, ತಂತ್ರಗಾರಿಕೆಯಲ್ಲಿ ಆಗಿರುವ ಲೋಪಗಳನ್ನು ಇವು ಎತ್ತಿತೋರಿಸಿವೆ. ಆದರೆ ಕಾಂಗ್ರೆಸ್ಸಿಗರು ಅವುಗಳ ಬಗ್ಗೆ ಗಂಭೀರವಾಗಿ ಗಮನಹರಿಸುವುದನ್ನು ನಿರ್ಲಕ್ಷಿಸಿ, ತಮ್ಮ ಸೋಲಿಗೆ ಚುನಾವಣಾ ಆಯೋಗ, ಇವಿಎಂ ಕಾರಣ ಎಂದಿದ್ದಾರೆ. ಪ್ರಚಾರದ ನೇತೃತ್ವ ವಹಿಸಿದ್ದ ರಾಹುಲ್ ಗಾಂಧಿಯವರ ವೈಫಲ್ಯವನ್ನು ಪ್ರಶ್ನಿಸುವ ಧೈರ್ಯವಿಲ್ಲದ ಕಾಂಗ್ರೆಸ್ಸಿಗರು, ಸಂಬಂಧವಿಲ್ಲದ ಕಾರಣದೊಂದಿಗೆ ತಮ್ಮ ಸೋಲನ್ನು ತಳುಕುಹಾಕುವ ಮೂಲಕ ವಿಷಯಾಂತರ ಮಾಡುತ್ತಿದ್ದಾರೆ.

ತನ್ನ ಹಿತಾಸಕ್ತಿಗೆ ಧಕ್ಕೆಯಾದಾಗ ಸಂವಿಧಾನದ ಬಗ್ಗೆ ಪಾಠ ಹೇಳುವ ಕಾಂಗ್ರೆಸ್, ಚುನಾವಣಾ ಆಯೋಗದಂಥ ಸಾಂವಿಧಾನಿಕ ಸಂಸ್ಥೆಗೆ ಮಸಿ ಬಳಿಯಲು ಕಿಂಚಿತ್ತೂ ಹಿಂಜರಿಯುತ್ತಿಲ್ಲ. ತಾವು ಪ್ರಜಾಪ್ರಭುತ್ವದ ರಕ್ಷಕರು ಎಂದು ಹೇಳಿಕೊಳ್ಳುವ ಕಾಂಗ್ರೆಸ್ಸಿಗರು, ಚುನಾವಣೆಯಲ್ಲಿ ಸೋತ ಮೇಲೆ ''ನಾವು ಜನತೆಯ ತೀರ್ಪನ್ನು ಒಪ್ಪುವುದಿಲ್ಲ'' ಎನ್ನುತ್ತಿದ್ದಾರೆ, ದೇಶದ ಸಂವಿಧಾನ, ಪ್ರಜಾಪ್ರಭುತ್ವವನ್ನು ತಾವೊಬ್ಬರೇ ಗುತ್ತಿಗೆ ಪಡೆದಿರುವ ಹಾಗೆ ವರ್ತಿಸುತ್ತಿದ್ದಾರೆ. ಹರಿಯಾಣದಲ್ಲಿ ತಾನೇ ಗೆಲ್ಲುವುದು ಎಂಬ ಅತಿಯಾದ ಆತ್ಮವಿಶ್ವಾಸದಲ್ಲಿದ್ದ ಕಾಂಗ್ರೆಸ್, ತನ್ನ ಕಾಲಬುಡದಲ್ಲಿ ಕುಸಿಯುತ್ತಿದ್ದ ನೆಲದ ಬಗ್ಗೆಯೇ ಗಮನ ಕೊಡಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಬಿಜೆಪಿ ಸದ್ದಿಲ್ಲದೆ ಹೂಡಿದ ರಣತಂತ್ರ ಕಾಂಗ್ರೆಸ್‌ನ ಕನಸನ್ನು ಭಗ್ನಗೊಳಿಸಿತು. 2014ರಲ್ಲಿ ಬಿಜೆಪಿ ಹರಿಯಾಣದಲ್ಲಿ ಅಧಿಕಾರಕ್ಕೆ ಬಂದಾಗ 47 ಸ್ಥಾನಗಳನ್ನು ಗೆದ್ದಿತ್ತು. 2019ರಲ್ಲಿ 40 ಸ್ಥಾನಗಳು ದಕ್ಕಿದಾಗ, ಸರಕಾರದ ರಚನೆಗೆ ಅದು ಜನನಾಯಕ್ ಜನತಾ ಪಕ್ಷದ ನೆರವನ್ನು ಕೇಳಬೇಕಾಯಿತು. ಈ ಬಾರಿ ಬಿಜೆಪಿ 2014ರ ಜನಾದೇಶಕ್ಕಿಂತ ಒಂದು ಸ್ಥಾನ ಹೆಚ್ಚು ಗೆದ್ದು ಅಧಿಕಾರಕ್ಕೆ ಬಂದಿದೆಯೆಂದರೆ, ಸರಕಾರದ ಕಾರ್ಯವೈಖರಿಗೆ ಜನಮನ್ನಣೆ ದೊರೆತಿದೆ ಎಂದೇ ಅರ್ಥ.

ಕೆಲವೊಂದು ರಾಜಕೀಯ ವಿಶ್ಲೇಷಕರಿಗೆ, ಪತ್ರಕರ್ತರಿಗೆ ಮತ್ತು ಪಕ್ಷಗಳ ವಕ್ತಾರರಿಗೆ ಹರಿಯಾಣ ಫಲಿತಾಂಶವು ಒಳ್ಳೆಯ ಪಾಠವನ್ನೇ ಕಲಿಸಿದೆ. ಚರ್ಚೆಯ ಸಂದರ್ಭದಲ್ಲಿ ಆತುರದಿಂದ ವಿಶ್ಲೇಷಣೆ ಮಾಡಿ ನಂತರ 'ನನ್ನ ಮುಖಕ್ಕೆ ಮೊಟ್ಟೆ ಹೊಡೆಯಲಾಗಿದೆ' ಎಂದು ಗೋಳಾಡುವ, ತಮ್ಮ ಮಾತನ್ನು ತಾವೇ ನುಂಗಬೇಕಾಗುವ ಪರಿಸ್ಥಿತಿಯನ್ನು ಅನೇಕರು ಎದುರಿಸುತ್ತಿದ್ದಾರೆ. ಗೆಲ್ಲುವ ಹಮ್ಮಿನಲ್ಲಿದ್ದ ಕಾಂಗ್ರೆಸ್, ಹರಿಯಾಣದಲ್ಲಿನ ಸೋಲಿನಿಂದ ತತ್ತರಿಸಿಹೋಗಿದೆ. ಜಮ್ಮು-ಕಾಶ್ಮೀರದಲ್ಲಿನ ಕಳಪೆ ಪ್ರದರ್ಶನದಿಂದಾಗಿ ಕಾಂಗ್ರೆಸ್‌ನ ವರ್ಚಸ್ಸು ಮಸುಕಾಗಿಹೋಗಿದೆ. ಹಿಂದೂಗಳ ಪ್ರಾಬಲ್ಯವಿರುವ ಜಮ್ಮು ಭಾಗದಲ್ಲಿ ಅದು ಗೆದ್ದಿರುವುದು ಒಂದು ಸೀಟನ್ನು ಮಾತ್ರ; ಉಳಿದಂತೆ ಆರು ಕಡೆ ಗೆದ್ದಿರುವ ಅದರ ಅಭ್ಯರ್ಥಿಗಳು ಒಂದೇ ಸಮುದಾಯಕ್ಕೆ ಸೇರಿದವರು. ಆದರೆ ಈ ಹಿನ್ನಡೆಯ ಬಗ್ಗೆ ಪಕ್ಷವು ಚಕಾರವೆತ್ತಿಲ್ಲ. ರಾಹುಲ್ ಗಾಂಧಿಯವರ 'ಭಾರತ್ ಜೋಡೋ' ಯಾತ್ರೆಯಿಂದ ಜಮ್ಮು-ಕಾಶ್ಮೀರದಲ್ಲಿ ತನಗೆ ಬಹುದೊಡ್ಡ ಲಾಭವಾಗುತ್ತದೆ ಎಂದುಕೊಂಡಿದ್ದ ಕಾಂಗ್ರೆಸ್‌ನ ನಿರೀಕ್ಷೆ ಸುಳ್ಳಾಗಿದೆ.

ರಾಹುಲ್ ಗಾಂಧಿಯವರ ಜಾತಿ ಕೇಂದ್ರಿತ ವಿಭಜನೆಯ ಅಜೆಂಡಾ ಬಗ್ಗೆ ಕಾಂಗ್ರೆಸ್‌ನಲ್ಲೇ ಅಪಸ್ವರಗಳು ಏಳುತ್ತಿವೆ. ಹೊಸತನ ಕಾಣದ 'ಅದಾನಿ ಅದಾನಿ' ರಾಗವನ್ನು 'ರಾಗಾ'ರವರು ತೊರೆದು, ತಮ್ಮ ತಂತ್ರಗಾರಿಕೆಯನ್ನು ಮರುವಿಮರ್ಶೆ ಮಾಡಿಕೊಳ್ಳಬೇಕಾಗಿದೆ.

(ಲೇಖಕರು ಬಿಜೆಪಿ ವಕ್ತಾರರು)

ಭಟ್ಟರ್ ಸ್ಕಾಚ್

• **ಬೆಂ.ಮಾರುತಿ, ಬೆಂಗಳೂರು**
ಭಟ್ರೇ, ಕುಮಾರಸ್ವಾಮಿ ಮತ್ತೆ ನಾನೇ ಸಿಎಂ ಅಂತ ಬಿಡಕ್ಕಾಗಿ ಹೇಳ್ತಿದ್ದಾರಲ್ಲಾ!
- **ವೋಟ್ ಹಾಕುವವರು ಅವರ ಮನೆಯವರೊಬ್ಬರೇ ಆಗಿದ್ದಿದ್ದರೆ ಅವರೇ ಸಿಎಂ!**

• **ಅವಿಕ್ ಗೊಂದಿಮನಿ, ಕಡೂರು**
ಭಟ್ರೇ, ಶಿಕ್ಷಣ ಸಚಿವರಿಗೆ ಕನ್ನಡ ಕಲಿಸುವ ಪಾಠ ಎಲ್ಲಿಗೆ ಬಂತು?
- **ಅದೊಂದು ಬಿಟ್ಟು ಬೇರೆ ಏನಾದರೂ ಇದ್ದರೆ ಹೇಳಿ!**

• **ವೆಂಕಣ್ಣಾಚಾರ್ ನಡುಮನಿ, ಮೈಸೂರು**
ಭಟ್ರೇ, ಕನ್ಯಾ ರಾಶಿ ಹುಡುಗರಿಗೆ ಸುಲಭವಾಗಿ ಕನ್ಯೆ ಸಿಗುವುದಿಲ್ಲವಂತೆ, ಹೌದಾ?
- **ತುಲಾ ರಾಶಿ ಹುಡುಗರ ಬಗ್ಗೆ ಯೋಚಿಸ್ತಾ ಇದ್ದೇನೆ!**

• **ಬಾಲು, (ಇಮೇಲ್ ಮೂಲಕ)**
ಭಟ್ರೇ, ಹಳೆ ಜನ್ಮದ ವೈರಿ ಹೆಂಡತಿಯಾಗಿ ಬರ್ತಾಳಂತೆ, ನಿಜವಾ?
- **ಹಲವರ ಅನುಭವದ ಮಾತುಗಳನ್ನು ಸಾಬೀತು ಮಾಡು ಎಂದು ಹಠ ಹಿಡಿಯಬಾರದು!**

• **ರಾಜು ಕಂಭಾವಿ, ಮುಂಡರಗಿ**
ಭಟ್ರೇ, ಹೆಚ್ಚು ಮಕ್ಕಳನ್ನು ಮಾಡಿ ಎಂದು ತಮಿಳುನಾಡು ಸಿಎಂ ಹೇಳ್ತಿದ್ದಾರಲ್ಲ?
- **ಅವರು ಹೇಳುವುದನ್ನು ಲಾಲು ಪ್ರಸಾದ್ ಯಾದವ್ ಎಂದೋ ಆಚರಣೆಗೆ ತಂದಿದ್ದಾರಲ್ಲ!**

• **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ತವರಿನಲ್ಲಿಯೇ ಹೆಚ್ಚು ದಿನಗಳು ಇದ್ದು ಆಗಾಗ್ಗೆ ಬಂದು ಹೋಗುವ ಹೆಂಡತಿಗೆ ಏನೆನ್ನಬಹುದು?
- **ಗಂಡನ ಬಗ್ಗೆ ಅತೀವ ಕಾಳಜಿಯುಳ್ಳವಳು!**

• **ಎಲ್.ವಿ.ಸತೀಶ, ಮೈಸೂರು**
ಭಟ್ರೆ, ದೇವರು ಇದ್ದಾನೆ ಎಂದು ನಿಮಗೆ ಅನಿಸುವುದು ಯಾವಾಗ?
- **ಸಾಲ ಪಡೆದವರು ವಾಪಸ್ ಕೊಟ್ಟಾಗ!**

• **ಉಜ್ವಲ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಬಿಗ್ ಬಾಸ್‌ಗೂ, ಹುಚ್ಚಾಸ್ಪತ್ರೆಗೂ ಏನು ವ್ಯತ್ಯಾಸ?
- **ಹುಚ್ಚಾಸ್ಪತ್ರೆಯಿಂದ ಬಿಡಿಸಿಕೊಂಡು ಬರಬಹುದು!**

• **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಇದೋ ಅಲ್ಲ ಸ್ವಲ್ಪ ಮರ್ಯಾದೆ ತೆಗೆದುಕೊಳ್ಳಬೇಕು ಅಂದ್ರೆ, ವಿಧಾನಸಭೆಗೆ ಹೋಗಬೇಕು ಅಂತಾರಲ್ಲ?
- **ಹಾಗೇನಿಲ್ಲ, ಬಿಗ್ ಬಾಸ್ ಮನೆಗೂ ಹೋಗಬಹುದು!**

ಬೆಂಗಳೂರು ಮಳೆನಾಡೆಂಬ ವಿವೇಕ ನಮಗಿರಲಿ

ಲೋಕಮತ

ಲೋಕೇಶ್ ಕಾಯರ್ಗ
kaayarga@gmail.com

ಬೆಂಗಳೂರಿನಲ್ಲಿ ಮಳೆ ಅರ್ಭಟದಿಂದ ಪಾರಾಗುವ ಬಗೆ ಹೇಗೆ? ತುಂಬಾ ಸಿಂಪಲ್. ಬೆಂಗಳೂರಿನಲ್ಲಿ ಮಳೆ ಬರುತ್ತದೆ ಎಂದು ನಮಗೆ ಗೊತ್ತಿದ್ದರೆ ಸಾಕು. ಅಚ್ಚರಿ ಎಂದರೆ ಬೆಂಗಳೂರಿನಲ್ಲಿ ಎಷ್ಟೇ ಮಳೆ ಬಂದರೂ ಛತ್ರಿ ಹಿಡಿಯುವವರು ಕಡಿಮೆ! ಕೊಡೆ ಹಿಡಿದು ಸಾಗುವ ಪುರುಷ ಪುಂಗವರು ಇನ್ನೂ ಕಡಿಮೆ. ದ್ವಿಚಕ್ರ ಸವಾರರಿಗೂ ರೈನ್‌ಕೋಟ್ ಬಳಸದೆ ಮಳೆಯಲ್ಲಿ ಒದ್ದೆಯಾಗಿ ಸಾಗುವುದೇ ಇಷ್ಟ. ಹೆಚ್ಚಿನ ಬೆಂಗಳೂರಿಗರು ಪ್ರತಿದಿನ 'ನೋಡೋಣ ಮಳೆ ಬರಲಿಕ್ಕಿಲ್ಲ' ಎನ್ನುವ ವಿಶ್ವಾಸದಲ್ಲಿಯೇ ಓಡಾಡುತ್ತಾರೆ. ಕರಾವಳಿ, ಮಲೆನಾಡಿನ ಜಡಿ ಮಳೆಯಲ್ಲಿ ತಮ್ಮ ಬಾಲ್ಯ ಕಳೆದವರು ಕೂಡ ಕಡೆಗೆ ನಗರಕ್ಕೆ ಕಾಲಿಟ್ಟ ತಕ್ಷಣ ಕೊಡೆಯನ್ನು ಮೂಲೆಗೆ ಸೇರಿಸುತ್ತಾರೆ. ಇಲ್ಲಿ ಕೊಡೆ ಹಿಡಿದು ಸಾಗುವುದೆಂದರೆ ಪ್ರತಿಷ್ಠೆಗೆ ಕುತ್ತು. ಹಾಗೆಂದು ರಾಜಧಾನಿಯ ಮಳೆ ಯಾರ ಮರ್ಜಿಗೂ ಕಾಯುವುದಿಲ್ಲ. ವರ್ಷದ ಒಂದೆರಡು ತಿಂಗಳು ಬಿಟ್ಟರೆ ಇಲ್ಲಿ ಮಳೆರಾಯನಿಗೆ ವಿಶ್ರಾಂತಿ ಇಲ್ಲ. ಕರಾವಳಿಯಲ್ಲಿ ಮುಂಗಾರು ಮಳೆ ಪ್ರವೇಶಿಸುವ ಮುನ್ನವೇ ಇಲ್ಲಿ ಒಂದೆರಡು ಮಳೆ ಮೊದಲೇ ಬಂದು ತಾಲೀಮು ನಡೆಸುತ್ತದೆ. ನಂತರ ಮುಂಗಾರು ಮತ್ತು ಹಿಂಗಾರು ಜತೆ ಸೇರಿಕೊಂಡು ನವೆಂಬರ್, ಡಿಸೆಂಬರ್ ತನಕವೂ ಮಳೆ ಸುರಿಯುತ್ತಲೇ ಇರುತ್ತದೆ. ಇದರ ನಡುವೆ ಅರಬ್ಬಿ ಸಮುದ್ರದಿಂದ ವಾಯುದೇವನ ಅಪ್ಪಣೆ ದೊರೆತರೂ ಇಲ್ಲಿ ಮಳೆಯಾಗುತ್ತದೆ. ಬಂಗಾಳಕೊಲ್ಲಿಯಲ್ಲಿ ವಾಯುದೇವನ ಭಾರ ಕುಸಿದರೂ ಇಲ್ಲಿ ಜಡಿ ಮಳೆಯಾಗುತ್ತದೆ. ಉಪಖಂಡದ ಎರಡೂ ಸಮುದ್ರಗಳಿಗೆ ಸ್ಪಂದಿಸುವ ವಿಶ್ವದ ಮತ್ತೊಂದು ನಗರ ಎಂದರೆ ಅದು ನಮ್ಮ ಬೆಂಗಳೂರು. ಮಂಗಳೂರಿನಲ್ಲಿ ಜೋರು ಮಳೆಯಾಯಿತೆಂದರೆ ಬೆಂಗಳೂರು ಸ್ಪಂದಿಸುತ್ತದೆ. ಮದ್ರಾಸಿನಲ್ಲಿ ಮಳೆಯಾದರೂ ಓಗೊಡುತ್ತದೆ.

ಅಪಾರ್ಟ್‌ಮೆಂಟ್‌ಗಳನ್ನು, ಮಾಲ್‌ಗಳನ್ನು ಕಟ್ಟುತ್ತಾರೆ. ಬೆಂಗಳೂರಿನಲ್ಲಿ ಮಳೆ ಬರುವುದೇ ಇಲ್ಲ ಎಂಬ 'ದುರಾಲೋಚನೆ'ಯಿಂದ ನಮ್ಮ ಅಧಿಕಾರಿಗಳು, ಜನಪ್ರತಿನಿಧಿಗಳು ಇದಕ್ಕೆ ಅನುಮತಿ ನೀಡುತ್ತಾರೆ. ಸ್ವತಃ ಮಳೆಯಾದ ಒಂದೆರಡು ಬಾರಿ ಗುಡುಗು, ಸಿಡಿಲಿನೊಂದಿಗೆ ಬಂದು ನೋಟಿಸ್ ಕೊಟ್ಟ ಬಳಿಕ ಜ್ಞಾನೋದಯವಾಗಿ ಕೆರೆಯನ್ನು ಕಬಳಿಸಿ ಕಟ್ಟಿದ ಕಟ್ಟಡಗಳನ್ನು ತೆರವು ಮಾಡಿ ಎಂದು ನೋಟಿಸ್ ಕೊಡುತ್ತಾರೆ.

ಕಾಂಕ್ರೀಟ್ ಕಾಡಷ್ಟೇ ಅಲ್ಲ

ರಾಜಧಾನಿಯಲ್ಲಿ ಒಂದು ಗಂಟೆಗಿಂತ ಹೆಚ್ಚು ನಿರಂತರವಾಗಿ ಮಳೆ ಸುರಿದರೆ ರಸ್ತೆಗಳು ಕೆರೆಗಳಾಗುತ್ತವೆ. ಅಂಡರ್‌ಪಾಸ್‌ಗಳಲ್ಲಿ ನೀರು ತುಂಬಿಕೊಂಡು ಸಂಚಾರ ಏರುಪೇರಾಗುತ್ತದೆ. ಇನ್ನೂ ಸ್ವಲ್ಪ ಮಳೆ ಬಂದರೆ ಚರಂಡಿ ನೀರು ಮನೆಯೊಳಗೆ ನುಗ್ಗುತ್ತದೆ. ಎರಡು ಗಂಟೆಗಿಂತ ಹೆಚ್ಚಿನ ಮಳೆ ಬಂದರೆ ಬಡಾವಣೆಗಳು, ಅಪಾರ್ಟ್‌ಮೆಂಟ್‌ಗಳು ನೀರಲ್ಲಿ ಮುಳುಗುತ್ತವೆ. ಮ್ಯಾನ್‌ಹೋಲ್‌ಗಳೆಲ್ಲಾ ಬಾಯ್ತೆರೆದುಕೊಂಡು ರಸ್ತೆ ಮೇಲೆ ನೀರು ಉಕ್ಕಿ ಹರಿದಾಗ, ಬ್ರ್ಯಾಂಡ್ ಬೆಂಗಳೂರಿಗೆ ಧಕ್ಕೆಯಾಯಿತೆಂದು ನಮ್ಮ ನಾಯಕರು ಹಲುಬುತ್ತಾರೆ. ಮಾಧ್ಯಮಗಳು 'ರಕ್ಕಸ ಮಳೆ' ಎಂದು ವರುಣದೇವನನ್ನು ರಾಕ್ಷಸ ಗಣಕ್ಕೆ ಸೇರಿಸಿಬಿಡುತ್ತವೆ. ಕೆಲವರು 'ಏನಿದು ಬೆಂಗಳೂರು ಮಲೆನಾಡಾಗಿದೆ' ಎಂದು ಗೊಣಗುತ್ತಾರೆ. ವಾಸ್ತವದ ವಿಚಾರಕ್ಕೆ ಬಂದರೆ ಬೆಂಗಳೂರು ಒಂದು ಕಾಲದಲ್ಲಿ ಮಲೆನಾಡಾಗಿತ್ತು. ಈಗ 'ಮಲೆ' ಬನ್ನೇರುಘಟ್ಟಕ್ಕೆ ಸೀಮಿತಗೊಂಡಿದೆ. ಆದರೆ ಕಾಂಕ್ರೀಟ್ ಕಾಡುಗಳ ನಡುವೆಯೂ ಬೆಂಗಳೂರು 'ಮಳೆನಾಡು' ಆಗಿಯೇ ಉಳಿದಿದೆ.

ಇಷ್ಟಾದರೂ ಬೆಂಗಳೂರಿಗರು ತಮ್ಮದು ಮಳೆ ಜಿಲ್ಲೆ ಎಂದು ಒಪ್ಪಿಕೊಳ್ಳಲು ಸಿದ್ಧರಿಲ್ಲ. ದಶಕಗಳಿಂದ ಇಲ್ಲಿ ನೆಲೆಸಿದವರು, ನಿನ್ನೆ ಮೊನ್ನೆ ಬಂದು ಇಲ್ಲಿ ಮನೆ ಕಟ್ಟಿಕೊಂಡವರು ಸೇರಿದಂತೆ ಬೆಂಗಳೂರು ನಿವಾಸಿಗಳೆನಿಸಿಕೊಂಡವರು, ಇಲ್ಲಿನ ಅಧಿಕಾರಿಗಳು, ಜನಪ್ರತಿನಿಧಿಗಳ ಕಣ್ಣಲ್ಲಿ ಬೆಂಗಳೂರು 'ಮಳೆನಾಡು' ಅಲ್ಲವೇ ಅಲ್ಲ. ಈ ಕಾರಣದಿಂದಲೇ ಇಲ್ಲಿ ಮೊದಲು ಮನೆಗಳನ್ನು ನಿರ್ಮಿಸಲಾಗುತ್ತದೆ. ಮಳೆ ಬಂದು ನಾನೆಲ್ಲಿ ಸಾಗಲಿ ಎಂದು ಕೇಳಿದ ಮೇಲೆ ಚರಂಡಿ ನಿರ್ಮಾಣಕ್ಕೆ ಜಾಗ ಹುಡುಕುತ್ತಾರೆ. ಮೊದಲು ರಸ್ತೆಗಳನ್ನು ನಿರ್ಮಿಸಿ, ಮಳೆ ನೀರಲ್ಲಿ ಮುಳುಗಿದ ಬಳಿಕ ಅದೇ ರಸ್ತೆಯನ್ನು ಅಗೆದು ಚರಂಡಿ ನಿರ್ಮಿಸಲಾಗುತ್ತದೆ. ರಾಜಕಾಲುವೆಗಳನ್ನು ಮುಚ್ಚಿ ಬಡಾವಣೆಗಳನ್ನು ನಿರ್ಮಿಸುತ್ತಾರೆ. ಇದೇ ಬಡಾವಣೆ ಮಳೆ ನೀರಿನಲ್ಲಿ ಮುಳುಗಿದ ನಂತರ ರಾಜ ಕಾಲುವೆ ತೆರವಿಗೆ ಆದೇಶ ಹೊರಡಿಸುತ್ತಾರೆ. ಎಕರೆಗಟ್ಟಲೆ ವಿಸ್ತಾರದ ಕೆರೆಗಳನ್ನು ಮುಚ್ಚಿ ಆಕಾಶದೆತ್ತರದ

ರಾಜ್ಯದಲ್ಲಿ ವಾರ್ಷಿಕ ಅತಿ ಹೆಚ್ಚು ಮಳೆ ಬೀಳುವ ಜಿಲ್ಲೆಗಳನ್ನು ಪಟ್ಟಿ ಮಾಡಿದರೆ ಬೆಂಗಳೂರಿಗೆ ಎಂಟನೇ ಸ್ಥಾನ. ಕರ್ನಾಟಕದ ಊಟಿ ಎಂದು ಕರೆಸಿಕೊಳ್ಳುವ ಹಾಸನ ಮತ್ತು ಬೆಂಗಳೂರಿನಲ್ಲಿ ಹೆಚ್ಚು ಕಡಿಮೆ ಒಂದೇ ಪ್ರಮಾಣದಲ್ಲಿ ಮಳೆ ಸುರಿಯುತ್ತದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ಹಾಸನಕ್ಕಿಂತಲೂ ಬೆಂಗಳೂರಿನಲ್ಲಿ ಹೆಚ್ಚು ಮಳೆಯಾಗಿದೆ. ಕಳೆದ 10 ವರ್ಷಗಳ ಮಳೆ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡರೆ ಪ್ರಸಕ್ತ ವರ್ಷ ಸೇರಿದಂತೆ ಏಳು ವರ್ಷಗಳಲ್ಲಿ ಸರಾಸರಿ ಸಾವಿರ ಮಿಲಿ ಮೀಟರ್‌ಗಿಂತ ಹೆಚ್ಚು ಮಳೆಯಾಗಿದೆ. 2022ರಲ್ಲಿ 1957 ಮಿಲಿ ಮೀಟರ್ ಮಳೆಯಾಗಿರುವುದು ರಾಜಧಾನಿಯ ಪಾಲಿಗೆ ಶತಮಾನದ ದಾಖಲೆ. ಇದು ಶಿವಮೊಗ್ಗ ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ ಪ್ರಮಾಣ (1813)ಕ್ಕಿಂತ ಹೆಚ್ಚು. ಆದರೆ ಹಾಸನ ಜಿಲ್ಲೆಯನ್ನು ಮಲೆನಾಡಿನ ಸಾಲಿಗೆ ಸೇರಿಸುವ ನಾವು ಈ ವಿಚಾರದಲ್ಲಿ ಬೆಂಗಳೂರನ್ನು ಅಲ್ಪೀಕರಣ ಮಾಡುತ್ತೇವೆ. ಮಲೆನಾಡಿನ ಮಳೆ ವೈಭವವನ್ನು ನಾನಾ ರೀತಿಯಲ್ಲಿ ಕೊಂಡಾಡಿದ ನಮ್ಮ ಕವಿಗಳು ಬೆಂಗಳೂರಿನ ಮಳೆಯನ್ನು 'ರಾಗ' ರೂಪದಲ್ಲಿಯೂ ಬಣ್ಣಿಸಿಲ್ಲ!

ಬೆಂಗಳೂರು ಮಳೆನಾಡು ಎಂದಾಕ್ಷಣ ಆಕಾಶವೇನೂ ಕಳಚಿ ಬೀಳುವುದಿಲ್ಲ. ಆದರೆ ಮಳೆ ಬಂದಾಕ್ಷಣ ಈ ನಗರದ ಮೂಲಭೂತ ಸೌಕರ್ಯಗಳ ಕೊರತೆಯನ್ನು ಪಟ್ಟಿ ಮಾಡುವವರಿಗೆ ಮತ್ತು ಇನ್ನಷ್ಟು ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಅಧ್ಯಯನ ಮಾಡಲು ಹೊರಟವರಿಗೆ ಇದು ಮೂಲಾಂಶ ಆಗಬೇಕು. ನಗರ ಪ್ರದೇಶ ವಿನ್ಯಾಸದವರು ಮನದಟ್ಟು ಮಾಡಿ ಕೊಡಬೇಕಾಗಿದೆ. ಬೆಂಗಳೂರಿನ ಭವಿಷ್ಯದ ಯಾವುದೇ ಯೋಜನೆ ಕೂಡ, ವಾರ್ಷಿಕ 2000 ಮಿ.ಮೀಟರ್‌ನಷ್ಟು ಮಳೆ ಸಾಧ್ಯತೆಯನ್ನು ಗಣನೆಗೆ ತೆಗೆದುಕೊಂಡೇ ಸಿದ್ಧವಾಗಬೇಕಿದೆ. ಇಲ್ಲವಾದರೆ ಕಟ್ಟುವ, ಮುರಿಯುವ ಪ್ರಹಸನಗಳು, ಬ್ರ್ಯಾಂಡ್ ಹೆಸರಿನಲ್ಲಿ ಬೆಂಗಳೂರನ್ನು ಮರು ನಿರ್ಮಿಸುವ ಅವಿವೇಕದ ನಿರ್ಧಾರಗಳು ಮುಂದುವರಿಯಲಿವೆ.

ಏರುಪೇರಾದ ಮಳೆ ಚಿತ್ರಣ

ಬೆಂಗಳೂರಿನಲ್ಲಿ ಕೆರೆ, ಕಾಲುವೆಗಳನ್ನು ಮುಚ್ಚಿ ಕಟ್ಟಿದ ಕಟ್ಟಡಗಳನ್ನು ಕೋರ್ಟ್ ಸ್ಟೇ ತಂದು ಉಳಿಸಿಕೊಳ್ಳಬಹುದು. ಆದರೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಮಳೆಯನ್ನು ಗಮನಿಸಿದರೆ ಮುಂದಿನ ದಿನಗಳಲ್ಲಿ ಪ್ರಕೃತಿಯೇ ಎಲ್ಲ ಅಪಸವ್ಯಗಳಿಗೆ ಉತ್ತರ ಕಂಡುಕೊಳ್ಳುವ ದಾರಿಯಲ್ಲಿದೆ. ಹವಾಮಾನ ವೈಪರೀತ್ಯ ಇಂದು ಜಾಗತಿಕ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಬೆಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ಈ ಬಗ್ಗೆ ಗಂಭೀರವಾದ ಚರ್ಚೆ, ಸಂಶೋಧನೆ ಅಗತ್ಯವಿದೆ. ಕಳೆದ ಐದು ವರ್ಷಗಳಲ್ಲಿ ನಗರದಲ್ಲಿ ಮಳೆ ಪ್ರಮಾಣ ಶೇ.89ರಷ್ಟು ಏರಿಕೆಯಾಗಿದೆ. ಶತಮಾನದ ಹಿಂದೆ (1900) ವಾರ್ಷಿಕ 900 ಮಿ.ಮೀ. ಮಳೆಯಾಗುತ್ತಿದ್ದ ನಗರದಲ್ಲಿ ಕಳೆದ 10 ವರ್ಷಗಳಲ್ಲಿ ಸರಾಸರಿ 1200 ಮಿ.ಮೀಟರ್ ಮಳೆಯಾಗಿದೆ. 2010ರ ಬಳಿಕ ವಾರ್ಷಿಕ ಮಳೆ ಪ್ರಮಾಣ ಏರುಗತಿಯಲ್ಲಿಯೇ ಇದೆ. ಅದರಲ್ಲೂ 2022ರಲ್ಲಿ 1957.7 ಮಿಲಿಮೀಟರ್ ಮಳೆಯಾಗಿರುವುದು ಸಾರ್ವಕಾಲಿಕ ದಾಖಲೆ. ಕಳೆದ ವರ್ಷ ರಾಜ್ಯಾದ್ಯಂತ ಮಳೆ ಕೊರತೆ ಇದ್ದರೂ, ಬೆಂಗಳೂರಿನಲ್ಲಿ ವಾಡಿಕೆಗಿಂತ ಹೆಚ್ಚು (1020 ಮಿ.ಮೀ) ಮಳೆಯಾಗಿತ್ತು. ಕಳೆದ 15 ವರ್ಷಗಳಲ್ಲಿ ಬಿದ್ದ ಮಳೆ ಗಮನಿಸಿದರೆ ಅಕ್ಟೋಬರ್ ಮತ್ತು ನವೆಂಬರ್ ಅವಧಿಯಲ್ಲಿ ಮಳೆ ಪ್ರಮಾಣ ಏರಿಕೆಯತ್ತ ಸಾಗಿದೆ. 2024ರಲ್ಲಿ ಇದುವರೆಗೆ ಸುರಿದ ಮಳೆಯನ್ನು ಪರಿಗಣಿಸಿದರೆ ಈ ವರ್ಷ ಮತ್ತೊಂದು ದಾಖಲೆ ಬರೆಯುವ ಅವಕಾಶವೂ ಇದೆ.

ಮಳೆಯ ಪ್ರಮಾಣ ಮಾತ್ರವಲ್ಲ ಮಳೆ ಬೀಳುವ ರೀತಿಯಲ್ಲೂ ಬದಲಾವಣೆ ಆಗಿದೆ. ಹಿಂದೆ ನಿಧಾನವಾಗಿ ಗಂಟೆಗಟ್ಟಲೆ ಸುರಿಯುತ್ತಿದ್ದ ಹದ ಮಳೆ ಅಪರೂಪವಾಗುತ್ತಿದೆ. ಕೊಡದಿಂದ ನೀರು ಸುರಿದಂತೆ ಭರ್ರನೇ ಸುರಿಯುವ ಮಳೆ ಮೇಘಸ್ಫೋಟದ ಭೀತಿ ಹುಟ್ಟಿಸುತ್ತಿದೆ. ಕೇವಲ ಒಂದೆರಡು ಕಿ.ಮೀ. ಅಂತರದಲ್ಲೂ ಮಳೆ ಪ್ರಮಾಣದಲ್ಲಿ ವ್ಯಾಪಕ ವ್ಯತ್ಯಾಸಗಳು ಕಾಣುತ್ತಿವೆ. ರಾಜರಾಜೇಶ್ವರಿ ನಗರದಲ್ಲಿ ಮಳೆಯಾಗುತ್ತಿದ್ದರೆ ಪಕ್ಕದ ಮೈಸೂರು ರಸ್ತೆಯಲ್ಲಿ ಬೆವರು ಒರೆಸಿಕೊಳ್ಳುವ ವಾತಾವರಣ ಆಗಾಗ ಕಂಡುಬರುತ್ತದೆ. ಈ ವ್ಯತ್ಯಾಸಗಳು ಸಾರ್ವತ್ರಿಕವಾಗಿರಬಹುದು. ಆದರೆ ಬದಲಾದ ವರುಣ ವರಸೆಯ ಬಗ್ಗೆ ಅಧ್ಯಯನ ಆಗಬೇಕಾಗಿದೆ.

ಹವಾಮಾನ ವೈಪರೀತ್ಯ ಮತ್ತು ಜಾಗತಿಕ ತಾಪಮಾನ ಹೆಚ್ಚಳ ಈ ಪಲ್ಲಟಕ್ಕೆ ಕಾರಣವಾಗಿರಬಹುದೆಂದು ವಿಜ್ಞಾನಿಗಳ ಅಭಿಪ್ರಾಯ. ಅದರಲ್ಲೂ ಕಳೆದ ನಾಲ್ಕು ವರ್ಷಗಳ ಬದಲಾವಣೆಯ ಹಿಂದೆ ಪೆಸಿಫಿಕ್ ಸಾಗರದಲ್ಲಿನ ಎಲ್‌ನಿನೋ ಪ್ರಭಾವವೂ ಇರಬಹುದೆಂದು ತರ್ಕಿಸಲಾಗುತ್ತಿದೆ. ಹಸಿರನ್ನು ಕಳೆದುಕೊಂಡು ಕಾಂಕ್ರೀಟೀಕರಣಗೊಂಡ ಬೆಂಗಳೂರಿನ ಮಳೆಯ ಮೇಲೆ ಏನೇನು ಪರಿಣಾಮವಾಗಿದೆ ಎಂದು ಆಳವಾದ ಅಧ್ಯಯನದ ಬಳಿಕವಷ್ಟೇ ತಿಳಿಯಲು ಸಾಧ್ಯ. ಆದರೆ ಬೆಂಗಳೂರಿನಲ್ಲಿ ಕುಳಿತು ಪಶ್ಚಿಮ ಘಟ್ಟದ ಬಗ್ಗೆ, ಗಾಡ್ಗೀಳ್ ವರದಿಯ ಬಗ್ಗೆ ಮಾತನಾಡುವ ನಾವು, ಮಹಾನಗರ ಬೆಂಗಳೂರಿನ ವಿಪ್ಲವಗಳ ಬಗ್ಗೆ ಚರ್ಚಿಸುವುದಿಲ್ಲ. ಚರ್ಚಿಸಿದರೂ ಅದು ಬ್ರ್ಯಾಂಡ್ ಬೆಂಗಳೂರಿಗೆ ತಳುಕು ಹಾಕಿಕೊಳ್ಳುತ್ತದೆ.

ನೆಲದ ಗುಣವನ್ನು ಗೌರವಿಸೋಣ

ಸದ್ಯಕ್ಕೆ, ಬೆಂಗಳೂರಿನ ನೆಲದ ಗುಣವನ್ನು ಅರಿಯದೆ ಅಷ್ಟಿಷ್ಟು ಮಳೆಯನ್ನೂ 'ರಕ್ಕಸ ಮಳೆ'ಯೆಂದು ಹೀಗಳೆಯುವುದನ್ನು ಬಿಡಬೇಕಾಗಿದೆ. ಇಲ್ಲಿನ ಮಳೆಯ ಗುಣಧರ್ಮಗಳನ್ನು ಅರಿತು ಅದಕ್ಕೆ ತಕ್ಕಂತೆ ನಮ್ಮ ಯೋಚನೆ, ಯೋಜನೆಗಳನ್ನು ರೂಪಿಸಿಕೊಳ್ಳಬೇಕಾಗಿದೆ. ಎಲ್ಲದ್ದಕ್ಕೂ ಸರಕಾರವನ್ನು ದೂರುವ ಬದಲು, ನಗರದ ನಲುಗಾಟದಲ್ಲಿ ನಮ್ಮ ಪಾಲು ಎಷ್ಟಿದೆಯೆಂದು ಸ್ವಯಂ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ರಾಜಧಾನಿಯಲ್ಲಿ ಹೇಗಾದರೂ ಮನೆ ಕಟ್ಟಿಕೊಳ್ಳಬೇಕೆಂಬ ಧಾವಂತದಲ್ಲಿ ರಾಜಕಾಲುವೆ, ಕೆರೆಗಳನ್ನು ಮುಚ್ಚಿ ನಿರ್ಮಿಸಿದ ಬಡಾವಣೆಯಲ್ಲಿ ಮನೆ ಕಟ್ಟುವ, ಅಪಾರ್ಟ್‌ಮೆಂಟ್ ಕೊಳ್ಳುವ ಸಾಹಸಕ್ಕೆ ಕೈ ಹಾಕಬಾರದು. ಸೈಟ್, ಮನೆ ಏನೇ ಇರಲಿ ಅದರ ಒಂದೆರಡು ಕಿ.ಮೀ. ಸುತ್ತಳತೆಯಲ್ಲಿ ಸಾಗಿ ಬಂದರೆ ಅಲ್ಲಿನ ಭೌಗೋಳಿಕ ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೇನಲ್ಲ.

ಅಧಿಕಾರಿಗಳೂ ಅಕ್ರಮ-ಸಕ್ರಮದ ಆಟ ಬಿಟ್ಟು ಮಳೆ ನೀರಿನ ಹರಿವಿನ ಬಗ್ಗೆ ಮೊದಲು ಯೋಚಿಸಿ, ನಂತರ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸಬೇಕಾಗಿದೆ. ರಸ್ತೆ ನಿರ್ಮಾಣ, ಚರಂಡಿ ಮತ್ತು ಪಾದಚಾರಿ ಮಾರ್ಗ ಏಕಕಾಲಕ್ಕೆ ನಿರ್ಮಿಸುವ ವಿವೇಕ ಮೆರೆಯಬೇಕು. ರಾಷ್ಟ್ರೀಯ ವಿಪತ್ತು ನಿಧಿಯ ಹಣವನ್ನು ಬಳಸಿಕೊಂಡು ಪ್ರಮುಖ ಚರಂಡಿಗಳನ್ನು ಮರುವಿನ್ಯಾಸಗೊಳಿಸುವ ಮೂಲಕ ಭವಿಷ್ಯದಲ್ಲಿ ಪ್ರವಾಹವನ್ನು ತಗ್ಗಿಸುವ ಪ್ರಯತ್ನ ಮಾಡುವುದಾಗಿ ಬಿಬಿಎಂಪಿ ಮುಖ್ಯ ಆಯುಕ್ತರು ತಿಳಿಸಿದ್ದಾರೆ. ಈ ಚರಂಡಿಗಳಲ್ಲಿ ಹಣ ಪೋಲಾಗದೆ ಮಳೆ ನೀರಷ್ಟೇ ಹರಿಯಬೇಕಾಗಿದೆ. ಸಾಧ್ಯವಾದರೆ ಈ ನೀರು ನೆಲದಾಳ ಸೇರಬೇಕು. ಇಲ್ಲವೇ ಇಲ್ಲಿನ ಕೆರೆಕಟ್ಟೆಗಳನ್ನು ತುಂಬಬೇಕು. ಜೀವಜಲದ ಮೂಲ ಸೆಲೆಯಾದ ಮಳೆಗೆ, ಮಳೆನೀರಿಗೆ ಗೌರವ ಕೊಡದೇ ಹೋದರೆ ಅದು ತಾನಾಗಿಯೇ ಗೌರವ ಪಡೆದುಕೊಳ್ಳುತ್ತದೆ. ಕೊಡಗು, ವಯನಾಡಿನಲ್ಲಿ ತನ್ನದೇ ದಾರಿ ಹಿಡಿದ ಮಳೆ ಇಲ್ಲೂ ಆ ಹಾದಿಯಲ್ಲಿ ಸಾಗುವಂತಾಗಬಾರದು. ಬೆಂಗಳೂರು ಬೆಂಗಾಡಲ್ಲ, ಮಳೆನಾಡು ಎನ್ನುವ ವಿವೇಕ ನಮಗಿರಲಿ.

ವಿಶ್ಲೇಷಣೆ

ಡಾ.ಸುಧಾಕರ ಹೊಸಳ್ಳಿ

ಸಂವಿಧಾನದ ಸೋಲಿಗೆ ಷರಿಯತ್ ಹರಸಾಹಸ!

ಅಕ್ಟೋಬರ್ 8ರಂದು ಜಮ್ಮು-ಕಾಶ್ಮೀರ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟವಾಗುತ್ತಿದ್ದಂತೆ, ಚುನಾವಣಾಪೂರ್ವ ಸಮೀಕ್ಷೆಗಳೆಲ್ಲ ಅರ್ಥ ಕಳೆದುಕೊಂಡು ವಾಸ್ತವವನ್ನು ಒಪ್ಪಿಕೊಳ್ಳಬೇಕಾಗಿ ಬಂತು. 370ನೇ ವಿಧಿ ರದ್ದತಿ ನಂತರದ ಈ ಚುನಾವಣೆ ರಕ್ತಪಾತಕ್ಕೆ ಸಾಕ್ಷಿಯಾಗಬಹುದೆಂಬ ಲೆಕ್ಕಾಚಾರಗಳೆಲ್ಲ ಬುಡಮೇಲಾಗಿ ಬಹುಪಾಲು ಶಾಂತಿಯುತವಾಗಿ ಮತದಾನ ನಡೆಯಿತು. ಜಮ್ಮು-ಕಾಶ್ಮೀರ ನ್ಯಾಷನಲ್ ಕಾನ್ಫರೆನ್ಸ್ (ಜೆಕೆಎನ್‌ಸಿ) ಪಕ್ಷದ ನೇತೃತ್ವದ ಸರಕಾರದ ರಚನೆಯೂ ಆಯಿತು.

ಹಿಂದೂಗಳೇ ಹೆಚ್ಚಿರುವ ಜಮ್ಮುವಿನಲ್ಲಿ ಬಿಜೆಪಿ, ಮುಸ್ಲಿಮರೇ ಹೆಚ್ಚಿರುವ ಕಾಶ್ಮೀರದಲ್ಲಿ ಜೆಕೆಎನ್‌ಸಿ-ಕಾಂಗ್ರೆಸ್ ಮೈತ್ರಿಕೂಟ ಸಹಜವಾಗಿಯೇ ಗೆದ್ದಿವೆ. ''370ನೇ ವಿಧಿಯ ರದ್ದತಿಯಿಂದಾಗಿ ಕಣಿವೆ ರಾಜ್ಯದಲ್ಲಿ ಅಭಿವೃದ್ಧಿಯಾಗಿದೆ, ಶಾಂತಿ ಸ್ಥಾಪನೆಯಾಗಿದೆ, ಭಯೋತ್ಪಾದಕರ ಗುಂಡುಗಳ ಸದ್ದಡಗಿದೆ, ಸಂವಿಧಾನ ತನ್ನ ಮಹತ್ವವನ್ನು ಸಾರಿದೆ. ಹಾಗಾಗಿ ನಾವು ಜಮ್ಮು ಮಾತ್ರವಲ್ಲದೆ ಕಾಶ್ಮೀರದಲ್ಲೂ ಹೆಚ್ಚು ಸ್ಥಾನವನ್ನು ಗೆಲ್ಲುತ್ತೇವೆ'' ಎಂಬ ಭ್ರಮೆಯಲ್ಲಿದ್ದ ಬಿಜೆಪಿಗೆ ಈಗ ಎಚ್ಚರವಾದಂತಿದೆ. ಅದೇ ರೀತಿ, ''ಮುಸ್ಲಿಮರ ವೋಟುಗಳ ಜತೆಗೆ, ಸಾಮಾಜಿಕ ನ್ಯಾಯದ ಜಪಮಾಡುವ ಕಾಂಗ್ರೆಸ್‌ನೊಂದಿಗೆ ಮೈತ್ರಿ ಇರುವುದರಿಂದ ಜಮ್ಮುವಿನಲ್ಲೂ ಹೆಚ್ಚು ಸ್ಥಾನ ಗಳಿಸುತ್ತೇವೆ'' ಎಂದು ಬೊಬ್ಬೆಹಾಕಿದ್ದ ಜೆಕೆಎನ್‌ಸಿ ತನ್ನ ನಂಬುಗೆಗೆ ಬೆನ್ನು ತೋರಿಸುವಂತಾಗಿದೆ. ಹಾಗಾದರೆ, ಪ್ರಜ್ಞಾವಂತ ಪ್ರಜಾವಲಯಕ್ಕೆ ಈ ಚುನಾವಣೆ ಕಟ್ಟಿಕೊಟ್ಟ ಸಂದೇಶವಾದರೂ ಏನು? 370ನೇ ವಿಧಿಯ ರದ್ದತಿಯು ಮುಸ್ಲಿಮರಲ್ಲಿ ಸಂವಿಧಾನದ ಮೇಲೆ ಪ್ರೀತಿಯನ್ನು ಹುಟ್ಟುಹಾಕಿದೆಯೇ? 'ಜೈ ಭೀಮ್-ಜೈ ಮೀಮ್' ಘೋಷಣೆಯ ನೈಜತೆಯೇನು? ಜಮ್ಮು-ಕಾಶ್ಮೀರದ ಚುನಾವಣಾ ಫಲಿತಾಂಶ ಪ್ರಜಾಪ್ರಭುತ್ವದ ಗೆಲುವೇ? ಈ ಚುನಾವಣೆಯು ಸಾಮಾಜಿಕ ನ್ಯಾಯವನ್ನು ಯಾವ ಪರಿಧಿಯಲ್ಲಿಟ್ಟಿದೆ? ಮುಂತಾದ ವಿಷಯಗಳ ಕುರಿತು ಈಗ ಅವಲೋಕಿಸಬೇಕಿದೆ.

ಕಾಶ್ಮೀರ ಭಾಗದಲ್ಲಿದ್ದ ಒಟ್ಟು 47 ಮತಕ್ಷೇತ್ರಗಳ ಪೈಕಿ 41ರಲ್ಲಿ 'ಇಂಡಿಯ' ಮೈತ್ರಿಕೂಟ ಜಯಗಳಿಸಿದರೆ, 3ರಲ್ಲಿ ಜೆಕೆಪಿಡಿಪಿ ಹಾಗೂ 3ರಲ್ಲಿ ಪಕ್ಷೇತರರ ಗೆಲುವಾಗಿದೆ. ಇಲ್ಲಿ ಬಿಜೆಪಿಯ ಸಾಧನೆ ಶೂನ್ಯ. ಅಂದ ಮೇಲೆ ಇಲ್ಲಿ ಸಂವಿಧಾನ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯ ಗೆದ್ದಿದ್ದು ಹೇಗೆ? ಶೇ.97ರಷ್ಟು ಮುಸ್ಲಿಮರಿರುವ ಕಾಶ್ಮೀರದಲ್ಲಿ ಮತ್ತೆ ಗೆದ್ದಿರುವುದು ಇಸ್ಲಾಂ ಮತ, ಷರಿಯತ್ ಕಾನೂನು. ಜಗತ್ತೇ ಹೌಹಾರಿದ ಭಯೋತ್ಪಾದಕ ದಾಳಿಯನ್ನು ಸ್ವತಃ ಅನುಭವಿಸಿದ ಪುಲ್ವಾಮದ 4 ಜಿಲ್ಲೆಗಳಲ್ಲಿ ಎರಡು ಕ್ಷೇತ್ರವನ್ನು ಜೆಕೆಎನ್‌ಸಿ ಮತ್ತು ಮಿಕ್ಕೆರಡನ್ನು ಇನ್ನೊಂದು ಮುಸ್ಲಿಂ ಬೆಂಬಲಿತ ಪಕ್ಷ ಜೆಕೆಪಿಡಿಪಿ ಗೆದ್ದುಕೊಂಡಿವೆ. ಹಾಗಾಗಿ ಇಲ್ಲಿ ಭಯೋತ್ಪಾದಕ ನಡಾವಳಿ ಮತ್ತೊಮ್ಮೆ ಸ್ವೀಕೃತವಾಗಿದೆ, ಸಂವಿಧಾನ ಸೋತಿದೆ. ಸಂವಿಧಾನಕ್ಕಿಂತ ಷರಿಯತ್ ಕಾನೂನೇ ಅಂತಿಮ ಎಂಬುದನ್ನು ಮುಸ್ಲಿಮರು ದೃಢಪಡಿಸಿರುವ ಮತ್ತೊಂದು ಉದಾಹರಣೆಯನ್ನು ನೋಡೋಣ. ಈ ಹಿಂದೆ ರಾಜ್ಯದ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿದ್ದ ಜೆಕೆಪಿಡಿಪಿ ಪಕ್ಷವು ಬಿಜೆಪಿಯ ಜತೆಗೆ ಅಧಿಕಾರವನ್ನು ಹಂಚಿಕೊಂಡಿತ್ತು ಎಂಬ ಏಕೈಕ ಕಾರಣಕ್ಕಾಗಿ ಮೂರು ಸ್ಥಾನಗಳಲ್ಲಿ ಮಾತ್ರ ಗೆಲುವನ್ನು ಸಾಧಿಸಲು ಅದಕ್ಕೆ ಸಾಧ್ಯವಾಗಿದೆ. ಇದು ಸಂವಿಧಾನವನ್ನು ಬೆಂಬಲಿಸುವ ಪಕ್ಷದ ಜತೆಗೆ ಗುರುತಿಸಿಕೊಂಡಿದ್ದಕ್ಕಾಗಿ ಷರಿಯತ್‌ನಿಂದ ಜೆಕೆಪಿಡಿಪಿಗೆ ಒದಗಿದ ಒತ್ತಡದ ದ್ಯೋತಕ.

ಅಟಲ್ ಬಿಹಾರಿ ವಾಜಪೇಯಿ ಅವರನ್ನೊಳಗೊಂಡಂತೆ ಕೆಲವು ರಾಜಕೀಯ ಮುತ್ಸದ್ದಿಗಳ ವಿಶೇಷ ಪ್ರಯತ್ನದಿಂದಾಗಿ ಕಾಶ್ಮೀರದಲ್ಲಿ 1996ರಿಂದ ಮೀಸಲಾತಿಯ ಹುಟ್ಟು ಸಾಧ್ಯವಾಗಿತ್ತು. ಅಂಬೇಡ್ಕರರ ಆಶಯಕ್ಕೆ ವಿರುದ್ಧವಾಗಿದ್ದ 370ನೇ ವಿಧಿಯನ್ನು 2019ರಲ್ಲಿ ರದ್ದು ಮಾಡಿದ ನಂತರ, ಕೇಂದ್ರ ಸರಕಾರವು ಸಾಮಾಜಿಕ ನ್ಯಾಯದ ಮರುಸ್ಥಾಪನೆಗಾಗಿ ಜಮ್ಮು-ಕಾಶ್ಮೀರದಲ್ಲಿ 9 ಎಸ್‌ಟಿ ಮೀಸಲು ಕ್ಷೇತ್ರಗಳನ್ನು ಸಾಂವಿಧಾನಿಕವಾಗಿ ನಿಗದಿಮಾಡಿತ್ತು. ಕಾಶ್ಮೀರದಲ್ಲೂ ಸಾಮಾಜಿಕ ನ್ಯಾಯದ ಪ್ರಭೆ ಪಸರಿಸುವುದಕ್ಕೆ ಈ ನಡೆ ಮುನ್ನುಡಿಯಾಗಲಿದೆ ಎಂದೇ ವ್ಯಾಖ್ಯಾನಿಸಲಾಗಿತ್ತು. ಆದರೆ, ಕಾಶ್ಮೀರ ಭಾಗದಲ್ಲೇ ಮೀಸಲಾಗಿದ್ದ 9 ಕ್ಷೇತ್ರಗಳಲ್ಲಿ ಬಿಜೆಪಿಯದ್ದು ಮತ್ತೆ 'ಶೂನ್ಯಸಾಧನೆ' ಯಾಗಿದೆ. ಅಲ್ಲಿನ 'ಪ್ರಕೃತಿ-ಆರಾಧಕ' ಬುಡಕಟ್ಟು ಜನಗಳಿಗೆ 7 ದಶಕಗಳಿಂದಲೂ ರಾಜಕೀಯ ಪ್ರಾತಿನಿಧ್ಯವೇ ಇರಲಿಲ್ಲ. ಇಂಥ ಜನರೂ ಅಧಿಕಾರದ ಭಾಗವಾಗಬೇಕೆಂದು ಕೇಂದ್ರ ಸರಕಾರವು ಪ್ರಯತ್ನ ಪಟ್ಟ ಮೇಲೂ, ಯಾರು ಇಲ್ಲಿಯವರೆಗೆ ತಮ್ಮನ್ನು ಅಧಿಕಾರದಿಂದ ದೂರವಿಟ್ಟಿದ್ದರೋ ಅವರನ್ನೇ ಆ ಜನರು ಗೆಲ್ಲಿಸಿದ್ದಾರೆ. ತನ್ಮೂಲಕ ಇಲ್ಲಿಯೂ ಸಂವಿಧಾನ ಮತ್ತು ಮೀಸಲಾತಿ ಎರಡಕ್ಕೂ ಸೋಲಾಗಿದೆ.



ಅದೇ, ಹಿಂದೂ ಬಹುಸಂಖ್ಯಾತರಿರುವ ಜಮ್ಮುವಿನಲ್ಲಿ 43 ಸ್ಥಾನಗಳ ಪೈಕಿ 28ನ್ನು ಬಿಜೆಪಿ ಗೆದ್ದು ಮುನ್ನಡೆ ಕಾಯ್ದುಕೊಂಡಿದ್ದರೆ, 8 ಸ್ಥಾನಗಳಲ್ಲಿ ಜೆಕೆಎನ್‌ಸಿ ಮತ್ತು 6 ಸ್ಥಾನಗಳಲ್ಲಿ ಪಕ್ಷೇತರ ಮುಸ್ಲಿಂ ಅಭ್ಯರ್ಥಿಗಳು ಗೆದ್ದಿದ್ದಾರೆ. ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಹಿಂದುಗಳ/ಹಿಂದುತ್ವದ ಬಹುಮತವಿರುವಲ್ಲಿ 'ಬಹುತ್ವ'ಕ್ಕೆ ಅವಕಾಶ ವಿರುವುದು ಅರಿವಾಗುತ್ತದೆ. ಜಮ್ಮು-ಕಾಶ್ಮೀರದ ಚುನಾವಣಾ ಫಲಿತಾಂಶದ ಅಂಕಿ-ಅಂಶಗಳು ಇದನ್ನು ದೃಢಪಡಿಸುತ್ತವೆ. ದೇಶದ ಬಹುಪಾಲು ಚುನಾವಣಾ ಇತಿಹಾಸವೂ ಇದನ್ನೇ ಸಮರ್ಥಿಸುತ್ತದೆ. ಹಿಂದೂಗಳೇ ಹೆಚ್ಚಿರುವ ಭಾರತದಲ್ಲಿ ಮುಸ್ಲಿಮರು ರಾಷ್ಟ್ರಪತಿಗಳಾಗಿದ್ದಾರೆ, ಮುಖ್ಯಮಂತ್ರಿಗಳಾಗಿದ್ದಾರೆ, ಅಷ್ಟೇಕೆ, ಕೇಂದ್ರ ಶಿಕ್ಷಣ ಸಚಿವರೂ, ಉಪರಾಷ್ಟ್ರಪತಿಗಳೂ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರೂ ಆಗಿದ್ದಾರೆ. ಇದು ಕೇವಲ ಬಹುತ್ವದ ಸೂಚಕವಲ್ಲ. 'ಹಿಂದುತ್ವ' ಎಂಬುದರಲ್ಲಿ ಎಲ್ಲರನ್ನೂ ಮತ್ತು ಎಲ್ಲವನ್ನೂ ಒಳಗೊಳ್ಳುವ ಮೂಲಗುಣ ಅಂತರ್ಗತವಾಗಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆ ಅಡಿಯಲ್ಲಿ ಎಸ್‌ಟಿಗಳಿಗೆ ಮೀಸಲಾಗಿದ್ದ ಕ್ಷೇತ್ರಗಳಲ್ಲಿ ಆಯ್ಕೆಯಾದ 9 ಅಭ್ಯರ್ಥಿಗಳೂ ಮುಸ್ಲಿಮರೇ; 70 ವರ್ಷಗಳವರೆಗೆ ತಮ್ಮನ್ನು ಅಸ್ಪೃಶ್ಯರಂತೆ ಇಟ್ಟಿದ್ದ ಷರಿಯತ್ ಪಾಲಕರಾದ ಷಿಯಾ ಸುನ್ನಿ ಬೆಂಬಲಿತ ಪಕ್ಷಕ್ಕೆ ಇಲ್ಲಿನ ಜನರು ಬೆಂಬಲ ನೀಡಿದ್ದಾರೆಯೇ ಹೊರತು, ಸಂವಿಧಾನಕ್ಕೂ ಅಲ್ಲ, ಪ್ರಜಾಪ್ರಭುತ್ವಕ್ಕೂ ಅಲ್ಲ ಎಂಬುದು ನಿಚ್ಚಳ ಸತ್ಯ. ಅಂದರೆ, ನಗರ ಪ್ರದೇಶದಲ್ಲಿರಲಿ, ಹಳ್ಳಿಗಳಲ್ಲಿರಲಿ, ಕಾಡಿನಲ್ಲಿರಲಿ ಅಥವಾ ಬುಡಕಟ್ಟು ಪ್ರದೇಶಗಳಲ್ಲಿರಲಿ ಮುಸಲ್ಮಾನರು ಷರಿಯತ್ ಮೀರಿ ಸಂವಿಧಾನವನ್ನು ಒಪ್ಪುವುದಿಲ್ಲ ಎಂಬುದು ಸಾಬೀತಾದಂತಾಯಿತು. ಜಮ್ಮುವಿನಲ್ಲಿ ಎಸ್‌ಸಿ ಸಮುದಾಯಕ್ಕೆ ನಿಗದಿಯಾಗಿದ್ದ 7 ಸ್ಥಾನಗಳಲ್ಲಿ ಬಿಜೆಪಿ ಗೆದ್ದಿದೆ. ಇಲ್ಲಿ ಎಸ್‌ಸಿ ಮತದಾರರೆಲ್ಲರೂ ಧರ್ಮದ ಆಧಾರದ ಮೇಲೆ ಮತದಾನ ಮಾಡಿದ್ದಾರೆ ಎಂಬುದನ್ನು ಅಂಕಿ-ಅಂಶಗಳು ಸಾಬೀತು ಮಾಡುವುದಿಲ್ಲ; ಬದಲಾಗಿ ಇಸ್ಲಾಂನ 'ಕಾಫಿರ ಪದ್ಧತಿ' ಎಂಬ ಮನುಕುಲದ ವಿನಾಶಕಾರಿ ಆಯ್ಕೆಯೂ, ದಲಿತರು ಮುಸ್ಲಿಮರಲ್ಲದವರಿಗೆ ಮತದಾನ ಮಾಡುವಂತೆ ಪ್ರೇರೇಪಿಸಿದೆ (ಮುಸ್ಲಿಮರಲ್ಲದವರು ಬದುಕಲು ಅರ್ಹರೇ ಅಲ್ಲ ಎಂಬುದೇ 'ಕಾಫಿರ ಪದ್ಧತಿ').

ಚುನಾವಣೆ ಗೆದ್ದು ಮುಖ್ಯಮಂತ್ರಿ ಗಾದಿಗೆ ನಿಯೋಜಿತರಾದ ವ್ಯಕ್ತಿಯು, ಜಮ್ಮು-ಕಾಶ್ಮೀರ ಸಂವಿಧಾನದ ಹೆಸರಡಿಯಲ್ಲಿ ಪ್ರಮಾಣವಚನ ಸ್ವೀಕರಿಸುವುದು ತಪ್ಪಿ, ಭಾರತ ಸಂವಿಧಾನದ ಅಡಿಯಲ್ಲಿ ಪ್ರಮಾಣವಚನ ಸ್ವೀಕಾರ ಮಾಡುವಂತಾಗಿದ್ದು ಮಾತ್ರ ಸ್ವೀಕೃತ ನಡಾವಳಿ. ಸಂವಿಧಾನ ರಚನೆಯ ಪ್ರಾರಂಭದಲ್ಲೇ, ''ಅಸಮಾನತೆಯನ್ನು ಒಪ್ಪುವ, ಸಾಮಾಜಿಕ ನ್ಯಾಯವನ್ನು ಬಗ್ಗುಬಡಿಯುವ 370ನೇ ವಿಧಿಯನ್ನು ಸಂವಿಧಾನದ ಭಾಗವನ್ನಾಗಿ ಮಾಡಲಾರೆ'' ಎಂದು ರಾಷ್ಟ್ರೀಯವಾದಿ ಅಂಬೇಡ್ಕರ್ ಅವರು ಘಂಟಾಘೋಷವಾಗಿ ಹೇಳಿದ್ದೇಕೆ ಎಂಬುದರ ಹಿಂದಿನ ಸತ್ಯತೆ ಇಂದಿನ ಯುವಜನತೆಗೆ ಮನದಟ್ಟಾಗಬೇಕಿದೆ. ಸಂವಿಧಾನ, ಜಾತ್ಯತೀತತೆ ಕುರಿತು ಉದ್ದುದ್ದ ಬೋಧಿಸುವ ಪ್ರಗತಿಪರರು ಮತ್ತು ಸ್ವಘೋಷಿತ ಬುದ್ಧಿಜೀವಿಗಳು, ಸಂವಿಧಾನವನ್ನು ಸೋಲಿಸುವ ನಡೆಗೆ ಹೆಗಲು ಕೊಡುವುದನ್ನು ಜಮ್ಮು-ಕಾಶ್ಮೀರ ಚುನಾವಣೆಯ ಫಲಿತಾಂಶವಾದರೂ ನಿಲ್ಲಿಸುವಂತಾಗಲಿ ಎಂಬುದೇ ಸಹೃದಯಿಗಳ ಆಶಯ.

(ಲೇಖಕರು ಸಂವಿಧಾನ ತಜ್ಞರು)

ಭಾರತದ ಮುಂದಿರುವ ರಾಜತಾಂತ್ರಿಕ ಸವಾಲುಗಳು

ವಿಶ್ಲೇಷಣೆ

ಗಣೇಶ್‌ಭಟ್ ವಾರಾಣಸಿ
vveditoped@gmail.com

ಹತ್ತು ವರ್ಷಗಳ ಹಿಂದಿನವರೆಗೆ, ಪಾಕಿಸ್ತಾನದ ಭಯೋತ್ಪಾದನಾ ನೀತಿಗೆ ಎದುರಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಂಬಲವನ್ನು ಗಳಿಸುವುದೇ ಭಾರತದ ವಿದೇಶಾಂಗ ನೀತಿಯ ಬಹುದೊಡ್ಡ ಗುರಿಯಾಗಿತ್ತು. ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಸೇರಿದಂತೆ ಜಾಗತಿಕ ಮಟ್ಟದ ಅಧಿವೇಶನಗಳಲ್ಲಿ ಭಾರತದ ಪ್ರಧಾನಮಂತ್ರಿ ಮತ್ತು ವಿದೇಶಾಂಗ ಸಚಿವರ ಭಾಷಣಗಳು, ಪಾಕಿಸ್ತಾನದ ಭಯೋತ್ಪಾದನಾ ನೀತಿಯನ್ನು ಖಂಡಿಸುವುದಕ್ಕಷ್ಟೇ ಸೀಮಿತವಾಗಿದ್ದವು. ಆಗ ಭಾರತವು ಅಮೆರಿಕ ಅಥವಾ ಚೀನಾಗಳ ಹಿತಾಸಕ್ತಿಗಳಿಗೆ ಯಾವುದೇ ತೊಂದರೆಯನ್ನು ಉಂಟುಮಾಡುವ ಸ್ಥಿತಿಯಲ್ಲಿರದ ಕಾರಣ, ಪಾಕಿಸ್ತಾನದ ಹೊರತಾಗಿ ಯಾವ ದೇಶಗಳೂ ಭಾರತದ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳುವ ಪ್ರಮೇಯ ಇರಲಿಲ್ಲ. ಆದರೆ 2014ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರಕಾರವು ತನ್ನ ವಿದೇಶಾಂಗ ವ್ಯವಹಾರಗಳಲ್ಲಿ 'ಇಂಡಿಯಾ ಫಸ್ಟ್' ಎಂಬ ನೀತಿಯನ್ನು ಪಾಲಿಸತೊಡಗಿತು. ಯಾವುದೇ ವಿದೇಶಿ ಒತ್ತಡಗಳಿಗೆ ಮಣಿಯದೆ ತನ್ನ ಹಿತಾಸಕ್ತಿಗೆ ಅನುಗುಣವಾದ ನಿರ್ಣಯಗಳನ್ನಷ್ಟೇ ಭಾರತ ತಳೆಯತೊಡಗಿತು.

ಈ ಬೆಳವಣಿಗೆಯಿಂದಾಗಿ ಮೊದಲು ಗಾಬರಿಗೊಂಡಿದ್ದು ನೆರೆರಾಷ್ಟ್ರ ಚೀನಾ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಸದಸ್ಯನಾಗಿರುವ ಚೀನಾ ತನ್ನ 'ವೀಟೋ ಪವರ್' ಬಳಸಿ, ವಿಶ್ವಸಂಸ್ಥೆಯಲ್ಲಿ ಭಾರತವು ಮಂಡಿಸುವ ವಿಚಾರಗಳಿಗೆ ಹಿನ್ನಡೆಯಾಗುವಂತೆ ಮಾಡುತ್ತಿತ್ತು. ಪಾಕಿಸ್ತಾನದ ಉಗ್ರರನ್ನು 'ಜಾಗತಿಕ ಉಗ್ರರು' ಎಂದು ವಿಶ್ವಸಂಸ್ಥೆಯು ಘೋಷಿಸುವಂತೆ ಮಾಡಲು ಭಾರತವು ಮಾಡುತ್ತಿದ್ದ ಎಲ್ಲಾ ಪ್ರಯತ್ನಗಳಿಗೆ ಚೀನಾ ಅಡ್ಡಗಾಲು ಹಾಕುತ್ತಿತ್ತು. ಮ್ಯಾನ್ಮಾರ್‌ನ ಸ್ವಿಟ್ಲೆ, ಶ್ರೀಲಂಕಾದ ಹಂಬನ್‌ಟೋಟ ಬಂದರು, ಪಾಕಿಸ್ತಾನದ ಗ್ವಾದಾರ್ ಬಂದರು, ಆಫ್ರಿಕಾದ ಜಿಬೌಟಿ ಹೀಗೆ ಭಾರತವನ್ನು ಸುತ್ತುವರಿದಿರುವ ಆಯಕಟ್ಟಿನ ಸ್ಥಳಗಳಲ್ಲಿ 'ಸ್ಟ್ರಿಂಗ್ ಆಫ್ ಪರ್ಲ್' ಹೆಸರಿನ ಸೇನಾ ನೆಲೆಗಳನ್ನು ಸ್ಥಾಪಿಸಿ ಭಾರತದ ಮೇಲೆ ದಿಗ್ಬಂಧನ ಹೇರಲು ಚೀನಾ ಯತ್ನಿಸಿತು. ಮಾತ್ರವಲ್ಲದೆ 'ಬೆಲ್ಟ್ ಆ್ಯಂಡ್ ರೋಡ್ ಇನಿಷಿಯೆಟಿವ್' ಎಂಬ ತನ್ನ ಮಹತ್ವಾಕಾಂಕ್ಷಿ ಯೋಜನೆಯಡಿಯಲ್ಲಿ 'ಒನ್ ಬೆಲ್ಟ್ ಒನ್ ರೋಡ್' (ಒಬಿಒಆರ್) ಹೆಸರಿನ ರಸ್ತೆ ಕಾಮಗಾರಿಗಳನ್ನು, ಭಾರತದ ಆಕ್ಷೇಪಗಳ ನಡುವೆಯೇ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಚೀನಾ ಆರಂಭಿಸಿತು. ಜತೆಗೆ, ಭಾರತದ ವಿರುದ್ಧ ನಿಲುವು ತಳೆಯುವಂತೆ ಅದು ನೇಪಾಳ ಮತ್ತು ಮಾಲ್ಡೀವ್ಸ್ ದೇಶಗಳಿಗೆ ಕುಮ್ಮಕ್ಕು ನೀಡಿತು.

ಈ ನಡುವೆ ಚೀನಾ ಸೇನೆಯು 2017ರಲ್ಲಿ ಡೋಕ್ಲಾಂ ಪ್ರದೇಶದಲ್ಲಿ ಮತ್ತು 2020ರಲ್ಲಿ ಗ್ಯಾಲ್ವಾನ್ ಗಡಿಭಾಗದಲ್ಲಿ ಭಾರತೀಯ ಸೇನೆಯ ಜತೆ ಚಕಮಕಿಗೆ ಇಳಿದಿತ್ತು. ಚೀನಾದ 'ಸ್ಟ್ರಿಂಗ್ ಆಫ್ ಪರ್ಲ್' ಯೋಜನೆಗೆ ಪ್ರತಿಯಾಗಿ ಭಾರತವು 'ನೆಕ್ಲೇಸ್ ಆಫ್ ಡೈಮಂಡ್ಸ್' ಉಪಕ್ರಮವನ್ನು ಜಾರಿಮಾಡಿತು. ಅಂದರೆ, ಚೀನಾವನ್ನು ಸುತ್ತುವರಿದಿರುವ ಮಂಗೋಲಿಯಾ, ಜಪಾನ್, ವಿಯೆಟ್ನಾಂ, ಮ್ಯಾನ್ಮಾರ್, ಸಿಂಗಾಪುರ, ಇಂಡೋನೇಷ್ಯಾ, ಒಮಾನ್, ಇರಾನ್ ಇತ್ಯಾದಿ ದೇಶಗಳ ಜತೆಗಿನ ಬಾಂಧವ್ಯವನ್ನು ಗಟ್ಟಿಗೊಳಿಸುವಿಕೆ, ಭಾರತದ ಕರಾವಳಿ ಯುದ್ಧಕ್ಕೂ ಕಣ್ಗಾವಲನ್ನು ಹೆಚ್ಚಿಸುವಿಕೆ, ಬಂದರುಗಳ ಸಂಖ್ಯೆಯನ್ನು ವರ್ಧಿಸುವಿಕೆ ಇವು ಸದರಿ ಉಪಕ್ರಮದಲ್ಲಿ ಸೇರಿದ್ದವು. ಚೀನಾದ 'ಒಬಿಒಆರ್' ಯೋಜನೆಯನ್ನು ಭಾರತವು ಎಲ್ಲಾ ಜಾಗತಿಕ ವೇದಿಕೆಗಳಲ್ಲೂ ವಿರೋಧಿಸುತ್ತಿದೆ. ಪಾಕಿಸ್ತಾನದ 'ಬಲೂಚಿಸ್ತಾನ್ ಲಿಬರೇಷನ್ ಆರ್ಮಿ'ಯು 'ಒಬಿಒಆರ್' ಯೋಜನೆಯ 'ಚೀನಾ-ಪಾಕಿಸ್ತಾನ ಇಕನಾಮಿಕ್ ಕಾರಿಡಾರ್' ಉಪಕ್ರಮಕ್ಕೆ ಅಡ್ಡಿಯನ್ನು ಉಂಟುಮಾಡುತ್ತಿದ್ದು, ಚೀನಾದ ಅಧಿಕಾರಿಗಳು ಮತ್ತು ಕೆಲಸಗಾರರ ಮೇಲೆ ಆತ್ಮಹತ್ಯಾ ದಾಳಿಗಳನ್ನು ಮಾಡಿ ಈ ಉಪಕ್ರಮವನ್ನು ಚೀನಾ ಸ್ಥಗಿತಗೊಳಿಸುವಂತೆ ಮಾಡುತ್ತಿದೆ. ನೇಪಾಳವು ಭಾರತದ ಜತೆಗಿನ ತನ್ನ ಉತ್ತಮ ಬಾಂಧವ್ಯವನ್ನು ಮುಂದುವರಿಸಿದೆ. ಮಾಲ್ಡೀವ್ಸ್ ವಿರುದ್ಧ ಭಾರತ ಕೈಗೊಂಡ ನಿಷ್ಠುರ ರಾಜತಾಂತ್ರಿಕ ನಿಲುವುಗಳಿಗೆ ಬೆದರಿದ ಆ ದೇಶದ ಅಧ್ಯಕ್ಷ ಮೊಹಮ್ಮದ್ ಮುಯಿಝು ತಮ್ಮ ತಪ್ಪನ್ನು ಸರಿಪಡಿಸಿಕೊಂಡು ಭಾರತದ ಜತೆಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳುವೆಡೆಗೆ ಹೆಜ್ಜೆಹಾಕಿದ್ದಾರೆ. ಡೋಕ್ಲಾಂ ಮತ್ತು ಗ್ಯಾಲ್ವಾನ್‌ಗಳಲ್ಲಿ ಭಾರತೀಯ ಸೈನಿಕರಿಂದ ಪೆಟ್ಟುತಿಂದ ನಂತರ ಭಾರತದ ಗಡಿಯನ್ನು ಅತಿಕ್ರಮಿಸುವ ದುಸ್ಸಾಹಸಕ್ಕೆ ಚೀನಾ ಕೈಹಾಕಿಲ್ಲ.

ಇನ್ನು ಕೆನಡಾ ವಿಷಯಕ್ಕೆ ಬರೋಣ. ಅಲ್ಲಿನ ಪ್ರಧಾನಿ ಜಸ್ಟಿನ್ ಟ್ರುಡೊ ಆಡಳಿತವು ಖಲಿಸ್ತಾನ್ ಭಯೋತ್ಪಾದಕರನ್ನು ಬೆಂಬಲಿಸಿ ಭಾರತದ ತೀವ್ರ ಅಸಮಾಧಾನಕ್ಕೆ ಗುರಿಯಾಗಿರುವುದು ಇತ್ತೀಚಿನ ಕೆಲ ವರ್ಷಗಳ ಬೆಳವಣಿಗೆ. ಕೆನಡಾದಲ್ಲೀಗ ಟ್ರುಡೊ ಜನಪ್ರಿಯತೆ ತೀವ್ರವಾಗಿ ಕುಸಿದಿದೆ. ಭಾರತಕ್ಕೆ ಅಪಾಯಕಾರಿಯಾಗಿರುವ ಖಲಿಸ್ತಾನಿ ಉಗ್ರರಿಗೆ ನೆಲೆ ನೀಡದಂತೆ ಕೆನಡಾಕ್ಕೆ ಭಾರತವು ಕಳೆದ 7 ವರ್ಷಗಳಿಂದ ಹೇಳುತ್ತಿದ್ದರೂ, ಕೆನಡಾ ಅಂಥವರಿಗೆ ತನ್ನ ಪೌರತ್ವವನ್ನು ಕೊಟ್ಟಿದೆ. ಖಲಿಸ್ತಾನಿ ಉಗ್ರರನ್ನು ತನ್ನಲ್ಲಿಗೆ ಗಡಿಪಾರು ಮಾಡುವಂತೆ ಭಾರತವು 27 ಬಾರಿ ಮನವಿ ಮಾಡಿದ್ದರೂ ಅದಕ್ಕೆ ಕೆನಡಾ ಸ್ಪಂದಿಸಿಲ್ಲ. ದೇಶದ ಕೃಷಿ ವಲಯದ ಸುಧಾರಣೆಗೆ ಭಾರತ ಸರಕಾರವು ಜಾರಿಗೆ ತಂದಿದ್ದ ಕಾಯ್ದೆಗಳ ವಿರುದ್ಧ ಪಂಜಾಬಿನ ರೈತರನ್ನು ಎತ್ತಿಕಟ್ಟಿದ್ದು ಇದೇ ಖಲಿಸ್ತಾನಿಗಳು. ಇವರ ವೋಟಿನ ಆಸೆಗೆ ಬಿದ್ದ ಟ್ರುಡೊ, ಭಾರತದಲ್ಲಿ ನಡೆಯುತ್ತಿದ್ದ ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿದ್ದರು. ಇದಕ್ಕೆ ಭಾರತ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ್ದರೂ ಅದನ್ನು ಟ್ರುಡೊ ಸರಕಾರ ನಿರ್ಲಕ್ಷಿಸುತ್ತಾ ಬಂತು.

ಕಳೆದ ವರ್ಷ, ಕೆನಡಾದಲ್ಲಿ ಅಜ್ಞಾತ ಬಂದೂಕುಧಾರಿಗಳು ನಡೆಸಿದ ಗುಂಡಿನ ದಾಳಿಯಿಂದಾಗಿ ಖಲಿಸ್ತಾನಿ ಉಗ್ರ ಹರ್‌ದೀಪ್ ಸಿಂಗ್ ನಿಜ್ಜರ್ ಹತನಾದ. ಈತನೊಬ್ಬ ಭಯೋತ್ಪಾದಕನೆಂದು ಭಾರತವು 2020ರಲ್ಲೇ ಘೋಷಿಸಿತ್ತು. ನಿಜ್ಜರ್ ಸಾವಿಗೆ ಭಾರತವೇ ಕಾರಣವೆಂದು ಟ್ರುಡೊ ಸರಕಾರ ಆರೋಪಿಸಿದ್ದರ ಜತೆಗೆ, ಕೆನಡಾದಲ್ಲಿನ ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಗಳು ಈ ಸಾವಿಗೆ ಸಂಚು ಹೂಡಿದ್ದಾರೆಂದು ಆರೋಪಿಸಿ 6 ಮಂದಿ ಅಧಿಕಾರಿಗಳನ್ನು ಇತ್ತೀಚೆಗೆ ಉಚ್ಚಾಟಿಸಿತು. ಇದಕ್ಕೆ ಪ್ರತಿಯಾಗಿ, ಭಾರತದಲ್ಲಿನ ಕೆನಡಾದ ರಾಯಭಾರ ಕಚೇರಿಯ ಅಧಿಕಾರಿಗಳಿಗೆ ಇಲ್ಲಿಂದ ತೊಲಗುವಂತೆ ಭಾರತವೂ ಸೂಚಿಸಿತು. ನಿಜ್ಜರ್ ಸಾವಿನ ಹಿಂದೆ ಭಾರತದ ಕೈವಾಡವಿದೆಯೆಂದು ಕೆನಡಾ ಹೇಳುತ್ತಾ ಬಂದಿದ್ದರೂ, ಆ ಆರೋಪವನ್ನು ಸಾಬೀತು ಮಾಡುವ ಯಾವುದೇ ಪುರಾವೆಗಳನ್ನು ಒದಗಿಸಿಲ್ಲ. ಕೆನಡಾದಲ್ಲಿನ ಖಲಿಸ್ತಾನಿಗಳ ಆಟಾಟೋಪಗಳಿಂದ ಬೇಸತ್ತಿರುವ ಅಲ್ಲಿನ ಪ್ರಜೆಗಳು ಮತ್ತು ವಿಪಕ್ಷಗಳು ಟ್ರುಡೊವನ್ನು ಟೀಕಿಸುತ್ತಿದ್ದಾರೆ. ಏನೇ ಕಸರತ್ತು ಮಾಡಿದರೂ ಕುಸಿದಿರುವ ಟ್ರುಡೊ ಜನಪ್ರಿಯತೆ ಮತ್ತೆ ಸುಧಾರಣೆಯಾಗುವ ಸಾಧ್ಯತೆಗಳಿಲ್ಲ. ಟ್ರುಡೊ ಖಲಿಸ್ತಾನ್ ಪರವಾಗಿ ನಿಂತಿರುವುದನ್ನು ಅಲ್ಲಿನ ವಿಪಕ್ಷ ನಾಯಕ ಪಿಯರೆ ಪೊಲಿಯೆವ್ರ್ ಬಲವಾಗಿ ಟೀಕಿಸಿದ್ದಾರೆ. ಕೆನಡಾದಲ್ಲಿ 2025ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಟ್ರುಡೊ ಸೋತು, ಪಿಯರೆ ಗೆದ್ದು ಪ್ರಧಾನಿಯಾಗುವ ಸಾಧ್ಯತೆಯಿದೆ.

ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿದ್ದವರೆಗೆ ಭಾರತ ಮತ್ತು ಅಮೆರಿಕ ನಡುವಿನ ಸಂಬಂಧ ಏರುಗತಿಯಲ್ಲಿತ್ತು; 2021ರಲ್ಲಿ ಜೋ ಬೈಡನ್ ಗದ್ದುಗೆಗೆ ಏರಿದ ನಂತರ ಈ ಬಾಂಧವ್ಯ ಸ್ವಲ್ಪ ಮಟ್ಟಿಗೆ ಕುಸಿಯಿತು. ಇದಕ್ಕೆ ಕಾರಣಗಳು ಹಲವು. ಬೈಡನ್ ಡೆಮಾಕ್ರಟಿಕ್ ಪಕ್ಷದ ಸಮರ್ಥಕರಾದರೆ, ದಾನಿಗಳು ಮತ್ತು ನೀತಿನಿರೂಪಕರಲ್ಲಿ ಹೆಚ್ಚಿನವರು ಲಿಬರಲ್‌ಗಳು, ಸೋಷಲಿಸ್ಟ್‌ಗಳು ಹಾಗೂ ಎಡಪಂಥೀಯರು. ಭಾರತ-ವಿರೋಧಿ ಜಾರ್ಜ್ ಸೊರೋಸ್‌ನಂಥವರು ಡೆಮಾಕ್ರಟಿಕ್ ಪಕ್ಷದ ಪ್ರಮುಖ ದಾನಿಗಳು. ಭಾರತದಲ್ಲಿರುವ ನರೇಂದ್ರ ಮೋದಿ ನೇತೃತ್ವದ ರಾಷ್ಟ್ರೀಯವಾದಿ ಸರಕಾರವನ್ನು ಕೆಳಗಿಳಿಸಬೇಕೆಂದು ಅಂತಾರಾಷ್ಟ್ರೀಯ ಹುನ್ನಾರ ಮಾಡುತ್ತಿರುವಾತ ಈ ಸೊರೋಸ್. ಅಮೆರಿಕ ಸರಕಾರವಿಂದು ಭಾರತದ ವಿರುದ್ಧ ನಿಲುವುಗಳನ್ನು ತಳೆಯುತ್ತಿರುವುದರ ಹಿಂದೆ ಸೊರೋಸ್ ಬಳಗದ ಕೈವಾಡವಿದೆ. ಅಮೆರಿಕದ ಈಗಿನ ಉಪಾಧ್ಯಕ್ಷೆ ಮತ್ತು ಡೆಮಾಕ್ರಟಿಕ್ ಪಕ್ಷದ ಮುಂದಿನ ಅಧ್ಯಕ್ಷೀಯ ಅಭ್ಯರ್ಥಿ ಕಮಲಾ ಹ್ಯಾರಿಸ್ ಕೂಡ ಉಪಾಧ್ಯಕ್ಷೆಯಾಗುವ ಮೊದಲು, 'ಕಾಶ್ಮೀರವು ಪಾಕಿಸ್ತಾನಕ್ಕೆ ಸೇರಿದ್ದು' ಎಂದು ಪ್ರತಿಪಾದಿಸುತ್ತಿದ್ದವರೇ. ಈಕೆಯ ಸೋದರಿಯ ಮಗಳಾದ ಮೀನಾ ಹ್ಯಾರಿಸ್ ಕೂಡ ಭಾರತ-ವಿರೋಧಿ ಹೇಳಿಕೆಗಳನ್ನು ನೀಡುತ್ತಿದ್ದುದುಂಟು. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದ ವಿಚಾರದಲ್ಲಿ ಭಾರತವು ರಷ್ಯಾದ ವಿರುದ್ಧ ನಿಲ್ಲಬೇಕೆಂಬುದು ಅಮೆರಿಕದ ಆಗ್ರಹ. ಭಾರತಕ್ಕೆ ರಷ್ಯಾ ರಿಯಾಯಿತಿ ದರದಲ್ಲಿ ತೈಲವನ್ನು ಮಾರುತ್ತಿದೆ, ಅದಕ್ಕೆ ಹಣದ ಪಾವತಿಯಾಗುತ್ತಿರುವುದೂ ಭಾರತೀಯ ರುಪಾಯಿಯ ಮೂಲಕವೇ. ಭಾರತವು ಹೀಗೆ ರಷ್ಯಾದಿಂದ ತೈಲವನ್ನು ಖರೀದಿಸುವುದಕ್ಕೆ ಅಮೆರಿಕ ಮತ್ತು ಐರೋಪ್ಯ ದೇಶಗಳು ಆಕ್ಷೇಪಿಸಿದ್ದುಂಟು; 'ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿದೆ' ಎಂದು ಅಮೆರಿಕ ಸರಕಾರದ ಆಯೋಗವು ವರದಿಯನ್ನು ಕೊಟ್ಟಿದ್ದುಂಟು.

ಇನ್ನೊಂದು ಸ್ವಾರಸ್ಯಕರ ಸಂಗತಿ ಗೊತ್ತಾ? '2024ರ ಭಾರತದ ಸಾರ್ವತ್ರಿಕ ಚುನಾವಣೆಯಲ್ಲಿ ಮೋದಿ ನೇತೃತ್ವದ ಬಿಜೆಪಿಯನ್ನು ಸೋಲಿಸುವ ಉದ್ದೇಶದಿಂದ ಅಮೆರಿಕ ಹಸ್ತಕ್ಷೇಪ ಮಾಡಿದೆ' ಎಂದು ವರದಿ ಮಾಡಿದ್ದ ರಷ್ಯಾದ 'ಸ್ಪುಟ್ನಿಕ್' ಮಾಧ್ಯಮ, 'ಮೈತ್ರಿಪಕ್ಷಗಳು ಎನ್‌ಡಿಎ ಮೈತ್ರಿಕೂಟವನ್ನು ತೊರೆಯುವಂತೆ ಮಾಡಲು ಆಂಧ್ರಪ್ರದೇಶದ ಚರ್ಚುಗಳ ಮೂಲಕ ಅಮೆರಿಕದ ರಹಸ್ಯದಳಗಳು ಯತ್ನಿಸುತ್ತಿವೆ' ಎಂದೂ ಹೇಳಿತ್ತು. ಇದಕ್ಕೆ ಪುಷ್ಟಿ ನೀಡುವಂತೆ, ಅಮೆರಿಕದ ರಾಯಭಾರ ಕಚೇರಿಯ ಅಧಿಕಾರಿಗಳು ಚಂದ್ರಬಾಬು ನಾಯ್ಡು, ಅಸಾದುದ್ದೀನ್ ಒವೈಸಿ, ಒಮರ್ ಅಬ್ದುಲ್ಲಾ ಮುಂತಾದವರನ್ನು ಭೇಟಿ ಮಾಡಿದ್ದರು. ಅಮೆರಿಕದ 'ಡೀಪ್ ಸ್ಟೇಟ್' ಭಾರತದ ವಿರುದ್ಧವಾಗಿ ಕೆಲಸ ಮಾಡುತ್ತಿದ್ದು, ನಮ್ಮ ಇಂದಿನ ಕೇಂದ್ರ ಸರಕಾರವನ್ನು ಕೆಳಗಿಳಿಸಿ ತನ್ನ ಕೈಗೊಂಬೆಯಂತಿರುವ ಸರಕಾರವನ್ನು ಪ್ರತಿಷ್ಠಾಪಿಸುವುದು ಅದರ ಉದ್ದೇಶವಾಗಿದೆ. ಏಕೆಂದರೆ, ಭಾರತವು ಜಾಗತಿಕ ಶಕ್ತಿಯಾಗಿ ಬೆಳೆಯುವುದು ಅಮೆರಿಕದ ಸ್ಥಾಪಿತ ಹಿತಾಸಕ್ತಿಗಳಿಗೆ ಇಷ್ಟವಿಲ್ಲ. ಇತ್ತೀಚೆಗೆ, ಅಮೆರಿಕ ಮತ್ತು ಕೆನಡಾಗಳ ನಡುವೆ ಓಡಾಡುತ್ತಿರುವ ಖಲಿಸ್ತಾನ್ ಉಗ್ರನಾದ ಗುರು ಪತ್ವಂತ್‌ಸಿಂಗ್ ಪನ್ನುವಿನ ಮೇಲೆ ನಡೆದ ಕೊಲೆಯತ್ನದಲ್ಲಿ ಭಾರತದ 'ರಾ' ಗೂಢಚಾರ ಸಂಸ್ಥೆಯ ಮಾಜಿ ಅಧಿಕಾರಿ ವಿಕಾಸ್ ಯಾದವ್ ಭಾಗಿಯಾಗಿದ್ದಾರೆಂದು ಆರೋಪಿಸಿರುವ ಅಮೆರಿಕದ ಎಫ್‌ಬಿಐ, ಅವರಿಗಾಗಿ ವಾಂಟೆಡ್ ನೋಟಿಸ್ ಅನ್ನು ಪ್ರಕಟಿಸಿದೆ. ಈ ಎಲ್ಲ ಬೆಳವಣಿಗೆಗಳು ಅಮೆರಿಕವು ಭಾರತದ ವಿರುದ್ಧ ಸಾಗುತ್ತಿರುವುದನ್ನು ಸೂಚಿಸುತ್ತವೆ.

ಆದರೆ ಭಾರತದ ಇಂದಿನ ವಿದೇಶಾಂಗ ನೀತಿಯು ಹಿಂದೆಂದಿಗಿಂತಲೂ ಹೆಚ್ಚು ದೃಢವಾಗಿದೆ. 'ಇಂಡಿಯಾ ಫಸ್ಟ್' ತತ್ವವನ್ನು ಪಾಲಿಸುತ್ತಿರುವ ಭಾರತವಿಂದು ತನ್ನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡೇ ಕೆಲಸ ಮಾಡುತ್ತಿದೆ. ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು 'ಸತ್ಯದ ಬಾಂಬ್' ಸಿಡಿಸುವುದರಲ್ಲಿ ನಿಷ್ಣಾತರು. ''ಭಾರತವು ರಷ್ಯಾದಿಂದ ತೈಲ ಖರೀದಿಸುವುದನ್ನು ವಿರೋಧಿಸುವ ಐರೋಪ್ಯ ದೇಶಗಳು, ಸ್ವತಃ ರಷ್ಯಾದಿಂದ ತೈಲವನ್ನು ಆಮದುಮಾಡಿಕೊಳ್ಳುತ್ತಿವೆ'' ಎಂಬ ಹೇಳಿಕೆ ನೀಡುವ ಮೂಲಕ ಅವರು ಐರೋಪ್ಯ ದೇಶಗಳ ದ್ವಿಮುಖ ನೀತಿಯನ್ನು ಬಯಲುಮಾಡಿದ್ದಾರೆ. ಭಾರತವು ರಷ್ಯಾದಿಂದ 'ಎಸ್-400' ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ಖರೀದಿಸುವುದಕ್ಕೆ ಅಮೆರಿಕ ಮಾಡಿರುವ ಆಕ್ಷೇಪಣೆಗೆ ಅವರು ಉತ್ತರಿಸುತ್ತಾ, ''ಅಗತ್ಯ ಸಂದರ್ಭಗಳಲ್ಲಿ (ಪಾಕಿಸ್ತಾನದ ಜತೆಗಿನ ಸೆಣಸಾಟದ ವೇಳೆ) ಭಾರತಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸಿರುವುದು ರಷ್ಯಾ ಮಾತ್ರ; ಹೀಗಾಗಿ ನಾವು ಯುದ್ಧೋಪಕರಣಗಳ ಬಿಡಿಭಾಗಗಳ ಪೂರೈಕೆಗಾಗಿ ರಷ್ಯಾವನ್ನೇ ಅವಲಂಬಿಸಿದ್ದೇವೆ'' ಎಂದು ಹೇಳಿ ರಷ್ಯಾದ ಜತೆಗಿನ ಈ ಒಪ್ಪಂದವನ್ನು ಸಮರ್ಥಿಸಿಕೊಂಡಿದ್ದಾರೆ. ಭಾರತದಲ್ಲಿ ಧಾರ್ಮಿಕ ಅಸಹಿಷ್ಣುತೆ ಇದೆ ಎಂಬುದಾಗಿ ಅಮೆರಿಕದ ಸಿಐಆರ್‌ಎಫ್ ಮಾಡಿರುವ ವರದಿಗೆ ವಿದೇಶಾಂಗ ಸಚಿವಾಲಯವು ಖಾರವಾಗಿ ಪ್ರತಿಕ್ರಿಯಿಸುತ್ತಾ, ''ಈ ವರದಿಯು ಪೂರ್ವಗ್ರಹ ಪೀಡಿತವಾಗಿದೆ. ಅಮೆರಿಕವು ತನ್ನ ದೇಶದಲ್ಲಿ ನಡೆಯುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಗಟ್ಟುವೆಡೆಗೆ ಗಮನ ಹರಿಸಲಿ'' ಎಂದು ಚುರುಕು ಮುಟ್ಟಿಸಿತ್ತು. ರಷ್ಯಾದ 'ಸ್ಪುಟ್ನಿಕ್' ಮಾಧ್ಯಮದ ಪ್ರಸಾರವನ್ನು ಭಾರತದಲ್ಲಿ ನಿಷೇಧಿಸಬೇಕೆಂಬ ಅಮೆರಿಕದ ಸೂಚನೆಗೆ ಭಾರತವು ಕವಡೆ ಕಾಸಿನ ಕಿಮ್ಮತ್ತನ್ನೂ ನೀಡಿಲ್ಲ. ಅಮೆರಿಕದಲ್ಲಿ ಮಹಾಚುನಾವಣೆ ಸಮೀಪಿಸುತ್ತಿದ್ದು, ಡೊನಾಲ್ಡ್ ಟ್ರಂಪ್ ಗೆಲ್ಲುವ ಸಾಧ್ಯತೆಗಳಿವೆಯೆಂದು ಅಲ್ಲಿನ ಸಮೀಕ್ಷೆಗಳು ಹೇಳುತ್ತಿವೆ. ತಾವು ಅಧಿಕಾರಕ್ಕೆ ಬಂದರೆ 'ಡೀಪ್ ಸ್ಟೇಟ್' ಅನ್ನು ನಾಶಮಾಡುವುದಾಗಿ ಟ್ರಂಪ್ ಹೇಳಿದ್ದಾರೆ. ಅವರು ಅಧಿಕಾರಕ್ಕೆ ಬಂದರೆ ಭಾರತ ಮತ್ತು ಅಮೆರಿಕ ನಡುವಿನ ಸಂಬಂಧವು ಪುನಃ ಹಳಿಗೆ ಬರಬಹುದು.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:67, Issue: 167

ಸಮಾಚಾರ ಸಣ್ಣದಲ್ಲ

ಸಿಆರ್‌ಪಿಎಫ್ ಶಾಲೆಗಳಿಗೆ ಬಾಂಬ್ ದಾಳಿ ಮೇಲ್

ದೆಹಲಿ: ಕೇಂದ್ರದ ಮೀಸಲು ಪೊಲೀಸ್ ಪಡೆಯ(ಸಿಆರ್‌ಪಿಎಫ್) ದೇಶಾದ್ಯಂತದ ಶಾಲೆಗಳಿಗೆ ಬಾಂಬ್ ಬೆದರಿಕೆ ಸಂದೇಶ ಬಂದಿದೆ. ದೆಹಲಿಯ 2 ಮತ್ತು ಹೈದರಾಬಾದ್‌ನ 1 ಶಾಲೆಯ ಆಡಳಿತ ಮಂಡಳಿಗೆ ಇಮೇಲ್‌ನಲ್ಲಿ ಬೆದರಿಕೆ ಸಂದೇಶ ಬಂದಿದೆ. ಸೋಮವಾರ ತಡರಾತ್ರಿ ಇಮೇಲ್ ಬಂದಿದೆ. ಭಾನುವಾರ ಬೆಳಗ್ಗೆ ದೆಹಲಿಯ ರೋಹಿಣಿಯ ಪ್ರಶಾಂತ್ ವಿಹಾರ್ ಪ್ರದೇಶದಲ್ಲಿನ ಸಿಆರ್‌ಪಿಎಫ್ ಶಾಲೆಯ ಕಾಂಪೌಂಡ್‌ನಲ್ಲಿ ಸ್ಫೋಟವಾಗಿತ್ತು. ಕಾಂಪೌಂಡ್‌ಗೆ ಹಾನಿಯಾಗಿತ್ತು. ಅಲ್ಲದೇ, ಪಕ್ಕದ ಕಟ್ಟಡಗಳು ಮತ್ತು ವಾಹನಗಳ ಗಾಜು ಛಿದ್ರವಾಗಿತ್ತು.

ಉ.ಪ್ರ. ಸಿಲಿಂಡರ್ ಸ್ಫೋಟಕ್ಕೆ ಆರು ಬಲಿ

ಲಖನೌ: ಉತ್ತರ ಪ್ರದೇಶದ ಬುಲಂದ್‌ಶಹರ್ ಜಿಲ್ಲೆಯ ಸಿಕಂದರಾಬಾದ್ ಪ್ರದೇಶದ ಆಶಾಪುರಿ ಕಾಲೋನಿಯಲ್ಲಿ ಆಕ್ಸಿಜನ್ ಸಿಲಿಂಡರ್ ಮಂಗಳವಾರ ಸ್ಫೋಟಗೊಂಡು ಮನೆ ಕುಸಿತವಾಗಿದ್ದು, ಒಂದೇ ಕುಟುಂಬದ 6 ಜನರು ಸಾವನ್ನಪ್ಪಿದ್ದಾರೆ. ಮೂವರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ರಿಯಾಜುದ್ದೀನ್(50), ಪತ್ನಿ ರುಖ್ಸಾನಾ (45), ಸಲ್ಮಾನ್ (16), ತಮನ್ನಾ (24), ಹಿಬ್ಬಾ (3) ಮತ್ತು ಆಸ್ ಮೊಹಮ್ಮದ್ (26) ಮೃತರು. ರಿಯಾಜುದ್ದೀನ್ ಮನೆಯಲ್ಲೇ ಸ್ಫೋಟವಾಗಿದೆ. ಮಹಿಳೆಯರು, ಮಕ್ಕಳು ಸೇರಿದಂತೆ ಮನೆಯಲ್ಲಿ 19 ಜನರು ವಾಸಿಸುತ್ತಿದ್ದರು ಅಧಿಕಾರಿಗಳು ತಿಳಿಸಿದ್ದಾರೆ.

ಸಲ್ಮಾನ್‌ಗೆ ಬೆದರಿಕೆ; ಕ್ಷಮೆ ಕೇಳಿದ ಆರೋಪಿ

ಮುಂಬೈ: ಬಾಲಿವುಡ್ ನಟ ಸಲ್ಮಾನ್ ಖಾನ್ ಜೀವಂತವಾಗಿ ಇರಬೇಕಾದರೆ ಮತ್ತು ಲಾರೆನ್ಸ್ ಬಿಷ್ಣೋಯ್ ಜತೆಗಿನ ಶತ್ರುತ್ವ ಕಳೆದುಕೊಳ್ಳಬೇಕಾದರೆ ತಕ್ಷಣ 5 ಕೋಟಿ ರು. ನೀಡಬೇಕು ಎಂಬ ಬೆದರಿಕೆಯ ಮೊಬೈಲ್ ಸಂದೇಶ ಕಳುಹಿಸಿದ್ದ ವ್ಯಕ್ತಿ ಮಂಗಳವಾರ ಕ್ಷಮೆ ಕೋರಿದ್ದಾನೆ. ಅದೇ ಮೊಬೈಲ್ ನಂಬರ್‌ನಿಂದ ಮುಂಬೈ ಸಂಚಾರ ಪೊಲೀಸರ ಸಂಖ್ಯೆಗೆ ಕ್ಷಮೆ ಯಾಚನೆಯ ಸಂದೇಶ ಕಳುಹಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಅ.18ರಂದು ಮುಂಬೈ ಸಂಚಾರ ಪೊಲೀಸ್ ಕಂಟ್ರೋಲ್ ರೂಂ ಮೊಬೈಲ್‌ಫೋನ್‌ಗೆ ಬೆದರಿಕೆ ಸಂದೇಶ ಬಂದಿತ್ತು. ಬೆದರಿಕೆ ಹಾಕಿ 5 ಕೋಟಿ ರು. ಕೇಳಿದ್ದ ವ್ಯಕ್ತಿಯೇ ಈಗ, 'ದಯಮಾಡಿ ಕ್ಷಮಿಸಿ, ತಪ್ಪಾಗಿ ಸಂದೇಶ ಕಳುಹಿಸಿದ್ದೆ' ಎಂದು ಮತ್ತೊಂದು ಸಂದೇಶವನ್ನು ಜಾರ್ಖಂಡ್‌ನಿಂದ ರವಾನಿಸಿದ್ದಾನೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಮ್‌ರಹೀಂಗೆ ಹೊಸ ಕಾನೂನು ಸಮಸ್ಯೆ

ಚಂಡೀಗಢ: ಡೇರಾ ಸಚ್ಚಾ ಸೌದ ಪಂಥದ ವಿವಾದಿತ ಧರ್ಮಬೋಧಕ, ಅತ್ಯಾಚಾರ ಪ್ರಕರಣಗಳಲ್ಲಿ ಜೈಲುಪಾಲಾಗಿರುವ ಗುರ್ಮಿತ್ ರಾಮ್ ರಹೀಮ್ ಸಿಂಗ್‌ಗೆ ಮತ್ತೊಂದು ಕಾನೂನು ಸಂಕಷ್ಟ ಎದುರಾಗಿದೆ.

ಧರ್ಮಗ್ರಂಥಕ್ಕೆ ಅಪಚಾರ ಮಾಡಿದ ಪ್ರಕರಣದ ವಿಚಾರಣೆಗೆ ಪಂಜಾಬ್ ಸರಕಾರ ಅನುಮತಿ ನೀಡಿದೆ. ಸರಕಾರದ ಅನುಮತಿ ಬಾಕಿ ಹಾಗೂ ಪಂಜಾಬ್ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದ ವಿಚಾರಣೆ ಬಾಕಿಯಾಗಿತ್ತು. ಇತ್ತೀಚೆಗೆ ಸುಪ್ರೀಂ ಕೋರ್ಟ್ ಪಂಜಾಬ್ ಹೈಕೋರ್ಟ್ ತಡೆಯಾಜ್ಞೆಯನ್ನು ತೆರವುಗೊಳಿಸಿದೆ. ಆ ಬಳಿಕ ರಾಜ್ಯ ಸರಕಾರವೂ ಪ್ರಕರಣದ ತನಿಖೆಗೆ ಅನುಮತಿ ನೀಡಿದೆ. 2015ರಲ್ಲಿ ಗುರುಮಿತ್ ರಾಮ್ ರಹೀಮ್ ಸಿಂಗ್, ಮತ್ತು ಬೆಂಬಲಿಗರು ಸಿಖ್ ಸಮುದಾಯದ ಧರ್ಮಗ್ರಂಥ ಗುರುಗ್ರಂಥ ಸಾಹಿಬ್‌ಗೆ ಅಪಚಾರವಾಗುವಂತೆ ಮಾಡಿದ್ದರು. ನಂತರ ಗಲಭೆ ನಡೆದು ಇಬ್ಬರು ಪ್ರಾಣ ಕಳೆದುಕೊಂಡಿದ್ದರು.

ರಷ್ಯಾ: 85 ಭಾರತ ಸೈನಿಕರ ಬಿಡುಗಡೆ

ದೆಹಲಿ: ರಷ್ಯಾದಲ್ಲಿ ಸೇನೆಗೆ ಬಲವಂತವಾಗಿ ಸೇರ್ಪಡೆಗೊಂಡು ಸಂಕಷ್ಟಕ್ಕೆ ಒಳಗಾಗಿದ್ದ ಭಾರತದ 85 ಸೈನಿಕರು ಕೊನೆಗೆ ತಾಯ್ನಾಡಿಗೆ ಮರಳುವುದು ಖಚಿತವಾಗಿದೆ. ರಷ್ಯಾ ಸೇನೆ ಭಾರತ ಸರಕಾರದ ಮನವಿಗೆ ಸ್ಪಂದಿಸಿ 85 ಸೈನಿಕರನ್ನು ಕರ್ತವ್ಯದಿಂದ ಮುಕ್ತಿಗೊಳಿಸಿದೆ. ಉಳಿದ 20 ಸೈನಿಕರನ್ನೂ ಶೀಘ್ರದಲ್ಲೇ ಭಾರತಕ್ಕೆ ಕರೆಸಿಕೊಳ್ಳಲಾಗುವುದು. ಆ ನಿಟ್ಟಿನಲ್ಲಿ ಸರಕಾರದ ಮಟ್ಟದಲ್ಲಿ ಪ್ರಯತ್ನಗಳು ಮುಂದುವರಿದಿವೆ. ಪ್ರಧಾನಿ ಮೋದಿ ಅವರೂ ಸದ್ಯ ರಷ್ಯಾದಲ್ಲಿ 2 ದಿನಗಳ ಪ್ರವಾಸದಲ್ಲಿದ್ದು, ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಜತೆಗೆ ಈ ಬಗ್ಗೆ ಮಾತುಕತೆ ನಡೆಸಲಿದ್ದಾರೆ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ.

{ ರಾಹುಲ್ ಗಾಂಧಿ } ಪ್ರತಿಪಕ್ಷ ನಾಯಕ

ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ನನ್ನ ಸೋದರಿ ಪ್ರಿಯಾಂಕಾಗಿಂತ ಉತ್ತಮ ಪ್ರತಿನಿಧಿ ಇರಲು ಸಾಧ್ಯವಿಲ್ಲ. ವಯನಾಡ್ ಜನತೆಗೆ ನನ್ನ ಹೃದಯದಲ್ಲಿ ವಿಶಿಷ್ಟ ಸ್ಥಾನ ನೀಡಿರುವೆ. ಕ್ಷೇತ್ರದ ಜನರ ಆಶಯಗಳನ್ನು ಸಂಸತ್ತಿನಲ್ಲಿ ಪ್ರಿಯಾಂಕಾ ಸಮರ್ಥವಾಗಿ ಮಂಡಿಸಬಲ್ಲಳು. ಜನರ ದನಿಯಾಗಬಲ್ಲಳು. ಬುಧವಾರ ನಾಮಪತ್ರ ಸಲ್ಲಿಸುವಾಗ ಜನರು ಭಾಗಿಯಾಗಲೆಂದು ಕೋರುವೆ.



81 ವಿಧಾನಸಭಾ ಕ್ಷೇತ್ರಗಳ ರಾಜ್ಯದಲ್ಲಿ ಕೈಪಡೆಗೆ 28 ಕ್ಷೇತ್ರ | 21ರಲ್ಲಿ ಐವರು ಸ್ತ್ರೀಯರು

ಜಾರ್ಖಂಡ್: ಕಾಂಗ್ರೆಸ್ 21 ಅಭ್ಯರ್ಥಿ

ರಾಂಚಿ: ಬುಡಕಟ್ಟು ಜನಾಂಗಗಳ ನಾಡಾದ ಜಾರ್ಖಂಡ್‌ನಲ್ಲಿ ವಿಧಾನಸಭೆ ಚುನಾವಣೆಯ ಕಾವು. ನ.13-20ರಂದು ಎರಡು ಹಂತಗಳಲ್ಲಿ ವಿಧಾನಸಭೆ ಚುನಾವಣೆ ನಿಗದಿಯಾಗಿದೆ. ಪ್ರತಿಪಕ್ಷ ಬಿಜೆಪಿ ಅದಾಗಲೇ ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟಿಸಿದೆ. ಈಗ ಕಾಂಗ್ರೆಸ್ ಪಕ್ಷ ಮಂಗಳವಾರ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಕೆ.ಸಿ.ವೇಣು ಗೋಪಾಲ್, ಗುಲಾಂ ಅಹಮದ್ ಮಿರ್, ಕೇಶವ್ ಮಹತೋ, ಜಾರ್ಖಂಡ್‌ನ ಹಲವು ನಾಯಕರು ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ಸಭೆಯಲ್ಲಿ ಚರ್ಚಿಸಿ ಅಂತಿಮಗೊಳಿಸಿದ ಬಳಿಕ ಪಟ್ಟಿ ಬಿಡುಗಡೆ ಮಾಡಲಾಗಿದೆ. 81 ವಿಧಾನಸಭಾ ಸ್ಥಾನಗಳ ಪೈಕಿ ಕಾಂಗ್ರೆಸ್ 28 ರಿಂದ 29 ಸ್ಥಾನಗಳಲ್ಲಿ ಸ್ಪರ್ಧಿಸಲು ಯೋಜಿಸಿದೆ. ಈ ಪಟ್ಟಿಯಲ್ಲಿ ಐವರು ಮಹಿಳೆಯರು ಸೇರಿ 21 ಅಭ್ಯರ್ಥಿಗಳ ಹೆಸರಿವೆ. ರಾಜ್ಯದ ಹಣಕಾಸು ಸಚಿವ ರಾಮೇಶ್ವರ್ ಓರಾನ್ ಮತ್ತು ಮಾಜಿ ಐಪಿಎಸ್ ಅಧಿಕಾರಿ ಅಜಯ್ ಕುಮಾರ್ ಹೆಸರೂ ಸೇರಿವೆ. ಆದರೆ, 'ಇಂಡಿ' ಒಕ್ಕೂಟದ ಸೀಟು ಹಂಚಿಕೆಯ ಚಿತ್ರಣ ಸ್ಪಷ್ಟವಾಗಿಲ್ಲ. ಮಾಜಿ ಪೊಲೀಸ್ ಅಧಿಕಾರಿ ಮತ್ತು ಜಾರ್ಖಂಡ್ ಕಾಂಗ್ರೆಸ್ ಸಮಿತಿ ಮಾಜಿ ಮುಖ್ಯಸ್ಥ ರಾಮೇಶ್ವರ್ ಓರಾ ನ್ ಅವರನ್ನು ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಲೋಹರ್‌ಡಗಾ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ಹಿಂದೆ ಜೆಮ್‌ಶೆಡ್‌ಪುರ ಲೋಕಸಭಾ ಸದಸ್ಯರಾಗಿದ್ದ, ಪ್ರಸ್ತುತ ತ್ರಿಪುರಾ, ಒಡಿಶಾ ಮತ್ತು ನಾಗಾಲ್ಯಾಂಡ್‌ಗೆ ಕಾಂಗ್ರೆಸ್ ಉಸ್ತುವಾರಿ ಯಾಗಿರುವ ಅಜಯ್ ಕುಮಾರ್ ಜೆಮ್‌ಶೆಡ್‌ಪುರ ಪೂರ್ವ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಆರೋಗ್ಯ ಸಚಿವ ಬನ್ನಾ ಗುಪ್ತಾ ಜಮ್‌ಶೆಡ್‌ಪುರ ಪಶ್ಚಿಮ ಕ್ಷೇತ್ರದ ಅಭ್ಯ ರ್ಥಿ. ಮಾರ್ಚ್‌ನಲ್ಲಷ್ಟೇ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಜೈ ಪ್ರಕಾಶ್ ಪಟೇಲ್, ಮಂಡು ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಎಸ್‌ಟಿಗೆ ಮೀಸಲಾದ ಮಂದಾರ ಕ್ಷೇತ್ರದಿಂದ ಕಾಂಗ್ರೆಸ್ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಬಂಧು ಟಿರ್ಕಿ ಅವರ ಪುತ್ರಿ ಶಿಲ್ಪಿ ನೇಹಾ ಟಿರ್ಕಿ ಕಣಕ್ಕಿಳಿಯಲಿದ್ದಾರೆ.

ಬಿಜೆಪಿ ಸ್ಪರ್ಧೆ: ರಾಜ್ಯದಲ್ಲಿ ಮೊದಲಿಗೆ ಬಿಜೆಪಿ 66 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದೆ. ಜೆಎಂಎಂ ಆಡಳಿತದಲ್ಲಿ ಸಿಎಂ ಆಗಿದ್ದ ಚಂಪೈ ಸೊರೇನ್‌ಗೆ ಸೆರೈಕೆಲಾ ಕ್ಷೇತ್ರದ ಟಿಕೆಟ್ ನೀಡಿದೆ. ಮಾಜಿ ಸಿಎಂ, ಬಿಜೆಪಿ ರಾಜ್ಯಾಧ್ಯಕ್ಷ ಬಾಬುಲಾಲ್ ಮರಾಂಡಿ ಅವರನ್ನು ಧನ್ವಾರ್ ಕ್ಷೇತ್ರದಿಂದ ಕಣಕ್ಕಿಳಿಸುತ್ತಿದೆ.

ಟಿಕೆಟ್ ಕೈತಪ್ಪಿದವರು

ಬಹಿರ್ ಕ್ಷೇತ್ರದ ಹಾಲಿ ಶಾಸಕ ಉಮಾಶಂಕರ್ ಅಕೇಲಾ ಮತ್ತು ಪಾಕೂರ್ ಶಾಸಕ ಅಲಂಗೀರ್ ಆಲಂಗೆ ಟಿಕೆಟ್ ತಡೆಹಿಡಿಯಲಾಗಿದೆ. ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಅಲಂಗೀರ್ ಸದ್ಯ ಜೈಲಿನಲ್ಲಿದ್ದಾರೆ.

ಒಟ್ಟು ಕ್ಷೇತ್ರ	81
ಮತದಾನ	ನ.13-20
1ನೇ ಹಂತ ಕ್ಷೇತ್ರ	43
2ನೇ ಹಂತ ಕ್ಷೇತ್ರ	38
ಮತ ಎಣಿಕೆ	ನ.23
ಮತದಾರ	2.55 ಕೋಟಿ

ಪಕ್ಷಾಂತರ ಪರ್ವ ಶುರು

ರಾಂಚಿ: ಜಾರ್ಖಂಡ್‌ನಲ್ಲಿ ಪಕ್ಷಾಂತರ ಪರ್ವ ಶುರುವಾಗಿದೆ. ಮೂವರು ಮಾಜಿ ಶಾಸಕರು ಸೇರಿದಂತೆ ಬಿಜೆಪಿಯ ಹಲವು ನಾಯಕರು ಮಂಗಳವಾರ ಜಾರ್ಖಂಡ್ ಮುಕ್ತಿ ಮೋರ್ಚಾ(ಜೆಎಂಎಂ) ಪಕ್ಷಕ್ಕೆ ಸೇರ್ಪಡೆಗೊಂಡರು.

ಮಾಜಿ ಶಾಸಕರಾದ ಲೂಯಿಸ್ ಮರಾಂಡಿ, ಕುನಾಲ್ ಸಾರಂಗಿ, ಲಕ್ಷ್ಮಣ್ ತುಡು ಬಿಜೆಪಿಗೆ ವಿದಾಯ ಹೇಳಿ, ಜೆಎಂಎಂ ಸೇರಿಕೊಂಡಿದ್ದಾರೆ. ಲೂಯಿಸ್ ಮರಾಂಡಿ 2014ರ ವಿಧಾನಸಭೆ ಚುನಾವಣೆಯಲ್ಲಿ ಜೆಎಂಎಂ ಮುಖಂಡ ಹೇಮಂತ್ ಸೊರೇನ್ ಅವರನ್ನು 5262 ಮತಗಳಿಂದ ಸೋಲಿಸಿದ್ದರು. ಇದಕ್ಕೂ ಮುನ್ನ ಬಿಜೆಪಿಯ ಹಿರಿಯ ನಾಯಕ, 3 ಬಾರಿಯ ಶಾಸಕ ಕೇದಾರ್ ಹಜರಾ ಜೆಎಂಎಂ ಸೇರಿಕೊಂಡಿದ್ದರು. ಅದಾದ 2 ದಿನಕ್ಕೇ ಮತ್ತೆ ಮೂವರು ಮಾಜಿ ಶಾಸಕರು ಬಿಜೆಪಿ ತೊರೆದಿದ್ದಾರೆ. ಇನ್ನೊಂದೆಡೆ, ಎಜೆಎಸ್‌ಯು ಪಕ್ಷದ ಉಪ ನಾಯಕ ಉಮಾಕಾಂತ್ ರಜಕ್ ಜೆಎಂಎಂ ಸೇರಿದ್ದಾರೆ.

ಪಾಕ್ ತೆಹ್ರೀಕ್ ಮುಸ್ಲಿಂ ಉಗ್ರರ ಚಟುವಟಿಕೆ

ಕಾಶ್ಮೀರ: ಉಗ್ರರ ನೇಮಕ ಶಿಬಿರ ನಾಶಪಡಿಸಿದ 'ಸಿಐಕೆ'

ಶ್ರೀನಗರ: ಪಾಕಿಸ್ತಾನ ಮೂಲಕ ಭಯೋತ್ಪಾದಕ ಬಾಬಾ ಹಮಾಸ್ ನೇತೃತ್ವದ ಸಂಘಟನೆ 'ತೆಹ್ರೀಕ್ ಲಬೈಕ್ ಯಾ ಮುಸ್ಲಿಂ'ಗೆ ಯುವಕರನ್ನು ರಾಜ್ಯದಲ್ಲಿ ನೇಮಿಸಿಕೊಳ್ಳಲಾಗುತ್ತಿದೆ ಎಂಬ ಗುಪ್ತಚರ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಕಾಶ್ಮೀರದ ವಿವಿಧೆಡೆ ಮಂಗಳವಾರ ತೀವ್ರ ಶೋಧ ನಡೆಸಿ, ಶ್ರೀನಗರ, ಪುಲ್ವಾಮಾ ಮತ್ತಿತರೆಡೆ ನೆಲೆಗೊಂಡಿದ್ದ ನೇಮಕ ಶಿಬಿರಗಳನ್ನು ನಾಶಪಡಿಸಿವೆ.

ಗುಪ್ತಚರ ವಿಭಾಗ ನೀಡಿದ ಮಾಹಿತಿ ಆಧರಿಸಿ 'ಕೌಂಟರ್ ಇಂಟೆಲಿಜೆನ್ಸ್ ಕಾಶ್ಮೀರ್'(ಸಿಐಕೆ)ಘಟಕದ ಸಶಸ್ತ್ರ ಯೋಧರ ಪಡೆ, ಮಂಗಳವಾರ ನಸುಕಿನಲ್ಲೇ ಕಾರ್ಯಾಚರಣೆ ಆರಂಭಿಸಿತು. ಶ್ರೀನಗರ, ಗಂದೇರ್‌ಬಾಲ್, ಕುಲ್ಗಾಂ, ಬದ್ಗಾಂ, ಅನಂತನಾಗ್, ಪುಲ್ವಾಮಾ ಜಿಲ್ಲೆಗಳಲ್ಲಿ ವಿವಿಧೆಡೆ ತೀವ್ರವಾಗಿ ಶೋಧ ಕಾರ್ಯ ನಡೆಸಿ ಉಗ್ರರ ನೇಮಕ ಶಿಬಿರಗಳನ್ನು ನಾಶಪಡಿಸಿತು.

ತೆಹ್ರೀಕ್ ಲಬೈಕ್ ಯಾ ಮುಸ್ಲಿಂ ಸಂಘಟನೆಯು ಪಾಕ್ ಮೂಲಕ ಮತ್ತೊಂದು ಉಗ್ರ ಸಂಘಟನೆಯಾದ 'ಲಷ್ಕರ್ ಎ ತಯ್ಯಬಾದ ಅಂಗಸಂಸ್ಥೆಯಾಗಿದೆ. ಅದನ್ನು ಬಾಬಾ ಹಮಾಸ್ ಖುದ್ದಾಗಿ ನಿರ್ವಹಣೆ ಮಾಡುತ್ತಿದ್ದಾನೆ ಎಂಬುದು ಗುಪ್ತಚರ ವಿಭಾಗದ ಮಾಹಿತಿಯಾಗಿದೆ.

ಕಳೆದ ಭಾನುವಾರ ಗಂದರ್‌ಬಾಲ್ ಜಿಲ್ಲೆಯ ಗಗನ್‌ಗೀರ್ ಪ್ರದೇಶದಲ್ಲಿ ಒಬ್ಬ ವೈದ್ಯ, 6 ಮಂದಿ ಹೊರರಾಜ್ಯದ ಕಾರ್ಮಿಕರ ಹತ್ಯೆಯಲ್ಲಿ ಇದೇ ಸಂಘಟನೆಯ ಕೈವಾಡವಿರಬಹುದು ಎಂದೂ ಶಂಕಿಸಲಾಗಿತ್ತು. ಆದರೆ, ಪಾಕ್‌ನ ಮತ್ತೊಂದು ಉಗ್ರ ಸಂಘಟನೆ 'ಟಿಆರ್‌ಎಫ್' ದಾಳಿ ಹೊಣೆ ಹೊತ್ತುಕೊಂಡಿತ್ತು.

ಮುಂಬೈ ದಾಳಿಕೋರ ರಾಣಾ ವರ್ಷಾಂತ್ಯಕ್ಕೆ ಹಸ್ತಾಂತರ

ದೆಹಲಿ: 2008ರ ನವೆಂಬರ್ 26ರಂದು ಮುಂಬೈ ಮೇಲೆ ಸರಣಿ ಬಾಂಬ್ ದಾಳಿ ನಡೆಸಿದ್ದ ಆರೋಪಿ ತಹಾವುರ್ ರಾಣಾ, ಸದ್ಯ ಅಮೆರಿಕದ ಲಾಸ್ ಏಂಜಲೀಸ್ ಜೈಲಿನಲ್ಲಿದ್ದು, ವರ್ಷಾಂತ್ಯಕ್ಕೆ ಭಾರತಕ್ಕೆ ಹಸ್ತಾಂತರವಾಗುವ ಸಾಧ್ಯತೆ ಇದೆ ಎನ್ನಲಾಗಿದೆ.



ಕೆನಡಾ ಮತ್ತು ಪಾಕಿಸ್ತಾನ ಪ್ರಜೆಯಾಗಿರುವ ರಾಣಾನನ್ನು ಅಮೆರಿಕ ಡಿಸೆಂಬರ್‌ನಲ್ಲಿ ಹಸ್ತಾಂತರಿಸಲಿದೆ ಎಂಬ ನಿರೀಕ್ಷೆ ಇದೆ. ಈ ವಿಷಯವಾಗಿ ದೆಹಲಿಯಲ್ಲಿನ ಅಮೆರಿಕ ರಾಯಭಾರ ಕಚೇರಿಯಲ್ಲಿ 3 ಗಂಟೆ ಸಭೆ ನಡೆದಿ ದೆ. ಎರಡೂ ದೇಶಗಳ ಕೇಂದ್ರ ತನಿಖಾ ಸಂಸ್ಥೆಗಳು ಮತ್ತು ಕಾನೂನು ಇಲಾಖೆಗಳ ಅಧಿಕಾರಿಗಳು ಭಾಗವಹಿಸಿ ರಾಣಾ ಹಸ್ತಾಂತರ ಕುರಿತು ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಹಸ್ತಾಂತರಕ್ಕೆ ಭಾರತದಲ್ಲಿನ ಸಿದ್ಧತೆ, ಭಾರತದ ಜೈಲಿನಲ್ಲಿನ ವ್ಯವಸ್ಥೆಗಳ ಬಗೆಗೂ ಚರ್ಚಿಸಲಾಯಿತು. ಭಾರತಕ್ಕೆ ಹಸ್ತಾಂತರವಾಗುವುದನ್ನು ತಪ್ಪಿಸಲು ರಾಣಾ ಅಮೆರಿಕದ ಅಪೀಲಿಂಗ್ ಕೋರ್ಟ್ ಮೊರೆಹೋಗಿದ್ದ. ಆದರೆ, ಕೋರ್ಟ್ ರಾಣಾ ಮನವಿ ತಿರಸ್ಕರಿಸಿತ್ತು. ಎರಡೂ ದೇಶಗಳ ನಡುವೆ ಆಗಿರುವ ಹಸ್ತಾಂತರ ಒಪ್ಪಂದಗಳಡಿಯೇ ಯಾವುದೇ ಆರೋಪಿಯನ್ನು ಹಸ್ತಾಂತರಿಸಬಹುದು ಎಂದು ನ್ಯಾಯಾಲಯ ಹೇಳಿದೆ. ಲಷ್ಕರ್-ಎ-ತಯ್ಯಬಾ(ಎಲ್‌ಇಟಿ) ಭಯೋತ್ಪಾದಕ ಸಂಘಟನೆಯವರು 2008ರ ನ.26ರ ರಾತ್ರಿ ಮುಂಬೈ ಪ್ರವೇಶಿಸಿ 4 ದಿನಗಳ ಕಾಲ ದಾಳಿ ನಡೆಸಿದ್ದರು. ಪರಿಣಾಮ ವಿದೇಶಿ ಪ್ರಜೆಗಳೂ ಸೇರಿದಂತೆ 166 ಜನರು ಮೃತಪಟ್ಟು 300 ಜನರು ಗಾಯಗೊಂಡಿದ್ದರು.

ಶಾ ಭೇಟಿ ವದಂತಿಗೆ ಸಂಜಯ್ ರಾವತ್ ಪ್ರತಿಕ್ರಿಯೆ

ಬಿಜೆಪಿ ಕೊಟ್ಟ ಕಷ್ಟ ಮರೆಯಲ್ಲ

ಮುಂಬೈ: ಮಹಾರಾಷ್ಟ್ರ ವಿಧಾನಸಭೆಯ 288 ಕ್ಷೇತ್ರಗಳಿಗೆ ನ.20ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ. 4 ವಾರಗಳಷ್ಟೇ ಚುನಾವಣೆಗೆ ಬಾಕಿ ಇರುವುದರಿಂದ ರಾಜಕೀಯ ಪಕ್ಷಗಳಲ್ಲಿ ಚಟುವಟಿಕೆ ಗರಿಗೆದರಿದೆ. ಈ ಮಧ್ಯೆ, ಶಿವಸೇನೆ (ಉದ್ಧವ್ ಬಣ) ನಾಯಕರು



ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ, ಚುನಾವಣಾ ಚಾಣಾಕ್ಷ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದಾರೆ ಎಂಬ ಸುದ್ದಿ ಹರಿದಾಡಿದ್ದು, ಮಹಾರಾಷ್ಟ್ರ ಚುನಾವಣಾ ಕಣದಲ್ಲಿ ಎಲ್ಲರ ಹುಬ್ಬೇರುವಂತೆ ಮಾಡಿದೆ.

ಆದರೆ, ಶಿವಸೇನೆ(ಉದ್ಧವ್ ಬಣ) ನಾಯಕ, ರಾಜ್ಯಸಭಾ ಸದಸ್ಯ ಸಂಜಯ್ ರಾವತ್ ಈ ಸುದ್ದಿಯನ್ನು ಅಲ್ಲಗಳೆದಿದ್ದಾರೆ. ಅದೆಲ್ಲವೂ ಊಹಾಪೋಹ ಎಂದು ರಾವತ್ ಸ್ಪಷ್ಟಪಡಿಸಿದ್ದಾರೆ.

ಬಿಜೆಪಿಯವರು ನಮ್ಮ ನಾಯಕ ಉದ್ಧವ್ ಠಾಕ್ರೆ ಅವರಿಗೆ ಕೊಟ್ಟಿರುವ ನೋ ವನ್ನು ಮರೆಯಲು ಸಾಧ್ಯವೇ ಇಲ್ಲ. ಯಾವುದೇ ಆರೋಪಗಳಿಲ್ಲದಿದ್ದರೂ ನನ್ನನ್ನು ಜೈಲಿಗೆ ಕಳುಹಿಸಿದರು. ಶಿವಸೇನೆ (ಉದ್ಧವ್ ಬಣ) ಸ್ವಾಭಿಮಾನಿ ಜನರ ಪಕ್ಷ. ನಾವು ಏನನ್ನಾದರೂ ಮಾಡಲು ಬಯಸಿ ದರೆ, ನಾವು ಅದನ್ನು ಬಹಿರಂಗವಾಗಿ ಮಾಡುತ್ತೇವೆ ರಾವುತ್ ಹೇಳಿದರು. ನಮ್ಮ ಪಕ್ಷವನ್ನು ದೂಷಿಸಲು ಮತ್ತು ಎಂವಿಎ ಮೈತ್ರಿ ಪಾಲುದಾರರ ನಡುವಿನ ಅಂತ ರವನ್ನು ಹೆಚ್ಚಿಸಲು ರಾಜಕೀಯ ವೈರಿಗಳು ಉದ್ದೇಶಪೂರ್ವಕವಾಗಿ ವದಂತಿಗಳನ್ನು ಹರಡುತ್ತಿದ್ದಾರೆ ಎಂದಿದ್ದಾರೆ. ಬಿಜೆಪಿ, ಉದ್ಧವ್ ಸರಕಾರ ಉರುಳಿ ಸಿತು. ಬಾಳಾಸಾಹೇಬ್ ಠಾಕ್ರೆ ಸ್ಥಾಪಿಸಿದ ಪಕ್ಷವನ್ನು ಒಡೆದು, ಚಿಹ್ನೆಯನ್ನೂ ಕಸಿದುಕೊಂಡಿತು. ಇಂಥ ಬಿಜೆಪಿ ಜತೆ ಮತ್ತೆ ಕೈಜೋಡಿಸುವುದು ಎಂದರೆ ಔರಂಗಜೇಬ್ ಮತ್ತು ಅಫ್ಜಲ್ ಖಾನ್ ಒಟ್ಟಿಗೆ ಸೇರುವುದು ಎಂದರ್ಥ ಎಂದು ರಾವತ್ ನುಡಿದರು.

ನಿಶ್ಚಲ ನಾಗ-ಮುಟ್ಟಿದರೂ ಕಚ್ಚದ ಹೊಸ ಪ್ರಭೇದ

'ಲಿಯೊನಾರ್ಡೊ ಡಿಕ್ಯಾಪ್ರಿಯೊ' ಹಿಮಾಲಯದ ಹಾವಿನ ಹೆಸರು

ದೆಹಲಿ: ಹಿಮಾಲಯ ತಪ್ಪಲಿನಲ್ಲಿ ಹಾವಿನ ಹೊಸ ಪ್ರಭೇದ ಪತ್ತೆಯಾಗಿದೆ. ಆ ಹಾವಿಗೆ ಜನಪ್ರಿಯ ಹಾಲಿವುಡ್ ಚಿತ್ರ 'ಟೈಟಾನಿಕ್'ನ ನಾಯಕ ನಟ 'ಲಿಯೊನಾರ್ಡೊ ಡಿಕ್ಯಾಪ್ರಿಯೋ' ಎಂದು ನಾಮಕರಣ ಮಾಡಿದೆ. ಹಾಲಿವುಡ್ ನಟ, ನಿರ್ಮಾಪಕ ಪ್ರಾಣಿಗಳ ಸಂರಕ್ಷಣೆಗೆ ನೀಡಿದ ಕೊಡುಗೆ ಗೌರವಿಸಿ ಅವರದೇ ಹೆಸರಿಡಲಾಗಿದೆ ಭಾರತ, ಜರ್ಮನಿ, ಬ್ರಿಟನ್‌ನ ವನ್ಯಜೀವಿ ಸಂಶೋಧಕರ ತಂಡ ತಿಳಿಸಿದೆ.

ಈ ಸಂಶೋಧಕರ ತಂಡ 2020ರಿಂದಲೂ ಭಾರತದ ಸರೀಸೃಪಗಳ ಬಗ್ಗೆ ಸಂಶೋಧನೆ ನಡೆಸುತ್ತಿದೆ. ಸಂಶೋಧಕರ ತಂಡ ಹಿಮಾಲಯದ ಪಶ್ಚಿಮ ಭಾಗದ ಪ್ರದೇಶಗಳಿಗೆ ಭೇಟಿ ನೀಡಿದಾಗ ಮಣ್ಣಿನ ರಸ್ತೆಯಲ್ಲಿ ಕಂದು ಬಣ್ಣದ ಹಾವುಗಳನ್ನು ಕಂಡಿದ್ದಾರೆ. ಈ ಹಾವು ಮೊದಲಿಗೆ ಚಲನರಹಿತವಾಗಿತ್ತು ಮತ್ತು ಹಿಡಿಯಲು ಮುಂದಾದಾಗ ಕಚ್ಚುವ, ಬುಸುಗುಟ್ಟುವ

ಪ್ರಯತ್ನವನ್ನೂ ಮಾಡಲಿಲ್ಲ. ಈ ಹಾವನ್ನು 'ಆಂಗ್ಯುಲಸ್'(ಸಣ್ಣ ಹಾವು) ಎಂಬ ಹೊಸ ಪ್ರಭೇದದಲ್ಲಿ ವರ್ಗೀಕರಿಸಲಾಗಿದೆ ಎಂದು 'ಸೈಂಟಿಫಿಕ್ ರಿಪೋರ್ಟ್ಸ್' ಜರ್ನಲ್‌ನಲ್ಲಿ ಪ್ರಕಟಿಸಿದ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಹಿಮಾಚಲ ಪ್ರದೇಶದ ಚಂಬಾ ಮತ್ತು ಕುಲು, ಉತ್ತರಾಖಂಡದ ನೈನಿತಾಲ್, ನೇಪಾಳದ ಚಿತ್ವಾನ್ ರಾಷ್ಟ್ರೀಯ ಉದ್ಯಾನವನದಲ್ಲೂ ಹಾವಿನ ಹೊಸ ಪ್ರಭೇದಗಳು ಕಂಡುಬಂದಿವೆ ಎಂದು ಜೋರಾಂ ವಿವಿ ಪ್ರಾಣಿಶಾಸ್ತ್ರ ವಿಭಾಗ ಪ್ರಾಧ್ಯಾಪಕ ಎಚ್.ಟಿ.ಲಾಲ್‌ರೆಮ್ಸಂಗ್ ಹೇಳಿದ್ದಾರೆ.

ನಸ್ರಲ್ಲಾ ಬಂಕರ್‌ನಲ್ಲಿ 50 ಕೋ.ಡಾ. ಹಣ, ಭಾರೀ ಚಿನ್ನ ಪತ್ತೆ: ಇಸ್ರೇಲ್

ಟೆಲ್‌ಅವಿವ್: ಹೆಜ್ಬೊಲ್ಲಾ ಉಗ್ರ ಸಂಘಟನೆ ಮುಖ್ಯಸ್ಥ ಹಸನ್ ನಸ್ರಲ್ಲಾ ಅಡಗಿದ್ದ ಬೈರೂತ್ ಆಸ್ಪತ್ರೆಯ ನೆಲದಾಳದಲ್ಲಿದ್ದ ರಹಸ್ಯ ಅಡಗುತಾಣದಲ್ಲಿ(ಬಂಕರ್) 50 ಕೋಟಿ ಅಮೆರಿಕನ್ ಡಾಲರ್ ನಗದು(ಭಾರತದ ರೂಪಾಯಿ ಲೆಕ್ಕದಲ್ಲಿ 4195 ಕೋಟಿ ರು.) ಮತ್ತು ಅಪಾರ ಪ್ರಮಾಣದ ಚಿನ್ನದ ಸಂಗ್ರಹ ಪತ್ತೆಯಾಗಿದೆ ಎಂದು ಇಸ್ರೇಲ್ ರಕ್ಷಣಾ ಪಡೆ ಹೇಳಿದೆ. ಆ ಮೂಲಕ ಹೆಜ್ಬೊಲ್ಲಾ ಉಗ್ರ ಸಂಘಟನೆಯ ಮುಖ್ಯಸ್ಥನ ಶ್ರೀಮಂತಿಕೆಯನ್ನು ಹೊರಗೆಡವಿದೆ.

ಇದೇ ಬಂಕರ್ ಮೇಲೆ ಇಸ್ರೇಲ್ ವಾಯುದಾಳಿ ನಡೆಸಿದಾಗ ನಸ್ರಲ್ಲಾ ಹತನಾದ. ಆ ಬಳಿಕ ಇಸ್ರೇಲ್ ಸೇನೆ ಶೋಧ ನಡೆಸಿದಾಗ ಹಣದ ಖಜಾನೆಯೇ ಕಂಡುಬಂದಿದೆ ಎಂದು ಇಸ್ರೇಲ್ ಗುಪ್ತಚರ ವಿಭಾಗ ಮಾಹಿತಿ ಬಹಿರಂಗಪಡಿಸಿದೆ.

ಇಸ್ರೇಲ್ ಸೇನೆಯ ವಕ್ತಾರ ರಿಯರ್ ಅಡ್ಮಿರಲ್ ಡೇನಿಯಲ್ ಹಗರಿ, ಬಿಗಿಭದ್ರತೆಯೊಂದಿಗೆ ರಹಸ್ಯ ಸ್ಥಳದಲ್ಲಿ ಇಸ್ರೇಲ್ ಸೇನೆ ಕಾರ್ಯಾಚರಣೆ ನಡೆಸಿತ್ತು. ಬಂಕರ್‌ನಲ್ಲಿ ಭೂಗತ ಖಜಾನೆ ಇತ್ತು. ಅದರಲ್ಲಿ ಕೋಟ್ಯಂತರ ಡಾಲರ್ ನಗದು ಮತ್ತು ಚಿನ್ನದ ಗಟ್ಟಿ ಸಂಗ್ರಹಿಸಿಡಲಾಗಿತ್ತು. ಇದೇ ಹಣ ಬಳಸಿ ಹೆಜ್ಬೊಲ್ಲಾ ಇಸ್ರೇಲ್ ವಿರುದ್ಧ ದಾಳಿ ನಡೆಸುತ್ತಿತ್ತು ಎಂದಿದ್ದಾರೆ.

ಹೆಜ್ಬೊಲ್ಲಾ ಹೊಸ ಮುಖ್ಯಸ್ಥ ನಯೀಂ ಖಾಸಿಂ ಇರಾನ್‌ಗೆ

ಬೈರೂತ್: ಮುಖಂಡ ಹಸನ್ ನಸ್ರಲ್ಲಾ ಸೇರಿದಂತೆ ಸಂಘಟನೆಯ ನಾಯಕರು ಸರಣಿಯೋಪಾದಿ ಹತರಾದ ನಂತರ ಹೆಜ್ಬೊಲ್ಲಾ ಉಗ್ರಗಾಮಿ ಗುಂಪಿನ ಹೊಸ ಮುಖ್ಯಸ್ಥನಾಗಿ ನೇಮಕಗೊಂಡ ನಯೀಂ ಖಾಸಿಂ ಈಗ ಲೆಬನಾನ್ ಬಿಟ್ಟು ಪರಾರಿಯಾಗಿದ್ದಾನೆ. ಇಸ್ರೇಲ್ ಸೇನೆಯ ಸಂಭಾವ್ಯ ದಾಳಿಯಿಂದ ತಪ್ಪಿಸಿ ಕೊಳ್ಳಲು ಇರಾನ್ ಸೇರಿದ್ದಾನೆ. ಇರಾನ್ ನಾಯಕರ ಆದೇಶದ ಮೇರೆಗೆ ಖಾಸಿಂ ಇರಾನ್ ಸೇರಿಕೊಂಡಿ ದ್ದಾನೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಇಸ್ರೇಲ್ ಸೇನೆಯ ಸತತ ದಾಳಿಗೆ ಹಸನ್ ನಸ್ರಲ್ಲಾ ಮತ್ತು ಹಶೆಮ್ ಸಫಿದೀನ್ ಸೇರಿದಂತೆ ಹೆಜ್ಬೊಲ್ಲಾದ ಉನ್ನತ ನಾಯಕರು ಹತರಾಗಿದ್ದಾರೆ. ಖಾಸಿಂ ಮುಂದಿನ ಗುರಿಯಾಗಿರಬಹುದು ಎಂಬ ಶಂಕೆಯೇ ಮೇರೆಗೇ ಸ್ಥಳಾಂತರ ಮಾಡಲಾಗಿದೆ ಎಂದು ವರದಿಯಾಗಿದೆ.



ಸಿಜೆಐ ಅವಹೇಳನ; ಎಸ್‌ಪಿ ಸಂಸದ ಯಾದವ್ ವಿವಾದ

ದೆಹಲಿ: ಅಯೋಧ್ಯೆ ಸಮಸ್ಯೆ ಬಗೆಹರಿಸಲು ದಾರಿ ತೋರುವಂತೆ ದೇವರಲ್ಲಿ ಪ್ರಾರ್ಥಿಸಿದ್ದೆ ಎಂಬ ಹೇಳಿಕೆ ನೀಡಿದ್ದ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ವಿರುದ್ಧ ಸಮಾಜವಾದಿ ಪಕ್ಷದ (ಎಸ್‌ಪಿ) ಸಂಸದ ರಾಮ್‌ಗೋಪಾಲ್ ಯಾದವ್ ವಿವಾದಾತ್ಮಕ ಹೇಳಿಕೆ ನೀಡಿ ಬಳಿಕ ಉಲ್ಟಾ ಹೊಡೆದಿದ್ದಾರೆ.

ಸಿಜೆಐ ಹೇಳಿಕೆ ಕುರಿತು ಪತ್ರಕರ್ತರ ಪ್ರಶ್ನಿಸಿದಾಗ ಸಂಸದ ರಾಮ್‌ಗೋಪಾಲ್ ಯಾದವ್, 'ಸತ್ತವರನ್ನು ಮರಳಿ ಬದುಕಿಸಿದರೆ ಅವರು ದೇವ್ವಗಳಾಗುತ್ತಾರೆ. ಅಷ್ಟೇ ಅಲ್ಲ ನ್ಯಾಯವನ್ನು ಅನುಸರಿಸಲು ಪ್ರಾರಂಭಿಸುತ್ತಾರೆ. ಅಂಥ ಜನರು ಈ ಬಗೆಯಲ್ಲಿ ತೋಚಿದ ವಿಷಯಗಳನ್ನು ಹೇಳುತ್ತಲೇ ಇರುತ್ತಾರೆ. ನಾವು ಅವರನ್ನು ಗಂಭೀರವಾಗಿ ಪರಿಗಣಿಸಬೇಕೇ? ಇಂಥದಕ್ಕೆ ಉತ್ತರಿಸಲು ಇಚ್ಛಿಸುವುದಿಲ್ಲ' ಎಂದು ಉತ್ತರಿಸಿದ್ದರು. ಅವರ ಹೇಳಿಕೆ ವಿವಾದಕ್ಕೆ ತಿರುಗಿ ವೈರಲ್ ಆಗಿದ್ದು, ಸಿಜೆಐ ಕುರಿತು ಅವಹೇಳನಕಾರಿಯಾಗಿ ಪ್ರತಿಕ್ರಿಯಿಸಿರುವುದಕ್ಕೆ ಜಾಲತಾಣದಲ್ಲಿ ಭಾರೀ ಆಕ್ಷೇಪ ವ್ಯಕ್ತವಾಯಿತು. 'ಮುಖ್ಯ ನ್ಯಾಯಮೂರ್ತಿ ವಿರುದ್ಧ ಇಂಥ ಭಾಷಾ ಪ್ರಯೋಗ ಸರಿಯಲ್ಲ' ಎಂದು ಹಲವರು ವಿರೋಧ ವ್ಯಕ್ತಪಡಿಸಿದರು. ವಿವಾದ ದೊಡ್ಡದಾಗುತ್ತಿದ್ದಂತೆಯೇ ಎಚ್ಚೆತ್ತ ರಾಮ್ ಗೋಪಾಲ್, ಮಾತನ್ನೇ ತಿರುಗಿಸಿದರು. 'ಸಿಜೆಐ ಬಗೆಗೆ ಯಾರೂ ನನ್ನನ್ನು ಕೇಳಿಲ್ಲ. ಸಿಜೆಐ ಪ್ರತಿಷ್ಠಿತ ವ್ಯಕ್ತಿ. ಅವರ ಮೇಲೆ ಯಾವುದೇ ಕಮೆಂಟ್ ಮಾಡಿಲ್ಲ. ಬಹೈಚ್ ಹಿಂಸಾಚಾರ ಬಗ್ಗೆ ನನ್ನನ್ನು ಪ್ರಶ್ನೆ ಮಾಡಲಾಗಿತ್ತು ನಾನು ಅದಕ್ಕೆ ಉತ್ತರಿಸಿದ್ದೇನೆ ಅಷ್ಟೆ' ಎಂದು ಸಮಜಾಯಿಸಿ ನೀಡಿದ್ದಾರೆ.

ಪುಣೆಯಲ್ಲಿ ಭಾನುವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ಕೆಲವು ವ್ಯಾಜ್ಯಗಳಿಗೆ ಬೇಗ ಪರಿಹಾರ ಸಿಗುವುದಿಲ್ಲ. ಅಂತಹದ್ದೇ ಒಂದು ಪ್ರಕರಣ ರಾಮ ಜನ್ಮಭೂಮಿ-ಬಾಬರಿ ಮಸೀದಿ ವಿವಾದ. ಆಗ ನಾನು ದೇವರೆದುರು ಪರಿಹಾರ ಮಾರ್ಗ ತೋರುವಂತೆ ಪ್ರಾರ್ಥಿಸಿದ್ದೆ. ನಂಬಿಕೆ ಇದ್ದರೆ ದೇವರು ಪರಿಹಾರ ಮಾರ್ಗ ಖಂಡಿತಾ ತೋರಿಸುತ್ತಾನೆ' ಎಂದು ಹೇಳಿದ್ದರು.

5 ವರ್ಷದಿಂದ ನಕಲಿ ಕೋರ್ಟ್-ಬಂಧನ

ಗಾಂಧಿನಗರ: ಗುಜರಾತ್ ರಾಜ್ಯದ ಮೋರಿಸ್ ಸ್ಯಾಮ್ಯುಯೆಲ್ ಕ್ರಿಶ್ಚಿಯನ್ ಎಂಬ ವಂಚಕ ಗಾಂಧಿನಗರದಲ್ಲಿನ ತನ್ನದೇ ಕಚೇರಿಯಲ್ಲಿ ನ್ಯಾಯಾಲಯದ ಸೆಟಪ್ ಹಾಕಿಸಿ ನ್ಯಾಯಾಧೀಶರಂತೆ ವೇಶ ಧರಿಸಿ 5 ವರ್ಷಗಳಿಂದ ಜನರನ್ನು ವಂಚಿಸುತ್ತಿದ್ದ ಆಘಾತಕಾರಿ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ಛದ್ಮವೇಶ ಧರಿಸಿದ ಆರೋಪಿ ಮೋರಿಸ್, ಆರ್‌ಬಿಟ್ರಲ್ ಟ್ರಿಬ್ಯೂನಲ್ ಕೋರ್ಟ್ ಫಲಕ ಹಾಕಿಕೊಂಡು ಭೂವ್ಯಾಜ್ಯ ದಾವೆಗಳನ್ನು ವಿಚಾರಣೆ ನಡೆಸಿದಂತೆ ಮಾಡಿ ಹಣ ನೀಡಿದವರಿಗೆ ಅನುಕೂಲಕರ ಆದೇಶಗಳನ್ನು ನೀಡುತ್ತಾ ಜನರನ್ನು ವಂಚಿಸುತ್ತಿದ್ದ. 5 ವರ್ಷಗಳಿಂದಲೂ ಈ 'ನಕಲಿ ಕೋರ್ಟ್' ನಡೆಸಿಕೊಂಡು ಬಂದಿದ್ದ. 2019ರಲ್ಲಿ ಸರಕಾರಿ ಭೂಮಿಗೆ ಸಂಬಂಧಿಸಿದ ಪ್ರಕರಣದಲ್ಲಿ ತನ್ನ ಕಕ್ಷಿದಾರನ ಪರ ಆದೇಶ ಹೊರಡಿಸಿದ್ದ. ಅಹಮದಾಬಾದ್ ಸಿವಿಲ್ ಕೋರ್ಟ್ ರಿಜಿಸ್ಟ್ರಾರ್ ಅವರಿಗೆ ಸುದ್ದಿ ತಿಳಿದು ಅವರು, ಕರಂಜ ಪೊಲೀಸ್ ಠಾಣೆಗೆ ದೂರು ನೀಡಿದ ನಂತರ ಪೊಲೀಸರು ವಂಚಕ ಮೋರಿಸ್ ಮತ್ತು ನಕಲಿ ಕೋರ್ಟ್‌ನಲ್ಲಿ ಆತನಿಗೆ ನೆರವಾಗುತ್ತಿದ್ದವರನ್ನು ಬಂಧಿಸಿ, ಐಪಿಸಿ ಸೆಕ್ಷನ್ 170 ಮತ್ತು 419ರಡಿ ಪ್ರಕರಣ ದಾಖಲಿಸಿದ್ದಾರೆ.

ರೈಲ್ವೆ ವಿಐಪಿ ಲಂಚ್‌ನಲ್ಲಿ 'ಜರಿ ಹುಳು': ತರಾಟೆ

ದೆಹಲಿ: ಭಾರತೀಯ ರೈಲ್ವೆ ವಿಐಪಿ ಪ್ರಯಾಣಿಕರಿಗೆ ಪೂರೈಸುವ ಆಹಾರದಲ್ಲಿ 'ಜರಿ ಹುಳು' ಪತ್ತೆಯಾಗಿದ್ದು, ಫೋಟೋ ವೈರಲ್ ಆಗಿದೆ. ಅದಕ್ಕೆ 'ಐಆರ್‌ಸಿಟಿಸಿ' ಕ್ಷಮೆ ಕೋರಿದೆ. ರೈಲ್ವೆಯನ್ನು ನೆಟ್ಟಿಗರು ತರಾಟೆ ತೆಗೆದುಕೊಂಡಿದ್ದಾರೆ.

ದೆಹಲಿಯಲ್ಲಿ ಪ್ರಯಾಣಿಸುವಾಗ ರೈಲ್ವೆ ಸರಬರಾಜು ಮಾಡಿದ 'ವಿಐಪಿ ಎಕ್ಸಿಕ್ಯುಟಿವ್ ಲಂಚ್'ನಲ್ಲಿ 'ಜರಿ ಹುಳು' ಇದ್ದುದನ್ನು ಕಂಡ ದೆಹಲಿಯ ಆರೇನ್ಶ್ ಸಿಂಗ್ ಎಂಬವರು ಫೋಟೊ ತೆಗೆದು ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಜತೆಗೆ, 'ಭಾರತೀಯ ರೈಲ್ವೆಯ ಆಹಾರದ ಗುಣಮಟ್ಟ ಸುಧಾರಿಸಿದೆ. ಈಗವರು ಹೆಚ್ಚು ಪ್ರೋಟೀನ್ ಬೆರೆಸಿದ ರಾಯ್ತಾ ಕೊಡುತ್ತಿದ್ದಾರೆ' ಎಂದು ವ್ಯಂಗ್ಯವಾಗಿ ಸಂದೇಶ ಬರೆದಿದ್ದಾರೆ. 'ವಿಐಪಿ ಎಕ್ಸಿಕ್ಯುಟಿವ್ ಲಂಚ್‌ನಲ್ಲೇ ಈ ರೀತಿ ಆದರೆ, ಇನ್ನು ಸಾಮಾನ್ಯ ರೈಲುಗಳಲ್ಲಿ ನೀಡುವ ಆಹಾರದ ಗುಣಮಟ್ಟ ಹೇಗೆ ಲ್ಲಾ ಇರಬಹುದು? ಕಲ್ಪನೆ ಮಾಡಿಕೊಳ್ಳುವುದೇ ಕಷ್ಟ' ಎಂದೂ ಕುಟುಕಿದ್ದಾರೆ. ರೈಲ್ವೆಯ ಆಹಾರ ಸುರಕ್ಷತೆಗೆ ಹೊರತಾ ಗಿದೆ ಎಂದು ರೈಲ್ವೆ ಪ್ರಯಾಣಿಕರನ್ನು ಎಚ್ಚರಿಸಿದ್ದಾರೆ. ಈ ಬಗ್ಗೆ ತಕ್ಷಣ ಪ್ರತಿಕ್ರಿಯೆ ನೀಡಿರುವ ಐಆರ್‌ಸಿಟಿಸಿ, 'ಅನಾನುಕೂಲಕ್ಕೆ ವಿಷಾದಿಸುತ್ತೇವೆ. ತಕ್ಷಣ ಕ್ರಮಕೈಗೊಳ್ಳಲಾಗು ವುದು. ಬುಕಿಂಗ್ ವಿವರ, ನಿಲ್ದಾಣದ ಹೆಸರು, ಮೊಬೈಲ್ ಸಂಖ್ಯೆ ಹಂಚಿಕೊಳ್ಳಿ' ಎಂದು ಸಂದೇಶ ರವಾನಿಸಿದೆ.

ಲಾರೆನ್ಸ್ ಹತ್ಯೆಗೆ ಕೋಟಿ ರು. ಬಹುಮಾನ: ಕರ್ಣಿ ಸೇನೆ

ದೆಹಲಿ: ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್‌ನ ಕೊಂದವರಿಗೆ 1,11,11,111 ರು. ನಗದು ಬಹುಮಾನ ಕೊಡುವುದಾಗಿ ಕ್ಷತ್ರಿಯ ಕರ್ಣಿ ಸೇನೆ ಘೋಷಿಸಿದೆ. ಕ್ಷತ್ರಿಯ ಕರ್ಣಿ ಸೇನೆ ರಾಷ್ಟ್ರೀಯ ಅಧ್ಯಕ್ಷ ರಾಜ್ ಶೇಖಾವತ್ ವಿಡಿಯೊ ಬಿಡುಗಡೆ ಮಾಡಿ,

ಪೊಲೀಸ ರಾಗಲೀ, ಬೇರಾರೇ ಆಗಲಿ ಲಾರೆನ್ಸ್ ನನ್ನು ಕೊಂದರೆ ಒಂದು ಕೋಟಿ ಹನ್ನೊಂದು ಲಕ್ಷದ ಹನ್ನೊಂದು ಸಾವಿ ರದ ನೂರ ಹನ್ನೊಂದು ರು. ಬಹುಮಾನ ನೀಡುವೆ ಎಂದಿದ್ದಾರೆ.

ಕರ್ಣಿ ಸೇನಾ ಮುಖ್ಯಸ್ಥ ಸುಖದೇವ್ ಸಿಂಗ್ ಗೊಗಮೆಡಿ 2023ರ ಡಿ.5ರಂದು ಜೈಪುರದಲ್ಲಿ ಕೊಲೆಯಾದರು. ಅವರನ್ನು ಬಿಷ್ಣೋಯ್ ಗ್ಯಾಂಗ್ ಕೊಂದಿದೆ ಎಂಬ ಕಾರಣಕ್ಕೆ ಪ್ರತಿಕಾರವಾಗಿ ಕರ್ಣಿ ಸೇನೆ ಈ ಪ್ರಕಟಣೆ ಹೊರಡಿಸಿದೆ ಎನ್ನಲಾಗಿದೆ. ಕ್ಷತ್ರಿಯ ಕರ್ಣಿ ಸೇನಾ ಮುಖ್ಯಸ್ಥ, ನಮ್ಮ ಅಮೂಲ್ಯ ರತ್ನ ಮತ್ತು ಪರಂಪರೆಯ ಅಮರ ಹುತಾತ್ಮ ಸುಖದೇವ್ ಸಿಂಗ್ ಅವರ ಹಂತಕ ಲಾರೆನ್ಸ್ ಎಂದು ಕಿಡಿಕಾರಿರುವ ಶೇಖಾವತ್, ಅವನಿಗೆ ಗುಂಡಿಕ್ಕಿದವರಿಗೆ ಬಹುಮಾನ ಎಂದಿದ್ದಾರೆ. ಇದೇ ವೇಳೆ, ಕೇಂದ್ರ, ಗುಜರಾತ್ ಸರಕಾರಗಳ ವಿರುದ್ಧವೂ ಅವರು ವಾಗ್ದಾಳಿ ನಡೆಸಿದ್ದಾರೆ. ಲಾರೆನ್ಸ್ ಬಿಷ್ಣೋಯ್ ಸದ್ಯ ಮಾದಕದ್ರವ್ಯ ಕಳ್ಳಸಾಗಣೆ ಪ್ರಕರಣ ದಲ್ಲಿ ಗುಜರಾತ್ ಜೈಲಲ್ಲಿದ್ದಾನೆ. ನಟ ಸಲ್ಮಾನ್ ಮನೆ ಹೊರಗೆ ಗುಂಡಿನ ದಾಳಿ, ಮಾಜಿ ಸಚಿವ ಬಾಬಾ ಸಿದ್ದಿಕಿ ಹತ್ಯೆ ಪ್ರಕರಣದಲ್ಲೂ ಬಿಷ್ಣೋಯ್ ಹೆಸರು ಕೇಳಿಬಂದಿದೆ.

ವಕ್ಫ್ ಜೆಪಿಸಿ ಸಭೆ; ಬಾಟಲಿ ಒಡೆದ ಟಿಎಂಸಿ ಸಂಸದ

ದೆಹಲಿ: ವಕ್ಫ್ ತಿದ್ದುಪಡಿ ಮಸೂದೆ ಪರಾಮರ್ಶೆಗೆ ಸಂಬಂಧಿಸಿದ ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯ ಮಂಗಳವಾರದ ಸಭೆಯಲ್ಲಿ ಕೋಪಗೊಂಡ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ ನಾಯಕ ಕಲ್ಯಾಣ್ ಬ್ಯಾನರ್ಜಿ, ಗಾಜಿನ ಬಾಟಲಿಯನ್ನು

ಮೇಲೆತ್ತಿ ಅಪ್ಪಳಿಸಿ ಚೂರೂಗಿಸಿದ್ದಾರೆ. ಪರಿ ಣಾಮ ಅವರ ಬಲಗೈ ಹೆಬ್ಬೆರಳು ಮತ್ತು ಕಿರುಬೆರಳಿಗೆ ಗಾಯವಾಗಿದೆ. ಕೂಡಲೇ ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆಗೆ ಕರೆದೊಯ್ದು ಬ್ಯಾಂಡೇಜ್ ಮಾಡಿಸಲಾಗಿದೆ. ಬಿಜೆಪಿಯ ಹಿರಿಯ ಸಂಸದ ಜಗದಾಂಬಿಕಾ ಪಾಲ್ ಅಧ್ಯಕ್ಷತೆ ವಹಿಸಿದ್ದ ಜೆಪಿಸಿ ಸಭೆಯಲ್ಲಿ ಚರ್ಚೆಯ ವೇಳೆ ಪಶ್ಚಿಮ ಬಂಗಾಳದ ಶ್ರೀರಾಮಪುರ ಕ್ಷೇತ್ರದ ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ಮತ್ತು ಬಿಜೆಪಿ ನಾಯಕ ಅಭಿಜಿತ್ ಗಂಗೋಪಾಧ್ಯಾಯ ನಡುವೆ ಸಭೆಯಲ್ಲಿ ತೀವ್ರ ವಾಗ್ವಾದ ಶುರುವಾಯಿತು. ಈ ಸಂದರ್ಭ ಕಲ್ಯಾಣ್ ಬ್ಯಾನರ್ಜಿ ಹಠಾತ್ ಸಿಟ್ಟಿಗೆದ್ದು ಕೈಗೆ ಸಿಕ್ಕ ಬಾಟಲಿಯನ್ನು ತೆಗೆದು ಮೇಜಿನ ಮೇಲಕ್ಕೆ ಅಪ್ಪಳಿಸಿದರು. ಆಗ ಅವರ ಬಲಗೈಗೆ ಗಾಯವಾ ಯಿತು. ನಂತರ ಎಐಎಂಐಎಂ ಸಂಸದ ಅಸಾದುದ್ದೀನ್ ಓವೈಸಿ ಮತ್ತು ಎಎಪಿ ನಾಯಕ ಸಂಜಯ್ ಸಿಂಗ್ ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು. ವಕ್ಫ್ ಮಸೂದೆ ಮೇಲಿನ ಚರ್ಚೆ ವೇಳೆ ಪ್ರತಿಪಕ್ಷಗಳ ಸಂಸದರು ನಿವೃತ್ತ ನ್ಯಾಯಮೂ ರ್ತಿಗಳು ಮತ್ತು ವಕೀಲರ ಪಾತ್ರದ ಬಗ್ಗೆ ಪ್ರಶ್ನೆಮಾಡಿದಾಗ ಜಗಳ ಆರಂಭವಾಯಿತು.

ವಯನಾಡಲ್ಲಿ ಇಂದು ಪ್ರಿಯಾಂಕಾ ನಾಮಪತ್ರ

ವಯನಾಡು: ವಿಜಯ ಲಕ್ಷ್ಮಿ ಪಂಡಿತ್, ಇಂದಿರಾ ಗಾಂಧಿ ನಂತರ ನೆಹರು ಕುಟುಂಬದ ಮತ್ತೊಬ್ಬ ಮಹಿಳೆ ಚುನಾವಣಾ ರಾಜಕಾರಣ ಪ್ರವೇಶಕ್ಕೆ ಕೇರಳದ ಲೋಕಸಭಾ ಕ್ಷೇತ್ರ ವಯನಾಡು ಸಜ್ಜಾಗಿದೆ. ಉಪ ಚುನಾವಣೆ ಘೋಷಣೆಯಾಗಿರುವ

ಕೇರಳದ ವಯನಾಡು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಪ್ರಿಯಾಂಕಾ ಗಾಂಧಿ ವಾದ್ರಾ (53) ಕಣಕ್ಕಿಳಿಯುತ್ತಿದ್ದು, ಬುಧವಾರ ನಾಮಪತ್ರ ಸಲ್ಲಿಸಲಿದ್ದಾರೆ.

ಅವರಿಗೆ ಬೆಂಬಲವಾಗಿರಲು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಪಕ್ಷದ ಹಿರಿಯ ನಾಯಕಿಯೂ ಆದ ತಾಯಿ ಸೋನಿಯಾ ಗಾಂಧಿ ಅವರೆಲ್ಲರೂ ನಾಮ ಪತ್ರ ಸಲ್ಲಿಕೆ ವೇಳೆ ಉಪಸ್ಥಿತರಿರುವರು ಎಂದು ಪಕ್ಷದ ಮೂಲಗಳು ತಿಳಿಸಿವೆ. ನಾಮಪತ್ರ ಸಲ್ಲಿಕೆಗೂ ಮುನ್ನ ವಯನಾಡಿನಲ್ಲಿ ಬೃಹತ್ ರೋಡ್ ಶೋವನ್ನು ಸಂಘಟಿಸಲಾಗಿದೆ. ಹೆಚ್ಚಿನ ಜನರು ಭಾಗಿಯಾಗಿ ಸೋದರಿಗೆ ತಮ್ಮ ಪ್ರೀತಿಯ ಆಳವನ್ನು ತೋರಬೇಕು ಎಂದು ರಾಹುಲ್ ಗಾಂಧಿ ಮನವಿ ಮಾಡಿದ್ದಾರೆ. ಪ್ರಿಯಾಂಕಾ ವಾದ್ರಾ, ಸದ್ಯ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾ ಗಿದ್ದಾರೆ. ಇದಕ್ಕೂ ಮುನ್ನ ಅವರ ಸಂಸತ್ ಪ್ರವೇಶ ತಾಯಿ ಸೋನಿಯಾ ಗಾಂಧಿ ಪ್ರತಿನಿಧಿಸುತ್ತಿದ್ದ ರಾಯ್‌ಬರೇಲಿ ಲೋಕ ಸಭಾ ಕ್ಷೇತ್ರದಿಂದ ಆಗಲಿದೆ ಎಂದು ನಿರೀಕ್ಷಿಸಲಾಗಿತ್ತು.

ಸಮಾಚಾರ ಸಣ್ಣದಲ್ಲ

ದೊಡಮನಿಗೆ ಗೌರವ ಡಾಕ್ಟರೇಟ್

ಸಿಂದಗಿ: ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಬಬಲೇಶ್ವರ ಗ್ರಾಮದ ಮಂಜುನಾಥ ದೊಡಮನಿ ಅವರಿಗೆ ಪುದುಚೆರಿ (ಪಾಂಡಿಚೇರಿ)ಯ ಗ್ಲೋಬಲ್ ಹ್ಯೂಮನ್ ಪೀಸ್ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಗಿದೆ. ಇದರಿಂದ ಸಮಾಜ ಸೇವೆ ಮಾಡಲು ಅವರ ಜವಾಬ್ದಾರಿ ಇನ್ನಷ್ಟು ಹೆಚ್ಚಾಗಿದೆ. ಪದವಿ ನೀಡಿದ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಆಡಳಿತ ಮಂಡಳಿಗೆ ಮಂಜುನಾಥ ದೊಡಮನಿ ಹಾಗೂ ಅವರ ಆಪ್ತ ಬಳಗ ಕೃತಜ್ಞತೆ ಸಲ್ಲಿಸಿದೆ.

ರಾಣಿ ಚೆನ್ನಮ್ಮ ಜನ್ಮದಿನೋತ್ಸವ ಇಂದು

ಸಿಂದಗಿ: ಅ.23ರಂದು ಕಿತ್ತೂರ ರಾಣಿ ಚೆನ್ನಮ್ಮಳ 246ನೆಯ ಜನ್ಮದಿನೋತ್ಸವ ಹಾಗೂ ಬ್ರಿಟಿಷರ ವಿರುದ್ಧ ಜಯಸಾಧಿಸಿದ ವಿಜಯದ ಸವಿನೆನಪಿಗಾಗಿ 200ನೇ ವಿಜಯೋತ್ಸವವನ್ನು ಸಮಾಜದ ವತಿಯಿಂದ ಬುಧವಾರ ಚೆನ್ನಮ್ಮ ವೃತ್ತದಲ್ಲಿ ಬೆಳಿಗ್ಗೆ 8.00 ಗಂಟೆಗೆ ಪೂಜೆ ಸಲ್ಲಿಸುವುದು. ಬಳಿಕ ತಹಸೀಲ್ದಾರ್ ಕಚೇರಿಯಲ್ಲಿ ಬೆಳಿಗ್ಗೆ 10ಗಂಟೆಗೆ ತಾಲೂಕು ಆಡಳಿತ ವತಿಯಿಂದ ಜರುಗುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಪಂಚಮಸಾಲಿ ಸಮಾಜದ ತಾಲೂಕಾಧ್ಯಕ್ಷ ಎಂ.ಎಂ.ಹಂಗರಗಿ ಹಾಗೂ ಪ್ರದಾನ ಕಾರ್ಯದರ್ಶಿ ಆನಂದ ಶಾಬಾದಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಪುರಸಭೆ ಉಪಾಧ್ಯಕ್ಷರ ಚುನಾವಣೆ

ಗುಳೇದಗುಡ್ಡ: ಅನುಸೂಚಿತ ಜಾತಿ ಸ್ಥಾನಕ್ಕೆ ಮೀಸಲಾಗಿರುವ ಪುರಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಅ.23 ರಂದು ಮಧ್ಯಾಹ್ನ 2 ಗಂಟೆಗೆ ತಾಲೂಕು ಪಂಚಾಯಿತಿ ಕಾರ್ಯಾಲಯದಲ್ಲಿ ಚುನಾವಣೆ ನಡೆಯಲಿದೆ. ನಾಮನಿರ್ದೇಶನ ಪತ್ರ ಸಲ್ಲಿಸುವ ಅವಧಿ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 12 ಗಂಟೆವರೆಗೆ. ನಾಮಪತ್ರ ಪರಿಶೀಲನೆ ಮಧ್ಯಾಹ್ನ 2 ಗಂಟೆಗೆ ಸಭೆ ಪ್ರಾರಂಭವಾದ ತಕ್ಷಣ, ನಾಮ ನಿರ್ದೇಶನ ಪತ್ರವನ್ನು ಹಿಂಪಡೆದು ಕೊಳ್ಳುವ ಅವಧಿ ಸಭೆ ಆರಂಭವಾದ ಮೇಲೆ 10 ನಿಮಿಷಗಳ ಕಾಲಾವಧಿಯೊಳಗೆ ನಡೆದರೆ, ಚುನಾವಣೆ ಮಧ್ಯಾಹ್ನ 2.11ಕ್ಕೆ ನಡೆಯಲಿದೆ ಎಂದು ಚುನಾವಣಾ ಅಧಿಕಾರಿ ತಹಸೀಲ್ದಾರ್ ಮಂಗಳಾ ಎಂ.ಅವರು ಹೊರಡಿಸಿರುವ ಸಭೆಯ ತಿಳುವಳಿಕೆ ಪತ್ರದಲ್ಲಿ ತಿಳಿಸಿದ್ದಾರೆ. ಕಳೆದ ಅ.30ರಂದು ಪುರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಎರಡೂ ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಆದರೆ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಕೆಯಾಗದ ಕಾರಣ ಪುನ: ಈಗ ಅದೊಂದೆ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುತ್ತಿದೆ.

ರವೀಂದ್ರಗೆ ಕರ್ನಾಟಕ ಕಲಾಶ್ರೀ ಪ್ರಶಸ್ತಿ

ಬೆಳಗಾವಿ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ 2024ರ ನವೆಂಬರ್ ಅಥವಾ ಡಿಸೆಂಬರನಲ್ಲಿ ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದ್ದು, ಸಂಗೀತ ಮತ್ತು ನೃತ್ಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ಕಲಾವಿದರಿಗೆ ಕರ್ನಾಟಕ ಕಲಾಶ್ರೀ ಪ್ರಶಸ್ತಿ ನೀಡಿ ಗೌರವಿಸುಲಾಗುತ್ತದೆ. ಈ ಸಂದರ್ಭದಲ್ಲಿ ಕಲಾಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ರವಿಂದ್ರ ಶರ್ಮ ಅವರಿಗೆ ಕರ್ನಾಟಕ ಕಲಾಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಿಚಿತ ಶವ ಪತ್ತೆ: ಪೋಷಕರ ಪತ್ತೆಗೆ ಮನವಿ

ಬೆಳಗಾವಿ: ಜುಮನಾಳ ಗ್ರಾಮದ ಹೊಸೂರು ಹೋಗುವ ರಸ್ತೆಯ ಎಡಬದಿಯಲ್ಲಿರುವ ತಗ್ಗಿನಲ್ಲಿ ಬಿದ್ದು ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದ ಕಾರಣ ಬೆಳಗಾವಿಯ ಬಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾಗಿದ್ದನು. ಆದರೆ ಚಿಕಿತ್ಸೆ ಫಲಿಸದೇ ಅ.19 ರಂದು ಬೆಳಗ್ಗೆ 8.25 ಗಂಟೆಗೆ ಮೃತಪಟ್ಟಿದ್ದು, ಕಾಕತಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಕೊಂದು ತನಿಖೆ ಕೈಗೊಂಡಿದ್ದಾರೆ. ಸುಮಾರು 45-50 ವಯಸ್ಸು ಇರಬಹುದು ಎಂದು ಅಂದಾಜಿಸಲಾಗಿದೆ. 5.5 ಎತ್ತರ, ಗೋದಿಕೆಂಪು ಮೈಬಣ್ಣ, ಮೈಯಿಂದ ಸಡಪಾತಳ, ಉದ್ದ ಮುಖ, ಕಪ್ಪು ಬಣ್ಣದ ಟಿ-ಶರ್ಟ್, ಕೆಂಪು ಬಣ್ಣದ ಹಾಪ್ ಶ್ವೇಟರ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಸದರಿ ಮೃತನ ಬಗ್ಗೆ ಮಾಹಿತಿ ಸಿಕ್ಕಲ್ಲಿ ಕಾಕತಿ ಪೊಲೀಸ್ ಠಾಣೆಯ ಪಿಎಸ್ ದೂರವಾಣಿ: 0831-2405203, 9480804115, 948080403 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಕಾಕತಿಯ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ ಸಿದ್ದರಾಮಯ್ಯ } ಮುಖ್ಯಮಂತ್ರಿ

ರಾಜ್ಯದಲ್ಲಿ ಪ್ರಕೃತಿ ವಿಕೋಪದಿಂದ ಬಿದ್ದಿರುವ ಮಳೆ ಕಾರಣದಿಂದ ಆಗಿರುವ ಅನಾಹುತಗಳಿಗೆ ಪರಿಹಾರ ನೀಡುತ್ತೇವೆ. ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದು, ಮಳೆ ಅನಾಹುತಗಳ ಕುರಿತು ನಿಗಾ ವಹಿಸಿದ್ದೇವೆ. ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಅಧಿಕಾರಿಗಳಿಂದ ಸ್ಥಳ ಸಮೀಕ್ಷೆ ಕೂಡ ನಡೆಯುತ್ತಿದೆ. ಪರಿಹಾರ ಖಂಡಿತಾ ನೀಡುತ್ತೇವೆ.

ಶಾಲೆಗೆ ಮೂಲಸೌಕರ್ಯ ಒದಗಿಸಿ

ಸಿಎಸ್ಆರ್ ಫಂಡ್‌ನಿಂದ ನಾನಾ ಕಾಮಗಾರಿಗಳ ಆರಂಭ | ಶಾಸಕ ಸುನೀಲಗೌಡ ಪಾಟೀಲ

ವಿಜಯಪುರ: ಬಬಲೇಶ್ವರ ಮತಕ್ಷೇತ್ರದಲ್ಲಿ ಸರಕಾರಿ ಶಾಲೆಗಳ ಅಭಿವೃದ್ಧಿಗಾಗಿ ಸಿಎಸ್ಆರ್ ಫಂಡ್‌ನಲ್ಲಿ 100 ಕೋಟಿ ರು. ಯೋಜನೆಯಡಿ ನಾನಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ಬಬಲೇಶ್ವರ ತಾಲೂಕಿನ ನಿಡೋಣಿಯಲ್ಲಿ ಕೆಆರ್ ಐಡಿಎಲ್ ವತಿಯಿಂದ 50 ಲಕ್ಷ ರು.ವೆಚ್ಚದಲ್ಲಿ ಅಲ್ಪಸಂಖ್ಯಾತರ ಕಾಲನಿಗಳಲ್ಲಿ ಸಿಸಿ ರಸ್ತೆ ಕಾಮಗಾರಿ ಮತ್ತು ಪಿಆರ್‌ಇಡಿ ವತಿಯಿಂದ 100 ಲಕ್ಷ ರು. ವೆಚ್ಚದಲ್ಲಿ ನಿಡೋಣಿ-ತಿಗಣಿ ಬಿದರಿ ರಸ್ತೆ ಸುಧಾರಣೆ ಕಾಮಗಾರಿ ಹಾಗೂ ಶೇಗುಣಸಿ ಗ್ರಾಮದಲ್ಲಿ ಕೆಆರ್‌ಐಡಿಎಲ್. ವತಿಯಿಂದ 25 ಲಕ್ಷ ರು.ವೆಚ್ಚದಲ್ಲಿ ಅಲ್ಪಸಂಖ್ಯಾತರ ಕಾಲನಿಗಳಲ್ಲಿ ಸಿಸಿ ರಸ್ತೆ ಕಾಮಗಾರಿಗಳಿಗೆ ಸೋಮವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ನೀರಾವರಿ ಯೋಜನೆಗಳಿಂದಾಗಿ ಮತಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ನೀಗಿದೆ. ಇಲ್ಲಿನ ಅಭಿವೃದ್ಧಿ ಕಂಡು ಬೇರೆ ಜಿಲ್ಲೆಗಳ ಜನರು ಇಲ್ಲಿ ಭೂಮಿ ಖರೀದಿಸಲು ಮುಂದಾಗುತ್ತಿದ್ದಾರೆ. ಇದರಿಂದ ರೈತರ ಜಮೀನಿಗೆ ಹೆಚ್ಚಿನ ಬೆಲೆ ಬಂದಿದೆ. ಇದು ರೈತರ ಜೀವನದಲ್ಲಿ ಆಗಿರುವ ಬದಲಾವಣೆಯ ಪ್ರತೀಕವಾಗಿದೆ. ಸೂರ್ಯ ಚಂದ್ರರು ಇರುವವರೆಗೆ ಈ ಭಾಗದ ಜಮೀನಿಗೆ ನೀರು ಸಿಗಲಿದ್ದು, ಮುಂದಿನ ಜನಾಂಗಕ್ಕೆ ಶಾಶ್ವತ ಬದುಕು ಕಟ್ಟಿಕೊಡುವ ಕೆಲಸ ಮಾಡಲಾಗಿದೆ. ನಮ್ಮ ಯೋಜನೆಗಳನ್ನು ಟೀಕಿಸುತ್ತಿದ್ದ ಜನರು ಈಗ ಅದೇ ಯೋಜನೆಗಳ ಫಲಾನುಭವಿಗಳಾಗಿ ಆರ್ಥಿಕವಾಗಿ ಸದೃಢರಾಗುತ್ತಿರುವುದು ಅಭಿವೃದ್ಧಿಗೆ ಸಾಕ್ಷಿಯಾಗಿದೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ತಿಕೋಟಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಈರಗೊಂಡ ಬಿರಾದಾರ, ಕೆ.ಎಚ್.ಮುಂಬಾರಡ್ಡಿ, ಬಾಪುಗೌಡ ಪಾಟೀಲ ಶೇಗುಣಸಿ, ಪಿಕೆಪಿಎಸ್ ಅಧ್ಯಕ್ಷ ಬಿ.ಜಿ.ಬಿರಾದಾರ, ಶಂಕರಗೌಡ ಪೊಲೀಸ ಪಾಟೀಲ, ಪಿ.ಜಿ. ಕೋರಿ, ಅಣ್ಣಪ್ಪ ಮುಚ್ಚಂಡಿ, ಶೇಗುಣಸಿ ಗ್ರಾ. ಪಂ. ಅಧ್ಯಕ್ಷೆ ಲಕ್ಷ್ಮೀ ಗುಣದಾಳ, ಈರಪ್ಪ ಶಾಪೂರ, ಸಿದ್ದಪ್ಪ ಹೊಸಮನಿ, ನಿಂಗೊಂಡ ಬಿರಾದಾರ, ಅನೀಲ ಹಿರೇಮ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಶಾಂತ ಪೂಜಾರಿ, ಪಿ.ಆರ್.ಇ.ಡಿ.ಎ ಎಂಜಿನಿಯರ್ ರವಿ ಪವಾರ, ಮುಕ್ಕನ ನಾಯಕ, ಪಿಡಿಓ ಮುಜಾವರ ಮುಂತಾದವರು ಉಪಸ್ಥಿತರಿದ್ದರು.

ಅಲ್ಪಸಂಖ್ಯಾತರ ಕಾಲನಿಗಳಲ್ಲಿ ಸಿಸಿ ರಸ್ತೆ ಕಾಮಗಾರಿಗಳಿಗೆ ಶಾಸಕ ಸುನೀಲಗೌಡ ಪಾಟೀಲ ಚಾಲನೆ ನೀಡಿದರು.

> ಸಚಿವ ಎಂ. ಬಿ.ಪಾಟೀಲ ಅವರ ದೂರದೃಷ್ಟಿಯ ಫಲವಾಗಿ ಬಬಲೇಶ್ವರ ಮತಕ್ಷೇತ್ರದಲ್ಲಿ ಈ ಬಾರಿ ಶೈಕ್ಷಣಿಕ ಕ್ರಾಂತಿ ಮಾಡಲಾಗುತ್ತಿದ್ದು, ರೂ. 100 ಕೋ. ಸಿಎಸ್ಆರ್ ಫಂಡ್ ಬಳಸಿ ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗುತ್ತಿದೆ. ಹೆಚ್ಚುವರಿಯಾಗಿ ಹೊಸ ಕೊಠಡಿಗಳ ನಿರ್ಮಾಣ, ಕೊಠಡಿಗಳ ದುರಸ್ಥಿ, ಕುಡಿಯಲು ಶುದ್ಧ ನೀರು ಪೂರೈಕೆ, ಶೌಚಾಲಯ ವ್ಯವಸ್ಥೆ, ಆಟದ ಮೈದಾನ, ಶಾಲೆಗಳಿಗೆ ಕಂಪೌಂಡ್ ನಿರ್ಮಾಣಕ್ಕೆ ಈ ನಿಧಿಯನ್ನು ಬಳಸಲಾಗುತ್ತಿದೆ.
>
> -ಸುನೀಲಗೌಡ ಪಾಟೀಲ, ವಿಧಾನ ಪರಿಷತ್ ಶಾಸಕ

ಸೋಲು ಸವಾಲಾಗಿ ಸ್ವೀಕರಿಸಿ

ದೇವರಹಿಪ್ಪರಗಿ ರಾವುತರಾಯ-ಮಲ್ಲಯ್ಯ ಜಾತ್ರಾ ಮಹೋತ್ಸವ ನಿಮಿತ್ಯ ಹಮ್ಮಿಕೊಂಡ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತ ತಂಡಕ್ಕೆ ಬಹುಮಾನ ವಿತರಿಸಲಾಯಿತು.

ದೇವರಹಿಪ್ಪರಗಿ: ಸೋಲು ಗೆಲುವು ಸಮನಾಗಿ ಸ್ವೀಕರಿಸಿ ಸ್ಪರ್ಧಾ ಮನೋಭಾವನೆಯಿಂದ ಕ್ರೀಡೆಗಳಲ್ಲಿ ಪಾಲ್ಗೊಂಡಾಗ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದು ದೇವರಹಿಪ್ಪರಗಿ ಮತಕ್ಷೇತ್ರದ ಜೆಡಿಎಸ್ ಯುವ ಘಟಕದ ಅಧ್ಯಕ್ಷ ಮುನ್ನಾ ಮಳಖೇಡ ಹೇಳಿದರು.

ಪಟ್ಟಣದ ಹೊಸನಗರದಲ್ಲಿ ರಾವುತರಾಯ -ಮಲ್ಲಯ್ಯ ಜಾತ್ರಾ ನಿಮಿತ್ಯವಾಗಿ ಓಪನ್ ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತ ತಂಡಕ್ಕೆ 25000 ರು. ನಗದು ಬಹುಮಾನ ಹಾಗೂ ಟ್ರೋಫಿ ವಿತರಿಸಿ ಮಾತನಾಡಿದ ಅವರು, ನಮ್ಮ ಊರು ಸಾಮರಸ್ಯಕ್ಕೆ ಸಾಕ್ಷಿಯಾಗಿದೆ. ಪ್ರತಿಯೊಂದು ಸಮುದಾಯದ ಪ್ರಮುಖರು ಸೇರಿಕೊಂಡು ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಳುತ್ತಾರೆ. ಜಾತ್ರೆಯ ನಿಮಿತ್ಯ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಈ ಕ್ರಿಕೆಟ್ ಪಂದ್ಯಾವಳಿಯಲ್ಲಿ ಸುಮಾರು 24 ತಂಡಗಳು ಭಾಗವಹಿಸಿದ್ದವು. ಜೆಡಿಎಸ್ ಯುವ ಘಟಕದ ಅಧ್ಯಕ್ಷ ಮುನ್ನಾ ಮಳಖೇಡ ಪ್ರಥಮ ಬಹುಮಾನ 25000 ರು. ಹಾಗೂ ಯುವ ಮುಖಂಡರಾದ ನಿಂಗು ಯಂಬತ್ನಾಳ ದ್ವಿತೀಯ ಬಹುಮಾನ 15000 ರು. ನೀಡಿದ್ದರು, ಈ ಪಂದ್ಯಾವಳಿಯಲ್ಲಿ ಫೈನಲ್ ಪಂದ್ಯವನ್ನು ಬೇಪಾರಿ ಬುಲ್ಸ್ ವಿಜೇತರಾಗಿ ಪ್ರಥಮ ಬಹುಮಾನ ಗಿಟ್ಟಿಸಿಕೊಂಡರೆ, ಎರಡನೇ ತಂಡ ಎಚ್‌ಎಮ್ ಕಿಂಗ್ಸ್ ದ್ವಿತೀಯ ಬಹುಮಾನಕ್ಕೆ ಖುಷಿಪಟ್ಟಿತು. ಯುವ ಮುಖಂಡ ಇಮಾಮ ಮುಲ್ಲಾ ನೇತೃತ್ವ ವಹಿಸಿದ್ದರು. ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಶೀರ ಅಹ್ಮದ್ ಬೇಪಾರಿ, ಮುಖಂಡರಾದ ಮುಕಬೂಲ್ ಭಾಗವಾನ, ಇಕ್ಬಾಲ್ ಬಿಜಾಪುರ್, ಜಬ್ಬರ್ ಚೌದ್ರಿ, ರೆಹಮಾನ್ ಕಣಕಾಲ, ಹುಸೇನ್ ಮಳಖೇಡ್, ಹಾಜಿಲಾಲ್ ಮಸಳಿ, ಯುಸೂಫ್ ಮಳಖೇಡ, ಸುನಿಲ್ ಕೋಟೀನ್, ರಿಯಾಜ್ ಹೆಬ್ಬಾಳ್, ಕಾಸು ಮೆಟಗಾರ, ಸುನಿಲ್ ಕನಮಡಿ, ರಫೀಕ್ ಜಾತಗಾರ, ಪೌಜಿ ಮರೋಳ, ಇಸ್ಮಾಯಿಲ್ ಮುಲ್ಲಾ, ಶೇಕ್ ಮುಲ್ಲಾ, ರಿಯಾಜ್ ಜಾತಗಾರ ಸೇರಿದಂತೆ ಮತ್ತೀತರರಿದ್ದರು.

ಎಂಬಿಬಿಎಸ್ ವಿದ್ಯಾರ್ಥಿಗಳ ವೈಟ್ ಕೋಟ್ ಸಮಾರಂಭ

ಬೀಳಗಿ: ವೈಟ್ ಕೋಟ್ ಸಮಾರಂಭವು ಕೆಲವು ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ಇತರ ಆರೋಗ್ಯ-ಸಂಬಂಧಿತ ಕ್ಷೇತ್ರಗಳಲ್ಲಿ ಒಂದು ಆಚರಣೆಯಾಗಿದೆ , ಇದು ವಿದ್ಯಾರ್ಥಿಯು ಪೂರ್ವಭಾವಿ ಅಧ್ಯಯನದಿಂದ ಕ್ಲಿನಿಕಲ್ ಆರೋಗ್ಯ ವಿಜ್ಞಾನಕ್ಕೆ ಪರಿವರ್ತನೆಯನ್ನು ಸೂಚಿಸುತ್ತದೆ ಎಸ್ ಆರ್ ಪಾಟೀಲ್ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋ ಧನಾ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಎಸ್ ಆರ್ ಪಾಟೀಲ್ ಹೇಳಿದರು.

ತಾಲೂಕಿನ ಬಾಡಗಂಡಿ ಯ ಎಸ್.ಆರ್ .ಪಾಟೀಲ ವೈದ್ಯಕೀಯ ಮಹಾ ವಿದ್ಯಾಲಯ ,ಆಸ್ಪತ್ರೆ ಮತ್ತು ಸಂಶೋ ಧನಾ ಕೇಂದ್ರದಲ್ಲಿ ಸೋಮವಾರ ಆಯೋಜಿಸಿದ್ದ ಎಂಬಿಬಿಎಸ್ ಪ್ರಥಮ ವರ್ಷದ ಪ್ರಥಮ ಬ್ಯಾಚಿನ 'ವೈಟ್ ಕೋಟ್' ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಿಳಿ ಬಣ್ಣ ಶುಭ್ರತೆಯ, ಪರಿಶುದ್ಧತೆಯ ಸಂಕೇತ ವೈದ್ಯಕೀಯ ವೃತ್ತಿಯು ಅಷ್ಟೇ ಪರಿಶುದ್ಧವಾಗಿ ಇರಬೇಕು. ಈ ಸಂಸ್ಥೆಯಲ್ಲಿ ಕಲಿತ ವೈದ್ಯಕೀಯ ವಿದ್ಯಾರ್ಥಿಗಳು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಶ್ರೇಷ್ಠ ವೈದ್ಯರಾಗಿ ಗುರುತಿಸಿಕೊಳ್ಳುವ ಮೂಲಕ ಹೆತ್ತ ತಂದೆ ತಾಯಿ, ಕಲಿಸಿದ ಈ ಸಂಸ್ಥೆಗೆ ಕೀರ್ತಿ ಬರುವಂತೆ ಆದರ್ಶ ವೈದ್ಯರಾಗಿ ಹೊರಹೊಮ್ಮಿ ಎಂದು ಶುಭ ಕೋರಿದರು. ಸಂಶೋದನಾ ಕೇಂದ್ರದ ಕಾರ್ಯದರ್ಶಿ ಎಂ.ಎನ್.ಪಾಟೀಲ, ವೈದ್ಯಕೀಯ ಕಾಲೇಜಿನ ಮುಖ್ಯಾಧಿಕಾರಿ ಧರ್ಮರಾಯ ಇಂಗಳೆ ವೈದ್ಯಕೀಯ ವ್ಯವಸ್ಥಾಪಕ ವಿಜಯಾನಂದ ಹಳ್ಳಿ, ಬಾಪೂಜಿ ಶಿಕ್ಷಣ ಪ್ರತಿಷ್ಠಾನದ ಆಡಳಿತ ಮಂಡಳಿಯ ಸದಸ್ಯ ಅನುಷಾ ಪಾಟೀಲ, ಎಸ್.ಎಸ್.ರಂಗನಗೌಡ್ರ, ಮಂಜುನಾಥ ಅರಳಿಕಟ್ಟಿ ವೈದ್ಯಕೀಯ ಕಾಲೇಜಿನ ಸಿಬ್ಬಂದಿ ವರ್ಗ ಹಾಗೂ ಪ್ರಥಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳು ಹಾಗೂ ಪಾಲಕರು ಇದ್ದರು.

> ಎಸ್ ಆರ್ ಪಾಟೀಲ ಬಾಲ್ಯದಲ್ಲಿ ಶಿಕ್ಷಣ ಪಡೆಯುವಾಗ ಪೂರ್ಣ ಪ್ರಾಥಮಿಕ ಶಿಕ್ಷಣದ ಶಾಲೆಯಿಲ್ಲದ ಬಾಡಗಂಡಿಯಂತಹ ಈ ಚಿಕ್ಕ ಗ್ರಾಮದಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡಿದ್ದು ಅವರ ಜೀವನದ ಮಹತ್ತರ ಸಾಧನೆ.
>
> -ಎಮ್.ಎನ್.ಪಾಟೀಲ, ಕಾರ್ಯದರ್ಶಿ

ವೃಕ್ಷಥಾನ್ ಯಶಸ್ಸಿಗೆ ಸಾರ್ವಜನಿಕರ ಸಹಕಾರ ಅಗತ್ಯ

ವಿಜಯಪುರ: ಪರಿಸರ, ಪ್ರಾಚೀನ ಸ್ಮಾರಕ, ಆರೋಗ್ಯ ಮತ್ತು ಪ್ರವಾಸೋದ್ಯಕ್ಕೆ ಉತ್ತೇಜನ ನೀಡುವ ದಿಶೆಯಿಂದ ಡಿಸೆಂಬರ್ 22ರಂದು ನಡೆಯಲಿರುವ ವೃಕ್ಷಥಾನ್ ಹೆರಿಟೇಜ್ ರನ್-2024ರ ಕಾರ್ಯಕ್ರಮಕ್ಕೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು, ಇಲಾಖಾ ನೌಕರರು ನೋಂದಣಿ ಮಾಡಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಹೇಳಿದರು.

ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವೃಕ್ಷಥಾನ್ ಹೆರಿಟೇಜ್ ರನ್ -2024ರ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲಾಡಳಿತದ ಸಹಕಾರದೊಂದಿಗೆ, ಕೋಟಿ ವೃಕ್ಷ ಅಭಿಯಾನ, ಸೊಸೈಟಿ ಪಾರ್ ಪ್ರೋಟೆಕ್ಷನ್ ಆಫ್ ಪ್ಲಾಂಟ್ ಆ್ಯಂಡ್ ಅನಿಮಲ್ಸ್, ನಗರಾಭಿವೃದ್ಧಿ ಪ್ರಾಧಿಕಾರ ವಿಜಯಪುರ, ಬಿಎಲ್‌ಡಿಇ ಅಸೋಷಿಯೇಶನ್, ಪ್ರವಾಸೋಧ್ಯಮ ಇಲಾಖೆ, ಅರಣ್ಯ ಇಲಾಖೆ, ಸಿಆರ್‌ಡಿಎಸ್ ಪೌಂಡೇಷನ್, ಮಹಾನಗರ ಪಾಲಿಕೆ ವಿಜಯಪುರ ಹಾಗೂ ಇತರರ ಪ್ರಾಯೋಜಕತ್ವದಲ್ಲಿ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರ ಪಾಲ್ಗೊಳ್ಳುವಿಕೆಗೆ ನೋಂದಣಿ ಮಾಡುವ ಗುರಿ ಹೊಂದಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ ಮಾತನಾಡಿ, ವೃಕ್ಷೋತ್ಥಾನ್ ಹೆರಿಟೇಜ್ ರನ್ ಗೆ ಎಲ್ಲ ಇಲಾಖೆಗಳೂ ಸಂಪೂರ್ಣವಾಗಿ ಕೈಜೋಡಿಸಬೇಕು. ಈ ನಿಟ್ಟಿನಲ್ಲಿ ಸಹಕಾರ ನೀಡುವುದಾಗಿ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವೃಕ್ಷಥಾನ್ ಹೆರಿಟೇಜ್ ರನ್ -2024ರ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

> ತೋಟಗಾರಿಕೆ ಹಾಗೂ ಕೃಷಿ ಇಲಾಖೆಗಳು ರೈತ ಉತ್ಪಾದನ ಸಂಸ್ಥೆ, ಪ್ರಗತಿಪರ ರೈತರ ಗುಂಪುಗಳು, ತಾಲೂಕು ಹಾಗೂ ಗ್ರಾಮ ಮಟ್ಟದಲ್ಲಿಯೂ ಕೂಡಾ ಹೆರಿಟೇಜ್ ರನ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿ ಭಾಗವಹಿಸುವಂತೆ ಪ್ರೇರೇಪಿಸುವಲ್ಲಿ ಸಿದ್ಧತೆ ಮಾಡಿಕೊಳ್ಳಬೇಕು.
>
> -ಟಿ.ಭೂಬಾಲನ್, ಜಿಲ್ಲಾಧಿಕಾರಿ

ಜಿಲ್ಲಾ ಉಸ್ತುವಾರಿ ಸಚಿವರ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ಮಾಹಾಂತೇಶ ಬಿರಾದಾರ ಮಾತನಾಡಿ, ವಿಜಯಪುರದಲ್ಲಿ ಅರಣ್ಯ ಪ್ರದೇಶ ಕಡಿಮೆಯಿರುವುದು ಮನಗಂಡ ಜಿಲ್ಲಾ ಉಸ್ತಾವರಿ ಸಚಿವ ಡಾ. ಎಂ.ಬಿ.ಪಾಟೀಲರು ಕೋಟಿ ವೃಕ್ಷ ಅಭಿಯಾನದಡಿಯಲ್ಲಿ ಜಿಲ್ಲೆಯಲ್ಲಿ ಅರಣ್ಯೀಕರಣಕ್ಕೆ ಒತ್ತು ನೀಡಿದ ಫಲವಾಗಿ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಉದ್ಯಾನವನ, ಹಸಿರೀಕರಣ ಅರಣ್ಯ ಪ್ರದೇಶಗಳು ವಿಸ್ತಾರಗೊಳ್ಳುತ್ತಿದೆ. ಜಿಲ್ಲಾಡಳಿತದ ಈ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಜನರಲ್ಲಿಯೂ ಕೂಡಾ ಇವಾಗ ಸಸಿಗಳನ್ನು ನೆಡುವ ಮೂಲಕ ಅರಣ್ಯಕರಣಕ್ಕೆ ಒತ್ತು ನೀಡುವ ಮನೋಭಾವ ಬಂದಿದೆ. ಈ ಮೂಲಕ ವೃಕ್ಷಥಾನ್ ಕಾರ್ಯಕ್ರಮದ ಮೂಲ ಉದ್ದೇಶ ಸಾಕಾರಗೊಳ್ಳುತ್ತಿದೆ ಎಂದು ಮಾತನಾಡಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ, ಅರಣ್ಯ ಇಲಾಖೆಯ ಶಿವಶರಣ್ಯ ಕೆ., ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಬಜಂತ್ರಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ರೂಪಾ.ಎಲ್, ಸಮಾಜಕಲ್ಯಾಣ ಇಲಾಖೆಯ ಉಪನಿರ್ದೇಶಕ ಪುಂಡಲಿಕ ಮಾನವರ್, ಹಾಗೂ ವೃಕ್ಷಥಾನ್ ಹೆರಿಟೇಜ್ ರನ್ ಸಂಚಾಲಕರಾದ ಮುರುಗೇಶ ಪಟ್ಟಣಶೆಟ್ಟಿ ಸೇರಿದಂತೆ, ಜಿಲ್ಲೆಯ ವಿವಿಧ ಕಾಲೇಜಿನ ಪ್ರಾಂಶುಪಾಲರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಬೀದಿ ಬದಿ ವ್ಯಾಪಾರಿಗಳ ಸಂಘಟನೆ ಅಗತ್ಯ

ತಾಳಿಕೋಟಿ: ಬೀದಿ ಬದಿ ವ್ಯಾಪಾರಿಗಳು ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಅವುಗಳ ಪರಿಹಾರ ಹಾಗೂ ಅವರ ಹಿತ ರಕ್ಷಣೆಗಾಗಿ ಕಾಂಗ್ರೆಸ್ ಪಕ್ಷವು ಬೀದಿ ಬದಿ ವ್ಯಾಪಾರಸ್ಥರ ವಿಭಾಗ ಅಸ್ತಿತ್ವಕ್ಕೆ ತಂದಿದೆ. ಇದರಿಂದ ನಿಮ್ಮೆಲ್ಲರ ಕಲ್ಯಾಣ ಆಗಬೇಕಾದರೆ ಎಲ್ಲರೂ ಒಗ್ಗಟ್ಟಿನಿಂದ ಸಂಘದ ಬಲವರ್ಧನೆಗಾಗಿ ಕೆಲಸ ಮಾಡುವ ಅಗತ್ಯ ಇದೆ ಎಂದು ಕೆಪಿಸಿಸಿ ಬೀದಿ ಬದಿ ವ್ಯಾಪಾರಸ್ಥರ ವಿಭಾಗದ ರಾಜ್ಯ ಉಪಾಧ್ಯಕ್ಷ ಪವಡೆಪ್ಪ ಚಲವಾದಿ ಹೇಳಿದರು.

ಮಂಗಳವಾರ ಪಟ್ಟಣದ ಶ್ರೀನೀಲಕಂಠೇಶ್ವರ ದೇವಸ್ಥಾನದ ಮಂಗಲ ಭವನದಲ್ಲಿ ಬೀದಿ ಬದಿ ವ್ಯಾಪಾರಿಗಳ ವಿಭಾಗ ತಾಳಿಕೋಟಿ ವತಿಯಿಂದ ಹಮ್ಮಿಕೊಂಡ ಆದೇಶ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಬೀದಿ ಬದಿ ವ್ಯಾಪಾರಸ್ಥರಿಗೆ ಸೌಲಭ್ಯಗಳು ಸಿಗುವಂತಾಗಲು ಒಂದು ನಿಗಮವನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಇವರಿಗೆ ಸಲ್ಲಿಸಲಾಗಿದೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಈ ಕೆಲಸ ನಡೆಯುತ್ತಿದೆ ಆದರೆ ನಾವೆಲ್ಲರೂ ಕಾಂಗ್ರೆಸ್ ಪಕ್ಷದ ಹಿತವನ್ನು ಮುಂದಿಟ್ಟುಕೊಂಡು ಸಂಘದ ಅಭಿವೃದ್ಧಿಗಾಗಿ ಕೆಲಸ ಮಾಡಬೇಕಾಗಿದೆ ಎಂದರು.

ಜಿಲ್ಲಾಅಧ್ಯಕ್ಷ ಲಾಲಸಾಬ ಕೋರಬ ಮಾತನಾಡಿ, ಆದೇಶ ಪತ್ರವನ್ನು ಪಡೆದ ಪದಾಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ತಿಳಿದು ಇಂದಿನಿಂದಲೇ ಸಂಘದ ಬಲವರ್ಧನೆಗಾಗಿ ಕಾರ್ಯನಿರತರಾಗಬೇಕು. ವ್ಯಕ್ತಿಗತ ಹಿತಾಸಕ್ತಿಗಿಂತಲೂ ಪಕ್ಷ ಹಾಗೂ ಸಂಘದ ಹಿತಾಸಕ್ತಿಗೆ ಪ್ರಾತಿನಿಧ್ಯ ನೀಡಬೇಕು ಎಂದರು.

ತಾಳಿಕೋಟಿ ವಿಭಾಗ ಅಧ್ಯಕ್ಷ ಅಬ್ದುಲ್ ಲತೀಫ್ ಬೀಳಗಿ ಮಾತನಾಡಿದರು.ಈ ಸಮಯದಲ್ಲಿ ರಾಜ್ಯ ಕಾರ್ಯದರ್ಶಿ ಮಹಿಬೂಬ ಜಾಗೀರದಾರ, ಪುರಸಭೆ ಸದಸ್ಯೆ ಶಾಂತಮ್ಮಹೊಟ್ಟಿ, ಜಿಲ್ಲಾ ಉಪಾಧ್ಯಕ್ಷ ನಾಯಕ್, ನೂರ ಅಹ್ಮದ್, ಸಂಘಟನಾ ಕಾರ್ಯದರ್ಶಿ ಆಸೀಫ ನಿಡಗುಂದಿ, ಮುದ್ದೇಬಿಹಾಳ ವಿಭಾಗಾಧ್ಯಕ್ಷ ಮಹಿಬೂಬ ಕುಳಗೇರಿ, ಒಕ್ಕೂಟ ಅಧ್ಯಕ್ಷ ಜುಮ್ಮಣ್ಣ ನಾಲತವಾಡ, ಬಾಗೇವಾಡಿ ವಿಭಾಗ ಅಧ್ಯಕ್ಷ ಆದಪ್ಪ ನಾಲತವಾಡ, ವಿಜಯಪುರ ವಿಭಾಗ ಅಧ್ಯಕ್ಷ ಸಿದ್ದೇಶ್ ಹಡಪದ, ಹಸನಸಾಬ ಚೌಧರಿ.ಐ.ಎಲ್.ಚೌಧರಿ, ಲಾಡಜಿ ಚೌಧರಿ. ಜಾಲಿಬೆಂಚಿ, ವಿಭಾಗದ ಪದಾಧಿಕಾರಿಗಳು ಹಾಗೂ ಬೀದಿ ಬದಿ ವ್ಯಾಪಾರಿಗಳು ಮತ್ತಿತರರು ಇದ್ದರು, ಇಲಿಯ್ಯಾಸ ಚೌಧರಿ ಕಾರ್ಯಕ್ರಮ ನಿರೂಪಿಸಿ ಕೊನೆಯಲ್ಲಿ ವಂದಿಸಿದರು.



ಬೀದಿ ಬದಿ ವ್ಯಾಪಾರಿಗಳ ವಿಭಾಗ ತಾಳಿಕೋಟೆಯಲ್ಲಿ ಆದೇಶ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ರಾಜ್ಯ ಉಪಾಧ್ಯಕ್ಷ ಪವಡೆಪ್ಪ ಚಲವಾದಿ ಮಾತನಾಡಿದರು.

> ಬಡವರ ದೀನದಲಿತರ ದುರ್ಬಲ ವರ್ಗದ ಜನರ ಏಳಿಗೆ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ. ಈ ಉದ್ದೇಶಕ್ಕಾಗಿಯೇ ರಾಜ್ಯ ಸರಕಾರವು 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಈಗ ನಿಮ್ಮೆಲ್ಲರ ಹಿತರಕ್ಷಣೆಗಾಗಿ ಈ ವಿಭಾಗವನ್ನು ಅಸ್ತಿತ್ವಕ್ಕೆ ತರಲಾಗಿದೆ ವಿಭಾಗದ ಮುಖಂಡರ ಮಾರ್ಗದರ್ಶನದಲ್ಲಿ ಕೆಲಸ ಮಾಡಿ.
>
> -ಮುಖಂಡ ಪ್ರಭುಗೌಡ ಮದರಕಲ್, ಕಾಂಗ್ರೆಸ್

ಮೆಡಿಕಲ್ ವಿದ್ಯಾರ್ಥಿನಿಗೆ ಆರ್ಥಿಕ ನೆರವು

ವಿಜಯಪುರ: ನೀಟ್ ಪಾಸಾಗಿ ಸರಕಾರಿ ಕೋಟಾದಡಿ ಎಂಬಿಬಿಎಸ್ ಸೀಟು ಪಡೆದರೂ ಶುಲ್ಕ ಭರಿಸಲಾಗದೆ ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದ ವಿದ್ಯಾರ್ಥಿನಿಗೆ ಬಿಎಲ್‌ಡಿಇ ಸಂಸ್ಥೆಯ ಅಧ್ಯಕ್ಷ ಎಂ. ಬಿ.ಪಾಟೀಲ ಸಹಾಯಹಸ್ತ ಚಾಚಿದ್ದು, ಕೋರ್ಸಿನ ಸಂಪೂರ್ಣ ವೆಚ್ಚವನ್ನು ಭರಿಸಲಿದ್ದಾರೆ.

ಬಬಲೇಶ್ವರ ತಾಲೂಕಿನ ಸಾರವಾಡ ಗ್ರಾಮದ ಭಾಗ್ಯಶ್ರೀ ದೇವರ ಎಂಬ ವಿದ್ಯಾರ್ಥಿನಿ ನೀಟ್ ಪರೀಕ್ಷೆಯಲ್ಲಿ 49707 ರ‍್ಯಾಂಕ್ ಪಡೆದಿದ್ದು, ಚಿಕ್ಕಬಳ್ಳಾಪುರ ಇನಸ್ಟಿಟ್ಯೂಟ್ ಆಫ್ ಸಾಯಿನ್ಸ್ ನಲ್ಲಿ ವೈದ್ಯಕೀಯ ಸೀಟು ಪಡೆದಿದ್ದಾಳೆ. ಈ ವಿದ್ಯಾರ್ಥಿನಿಗೆ ಪೋಷಕರಿಗೆ ಸಂಸ್ಥೆಯ ವತಿಯಿಂದ ಎಂಬಿಬಿಎಸ್ ಕೋರ್ಸಿನ ಮೊದಲ ವರ್ಷದ ಶೈಕ್ಷಣಿಕ ಶುಲ್ಕ, ಹಾಸ್ಟೆಲ್ ಮತ್ತು ಊಟದ ಖರ್ಚಿಗೆ ಅಗತ್ಯವಾಗಿರುವ ಪ್ರಥಮ ಕಂತಿನ ಹಣ 1 ಲಕ್ಷ 57 ಸಾವಿರದ 250 ರು. ಚೆಕ್ ನ್ನು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಸೋಮವಾರ ವಿತರಿಸಿದರು. ವಿದ್ಯಾರ್ಥಿನಿಯ ತಂದೆ ಶಂಕರ ಮತ್ತು ತಾಯಿ ರಾಜೇಶ್ವರಿ ಅವರು ತಮ್ಮ ಮಗಳ ಪರವಾಗಿ ಚೆಕ್ ಸ್ವೀಕರಿಸಿದರು. ಸುನೀಲಗೌಡ ಪಾಟೀಲ ಮಾತನಾಡಿ, ವಿದ್ಯಾರ್ಥಿನಿ ಭವಿಷ್ಯದಲ್ಲಿ ಉತ್ತಮ ವೈದ್ಯೆಯಾಗಿ ಹೆಸರು ಮಾಡಲಿ. ಅಲ್ಲದೇ, ಈ ಭಾಗದ ಬಡ ರೋಗಿಗಳ ಸೇವೆ ಮಾಡುವಂತಾಗಲಿ ಎಂದು ಶುಭ ಹಾರೈಸಿದರು.

ವಿದ್ಯಾರ್ಥಿನಿಯ ತಂದೆ ಶಂಕರ ದೇವರ ಮತ್ತು ತಾಯಿ ಜಯಶ್ರೀ ದೇವರ ಮಾತನಾಡಿ, ನಮ್ಮದು ಬಡ ಕುಟುಂಬ. ಮೊದಲ ಮಗ ವಿಶ್ವನಾಥ ಡಿಪ್ಲೋಮಾ ಓದುತ್ತಿದ್ದಾನೆ. ಎರಡನೇ ಪುತ್ರ ವಿನಾಯಕ ಪ್ರಥಮ ಪಿಯುಸಿ ಓದುತ್ತಿದ್ದಾನೆ. ಹೀಗಾಗಿ ನಮಗೆ ಮಗಳ ಕನಸು ನನಸು ಮಾಡಲು ಧನಸಹಾಯ ಮಾಡಿರುವ ಸಚಿವ ಎಂ. ಬಿ. ಪಾಟೀಲ ಮತ್ತು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಅವರ ಉಪಕಾರವನ್ನು ಎಂದೂ ಮರೆಯುವುದಿಲ್ಲ ಎಂದು ಹೇಳಿದರು.

ಭಾಗ್ಯಶ್ರೀ ದೇವರ ವಿದ್ಯಾರ್ಥಿನಿಗೆ ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಚೆಕ್ ವಿತರಿಸಿದರು.

> ನಮ್ಮ ಗೋಳು ಹೇಳಿಕೊಂಡಾಗ ಸಚಿವ ಎಂ. ಬಿ. ಪಾಟೀಲ ಮತ್ತು ಸುನೀಲಗೌಡ ಪಾಟೀಲ ಅವರು ಆಪತ್ಕಾಲದಲ್ಲಿ ನಮಗೆ ಆರ್ಥಿಕ ಸಹಾಯ ನೀಡುವ ಮೂಲಕ ನೆರವಾಗಿದ್ದಾರೆ. ಇದರಿಂದ ನಮ್ಮ ಮಗಳು ವೈದ್ಯಳಾಗಬೇಕೆಂಬ ಕನಸು ನನಸು ಮಾಡಲು ಕಾರಣರಾಗಿದ್ದಾರೆ. ಅವರಿಗೆ ಚಿರಋಣಿಯಾಗಿದ್ದೇವೆ.
>
> -ವಿದ್ಯಾರ್ಥಿನಿಯ ತಂದೆ ಶಂಕರ ತಾಯಿ ಜಯಶ್ರೀ

ಪಾರ್ವತಮ್ಮನವರ ಪುಣ್ಯ ಸ್ಮರಣೋತ್ಸವ

ಕೊಲ್ಹಾರ: ಸಂಸಾರದಲ್ಲಿದ್ದುಕೊಂಡು ಅನೇಕ ಲೀಲೆ ತೋರಿದ ಅಜ್ಜ, ಅಮ್ಮನವರ ಬದುಕು ಆದರ್ಶಮಯ ಜೀವನ ಸರ್ವ ಜನಾಂಗಕ್ಕೂ ದಾರಿ ದೀಪವಾಗಿದೆ, ಎಂದು ಬಸವನ ಬಾಗೇವಾಡಿ ಹಿರೇಮಠದ ಶ್ರೀ ಶಿವಪ್ರಕಾಶ ಶಿವಾಚಾರ್ಯರು ಹೇಳಿದರು. ಪಟ್ಟಣದ ಶೀಲವಂತ ಹಿರೆಮಠದಲ್ಲಿ ಶ್ರೀ ಮುರುಗಯ್ಯ ಅಜ್ಜನವರ ಹತ್ತೊಂಬತ್ತನೇ ಪುಣ್ಯಾರಾಧನೆ ಹಾಗೂ ಮಾತೋಶ್ರೀ ಪಾರ್ವತಮ್ಮನವರ ತೃತೀಯ ಪುಣ್ಯಾರಾಧನೆ ಕಾರ್ಯಕ್ರಮದ ದಿವ್ಯ ಸಾನಿದ್ಯ ವಹಿಸಿ ಮಾತನಾಡಿದ ಅವರು, ಅಜ್ಜ- ಅಮ್ಮನವರು ಪ್ರಪಂಚ ಪಾರಮಾರ್ಥ ಎರಡನ್ನೂ ಸಾಧಿಸಿದ ಮಹಾತ್ಮರು ವೀರಶೈವ ಪರಂಪರೆಯಲ್ಲಿ ಸಾಧನೆಗೈದ ಶ್ರೀ ಗುಡ್ಡಾಪೂರ ದಾನಮ್ಮನವರು ಹೇಮರಡ್ಡಿ ಮಲ್ಲಮ್ಮನವರು ಸಜ್ಜಲಗುಡ್ಡ ಶರಮ್ಮತಾಯಿಯವರ ಪವಾಡಗಳನ್ನು ತಿಳಿದುಕೊಂಡ ಹಾಗೆ ಇವತ್ತಿನ ಇಪ್ಪತ್ತೊಂದನೆ ಶತಮಾನದಲ್ಲಿ ಅಜ್ಜನವರು ಶ್ರಮಜೀವಿಯಾಗಿ ಕಾಯಕಯೋಗಿ ಎನಿಸಿ ಎಂಬತ್ತೆಂಟು ವರ್ಷ ಜೀವಿಸಿ ಈಗ ಹತ್ತೊಂಭತ್ತನೆ ಪುಣ್ಯಾರಾಧನೆ, ಅಮ್ಮನವರು ತೊಂಬತ್ತೊಂದು ವರ್ಷ ಬಾಳಿ ಬದುಕಿ ಸಾವಿರ ವರ್ಷ ಇತಿಹಾಸವಿದೆ. ಪಾರ್ವತಮ್ಮನವರದು, ಅಜ್ಜ ಹಾಗೂ ಅಮ್ಮನವರ ಜೀವಿತಾವಧಿಯಲ್ಲಿ ನಡೆದ ಕೆಲವು ಘಟನೆಗಳನ್ನು ತಿಳಿದುಕೊಂಡಾಗ ಅವುಗಳು ಆಶ್ಚರ್ಯಕರ ಪವಾಡ ಲೀಲೆಗಳೆ ಸರಿ ಎಂದರು. ಕಾರ್ಯಕ್ರಮದಲ್ಲಿ ಚಿಮ್ಮಲಗಿ ಶ್ರೀ ಷ.ಬ್ರ.ಸಿದ್ಧ ರೇಣುಕ ಶಿವಾಚಾರ್ಯರು, ಮುಳವಾಡ ಶ್ರೀ.ಷ.ಬ್ರ.ಸಿದ್ಧಲಿಂಗ ಶಿವಾಚಾರ್ಯರು ಹಾಗೂ ಕೋಲ್ಹಾರ ಹಾಗೂ ಸದ್ಭಕ್ತರು ಉಪಸ್ಥಿತರಾಗಿದ್ದರು.

ಆನ್‌ಲೈನ್ ಅರ್ಜಿಗೆ ಹೊಸ ನಿಯಮ ಜಾರಿ

ಸಿಂದಗಿ: 2015ರ ನಂತರ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳಿಗಾಗಿ ಸರಕಾರವು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಹೊಸ ನಿಯಮ ಜಾರಿ ಮಾಡಿದ್ದು, ಆದರೆ ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕೇತರ ಸಿಬ್ಬಂದಿಯ ನೇಮಕಾತಿ ಇಲ್ಲ. ಅಲ್ಲದೇ ಗಣಕಯಂತ್ರದ ವ್ಯವಸ್ಥೆಯಿಲ್ಲ. ಆನ್‌ಲೈನ್ ಮಾಡಬೇಕಾದರೆ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಬೇಕು. ಅದಕ್ಕಾಗಿ ವರ್ಷಗಟ್ಟಲೇ ಅವಧಿಬೇಕು. ಇದರ ಒಟ್ಟಾರೆ ಉದ್ದೇಶ ಸರಕಾರ ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸಿ ಆದೇಶ ಹೊರಡಿಸಲು ಕಾಲದೂಡುವ ಉಪಾಯವೇ ಹೊರತು ಬೇರೇನೂ ಅಲ್ಲ. ಎಂದು ಮಾಜಿ ವಿಪ ಸದಸ್ಯ ಅರುಣ ಶಹಾಪುರ ಹೇಳಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಕಾರ ಅನುದಾನಿತ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಬಗೆಗಿನ ತನ್ನ ನೀಲುವನ್ನು ಸ್ಪಷ್ಟಪಡಿಸುವ ಕಾಲ ಇದೀಗ ಪಕ್ವವಾಗಿದೆ ಎಂದ ಅವರು ಈಗಾಗಲೇ ಸೇವೆ ಸಲ್ಲಿಸುತ್ತಿವೆ.

ಕೆಲವೊಂದು ಶಿಕ್ಷಣ ಸಂಸ್ಥೆಗಳನ್ನು 1995ರ ನಂತರ ಅನುದಾನಕ್ಕೆ ಒಳಪಡಿಸಲು ಹೊರಡಿಸಲಾದ ಸುತ್ತೋಲೆಯಲ್ಲಿ ವಿಧಿಸಿರುವಂತಹ ಕಟ್ಟುಪಾಡುಗಳು ಶಿಕ್ಷಣ ಸಂಸ್ಥೆಗಳು ಅನುದಾನಕ್ಕೊಳಪಡಲು ಆಗದೇ ಇರುವಷ್ಟು ಕಠಿಣವಾಗಿವೆ. ಅನುದಾನಕ್ಕೆ ಒಳಪಟ್ಟ ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಹಾಗೂ ಪದವಿ ಕಾಲೇಜುಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡಲು ಕಡತಗಳನ್ನು ಹಣಕಾಸು ವಿಭಾಗದ ಅನುಮೋದನೆ ಪಡೆ ಯಲು ಕಳುಹಿಸಬೇಕೆಂಬ ಹೊಸ ನಿಯ ಮ ಜಾರಿ ಮಾಡಿದ್ದು, ಇದು ಭ್ರಷ್ಟತನಕ್ಕೆ ಮಾರ್ಗ ಮಾಡಿ ಕೊಡುವುದಲ್ಲದೇ ಹಣಕಾಸು ವಿಭಾಗ ತುಘಲಕ್ ದರ್ಬಾರಿನಂತೆ ವರ್ತಿಸುತ್ತಿದೆ. ಈ ವೇಳೆ ಭೀಮಾಶಂಕರ ತಾರಾಪೂರ, ಸಿದ್ದನಗೌಡ ಪಾಟೀಲ ಕನ್ನೊಳ್ಳಿ, ಶಿವಾನಂದ ರೋಡಗಿ, ಮಲ್ಲಿಕಾರ್ಜುನ ಅಲ್ಲಾಪೂರ ಇದ್ದರು.

ಪಟ್ಟಣದ ಪತ್ರಿಕಾಗೋಷ್ಠಿಯಲ್ಲಿ ಮಾಜಿ ವಿಪ ಸದಸ್ಯ ಅರುಣ ಶಹಾಪೂರ ಮಾತನಾಡಿದರು.

> ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರು ನಿವೃತ್ತಿಯ ಅಂಚಿನಲ್ಲಿದ್ದು, ಸರಕಾರದ ಯಾವುದೇ ವೇತನ ತೆಗೆದುಕೊಳ್ಳದೇ ನಿವೃತ್ತಿಯಾಗುವುದರಿಂದ ಅವರಿಗೆ ಯಾವುದೇ ಕೌಟುಂಬಿಕ ಹಾಗೂ ಆರ್ಥಿಕ ಅಭದ್ರತೆಗೆ ಸರಕಾರವೇ ನೇರ ಹೊಣೆಯಾಗುತ್ತಿದೆ.
>
> -ಅರುಣ ಶಹಾಪುರ, ಮಾಜಿ ವಿಪ ಸದಸ್ಯ

ವಿಜಯ ಜ್ಯೋತಿ ರಥಯಾತ್ರೆಗೆ ಪೂಜೆ

ಬಾದಾಮಿ: ತಾಲೂಕಿನ ಕುಳಗೇರಿ ಕ್ರಾಸ್‌ಗೆ ಆಗಮಿಸಿದ ಕಿತ್ತೂರು ಉತ್ಸವ-2024 ವಿಜಯ ಜ್ಯೋತಿ ರಥಯಾತ್ರೆಗೆ ತಹಸೀಲ್ದಾರ ಮಧುರಾಜ ಕೂಡಲಗಿ ಪೂಜೆ ಸಲ್ಲಿಸುವ ಮೂಲಕ ಸ್ವಾಗತಿಸಿದರು. ಸಮಾಜದ ಮುಖಂಡರು ಚಾಲನೆ ನೀಡಿದರು. ಅವರು ಎಮ್ ಎಲ್‌ಬಿಸಿ ಆವರಣದಲ್ಲಿ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಬ್ರಿಟಿಷರ ವಿರುದ್ಧ ಧ್ವನಿ ಎತ್ತಿ ಸ್ವಾತಂತ್ರ್ಯಕ್ಕಾಗಿ ಸಂಸ್ಥಾನಗಳನ್ನು ರಕ್ಷಿಸುವ ಮೂಲಕ ನಾಡು-ನುಡಿಗಾಗಿ ಹೋರಾಡಿದ ಕಿತ್ತೂರು ರಾಣಿ ಚನ್ನಮ್ಮನ ಶೌರ್ಯ, ಸಾಹಸ, ದೇಶಾಭಿಮಾನ ಯುವಕರಿಗೆ ಸ್ಫೂರ್ತಿ ಎಂದು ಹೇಳಿದರು. ಪಂಚಮಸಾಲಿ ಸಮಾಜದ ತಾಲೂ ಕಾಧ್ಯಕ್ಷ ಎಂ.ಎಸ್.ರುದ್ರಗೌಡ್ರ, ಮುಖಂಡ ಎಂ.ಡಿ ಯಲಿಗಾರ, ಕಾರ್ಯದರ್ಶಿ ಅಶೋಕ ಗಂಗಾಲ, ಸುರೇಶ ಹೆರಕಲ್, ಮಲ್ಲಪ್ಪ ಬಸರಕೋಡ, ಪಾಂಡಪ್ಪ ಉಳ್ಳಾಗಡ್ಡಿ, ಗಿರೀಶ ವಡಕನ್ನವರ, ಸುರೇಶ ಮರದಾನಿ, ನಿಂಗಪ್ಪ ಹೊಸಮನಿ, ಈರಪ್ಪ ಮೆಣಸ್ಗಿ, ಶ್ರೀಕಾಂತ ಅಡಪಟ್ಟಿ, ಗ್ರಾಪಂ ಅಧ್ಯಕ್ಷೆ ರೇಣುಕಾ ಹಿರಗನ್ನವರ, ಉಪ ತಹಸೀ ಲ್ದಾರ ಮೊಮೀನ, ಕಂದಾಯ ನಿರೀಕ್ಷಕ ವಿ ಎ ವಿಶ್ವಕರ್ಮ, ಗ್ರಾಪಂ ಪಿಡಿಓ ಎಸ್.ಜಿ ಪರಸನ್ನವರ, ಚನ್ನಬಸಪ್ಪ ಮೆಣಸಗಿ ಸೇರಿದಂತೆ ಅಂಗನವಾಡಿ ಆಶಾ ಕಾರ್ಯಕರ್ತೆಯರು, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು. ಗ್ರಾಮದ ರಾಷ್ಟ್ರೀಯ ಹೆದ್ದಾರಿ ಮೂಲಕ ಸಕಲ ವಾದ್ಯಗಳೊಂದಿಗೆ ಎಂಎಲ್‌ಬಿಸಿ ಆವರಣದಿಂದ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಮೆರವಣಿಗೆ ಮಾಡಲಾಯಿತು. ರಾಯಣ್ಣನ ಮೂರ್ತಿಗೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿ ನಂತರ ಬಿಳ್ಕೊಡಲಾಯಿತು.

ಆರಾಮ

ಚಿತ್ತ ವಿಹಾರ

ಆಸೆಗಳಿಗೆ ಮಿತಿಯಿರಲಿ..

ಬದುಕಲು ಅಗತ್ಯವಾದ ಎಲ್ಲ ಸೌಲಭ್ಯಗಳಗು ನಮ್ಮ ಜೊತೆಗೆ ಇದ್ದರೂ ಮನಸ್ಸು ತೃಪ್ತಗೊಳ್ಳುವ ಸಂಭವನೀಯತೆ ಕಡಿಮೆಯೇ. ಅದು ಬೇಕು, ಇದು ಬೇಕು ಎನ್ನುವ ಹಪಾಹಪಿ ಸದಾ ಇದ್ದದ್ದೆ. ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ, ಬದುಕಾದರೆ ಕೇಡಿನ ಚಿಂತೆ ಎಂಬ ಶರಣರ ಮಾತಿನಂತೆ ನಮ್ಮ ಬಯಕೆಗಳು ಹನುಮಂತನ ಬಾಲದಂತೆ ಬೆಳೆಯುತ್ತಲೇ ಇರುತ್ತವೆ. ಬೇಕೆಂಬ ಬೆಂಕಿಯಲ್ಲಿ ಬೇಯುವಂತೆ ಮಾಡುತ್ತವೆ. ನಾವು ನಮ್ಮ ಆಯುಷ್ಯವನ್ನೆಲ್ಲ ಇಂತಹ ಭೌತಿಕ ಸೌಲಭ್ಯ ಸಂಪತ್ತುಗಳ ಅರ್ಜನೆಯಲ್ಲಿಯೇ ಕಳೆದು ಬಿಡುತ್ತೇವೆ. ಯಾವುದಕ್ಕೂ ಸಮಯವೇ ಇಲ್ಲ ಎಂದು ಗೊಣಗುವಂತಾಗುತ್ತದೆ. ಇದರಿಂದ ನೆಮ್ಮದಿ ದೂರ ಸರಿಯುತ್ತದೆ. ಬದುಕು ತುಂಬಾ ವ್ಯವಹಾರಿಕವಾಗುತ್ತದೆ. ಮಾನವೀಯತೆ ಮರೀಚಿಕೆಯಾಗುತ್ತದೆ. ಇಂತಹ ನಮ್ಮ ಸಲ್ಲದ ವರ್ತನೆಗೆ ಒಂದಷ್ಟು ಕಡಿವಾಣ ಹಾಕಬೇಕು. ಬದುಕಿಗೆ ಎಷ್ಟು ಅತ್ಯಗತ್ಯವೋ ಅಷ್ಟಕ್ಕೆ ಆದ್ಯತೆಯನ್ನು ಕೊಟ್ಟು ಸರಳತೆಯನ್ನು ರೂಢಿಸಿಕೊಳ್ಳಬೇಕು. ನಮಗೆ ಲಭ್ಯವಿರುವ ಸೌಕರ್ಯ– ಸೌಲಭ್ಯಗಳನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳುತ್ತ ಸಾಧ್ಯವಾದಷ್ಟು ತೃಪ್ತಭಾವ ಹೊಂದಬೇಕು. ಬದುಕಿನಲ್ಲಿ ಸಿಗುವ ಸಣ್ಣ ಸಣ್ಣ ಆನಂದದ ಅನುಭೂತಿಯನ್ನು ಪಡೆಯುವಲ್ಲಿ, ಇಲ್ಲವೇ ಇತರರಿಗೆ ಹಂಚುವ ದಿಸೆಯಲ್ಲಿ ಗಮನ ಹರಿಸಬೇಕು. ಮಾಡುವ ಕೆಲಸಗಳಿಗೆ ಮತ್ತು ತೃಪ್ತಭಾವಕ್ಕೆ ನಿಕಟ ಸಂಬಂಧವಿರುತ್ತದೆ. ನಾವು ಯಾವಾಗಲೂ ಬ್ಯುಸಿಯಾಗಿ ಬಿಟ್ಟರೆ ಮನಸ್ಸು ಭಾವರಹಿತವಾಗಿ ಬಿಡುತ್ತದೆ. ಎಲ್ಲವೂ ಇದ್ದರೂ ಒಂದಷ್ಟು ಸಮಾಧಾನವಿರುವುದಿಲ್ಲ. ನಾವು ಕೂಡಿಡ ಬಹುದಾದ ವಸ್ತು, ಒಡವೆ, ಆಸ್ತಿ ಅಂತಸ್ತು, ಗಳಿಸಬಹುದಾದ ಅಧಿಕಾರ ನಮಗೆ ತಾತ್ಕಾಲಿಕ ಸಂತೋಷವನ್ನು ಮಾತ್ರ ತಂದು ಕೊಡಬಲ್ಲ ಸಂಗತಿಗಳಾಗಿವೆ. ಇಲ್ಲದಿರುವುದರ ಕಡೆಗೆ ತುಡಿಯುವುದನ್ನು ಬಿಟ್ಟು ಸಾಧ್ಯವಾದಷ್ಟು ಇದ್ದುದರಲ್ಲಿಯೇ ತೃಪ್ತಿಪಡುವ ಆನಂದದ ಅನುಭೂತಿಯನ್ನು ನಮ್ಮದಾಗಿಸಿಕೊಂಡರೆ ಅದು ನಮ್ಮ ಮಾನಸಿಕ ಸ್ಥಿತಿಯ ಸ್ಥಿರತೆಯನ್ನು ನೂರ್ಮಡಿಗೊಳಿಸುತ್ತದೆ. ನಮ್ಮನ್ನು ಜಾಗೃತಗೊಳಿಸಿ ನಮ್ಮನ್ನು ಸಂಸ್ಕಾರವಂತರನ್ನಾಗಿ ಮಾಡುತ್ತದೆ. ನಮ್ಮಲ್ಲಿ ಅಂತಗಲಅಂತಃಶಕ್ತಿಗಳ ಅನಾವರಣಗೊಳಿಸುತ್ತದೆ.

• ಮಹಾದೇವ ಬಸರಕೋಡ

ನಮ್ಮಿಂದ ಎಲ್ಲವೂ ಸಾಧ್ಯ

ನಮ್ಮ ಮನಸು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ. ಮೇಲಾಗಿ ಅದೊಂದು ಅಪಾರ ಶಕ್ತಿ, ಕೌಶಲಗಳ ಆಗರ .ಮನಸು ಸದಾಕಾಲ ಚಲನಶೀಲತೆ ಹೊಂದಿರಬೇಕು. ಅದಕ್ಕೊಮ್ಮೆ ಜಡತ್ವ ಅಂಟಿಕೊಂಡರೆ ಮುಗಿಯಿತು. ಮತ್ತೆ ಸರಿದಾರಿಗೆ ಬರಲು ತುಂಬಾ ಕಾಲಾವಕಾಶ ಕೇಳುತ್ತದೆ. ನಾವು ಮಾನವ ಜನ್ಮ ಪಡೆದುಕೊಂಡು ಈ ಭೂಮಿಯ ಮೇಲೆ ಅವತರಿಸಿರುವುದೇ ಅಸಾಧ್ಯವಾದುದನ್ನು ಸಾಧ್ಯವಾಗಿಸುವುದಕ್ಕೆ. ಜೀವನದಲ್ಲಿ ಸಾಧ್ಯ ಅಥವಾ ಅಸಾಧ್ಯ ಎನ್ನುವುದರ ನಡುವಿನ ಅಂತರ ತೀರಾ ಸಣ್ಣದು. ಅಸಾಧ್ಯ ಎನ್ನುವ ಪದದಲ್ಲಿಯೇ ಸಾಧ್ಯಅನ್ನೋ ಪದ ಇರುವಾಗ ಕೊನೆವರೆಗೂ ಸಾಧಿಸುವ ಛಾತಿ ಬಿಡಬಾರದು. ನಾವು ಸಾಧ್ಯ ಅಂತ ಎಂದುಕೊಂಡರೆ ಸಾಧ್ಯ. ಅಸಾಧ್ಯವೆಂದು ಅಂದುಕೊಂಡರೆ ನಮಗದು ಅಸಾಧ್ಯವೇ. ಸಾಧ್ಯ ಹಾಗೂ ಅಸಾಧ್ಯಗಳ ಕಲ್ಪನೆಯು ಮೊಳೆಯುವ ಮೂಲಸ್ಥಾನವೇ ನಮ್ಮ ಮನಸು. ಮುಖ್ಯವಾಗಿ ನಾವು ಮನಸ್ಸು ಮಾಡಿದರೆ, ಎಲ್ಲವೂ ನೀರು ಕುಡಿದಷ್ಟೇ ಸುಲಭ. ನಾವು ಎಂದರೆ ನಂಬಿಕೆ. ನಮ್ಮದು ಎಂದರೆ ಅಪಾರ ಭರವಸೆ.

ನಮ್ಮಿಂದ ಏನೆಲ್ಲ ಸಾಧ್ಯವೆಂದು ಒಂದರೆಕ್ಷಣ ಯೋಚಿಸಿ, ನಮ್ಮನ್ನೆ ನಾವು ಪ್ರಶ್ನಿಸಿಕೊಂಡರೆ ಕೊನೆಯಲಿ ಸಿಕ್ಕುವ ಉತ್ತರವೇ ಎಲ್ಲವೂ ಸಾಧ್ಯವೆಂದು. ಈ ಸಾಧ್ಯ ಎನ್ನುವ ಸಣ್ಣ ಪದವೇ ಸೋತು ಸೋತು ಕಂಗಾಲಾಗಿ ಹೋದ ಮನಸು ಮತ್ತೆ ಜೀವಗಳಿಗೆ ಅಪಾರ ಪ್ರಮಾಣದ ಸಾಂತ್ವನ ನೀಡುತ್ತದೆ. ಈ ಸಾಧ್ಯ, ಅಸಾಧ್ಯ ಎನ್ನುವುದು ಆಯಾ ಮನುಷ್ಯನು ಆಲೋಚಿಸುವ ರೀತಿಯ ಮೇಲೆಯೇ ಅವಲಂಬಿತವಾಗಿರುತ್ತದೆ. ನಮಗೆ ಅಸಾಧ್ಯವೆನಿಸಿದ ಕಾರ್ಯಗಳನು ಕೈಗೆತ್ತಿಕೊಂಡು ಅದಕೆ ತಕ್ಕಂತೆ ಪ್ರಯತ್ನ ಪಡುತ್ತಲೇ ಇರಬೇಕು. ಇಂತಹ ಕೆಲಸವನ್ನು ಯಾರು ತಮ್ಮ ಜೀವಕ್ಕಿಂತ ಹೆಚ್ಚು ಪ್ರೀತಿಸಿ ಅದರಲ್ಲೇ ತಲ್ಲೀನತೆ ಹೊಂದುತ್ತಾರೋ ಅವರಿಗೆ ಯಶಸ್ಸು ನಿಶ್ಚಿತ. ನಮ್ಮ ನಮ್ಮ ಯಶಸ್ಸಿನ ಜೊತೆಗೆ ಒಂದು ಹೆಜ್ಜೆ ಮುಂದುವರೆದು ನಮ್ಮಿಂದ ಸಾಧ್ಯವಾದರೆ ಬೇರೆಯವರ ಕಷ್ಟಗಳನು ಆಲಿಸುವ ಕಿವಿಗಳಾಗೋಣ, ಸಾಧ್ಯವಾದರೆ ಬೇರೆಯವರ ಜೀವನಕ್ಕೆ ಏಣಿ ಆಗೋಣ, ಸಾಧ್ಯವಾದರೆ ಬೇರೆಯವರ ಕನಸುಗಳಿಗೆ ಮೆಟ್ಟಿಲುಗಳಾಗೋಣ.

• ರಂಗನಾಥ್ ಗುಡಿಮನಿ

ಯುವ ಕಾವ್ಯ

ಉಗುರು

ಹುಲಿಯ ಪಾದದಲ್ಲಿ ಬೆಳೆದದ್ದನ್ನು
ಸಾಕಾಗಿದೆ ಕತ್ತರಿಸಿ ಕತ್ತರಿಸಿ
ಅಲಂಕರಿಸಿ ಕುತ್ತಿಗೆಗೆ ಹಾಕಿಕೊಂಡವರ
ಬದುಕು ಹೋಗುತ್ತಿದೆ ತತ್ತರಿಸಿ!

• ಮಹಾಂತೇಶ ಮಾಗನೂರ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಆರ್.ಕೆ.ಲಕ್ಷ್ಮಣ್ ಮೈಸೂರಿನ ಹೆಮ್ಮೆ

• ಎಸ್.ಎಲ್.ವರಲಕ್ಷ್ಮೀ ಮಂಜುನಾಥ್

ಭಾರತೀಯ ವ್ಯಂಗ್ಯಚಿತ್ರ ಕ್ಷೇತ್ರದಲ್ಲಿ ನಮಗೆ ಕೇಳಿಬರುವ ದೊಡ್ಡ ಹೆಸರು ಆರ್.ಕೆ.ಲಕ್ಷ್ಮಣ್. ಇವರ ಪೂರ್ಣ ಹೆಸರು ರಾಸಿಪುರಂ ಕೃಷ್ಣಸ್ವಾಮಿ ಅಯ್ಯರ್. ಇವರ ತಂದೆ ಕೃಷ್ಣ ಸ್ವಾಮಿ ಅಯ್ಯರ್. ಹಾಗೂ ಇವರ ಅಣ್ಣ ಇಂಗ್ಲಿಷ್ ಕಾದಂಬರಿಕಾರರಾದ ಆರ್.ಕೆ.ನಾರಾಯಣ್. 1924 ಅಕ್ಟೋಬರ್ 24ರಂದು ಮೈಸೂರಿನಲ್ಲಿ ಜನಿಸಿದ ಆರ್.ಕೆ.ಲಕ್ಷ್ಮಣ್ ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ಬಹಳ ಆಸಕ್ತರು. ತಾವು ಕಂಡ ಪಕ್ಷಿಗಳು, ವ್ಯಕ್ತಿ ವಸ್ತುಗಳನ್ನು ತದೇಕಚಿತ್ತದಿಂದ ಗಮನಿಸಿ ಚಿತ್ರಿಸುತ್ತಿದ್ದರು. ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದ ಲಕ್ಷ್ಮಣ್ ಅವರ ಚಿತ್ರಗಳು ಅಂದಿನ ಕಾಲಕ್ಕೆ ಹೆಸರುವಾಸಿಯಾಗಿದ್ದ ಸ್ವರಾಜ್ಯ ಮತ್ತು ಬ್ಲಿಟ್ಜ್ ನಿಯತಕಾಲಿಕೆಗಳಲ್ಲಿ ಪ್ರಕಟವಾಗತೊಡಗಿದವು. ಕನ್ನಡದ 'ಕೊರವಂಜಿ' ಪತ್ರಿಕೆಯಲ್ಲೂ ಅವರ ವ್ಯಂಗ್ಯಚಿತ್ರಗಳು ಪ್ರಕಟಗೊಂಡಿವೆ. ಮುಂದೆ ಪ್ರಸಿದ್ಧ 'ದಿ ಟೈಮ್ಸ್ ಆಫ್ ಇಂಡಿಯಾ'ಗೆ ಸೇರಿದ ಆರ್.ಕೆ.ಲಕ್ಷ್ಮಣ್ ಅವರ ವ್ಯಂಗ್ಯಚಿತ್ರಕಲೆಗೆ ಹೊಸ ಆಯಾಮ, ಹೊಸ ವೇದಿಕೆ ದೊರಕಿತು; ಪ್ರಮುಖ ಓದುಗರ ಮತ್ತು ಪ್ರಸಿದ್ಧರ ಒಡನಾಟವೂ ಅವರಿಗೆ ದೊರಕಿತು. ಟೈಮ್ಸ್ ಆಫ್ ಇಂಡಿಯಾದಲ್ಲಿ ಅವರು ನಿರಂತರವಾಗಿ ಬರೆದ ವ್ಯಂಗ್ಯಚಿತ್ರಗಳು ಜಾಗತಿಕ ಮನ್ನಣೆಯನ್ನು ಪಡೆದವು.

ಜನಮೆಚ್ಚಿದ ಜನಸಾಮಾನ್ಯ

ಅವರು ಸೃಷ್ಟಿಸಿದ 'ಕಾಮನ್ ಮ್ಯಾನ್' ವ್ಯಕ್ತಿತ್ವದ ಪಾತ್ರವು ಅಪಾರ ಜನಪ್ರಿಯತೆ ಪಡೆಯಿತು. ಆ ಪಾತ್ರವು ಸ್ವತಂತ್ರೋತ್ತರ ಕಾಲದಲ್ಲಿನ ನಮ್ಮ ದೇಶದ ಜನಸಾಮಾನ್ಯರ ಬದುಕಿನ ಸುಖದುಃಖಗಳ, ಬವಣೆಗಳ ಪ್ರತಿಬಿಂಬವಾಯಿತು. ರಾಜಕೀಯ ನಿರ್ಣಯಗಳ ಮೇಲೆ ಈ ಕಾಮನ್ ಮ್ಯಾನ್ ಮಾಡುವ ಟೀಕೆ ಟಿಪ್ಪಣಿಗಳು, ಆತ ಗಮನಿಸುವ ವಿಚಾರಗಳು ದೇಶದ ಚುಕ್ಕಾಣಿ ಹಿಡಿದ ರಾಜಕೀಯ ನಾಯಕರ ಗಮನಕ್ಕೆ ಬರುತ್ತಿದ್ದವು ಎಂದರೆ, ಆರ್.ಕೆ.ಲಕ್ಷ್ಮಣ್ ಅವರ ಪ್ರತಿಭೆ ಅರ್ಥವಾದೀತು.

ಸುಮಾರು 56ವರ್ಷಗಳ ಕಾಲ ಅವರು 'ಟೈಮ್ಸ್ ಆಫ್ ಇಂಡಿಯಾ'ದಿನಪತ್ರಿಕೆಯಲ್ಲಿ ರಚಿಸಿದ 'ಕಾಮನ್ ಮ್ಯಾನ್' ಇಡೀ ಪತ್ರಿಕೆಯ ಪ್ರಮುಖ ಆಕರ್ಷಣೆಯಾದದ್ದರ ಜೊತೆಗೆ ಜನಸಾಮಾನ್ಯರ ನೋವು ಸಮಸ್ಯೆಗಳಿಗೆ ಧ್ವನಿಯಾದದ್ದು ಒಂದು ದಾಖಲೆಯೇ ಸರಿ. ಈ ಕಾಮನ್ ಮ್ಯಾನ್ ಚಿತ್ರವೇ ನಗೆ ತರಿಸುವಂತಹದ್ದು. ದೊಡ್ಡ ಕನ್ನಡಕ, ಅತ್ತ ಇತ್ತ ಕುರುಚಲು ಕೂದಲುಳ್ಳ ಬೋಳು ತಲೆ, ಗರಿ ಮೀಸೆ ಹೊತ್ತ ಮುಖ, ಕಚ್ಚೆಪಂಚೆ, ಚೌಕುಳಿ ಕೋಟು ಧರಿಸಿದ, ಸವೆದ ಬ್ರೀಫ್ಕೇಸ್ ಅಥವಾ ಛತ್ರಿ ಹಿಡಿದು ಚಪ್ಪಲಿ ಹಾಕಿದ ಸಾಮಾನ್ಯ ವ್ಯಕ್ತಿಯೇ ಕಾಮನ್ ಮ್ಯಾನ್. ಹಾಗೆ ನೋಡಹೋದರೆ, ಆ ಪಾತ್ರದ ಶೈಲಿ, ಧರಿಸುವ ಬಟ್ಟೆ ಎಲ್ಲವೂ ಹಳೆಯ ಮೈಸೂರಿನ ಒಬ್ಬ ಗ್ರಹಸ್ಥನ ಪ್ರತಿಬಿಂಬ ಎಂದೂ ಹೇಳಬಹುದು; ಆದರೆ, ಅವರು ಮುಂಬಯಿಯಲ್ಲಿದ್ದುಕೊಂಡು ವ್ಯಂಗ್ಯ ಚಿತ್ರ ರಚಿಸುತ್ತಿದ್ದುದರಿಂದ, ಕಾಮನ್ ಮ್ಯಾನ, ಇಡೀ ದೇಶದ ಜನಸಾಮಾನ್ಯನ ಪ್ರತಿನಿಧಿ ಎನಿಸಿದ.

ಸರಳ ರೇಖೆಗಳು

ಸರಳ ಹಾಗೂ ಮಿತವಾದ ರೇಖೆಗಳ ಬಳಕೆ, ಮಿತವಾದ ಶಾಬ್ದಿಕ ಅಭಿವ್ಯಕ್ತಿ, ಕಪ್ಪು ಬಿಳುಪಿನ ವರ್ಣ ಸಂಯೋಜನೆ, ನಿಚ್ಚಳವಾದ ಮುಖಭಾವಗಳು, ಸಾಂಕೇತಿಕ ನಿರೂಪಣೆ, ಮನಮುಟ್ಟುವ ಚುಟುಕು ಚುರುಕು ವಾಕ್ಯ ಬಳಕೆ ಅವರ ವ್ಯಂಗ್ಯಚಿತ್ರದ ವಿಶೇಷತೆಗಳಾಗಿದ್ದವು. ಅವರ ವ್ಯಂಗ್ಯಚಿತ್ರಗಳಲ್ಲಿ ಸಾಮಾಜಿಕ, ರಾಜಕೀಯ ವಿಡಂಬನೆ– ಸಮಸ್ಯೆಗಳು, ಪ್ರಚಲಿತ ವಿದ್ಯಮಾನಗಳು, ಮನುಷ್ಯನ ಸ್ವಭಾವ, ಸಂವೇದನೆಗಳು ಅದ್ಭುತವಾಗಿ ವ್ಯಕ್ತವಾಗಿವೆ. ಅವರ ವ್ಯಂಗ್ಯಚಿತ್ರದ ಮೇಲೆ ಭಾರತೀಯ ಜಾನಪದ ಕಲೆ, ಪುರಾಣಗಳು, ಬ್ರಿಟಿಷ್ ವ್ಯಂಗ್ಯಚಿತ್ರ ನಿಯತಕಾಲಿಕಗಳು, ಅಮೆರಿಕಾದ ವ್ಯಂಗ್ಯ ಚಿತ್ರಕಾರ ಚಾರ್ಲ್ಸ್ ಷೂಲ್ಸ್ ಅವರ ಪ್ರಭಾವವನ್ನು ಕಾಣಬಹುದಾಗಿದೆ. ತಿಳಿಹಾಸ್ಯ, ವ್ಯಂಗ್ಯ, ಸಹಾನುಭೂತಿ, ಸಾತ್ವಿಕ ಟೀಕೆ, ವಿಡಂಬನೆ ಅವರ ವ್ಯಂಗ್ಯಚಿತ್ರಗಳಲ್ಲಿ ಪ್ರಧಾನವಾಗಿ ಕಾಣಬರುವ ಅಂಶಗಳಾಗಿವೆ. ಸೂಟ್ ಕೇಸ್, ಛತ್ರಿ, ಬೀದಿಯ ದೃಶ್ಯಗಳು, ಆಡಂಬರ ವಿಲ್ಲದ ಸಾಮಾನ್ಯ ಮನುಷ್ಯನಂಥ ಸರಳ ಅಂಶಗಳನ್ನುಳ್ಳ ವ್ಯಂಗ್ಯಚಿತ್ರಗಳ ಮೂಲಕವೇ ದಶಕಗಳ ಕಾಲ ಭಾರತೀಯ ಸಮಾಜ, ಆರ್ಥಿಕ, ರಾಜಕೀಯ, ಧಾರ್ಮಿಕ ವಿಷಯಗಳನ್ನು ಕುರಿತು ಸಶಕ್ತವಾಗಿ ಮಾತನಾಡಿದ ಪರಿ ನಿಜಕ್ಕೂ ಅದ್ಭುತ. ಅವರು ರಚಿಸಿದ ವ್ಯಂಗ್ಯಚಿತ್ರಗಳು ಇಂದಿನ ಕಾಲಘಟ್ಟಕ್ಕೂ ಅನ್ವಯವಾಗುವುದು ಅವುಗಳ ಹಿರಿಮೆ ಹಾಗೂ ವಿಶೇಷತೆಗೆ ಹಿಡಿದ ಕನ್ನಡಿ.

ತಿಳಿಹಾಸ್ಯ, ವ್ಯಂಗ್ಯ, ಸಹಾನುಭೂತಿ, ಸಾತ್ವಿಕ ಟೀಕೆ, ವಿಡಂಬನೆ ಅವರ ವ್ಯಂಗ್ಯಚಿತ್ರಗಳಲ್ಲಿ ಪ್ರಧಾನವಾಗಿ ಕಾಣಬರುವ ಅಂಶಗಳಾಗಿವೆ. ವಿಶೇಷವೆಂದರೆ ಆರ್.ಕೆ. ಲಕ್ಷ್ಮಣ್ ಅವರು ಮೈಸೂರಿನಲ್ಲಿ ಜನಿಸಿ, ಮೈಸೂರಿನಲ್ಲೇ ವಿದ್ಯಾಭ್ಯಾಸ ಮಾಡಿದವರು, ಆದ್ದರಿಂದ ನಮ್ಮವರು!

ಬಹುಮುಖ ಪ್ರತಿಭೆಯ ಲಕ್ಷ್ಮಣ್ ಒಬ್ಬ ಅತ್ಯುತ್ತಮ

ಲೇಖಕರೂ ಹೌದು.'ದಿ ಮೆಸೆಂಜರ್','ಸರ್ವೆಂಟ್ಸ್ ಆಫ್ ಇಂಡಿಯಾ','ದಿ ಎಲಾಕ್ವೆಂಟ್ ಬ್ರಷ್','ಡಿಸ್ಟಾರ್ಟೆಡ್ ಮಿರರ್' ಮೊದಲಾದ ಅನೇಕ ಕೃತಿಗಳು ಅವರೊಬ್ಬ ಶ್ರೇಷ್ಠ ಬರಹಗಾರರೂ ಹೌದೆಂಬುದಕ್ಕೆ ನಿದರ್ಶನವಾಗಿದೆ. ಆರ್.ಕೆ. ಲಕ್ಷ್ಮಣ್ ಅವರಿಗೆ ಅನೇಕ ಪ್ರಶಸ್ತಿಗಳು ಬಂದಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ 'ಪದ್ಮಭೂಷಣ', ಪದ್ಮವಿಭೂಷಣ', ರೇಮನ್ ಮ್ಯಾಗ್ಸೆಸೆ, ಬಿ.ಡಿ.ಗೊಯೆಂಕ ಪ್ರಶಸ್ತಿ, ದುರ್ಗಾರತನ್ ಸ್ವರ್ಣ ಪಾರಿತೋಷಕ, ಸಿ.ಎನ್. ಎನ್.ಐ.ಬಿ.ಎನ್' ಸಾಧನಾ ಪ್ರಶಸ್ತಿ ಮುಂತಾದವು. ಭಾರತೀಯ ವ್ಯಂಗ್ಯಚಿತ್ರಕಲೆಯನ್ನು, ವಿಶ್ವದಾದ್ಯಂತ ವ್ಯಂಗ್ಯಚಿತ್ರಕಾರರನ್ನು ಪ್ರಭಾವಿಸಿದ ಈ ಮಹಾನ್ ವ್ಯಂಗ್ಯ ಚಿತ್ರ ಕಲಾವಿದ 2015ರ ಜನವರಿ 26ರಂದು ನಿಧನರಾದರು.

ಇಲ್ಲಿ ವಿವಿಧ ಪ್ರವಾಸಿ ಆಕರ್ಷಣೆಗಳ ಚಿಕಣಿ ಮಾದರಿಗಳನ್ನು ಆಕರ್ಷಕವಾಗಿ ಜೋಡಿಸಲಾಗಿದೆ.

ಚಿಕಣಿ ಮಾದರಿ ಕಲಾಕೃತಿ

• ಜಿ.ನಾಗೇಂದ್ರ ಕಾವೂರು

ಯುರೋಪ್ ರಾಷ್ಟ್ರಗಳಲ್ಲೇ ನೆದರ್ ಲ್ಯಾಂಡ್ಸ್ ತನ್ನದಾದ ಪ್ರತ್ಯೇಕತೆಯನ್ನು ಹೊಂದಿದೆ. ಸಮುದ್ರ ಮಟ್ಟಕ್ಕಿಂತಲೂ ಕೆಳಗಿದ್ದು, ಸಮತಟ್ಟಾದ ಭೂ ಪ್ರದೇಶವನ್ನು ಹೊಂದಿರುವ ಹಾಲೆಂಡ್‌ನಲ್ಲಿ ಸಾವಿರಾರು ಕೆನಾಲ್ ಗಳಿವೆ. ಕೆನಾಲ್‌ಗಳ ಇಕ್ಕೆಲಗಳಲ್ಲಿ ನಿರ್ಮಿಸಲಾಗಿರುವ ಸಾಂಪ್ರದಾಯಿಕ ಕಟ್ಟಡಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ನೆದರ್ ಲ್ಯಾಂಡ್ಸ್ ರಾಜಕೀಯ, ಐತಿಹಾಸಿಕ ಭವ್ಯ ಪರಂಪರೆಯನ್ನು ಹೊಂದಿದ್ದು ಪ್ರತಿಯೊಂದು ನಗರದಲ್ಲೂ ಹಲವು ವೈಶಿಷ್ಟ್ಯಗಳನ್ನು ಕಾಣಬಹುದಾಗಿದೆ.

ದಕ್ಷಿಣ ಹಾಲೆಂಡಿನ 'ದಿ ಹೇಗ್'(ಡಚ್: ಡೆನ್ ಹಾಗ್) ಪ್ರಾಂತ್ಯದ, ಸ್ಕೇವೆನಿನ್ ನಲ್ಲಿರುವ ಮಡುರೋಡಾಮ್ (ಡಚ್: ಮದ್ಯುರೋದಮ್) ಮಿನಿಯೇಚರ್ ಥೀಮ್ ಪಾರ್ಕ್, ಡಚ್ ಸಂಸ್ಕೃತಿಯ ಹೆಗ್ಗುರುತುಗಳು, ಐತಿಹಾಸಿಕ ಕಟ್ಟಡಗಳು ಮೊದಲಾದುವುಗಳನ್ನು ಒಳಗೊಂಡಿದ್ದು ಕೇವಲ ನಾಲಕ್ಕು ಎಕರೆ ಪ್ರದೇಶದಲ್ಲಿ ಇಡೀ ಹಾಲೆಂಡನ್ನು ನೋಡಿದ ಅನುಭವವನ್ನು ನೀಡುತ್ತದೆ.

ಡಚ್ ಪರಂಪರೆಯ 100 ತಾಣಗಳಲ್ಲಿ ಒಂದಾದ ಹೇಗ್ ಪಟ್ಟಣದ ಬಿನೆನ್ಹಾಫ್,ಆಮ್‌ಸ್ಟರ್ ಡ್ಯಾಂನ ರೈಕ್ಸ್ ಮ್ಯೂಸಿಯಂ, ನೆದರ್ ಲ್ಯಾಂಡ್ಸ್‌ನ ಪ್ರಮುಖ ಅಂತಾರಾಷ್ಟ್ರೀಯ- ಷಿಪೋಲ್ ವಿಮಾನ ನಿಲ್ದಾಣ, ಮಿನಿಯೇಚರ್ ವಿಮಾನಗಳು, ಇಂಟರ್ ನ್ಯಾಷನಲ್ ಕೋರ್ಟ್ ಆಫ್ ಜಸ್ಟೀಸ್– ಪೀಸ್ ಪ್ಯಾಲೇಸ್, ವಿಶ್ವದಅತಿದೊಡ್ಡ ಬಂದರು ರೋಟರ್ಡ್ಯಾಂ ಬಂದರು, ಎರಾಸ್ಮಸ್ ಬ್ರಿಡ್ಜ್, ಯೂರೋ ಮಾಸ್ಟ್, ಸ್ಕೈಲೈನ್, ವಿಂಡ್ ಮಿಲ್, ಟುಲಿಪ್ ಹೂವಿನ ತೋಟಗಳು, ಅನ್ನೆ ಫ್ರಾಂಕ್ ಮನೆ, ಸೇಂಟ್ ಜಾನ್ಸ್ ಕೆಥೆಡ್ರಲ್, ಕೇಂದ್ರರೈಲು ನಿಲ್ದಾಣ, ಸಾಂಪ್ರದಾಯಿಕ ಡಚ್ ಕಾಲುವೆ, ಮನೆಗಳು, ಸೇತುವೆಗಳು, ಕಾರ್ಖಾನೆಗಳು ಇತ್ಯಾದಿಗಳ ಪ್ರತಿಕೃತಿಗಳನ್ನು ಮೂಲ ರಚನೆಗೆ ಕುಂದು ಬಾರದಂತೆ 1:25 ಪ್ರಮಾಣದಲ್ಲಿ ನಿರ್ಮಿಸಿ, ಹಲವು ಗಂಟೆಗಳಲ್ಲಿ ನೆದರ್‌ಲ್ಯಾಂಡ್ಸ್ ಸೊಬಗು, ಇತಿಹಾಸ ಹಾಗೂ ಸಂಸ್ಕೃತಿಯನ್ನು ಪರಿಚಯಿಸುವ ಸಾಹಸವನ್ನು 'ಮಡುರೋಡಾಮ್' ನಿರ್ಮಾಪಕರು ಮಾಡಿದ್ದಾರೆ.

ಚಿಕಣಿ ಮಾದರಿಗಳನ್ನು ಹೊಂದಿರುವ ಪಾರ್ಕ್ ಇದಾಗಿದ್ದರೂ, ಕಟ್ಟಡಗಳ ನೈಜತೆಗೆ ಕುಂದು ಬಾರದಂತೆ ರಚಿಸಲಾಗಿದೆ. ಕ್ಯಾಥೆಡ್ರಲ್ ಒಳಗೆ ಇಣುಕಿ ನೋಡಿದರೆ, ಬೆಂಚಿನಲ್ಲಿ ಜನರು ಕುಳಿತು ಪ್ರಾರ್ಥನೆ ಮಾಡುತ್ತಿರುವ ನೋಟವನ್ನೂ ಕಾಣಬಹುದಾಗಿದೆ. ರೋಟರ್ಡ್ಯಾಂ ಬಂದರಿನಲ್ಲಿ ಸರಕನ್ನು ಲೋಡ್ ಮಾಡುತ್ತಿರುವುದು, ಷಿಪೋಲ್ ವಿಮಾನ ನಿಲ್ದಾಣದಲ್ಲಿ ಹಾರಾಡುತ್ತಿರುವ ವಿಮಾನಗಳು, ಹಡಗು ಬಂದಾಗ ಸ್ವಯಂಚಾಲಿತವಾಗಿ ಮೇಲೆ ಹೋಗಿ ಹಡಗು ಹೋದ ನಂತರ ಯಥಾಸ್ಥಿತಿಗೆ ಮರಳುವ ಸೇತುವೆ, ರೈಲು, ಬಸ್ಸು

ಹಾಗೂ ಟ್ರಾಂಗಳ ಓಡಾಟ, ರಸ್ತೆಯ ಸಿಗ್ನಲ್ ಗಳು,ರಸ್ತೆಗಳಲ್ಲಿ ಓಡಾಡುತ್ತಿರುವ ಜನ ಹಾಗೂ ಅವರು ಧರಿಸಿರುವ ಡಚ್ ಸಾಂಪ್ರದಾಯಿಕ ಉಡುಗೆ ತೊಡುಗೆಗಳು, ಕೆನಾಲ್‌ಗಳಲ್ಲಿ ಸಂಚರಿಸುತ್ತಿರುವ ಬೋಟ್ ಇವೆಲ್ಲವೂ ನೈಜ ಅನುಭವವನ್ನು ನೀಡುತ್ತವೆ. ವೀಕ್ಷಕರು ಎಲ್ಲಿ ಬೇಕಾದರೂ ಓಡಾಡಲು ಸ್ವತಂತ್ರರಾಗಿದ್ದು, ಡಚ್ ಸಂಸ್ಕೃತಿಯ ಪ್ರತೀಕಗಳಾದ ಬೃಹತ್ ಗಾತ್ರದ 'ಕ್ಲಾಗ್ಸ್' (ಮರದ ಶೂ) ಮತ್ತು ದೈತ್ಯಟ್ಯುಲಿಪ್ ಹೂತೋಟದ ನಡುವೆ ಪ್ರವಾಸಿಗರು ನಿಂತು ಫೋಟೊ ತೆಗೆಸಿಕೊಂಡು ಆನಂದಿಸುತ್ತಾರೆ.

ಮಡುರೋಡಾಮ್ ನೋಡಿದಣಿದ ಪ್ರವಾಸಿಗರ ಹಸಿವು, ಬಾಯಾರಿಕೆಗಳನ್ನು ನೀಗಿಸಲು ಎರಡು ರೆಸ್ಟೋರೆಂಟ್‌ಗಳಿವೆ. ಇಲ್ಲಿಡಚ್ ಸಾಂಪ್ರದಾಯಿಕ ಆಹಾರಗಳನ್ನು ಸವಿಯಬಹುದು. ಭೇಟಿ ನೀಡಿದ ಸವಿ ನೆನಪಿಗಾಗಿ ಹಾಗೂ ನೆಂಟರಿಷ್ಟರಿಗೆ ನೀಡಲು ಉಡುಗೊರೆ ವಸ್ತುಗಳೂ ಇಲ್ಲಿ ಲಭ್ಯ.

▶▶ ಚಿತ್ರಗಳು:ಲೇಖಕರವು

ಮೈತುಂಬಾ ಸಸ್ಯವನ್ನು ಬೆಳೆಸಿಕೊಂಡ ಈ ಕಲಾಕೃತಿ ಸಿಯಟ್ಲ್‌ನಲ್ಲಿದೆ.

ಹಸಿರು ಡೈನೊಸಾರ್

• ಡಾ.ಉಮಾಮಹೇಶ್ವರಿ ಎನ್.

ಅಮೆರಿಕದ ಸಿಯಟ್ಲ್ ನಗರದ ಭಾಗವಾಗಿರುವ ಫ್ರೆಮಾಂಟ್ ಎಂಬಲ್ಲಿ ಆದಿತ್ಯವಾರದ ರೈತರ ಸಂತೆ ನಡೆಯುವ ರಸ್ತೆಯಲ್ಲಿ ನಡೆದು ಹೋಗುವಾಗ ಹಸಿರು ಬಣ್ಣದ ಡೈನೊಸಾರ್ ತರಹದ ನಿರ್ಮಿತಿಗಳು ಕಾಣಿಸಿದವು. ಒಂದು ದೊಡ್ಡದು, ಮತ್ತೊಂದು ಮರಿ. ಅಲ್ಲೇ ಇದ್ದ ಫಲಕವನ್ನು ಓದಿದಾಗ ತಿಳಿದು ಬಂದ ವಿಷಯ ಕುತೂಹಲಕಾರಿಯಾಗಿತ್ತು. ಇವುಗಳು ಫ್ರೆಮಾಂಟ್‌ಗೆ ಆಗಮಿಸಿದ್ದು 1998ರಲ್ಲಿ. ಸಿಯಟ್ಲ್‌ನ ಪೆಸಿಫಿಕ್ ಸೈನ್ಸ್ ಸೆಂಟರ್‌ನಲ್ಲಿ ಇವು ಮುಂಚೆ ಸ್ಥಾಪನೆಗೊಂಡಿದ್ದವು. ಆದರೆ, ಅದೇಕೋ ಅಲ್ಲಿ ಅವರಿಗೆ ಬೇಡವೆನಿಸಿದಾಗ ಒಂದೇ ಡಾಲರ್‌ಗೆ ಆ ಕಲಾಕೃತಿಯ ತಂತಿಯ ಚೌಕಟ್ಟನ್ನು ಖರೀದಿಸಿ ಇಲ್ಲಿಗೆ ತರಲಾಯಿತು. ಜೋಶ್ ಲೋಗನ್ ಎಂಬ ಸ್ಥಳೀಯ ವ್ಯಕ್ತಿ ಇಲ್ಲಿನ ಇತರ ನಿವಾಸಿಗಳಿಂದ ಹಣ ಸಂಗ್ರಹಿಸಿ, ಇಲ್ಲಿಗೆ ತರಿಸಿ ಸ್ಥಾಪಿಸುವ ಕಾರ್ಯ ಕೈಗೊಂಡ. ನಂತರ, ಅವುಗಳ ಸುತ್ತಲೂ ಸಸ್ಯಗಳನ್ನು ಬೆಳೆಸಲಾಯಿತು; ಅಂದರೆ, ಆ ತಂತಿಯ ಚೌಕಟ್ಟಿನ ಮೇಲೆ ಬೆಳೆಯುವಂತಹ ಬಳ್ಳಿ ಸಸಗಳೂ. ಇಂದು ಅಪಟೋಸಾರಸ್ ಪ್ರಬೇಧದ ನೈಜ ಗಾತ್ರದ ಡೈನೋಸಾರ್‌ಗಳ ಪ್ರತಿಕೃತಿಗಳು ಐವಿ ಸಸ್ಯದ ಹಸಿರು ಹೊದಿಕೆಯಿಂದ ಕಂಗೊಳಿಸುತ್ತಿವೆ. ಒಟ್ಟು ಐದು ಟನ್‌ಗಳಷ್ಟು ಭಾರವಿರುವ ಈ ಕಲಾಕೃತಿಗಳು ಇಲ್ಲಿನ ವಾಷಿಂಗ್ಟನ್ ಶಿಪ್ ಕೆನಾಲ್‌ನ ದಡದಲ್ಲಿ ತಲೆ ಎತ್ತಿವೆ. ಇಲ್ಲಿಗೆ ಬರುವ ಮಕ್ಕಳಿಗೆ, ಪ್ರವಾಸಿಗರಿಗೆ ಮತ್ತು ಇತರ ಜನಸಾಮಾನ್ಯರಿಗೆ ಇದೊಂದು ಕುತೂಹಲಕಾರಿ ನೋಟ.

ರಾಣಿ ಅಹಲ್ಯಾ ಹೋಲ್ಕರ್ ಈ ಹೆಸರು ನಮ್ಮ ದೇಶದ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಆದರೆ ಜನತೆ ಅದಕ್ಕಿಂತಲೂ ಹೆಚ್ಚಾಗಿ ರಾಜಮಾತೆಯನ್ನು ಮಹಾಮಾತೆಯನ್ನಾಗಿ ಸ್ವೀಕರಿಸಿ ಇಂದಿಗೂ ಪೂಜನೀಯ ಸ್ಥಾನದಲ್ಲಿರಿಸಿದ್ದಾರೆ.

ಜನರ ಆಶೋತ್ತರ ಈಡೇರಿಸಿದ ಅಹಲ್ಯಾಬಾಯಿ ಹೋಳ್ಕರ್



• ಮೋಹನ ಭಟ್ಟ, ಅಗಸೂರು

ಭಾರತದ ಇತಿಹಾಸದ ಪುಟಗಳನ್ನು ತೆರೆದಂತೆ, ಅಪೂರ್ವ ವ್ಯಕ್ತಿತ್ವದ ಮಹಾನುಭಾವರುಗಳು ಆಗಿ ಹೋಗಿರುವುದು ನಿಜಕ್ಕೂ ಶ್ಲಾಘನೀಯ ವಾಗಿದೆ. ಅಂತಹ ಅಪರೂಪದ ವ್ಯಕ್ತಿಗಳಲ್ಲಿ ಅಹಲ್ಯಾ ಬಾಯಿ ಹೋಳ್ಕರ್ ಒಬ್ಬರು.

1725ಮೇ 31ರಂದು ಮಹಾರಾಷ್ಟ್ರದ ಮರಾಠಾ ರಾಜವಂಶದಲ್ಲಿ ಜನಿಸಿದ ಅಹಲ್ಯಾ ಬಾಯಿ, ನಂತರ ಎದುರಾದ ಸಂಕಷ್ಟದ ನಡುವೆಯೂ, ಆಡಳಿತ ನಡೆಸಿ, ಇಂದೋರ್ ಪಟ್ಟಣದ ಅಭಿವೃದ್ಧಿಗೆ ಕಾರಣರಾದರು. ಈಕೆಯ ತಂದೆ ಮಂಕೋಜ್ ಸಿಂಧಿಯಾನ ರಾಜಾಡಳಿತದಲ್ಲಿ ಪಳಗಿದವಳು. ಎಳೆಯ ವಯಸ್ಸಿನಲ್ಲಿಯೇ ಮಧ್ಯ ಪ್ರದೇಶ ದ ಹೆಸರಾಂತ ಮಾಲ್ವಾ ರಾಜವಂಶದ ರಾಜ ಕುಮಾರ ಖಂಡೇರಾವ್ ನೊಂದಿಗೆ ವಿವಾಹ ವಾಯಿತು. 1745ರಲ್ಲಿ ಮಾಲೇರಾವ್ ಅಹಲ್ಯಾಳ ಪುತ್ರನಾಗಿ ಜನಿಸಿದ. ಇದಾದ ಮೂರು ವರ್ಷಗಳಲ್ಲಿ ಮುಕ್ತಾ ಬಾಯಿ ಜನಿಸಿದಳು. ಆದರೆ 19ನೇ ವರ್ಷದಲ್ಲಿಯೇ ರಾಜಕುಮಾರ ಮಾಲೇರಾವ್‌ನನ್ನು ಅನಾರೋಗ್ಯದಿಂದಾಗಿ ಅಹಲ್ಯಾ ಕಳೆದು ಕೊಂಡಳು. 1754ರಲ್ಲಿ ವಿರೋಧಿಯರ ದಾಳಿಯಲ್ಲಿ ಪತಿ ಖಂಡೇರಾವ್ ಹತನಾತ. ಒಂದರ ಹಿಂದೆ ಇನ್ನೊಂದು ಬಂದ ಆಘಾತದಿಂದ ಹೊರಬಂದ ಶಿವಭಕ್ತೆ ಅಹಲ್ಯಾ, ರಾಜವಂಶವನ್ನು ಮನ್ನೆಡೆಸುವ ಹಾಗೂ ಆಡಳಿತದ ಚುಕ್ಕಾಣಿ ಹಿಡಿದು ಭಾರತದಲ್ಲಿಯೇ ಅತ್ಯಂತ ದಕ್ಷ ಆಡಳಿತ ನೀಡಿದ ರಾಣಿಗಳಲ್ಲಿ ಒಬ್ಬಳು ಎನಿಸಿದಳು. ಅಹಲ್ಯಾ ಬಾಯಿ ಹೋಳ್ಕರ್ ಆಡಳಿತದ ಕಾಲದಲ್ಲಿ ರಾಜ್ಯ ಸುಬಿಕ್ಷವಾಗಿತ್ತು. ಎಲ್ಲಕ್ಕೂ ಶಿವನೇ ಕಾರಣ, ತನ್ನ ಆಡಳಿತವನ್ನು ಆತನ ನಿರ್ದೇಶನದ ಮೇರೆಗೆ ನಡೆಸುತ್ತಿದ್ದೇನೆ ಎಂದು ಕೊಂಡು, ಅಹಲ್ಯಾ ಬಾಯಿ ಆಡಳಿತ ನಡೆಸಿದಳು; ಶತ್ರುಗಳನ್ನು ಸೋಲಿಸಿದಳು; ಜನಸಾಮಾನ್ಯರ ನಿರೀಕ್ಷೆಗಳನ್ನು ಈಡೇರಿಸಿದಳು. ಆಕೆಯ ಕಾಲದಲ್ಲಿ ರಾಜಧಾನಿ ಇಂದೋರ್ ಒಂದು ಉತ್ತಮ ಪಟ್ಟಣವಾಯಿತು. ಮೊಘಲರು ಹಾಳು ಕೆಡಹಿದ ಪುರಾತನ ದೇವಳಗಳ ಪುನರ್ ನಿರ್ಮಾಣವಾಯಿತು. ಕಾಶಿ ವಿಶ್ವನಾಥ ಮಂದಿರವನ್ನು ಪುನರ್ ನಿರ್ಮಿಸುವಲ್ಲಿ ಅಹಲ್ಯಾಬಾಯಿ ಹೋಳ್ಕರ್ ಅವರ

ಪರಿಶ್ರಮ ಅಪಾರವಾದುದು. ಇದೇ ರೀತಿ, ಇತರ ಹಲವು ಊರುಗಳಲ್ಲಿ ಈಕೆ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಿದಳು ಅಥವಾ ಪುನರುಜ್ಜೀವನ ಗೊಳಿಸಿದಳು. ಇಂದೋರ್ ನಿಂದ 91ಕಿ.ಮಿ ದೂರವಿರುವ ಮಹೇಶ್ವರ ದೇವಾಲಯ ಕಾಶಿ ವಿಶ್ವನಾಥ ದೇವಾಲಯದ ಪ್ರತಿರೂಪವಾಗಿದೆ – ಇದಕ್ಕೆ ಕಾರಣರಾದವಳು ರಾಣಿ ಅಹಲ್ಯಾ ಹೋಳ್ಕರ್ ಎಂಬುದು ವಿಶೇಷ. ಇಂದು ಪ್ರಸಿದ್ದ ಯಾತ್ರಾ ಸ್ಥಳವಾಗಿ ಬೆಳೆದಿದೆ. ಇದಲ್ಲದೆ ಸೋಮನಾಥ, ದ್ವಾರಕಾ, ಅಯೋದ್ಯಾ, ಮಥುರಾ, ಗಯಾ, ಪ್ರಯಾಗ, ಹರಿದ್ವಾರ, ಕೇದಾರನಾಥ, ಬದರಿನಾಥ, ರಿಷಿಕೇಷ, ರಾಮೇಶ್ವರ, ಓಂಕಾರೇಶ್ವರ, ನೇಪಾಳದ ಪಶುಪತಿನಾಥ, ಶ್ರೀ ಶೈಲ, ಉಡುಪಿ, ಗೋಕರ್ಣ ಮುಂತಾದ ಹಲವಾರು ದೇವಾಲಯಗಳ ಅಭಿವೃದ್ಧಿಗೆ ಸಹಾಯ ಮಾಡಿದಳು. ದಕ್ಷ ಆಡಳಿತ ನೀಡಿದ ಈಕೆ 1795 ಅಗಸ್ಟ್ 13ರಂದು ಇಹಲೋಕವನ್ನು ತ್ಯಜಿಸಿದಳು. ಇಂದೋರ್ ವಿಮಾನ ನಿಲ್ದಾಣಕ್ಕೆ ಮತ್ತು ವಿಶ್ವ ವಿದ್ಯಾಲಯಕ್ಕೆ ರಾಣಿ ಅಹಲ್ಯಾ ಹೆಸರಿಡಲಾಗಿದೆ. 1956 ರಲ್ಲಿ ರಾಣಿ ಅಹಲ್ಯಾ ಜಯಂತಿಯಂದು ವಿಶೇಷ ಅಂಚೆಚೀಟಿಯನ್ನು ಹೊರತರಲಾಗಿದೆ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
23.10.2024 ಬುಧವಾರ
vishwavani.news

ದಿನ ಭವಿಷ್ಯ

ಮೇಷ ದೈಹಿಕ ಬದಲಾವಣೆಗಳು ನೋಟವನ್ನು ವರ್ಧಿಸುತ್ತವೆ. ಹಣದ ಆಗಮನವು ಸಮಸ್ಯೆಗಳಿಂದ ಮುಕ್ತಗೊಳಿಸಬಹುದು

ವೃಷಭ ಒಟ್ಟಾರೆ ಆರೋಗ್ಯ ಉತ್ತಮವಾಗಿದ್ದರೂ ಪ್ರಯಾಣ ಒತ್ತಡಮಯವೂ ಮತ್ತು ಕಷ್ಟಕರವೂ ಆಗಿರುತ್ತದೆ.

ಮಿಥುನ ಇಂದು ಕೆಲಸದಲ್ಲಿ ಮೇಲುಗೈ ಸಾಧಿಸಬಹುದು. ಹೆಚ್ಚು ಜನರನ್ನು ಭೇಟಿಯಾದಾಗ ಅಸಮಾಧಾನ ಗೊಳ್ಳಬೇಡಿ, ಅವರೊಟ್ಟಿಗೆ ಸ್ನೇಹ ಬೆಳಸಿರಿ.

ಕಟಕ ಹೆದರಿಕೆ ಸಂತೋಷವನ್ನು ಹಾಳುಗೆಡವಬಹುದು. ಇದು ಆಲೋಚನೆ ಮತ್ತು ಕಲ್ಪನೆಯ ಪ್ರಭಾವವೆಂದು ಅರ್ಥಮಾಡಿಕೊಳ್ಳಬೇಕು.

ಸಿಂಹ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ. ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳುವ ಮೊದಲು ಎರಡು ಬಾರಿ ಆಲೋಚಿಸಿ.

ಕನ್ಯಾ ಎಣ್ಣೆ ಮತ್ತು ಮಸಾಲೆ ಯುಕ್ತ ಆಹಾರ ತಪ್ಪಿಸಿ. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟನಲ್ಲಿ ಸಿಲುಕಿದ್ದವರು ಇಂದು ಹಣ ಪಡೆಯಬಹುದು.

ತುಲಾ ಆಸಕ್ತಿಹೊಂದಿದ ವಿಷಯಗಳ ಮೇಲೆ ಮತ್ತಷ್ಟು ಅಭ್ಯಾಸವನ್ನು ಮಾಡಬೇಕು, ಇದು ಹೆಚ್ಚಿಗೆ ಜ್ಞಾನ ಕೊಡುತ್ತದೆ.

ವೃಶ್ಚಿಕ ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ಖರ್ಚುಗಳನ್ನು ನಿಯಂತ್ರಿಸಿ, ಅಗತ್ಯ ವಸ್ತುಗಳ ಖರೀದಿಸಲು ಪ್ರಯತ್ನಿಸಿ.

ಧನು ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ. ಸಂಗಾತಿ ಬೆಂಬಲ ನೀಡುತ್ತಾರೆ.

ಮಕರ ಮನೆಯಲ್ಲಿನ ಅಶಾಂತಿ ಸಿಟ್ಟು ತರಿಸಬಹುದು. ಅವುಗಳನ್ನು ದಮನಗೊಳಿಸುವುದು ಕೇವಲ ದೈಹಿಕ ಸಮಸ್ಯೆಯನ್ನು ಹೆಚ್ಚಿಸುತ್ತದೆ.

ಕುಂಭ ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ದೇಹಕ್ಕೆ ಮಸಾಜ್ ಮಾಡಿ.

ಮೀನ ಮಾನಸಿಕ ಶಾಂತಿಗಾಗಿ ಒತ್ತಡವನ್ನು ಪರಿಹರಿಸಿ. ಹೆಚ್ಚು ಖರೀದಿಸಲು ಧಾವಿಸುವ ಮೊದಲು ಈಗಾಗಲೇ ಹೊಂದಿರುವುದನ್ನು ಬಳಸಿ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1778: ಬ್ರಿಟೀಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ರಾಣಿ ಕಿತ್ತೂರು ಚೆನ್ನಮ್ಮ ಅವರ ಹುಟ್ಟಿದ ದಿನ
- 2001: ಆ್ಯಪಲ್ ಕಂಪನಿಯೂ ತನ್ನ ಮೊದಲ ಐ ಪಾಡ್ ಅನ್ನು ಘೋಷಣೆ ಮಾಡಿದರು.
- 1940: ಬ್ರೆಜಿಲ್‌ನ ಖ್ಯಾತ ಫುಟ್‌ಬಾಲ್ ಆಟಗಾರ ಪೆಲೇ ಅವರ ಹುಟ್ಟುಹಬ್ಬ

ಚಿತ್ರಸ್ಫೂರ್ತಿ

ದಿನ ದರ್ಶಿಕೆ

ಅಶ್ವಿನ ಮಾಸ, ಕೃಷ್ಣ ಪಕ್ಷ, ಸಪ್ತಮಿ ತಿಥಿ, ಪುನರ್ವಸು ನಕ್ಷತ್ರ, ಶಿವ ಯೋಗ, ವಿಷ್ಟಿ ಕರಣ, ಹೇಮಂತ ಋತು, ದಕ್ಷಿಣಾಯನ, 2081 ಪಿಂಗಳ ವಿಕ್ರಮ ಸಂವತ್ಸರ, 1946 ಕ್ರೋಧಿ ಶಕ ಸಂವತ್ಸರ

ಮನೆಮದ್ದು

ಶುಂಠಿಯ ತುಂಡು, ದಾಲ್ಚಿನ್ನಿಯನ್ನು ಸಣ್ಣ ತುಂಡುಗಳಾಗಿ ಮಾಡಿ. ಒಂದು ಪಾತ್ರೆಯಲ್ಲಿ, 4 ಕಪ್ ನೀರನ್ನು ಕುದಿಸಿ. ನೀರು ಕುದಿಯುತ್ತಿರುವಾಗ ಕತ್ತರಿಸಿದ ಶುಂಠಿ ಮತ್ತು ದಾಲ್ಚಿನ್ನಿಗಳನ್ನು ಸೇರಿಸಿ. ಶಾಖವನ್ನು ಕಡಿಮೆ ಮಾಡಿ ಮತ್ತು ಸುಮಾರು 10-15 ನಿಮಿಷಗಳ ಕಾಲ ಕುದಿಯಲು ಬಿಡಿ. ಈ ಕಷಾಯ ಕುಡಿಯುವುದರಿಂದ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ.

ಸೌಂದರ್ಯ ಸೂತ್ರ

ನುಗ್ಗೆ ಎಲೆಗಳನ್ನು ನೀರಿನಲ್ಲಿ ಹಾಕಿಡಿ. ನಂತರ ಅದನ್ನು ಸೋಸಿ ಫ್ರಿಡ್ಜ್‌ನಲ್ಲಿ ಸ್ಪ್ರೇ ಬಾಟಲಿಯಲ್ಲಿ ಸಂಗ್ರಹಿಸಿಡಿ. ರಂಧ್ರಗಳನ್ನು ಸ್ವಚ್ಛಗೊಳಿಸಲು ಮತ್ತು ಬಿಗಿಗೊಳಿಸಲು ಈ ನುಗ್ಗೆ ಟೋನರ್ ಬಳಸಿ. ಇದನ್ನು ನಿಯಮಿತವಾಗಿ ಬಳಸುವುದರಿಂದ ಬ್ರೇಕ್‌ಔಟ್‌ಗಳನ್ನು ತೊಲಗಿ ನಯವಾದ ಚರ್ಮ ನಿಮ್ಮದಾಗುತ್ತದೆ. ಬೆಳಿಗ್ಗೆ, ರಾತ್ರಿ ಹಚ್ಚಿದರೆ ಒಳ್ಳೆಯದು.

ಇನ್ನೊಂದು ಎರಡು ತಿಂಗಳು ಮುಗಿಸಿದರೆ, ಹೊಸ ವರ್ಷ ಶುರುವಾಗುತ್ತದೆ. ಹೊಸ ವರ್ಷದ ಸಮಯದಲ್ಲಿ ರಾತ್ರಿ 12 ಘಂಟೆಗೆ ಪಟಾಕಿ ಸಿಡಿಸುವುದು, ಕೇಕ್ ತಿನ್ನುವುದು, ಕೇಕೆ ಹೊಡೆಯುವುದೆಲ್ಲ ಕಾಮನ್, ಅದೇರೀತಿ ಚೇನಾದ ಅತೀ ಸಣ್ಣ ಹಳ್ಳಿ ಜುಜೆಂಗ್‌ನಲ್ಲಿ ನಡೆದ ಹೊಸವರ್ಷದ ಸಂಭ್ರಮದ ಪಟಾಕಿಯ ಸಡಗರ ಹುಅ ಝು ಅವರ ಕಣ್ಣಲ್ಲಿ ಕಂಡಿದ್ದು ಹೀಗೆ.

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ದೆಹಲಿಯ ಐಕಾನಿಕ್ ಅವೆನ್ಯೂವಾದ ರಾಜ್ ಪಥ್‌ನ ಹೊಸ ಹೆಸರೇನು?

- ಎ. ವಿಕಾಸ್ ಪಥ.
- ಬಿ. ಜನ್ ಪಥ.
- ಸಿ. ಕರ್ತವ್ಯ ಪಥ.
- ಡಿ. ಮಂತ್ರಿ ಪಥ.

ಉತ್ತರ: ಸಿ. ಕರ್ತವ್ಯ ಪಥ.

ಮಾಹಿತಿ

ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯ ಇಂಡಿಯಾ ಗೇಟ್‌ನಲ್ಲಿ ಕರ್ತವ್ಯ ಪಥವನ್ನು 8 ಸೆಪ್ಟಂಬರ್ 2022 ರಂದು ಉದ್ಘಾಟಿಸಿದರು. ಕರ್ತವ್ಯ ಪಥವು ಸುಂದರವಾದ ಭೂದೃಶ್ಯಗಳು, ಹುಲ್ಲುಹಾಸುಗಳು, ಹೆಚ್ಚುವರಿ ಹಸಿರು ಸ್ಥಳಗಳು, ನವೀಕರಿಸಿದ ಕಾಲುವೆಗಳು, ಸುಧಾರಿತ ಪಾರ್ಕಿಂಗ್ ಸ್ಥಳಗಳು ಮತ್ತು ಹೊಸ ಪ್ರದರ್ಶನ ಫಲಕಗಳನ್ನು ಪ್ರದರ್ಶಿಸುತ್ತದೆ. ಇದು ಘನತ್ಯಾಜ್ಯ ನಿರ್ವಹಣೆ, ಬಳಸಿದ ನೀರಿನ ಶಕ್ತಿ-ಸಮರ್ಥ ಬೆಳಕಿನ ವ್ಯವಸ್ಥೆಗಳ ಮರುಬಳಕೆಯಂತಹ ಹಲವಾರು ಸಮರ್ಥನೀಯ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಯಿಂದ ರಾಷ್ಟ್ರಪತಿ ಭವನದವರೆಗಿನ ಸಂಪೂರ್ಣ ಪ್ರದೇಶವನ್ನು ಕರ್ತವ್ಯ ಪಥ ಎಂದು ಪರಿಗಣಿಸಲಾಗಿದೆ. ಮೂರು ಕಿಲೋಮೀಟರ್ ವ್ಯಾಪ್ತಿಯನ್ನು ಎಡ್ವಿನ್ ಲುಟಿಯೆನ್ಸ್ ಮತ್ತು ಹರ್ಬರ್ಟ್ ಬೇಕರ್ ಅವರು ವಿಧ್ಯುಕ್ತ ಬೌಲೆವಾರ್ಡ್‌ನಂತೆ ನಿರ್ಮಿಸಿದ್ದಾರೆ.

ಸಾಕು ಪ್ರಾಣಿಗಳಿಗಿರುವ ನಿಯತ್ತು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ತಿಮಲಾಪುರದ ಶ್ರೀಮಂತ ತಿಮ್ಮಣ್ಣನಿಗೆ ಅವನ ನಾಯಿ ಎಂದರೆ ಬಹಳ ಪ್ರೀತಿ. ಒಂದು ದಿನರಾತ್ರಿ, ತಿಮ್ಮಣ್ಣ ಬಹಳ ಸುಸ್ತಾಗಿ ತನ್ನ ಕೋಣೆಯಲ್ಲಿ ಮಂಚದ ಮೇಲೆ ಮಲಗಿದ್ದ. ಒಳ್ಳೆಯ ನಿದ್ರೆ ಹತ್ತಿತ್ತು, ಕೋಣೆಯ ಕಿಟಕಿಯ ಬಳಿ ಅವನ ಮುದ್ದಿನ ನಾಯಿ ಅವನಿಗೆ ಕಾವಲಾಗಿ ಕುಳಿತಿತ್ತು.

ಮಧ್ಯರಾತ್ರಿಯ ಸಮಯದಲ್ಲಿ, ಮುಖವಾಡ ಧರಿಸಿದ ಕಳ್ಳನೊಬ್ಬ ತಿಮ್ಮಣ್ಣನ ಮನೆಯನ್ನು ಪ್ರವೇಶಿಸಿ, ಕಳ್ಳತನ ಮಾಡುವ ಉದ್ದೇಶದಿಂದ, ಮನೆಯ ಹೊರಗೆ ಹಾಕಿದ್ದ, ನೀರಿನ ಕೊಳವೆಯನ್ನು ಹಿಡಿದು ಏರ ತೊಡಗಿದ. ಇದನ್ನು ಕಂಡ ನಾಯಿ ಜೋರಾಗಿ ಬೊಗಳತೊಡಗಿತು. ನಾಯಿ ಬೊಗಳಿದ ಶಬ್ದವನ್ನು ಕೇಳಿ, ಕಳ್ಳ ತಾನು ಇನ್ನು ಸಿಕ್ಕಿಹಾಕಿಕೊಳ್ಳುತ್ತೇನೆ ಎಂದುಕೊಂಡು ಕೊಳವೆಯಿಂದ ಜಾರಿ ಕೆಳಗಿಳಿದು ವೇಗವಾಗಿ ಓಡಿ ಹೋದ. ಇಷ್ಟಾದರೂ ತನ್ನ ಯಜಮಾನ ಎಚ್ಚರಗೊಳ್ಳಲಿಲ್ಲವೆಂದು, ಕಳ್ಳ ಓಡಿ ಹೋದ ಮೇಲೂ ನಾಯಿ ಬೊಗುಳುವುದನ್ನು ನಿಲ್ಲಿಸಲೇ ಇಲ್ಲ. ಇದರಿಂದ ಗಾಢ ನಿದ್ರೆಯಲ್ಲಿದ್ದ ತಿಮ್ಮಣ್ಣನಿಗೆ ನಿದ್ರಾ ಭಂಗವಾಗಿ ಎಚ್ಚರವಾಯಿತು. ಹೊರಗೆ ಎದ್ದು ಬಂದು ಅತ್ತ ಇತ್ತ ನೋಡಿದ, ಯಾರೂ ಕಾಣಿಸಲಿಲ್ಲ. ತಿಮ್ಮಣ್ಣನಿಗೆ ತನ್ನ ನಿದ್ರಾ ಭಂಗ ಮಾಡಿದ ನಾಯಿಯ ಮೇಲೆ ಬಹಳ ಕೋಪ ಬಂದು, ಅಲ್ಲೇ ಬಿದ್ದಿದ್ದ ದೊಣ್ಣೆಯಿಂದ ಎರಡೇಟು ಬಿಗಿದು, 'ನೋಡು ಇನ್ನೆಂದಾದರೂ ನಾನು ನಿದ್ರಿಸಿದಾಗ ಈ ರೀತಿಯಾಗಿ ಬೊಗಳಿದರೆ, ನಿನ್ನ ಕಾಲು ಮುರಿದು ಮನೆಯಿಂದ ಆಚೆ ಕಳಿಸುತ್ತೇನೆ' ಎಂದು ಹೇಳಿ ಒಳಗೆ ಹೋಗಿ ಮತ್ತೆ ಮಲಗಿದ.

ಕೆಲ ದಿನಗಳ ನಂತರ, ಮತ್ತೊಬ್ಬ ಕಳ್ಳ ಬಂದು ತಿಮ್ಮಣ್ಣನ ಮನೆಯ ಒಳಗೆ ಹೊಕ್ಕ. ಈಗ ಅವನ ನಾಯಿ ಕಳ್ಳನನ್ನು ನೋಡಿದರೂ ಬೊಗಳಲೇ ಇಲ್ಲ, ತನ್ನ ಯಜಮಾನ ಏನು ಹೇಳಿದ್ದ, ಅದರಂತೆ ನಡೆದುಕೊಂಡಿತು. ಒಳಗೆ ನುಗ್ಗಿದ ಕಳ್ಳ, ತಿಮ್ಮಣ್ಣನ ಮನೆಯ ಅಲೆಮಾರಿನಲ್ಲಿದ್ದ ಒಡವೆ ವಸ್ತುಗಳನ್ನು, ನಗ ನಾಣ್ಯಗಳನ್ನು, ಒಂದು ಗೋಣಿ ಚೀಲದಲ್ಲಿ ಹಾಕಿ ಕಟ್ಟಿಕೊಂಡು ಸದ್ದಿಲ್ಲದಂತೆ ಹೊರಟು ಹೋದ. ಬೊಗಳದಿದ್ದರೂ ನಾಯಿ, ಅವನಿಗೆ ಕಾಣದಂತೆ ಅವನನ್ನು ಬಿಡದೇ ಹಿಂಬಾಲಿಸಿತು.

ಕಳ್ಳ ಹತ್ತಿರದಲ್ಲಿದ್ದ ಒಂದು ಕಾಡನ್ನು ಹೊಕ್ಕು, ಒಂದು ಮರದ ಬುಡದಲ್ಲಿ ಗುಂಡಿಯನ್ನು ತೆಗೆದು ತಾನು ತಂದಿದ್ದ ಒಡವೆ ವಸ್ತು, ನಗನಾಣ್ಯಗಳ ಚೀಲವನ್ನು ಅದರಲ್ಲಿ ಇಟ್ಟು ಮಣ್ಣು ಮುಚ್ಚಿ, ಅಲ್ಲಿಂದ ಹೊರಟು ಹೋದ. ನಾಯಿ ಕಳ್ಳ ಮಾಡಿದ್ದನ್ನೆಲ್ಲ ನೋಡುತ್ತಾ, ಅವನು ಹೂತಿಟ್ಟಿದ್ದ ಜಾಗವನ್ನು ನೆನಪಿನಲ್ಲಿ ಇಟ್ಟುಕೊಂಡು ಮನೆಗೆ ಹಿಂತಿರುಗಿತು. ತಿಮ್ಮಣ್ಣ ಮಲಗಿದ್ದವನು ಎದ್ದು ತನ್ನ ಅಲೆಮಾರಿನಲ್ಲಿದ್ದ, ನಗನಾಣ್ಯಗಳನ್ನು ಯಾರೋ ಅಪಹರಿಸಿಕೊಂಡು ಹೋಗಿರುವುದನ್ನು ನೋಡಿ ಕಂಗಾಲಾಗಿ, ಕಳ್ಳ ,ಕಳ್ಳ ಎಂದು ಕಿರುಚಾಡಿ ಸಹಾಯಕ್ಕಾಗಿ ನೆರೆಹೊರೆಯವರನ್ನು ಕೂಗಿದ.

ಅಷ್ಟು ಹೊತ್ತಿಗೆ, ಕಳ್ಳನನ್ನು ಹಿಂಬಾಲಿಸಿಕೊಂಡು ಹೋಗಿದ್ದ ನಾಯಿ ಹಿಂದಿರುಗಿ ಬಂದು ಅವನ ಬಳಿ ನಿಂತುಕೊಂಡಿತು. 'ಇಷ್ಟು ಹೊತ್ತು ಎಲ್ಲಿ ಅಲೆಯಲು ಹೋಗಿದ್ದಿ? ಕಳ್ಳ ಬಂದಾಗ ಬೊಗಳಲು ನಿನಗೇನಾಗಿತ್ತು?' ಎಂದು ಅದರ ಮೇಲೆ ಸಿಡಿಮಿಡಿಗೊಂಡ. ನಾಯಿ ಅವನ ಮೇಲಂಗಿಯನ್ನು ಕಚ್ಚಿ ಎಳೆಯತೊಡಗಿತು, ತಿಮ್ಮಣ್ಣನಿಗೆ ನಾಯಿ ತನ್ನನ್ನು ಎಲ್ಲಿಗೋ ಕರೆಯುತ್ತಿದೆ ಎಂಬುದರ ಸುಳಿವು ಸಿಕ್ಕಿತು. ಅವನು ನಾಯಿಯನ್ನೇ ಹಿಂಬಾಲಿಸಿಕೊಂಡು ಹೋದ. ನಾಯಿ, ಅವನನ್ನು ಕಾಡಿಗೆ ಕರೆದುಕೊಂಡು ಬಂದು, ಮರದ ಕೆಳಗೆ ಕಳ್ಳ ಹೂತಿಟ್ಟಿದ್ದ ಜಾಗವನ್ನು ಕಾಲಿನಿಂದ ಕೆರೆದು, ಕೆರೆದು ತೋರಿಸಿತು. ಅದು ತೋರಿಸಿದ ಜಾಗವನ್ನು ಅಗೆದು ನೋಡಿದಾಗ, ತಿಮ್ಮಣ್ಣ ತನ್ನ ಕಣ್ಣುಗಳನ್ನು ತಾನೇ ನಂಬದಾದ. ಆ ನೆಲದಲ್ಲಿ ಅವನ ಕಳುವಾದ ನಗ ನಾಣ್ಯಗಳ ಗಂಟು ಕಾಣಿಸಿತು. ಥಟಕ್ಕೆಂದು ಅದನ್ನು ಎತ್ತಿಕೊಂಡು ಬೇಗನೆ ಮನೆ ಸೇರಿದ.

ನಾವು ಸಾಕುಪ್ರಾಣಿಗಳಿಗೆ ತೋರಿಸಿದ ಪ್ರೀತಿ ನೂರು ಪಟ್ಟಾಗಿ ನಮಗೆ ಮರಳಿ ಬರುತ್ತದೆ. ಸಾಕು ಪ್ರಾಣಿಗಳನ್ನು ಎಂದಿಗೂ ನಿಮ್ಮ ಸಿಟ್ಟು, ಉದಾಸೀನಕ್ಕೆ ಗುರಿಯಾಗಿಸಬೇಡಿ. ಅವುಗಳಿಗೆ ಎಂತದ್ದೇ ಸಂದರ್ಭದಲ್ಲೂ ಸದಾ ಪ್ರೀತಿ ಹಂಚಿಕೊಳ್ಳುವುದಷ್ಟೇ ಗೊತ್ತು.

ಒಂದೊಳ್ಳೆ ಮಾತು

ತಾಳುವಿಕೆಗಿಂತ ಅನ್ಯ ತಪವು ಇಲ್ಲ!

• ಶಂಕರಾನಂದ ಹೆಬ್ಬಾಳ

ತಾಳಿದವನು ಬಾಳಿಯಾನು ಎಂಬ ಹಿರಿಯರ ನುಡಿಯಂತೆ ಮನುಷ್ಯನಿಗೆ ಎಲ್ಲದಕ್ಕಿಂತ ಮುಖ್ಯವಾಗಿ ಬೇಕಾದದ್ದು ತಾಳ್ಮೆ. ತಾಳ್ಮೆಯಿದ್ದರೆ ಮಾತ್ರ ವಿಶ್ವವನ್ನೇ ಜಯಿಸಲು ಸಾಧ್ಯ. ಆಗತಾನೆ ಜನಿಸಿದ ಮಗು ಎದ್ದು ಓಡಾಡಲು ಸಾಧ್ಯವೇ..? ಶಾಲೆಗೆ ಪ್ರವೇಶವನ್ನು ಪಡೆದ ವಿದ್ಯಾರ್ಥಿ ಮರುದಿನವೆ ರ್‍ಯಾಂಕ್ ಬರಲು ಸಾಧ್ಯವೇ..? ಬಿತ್ತಿದ ಬೀಜ ಒಂದೆ ದಿನದಲ್ಲಿ ಹೆಮ್ಮರವಾಗಲು ಸಾಧ್ಯವೇ..? ಒಂದೆ ದಿನದಲ್ಲಿ ಮನೆ ಕಟ್ಟಲು ಸಾಧ್ಯವೇ..? ಹಾಗೆಂದ ಮೇಲೆ ತಾಳ್ಮೆಯಿಲ್ಲದೆ ಏನನ್ನೂ ಮಾಡಲಾಗದು.

ಪ್ರತಿಯೊಂದು ಸಮಯದಲ್ಲಿ ಅವಸರ ಮಾಡುವ ನಮಗೆ ತಾಳಿಕೊಳ್ಳುವ ಅವಧಾನ ವ್ಯವಧಾನ ಎರಡೂ ಇಲ್ಲ. ಹೀಗಿದ್ದಾಗ ತಾಳುವಿಕೆಗೆ ಅರ್ಥ ಬರುವುದಿಲ್ಲ. ಕನಕದಾಸರೆ ಹೇಳಿಲ್ಲವೆ ತಾಳುವಿಕೆಗಿಂತ ಅನ್ಯ ತಪವು ಇಲ್ಲ ಎಂದು ಹೀಗಿದ್ದಾಗ ವಿನಾಕಾರಣ ನಮ್ಮಲ್ಲಿನ ಖಿನ್ನತೆ, ತಳಮಳ, ಉದ್ವಿಗ್ನತೆ ಎಲ್ಲವೂ ನಮ್ಮನ್ನು ಒಂದು ವಿಕ್ಷಿಪ್ತಗೊಳಿಸಿ ಚಿತ್ತವಿಚಲಿತ ಮಾಡುತ್ತವೆ.

ಮಹ್ಮದಬಿನ್ ತುಘಲಕನ ಬಗ್ಗೆ ನಾವು ನೀವೆಲ್ಲ ಕೇಳಿಯೆ ಇರುತ್ತೇವೆ ಆತನ ವಿಚಾರಗಳು ಉನ್ನತವಾಗಿದ್ದು ಪ್ರಜೆಗಳ ಹಿತ ಬಯಸುತಿದ್ದವು. ಆತನ ಆಡಳಿತ ಪ್ರಯೋಗಗಳು ಇತರರಿಗೆ ಮಾದರಿ ಎನಿಸಿದರೂ ಕೂಡ ಆತನ ಅವಸರ ಪ್ರಕೃತಿಗೆ ವಿಮರ್ಶಾಕಾರರ ಟೀಕೆಗೊಳಗಾಗಿ ಯೋಜನೆಗಳೆಲ್ಲ ವಿಫಲಗೊಳುತ್ತವೆ. ಕಾರಣ ಇಷ್ಟೇ ಇತನು ಮಂತ್ರಿಗಳ ಜೊತೆ ಚರ್ಚಿಸದೆ ಏಕನಿರ್ಧಾರ ತಗೆದುಕೊಳ್ಳುವುದೆ ಇದರ ವೈಪಲ್ಯತೆಗೆ ಒಂದರ್ಥದಲ್ಲಿ ತಾಳ್ಮೆಯಿಂದ

ಯೋಚಿಸದೆ ಮನಬಂದಂತೆ ವರ್ತಿಸಿದ್ದೆ ಎಲ್ಲದಕ್ಕೂ ಕಾರಣವಾಯಿತು.

ತಾಳ್ಮೆಗೆ ಇನ್ನಷ್ಟು ಈ ಪ್ರಕೃತಿಯಲ್ಲೆ ಹಲವಾರು ಇವೆ ಅದರಲ್ಲಿ ಈ ಭೂಮಿಯು ಒಂದು. ಇದು ಸಹಸ್ರಾರು ವರ್ಷಗಳಿಂದ ಉಳುಮೆ ಮಾಡಿದರೂ ಮುನಿಸಿಕೊಂಡಿಲ್ಲ. ಅಂತರ್ಜಲ ಕೊರೆದರೂ ಕೋಪಗೊಂಡಿಲ್ಲ. ತಾಳ್ಮೆಗೆ ಇದಕ್ಕಿಂತ ಉದಾಹರಣೆ ಮತ್ತೊಂದಿಲ್ಲ. ರಾಮನ ಆಗಮನಕೆ ಶಬರಿ ಸುಮಾರು ವರ್ಷಗಳಿಂದ ಕಾದು ತನ್ನ ಮನೋವಾಂಛೆಯ ಈಡೇರಿಸಿಕೊಂಡು ಮುಕ್ತಿ ಪಡೆದಳು. ಪ್ರತಿಯೊಬ್ಬರಲ್ಲಿ ಈ ಗುಣ ಅಡಗಿದ್ದು ಅದಕ್ಕೆ ಹೆಚ್ಚು ಉತ್ತೇಜನ ನೀಡುವ ಕೈಂಕರ್ಯವನ್ನು ನಾವು ನೀವೆಲ್ಲ ತೊಡೋಣ ಹಾಗೂ ತಾಳ್ಮೆಯಿಂದಿರೋಣ

ಪದಬಂಧ



ಎಡದಿಂದ ಬಲಕ್ಕೆ:

2. ಎರಡೂ ಕಡೆ ಬಾಗಿರುವ ಮೈಯುಳ್ಳ ಗಾಜು ಕೊನೆಗೆ ದೀರ್ಘವಾಗಿ ಬಂದಿದೆ (3)
5. ಮತ್ತೊಂದು ದಿವಸದೊಂದಿಗೆ ಬಂದಿರುವ ಸೂರ್ಯ (4)
6. ಲೋಕಾಭಿರಾಮವಾಗಿ ನಡೆಸಿದ ಸಂಭಾಷಣೆ (4)
7. ಮಂಡೂಕ ಕುಳಿತ ಬಾವಿ (2)
8. ಪಣಕ್ಕಿಟ್ಟ ಐಶ್ವರ್ಯ (3)
10. ಎರಡಕ್ಷರದ ತಪಸ್ಸು (2)
12. ನಗುವಾಗ ಕಾಣಿಸಿತು ಒಡವೆ (2)
14. ಮದುವೆಯ ಗಂಡು ಮಾಡಿದ ಒತ್ತಾಯ (3)
16. ಮನುಷ್ಯನ ಸ್ವಭಾವ (2)
17. ಮನದೊಂದಿಗೆ ಬರುವಿಕೆ (4)
18. ರಾಣಿಯ ಪತ್ನಿಯ ಅಂತಃಪುರ (4)
19. ಗಂಡು ಕುರಿ (3)

ಮೇಲಿನಿಂದಕೆಳಕ್ಕೆ:

1. ಮನಸುಗಳೆರಡರ ನಡುವಿನ ವಿರಸ (4)
2. ರತ್ನಗಳಿಂದ ಮಾಡಿದ ಸರ (4)
3. ಸೀತಾ-ರಾಮರ ಕಥೆ ಇದರಲ್ಲಿದೆ (4)
4. ಒಂದೇ ಹಲ್ಲಿರುವ ಗಣೇಶ (4)
7. ಹಕ್ಕಿಗಳ ಕಲರವದಲ್ಲಿ ಮಂದಿಯೂ ಇದ್ದಾರೆ (3)
9. ಕೆಲಸಕ್ಕೆ ತಕ್ಕ ಸಿಕ್ಕಿದ ಸಂಬಳವು ಕೊನೆಗೆ ದೀರ್ಘವಾಗಿದೆ (3)
11. ಒಂದೆಡೆಯಿಂದ ಮತ್ತೊಂದೆಡೆಗೆ ಮಾಡುವ ಸಂಚಾರ (3)
13. ಮರವನ್ನು ಕತ್ತರಿಸುವ ಸಾಧನ (4)
14. ಡಾ. ರಾಜಕುಮಾರರಿಗೆ ಇರುವ ಬಿರುದು (4)
15. ಕಾರು ತರುವಾಗೇನು ಆಕ್ಷೇಪಣೆ (4)
16. ರಾಯರ ನೆನೆಯುವ ದಿನ (4)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಜಾಂಬವಂತ 4. ಮೆದೆ 5. ಬಾಯಿಕಟ್ಟು 7. ನೆರಳು 10. ವಸಡು 12. ಏತ 13. ಹಳಿ 14. ಚಿಗುರು 15. ಗಾಯಕ 18. ಮರುನುಡಿ 20. ಕೂರ್ಮ 21. ವರಮಾನ

ಮೇಲಿನಿಂದ ಕೆಳಕ್ಕೆ: 1. ಜಾಂಗುಲ 2. ವಂಚನೆ 3. ನಾಯಿ 4.ಮೆಟ್ಟು 5. ಬಾಳು 6. ಕರಾವಳಿ 8. ರಣಿತ 9. ಗುಡುಗು 11. ಹಂಚಿಕೆ 12. ಏರುಪೇರು 13. ಹರಯ 15. ಗಾಡಿ 16. ಕರ್ತಾರ 17. ಬಾಗಿನ 18. ಮರ್ಮ 19. ನುಸಿ

• ಸಿ. ರವಿಶಂಕರ ಶಾಸ್ತ್ರಿ ದಂಬೆ

ದಿನಕ್ಕೊಂದು ಮಾಹಿತಿ

ಕೆಚಪ್‌ನ ಔಷಧಿ

ಕೆಚಪ್ ಯಾರಿಗೆ ಗೊತ್ತಿಲ್ಲ ಹೇಳಿ? ಈಗಿನ ಕಾಲದಲ್ಲಿ ಮಕ್ಕಳ ಶಾಲೆಗೆ ತಡವಾಗಿದ್ದರೆ, ಕೆಚಪ್ ಅನ್ನೇ ಬುತ್ತಿಗೆ ಹಾಕಿ ಕಳಿಸುವ ತಾಯಂದಿರಿದ್ದಾರೆ. ಇನ್ನೂ ಕೆಚಪ್ ದೇಹಕ್ಕೆ ಹಾನಿಕಾರಕ ಎಂದೂ ಕೆಲವರು ವಾದ ಮಾಡುತ್ತಾರೆ. ಹಾಗೇ ಈಗಿನ ಕಾಲದಲ್ಲಿ ಔಷಧಿಗಳೂ ಯಾವುದೋ ಒಂದು ದೇಹದ ಭಾಗಕ್ಕೆ ಹಾನಿಯನ್ನು ಮಾಡುತ್ತವೆ ಎಂಬ ಹಲವಾರು ಮಾತುಗಳು ಕೇಳುವುದುಂಟು. ಆದರೆ, ನಿಮಗೆ ಗೊತ್ತಾ? ಮೊದಮೊದಲು ಕೆಚಪ್ ಅನ್ನು ಔಷಧವನ್ನಾಗಿ ಉಪಯೋಗಿಸುತ್ತಿದ್ದರು ಎಂದು, 1736ರ ಸಮಯದಲ್ಲಿ ಚೀನಾದಲ್ಲಿ ಬಳಕೆಯಾಗುತ್ತಿದ್ದ ಕೆಚಪ್ ಅನ್ನು ನಾವಿಕರು ಇಂಗ್ಲೆಂಡ್‌ಗೆ ತೆಗೆದುಕೊಂಡು ಹೋದರು, ಅದಾದ ನಂತರ ಅದನ್ನು ವಿಶ್ವಾದ್ಯಂತ ಪಸರಿಸುವಲ್ಲಿ ಪ್ರಮುಖ ಹೆಸರು ವಿಜ್ಞಾನಿ ಜೇಮ್ಸ್ ಮೀಸ್. 1812ರಲ್ಲಿ ಈ ವಿಜ್ಞಾನಿ ಬರೆದ ಪ್ರಬಂಧದಿಂದ ಅದರಿಲ್ಲಿನ ಔಷಧಿಯ ಗುಣಗಳ ಬಗ್ಗೆ ಅರ್ಥವಾಗಿ ಜನರು ಬಳಸಲಿಕ್ಕೆ ಶುರುಮಾಡಿದರು. ಆಮೇಲೆ, ಅಂದರೆ, 1830ರ ಸಮಯದಲ್ಲಿ ಕೆಚಪ್ ಅನ್ನು ಡೈರಿಯಾ, ಅಜೀರ್ಣತೆ, ಜಾಂಡೀಸ್ ರೋಗಗಳಿಗೆ ಔಷಧವನ್ನಾಗಿ ಬಳಕೆ ಮಾಡಲು ಶುರುಮಾಡಿದರು. ಅದಾದ ಬಳಿಕ 1834ರಲ್ಲಿ ಡಾ ಜಾನ್ ಕೂಕ್ ಬೆನೆಟ್ ಅವರು ಕೆಚಪ್ ಅನ್ನು ಮಾತ್ರೆಯ ರೂಪದಲ್ಲಿ ಮಾರಲು ಶುರುಮಾಡಿದರು.

ಪುಸ್ತಕ ಲೋಕ

ರಸಋಷಿ ರಾಷ್ಟ್ರಕವಿ ಕುವೆಂಪು



ಈ ಕೃತಿಯು ಜಿ.ಎನ್. ಉಪಾಧ್ಯ ಅವರ ಕುವೆಂಪು ಜೀವನ ಹಾಗೂ ಸಾಧನೆ ಕುರಿತ ಲೇಖನಸಂಕಲನವಾಗಿದೆ. ಕುವೆಂಪು ಅವರ ಸಾಹಿತ್ಯ ಸಾಧನೆಯ ವ್ಯಾಪ್ತಿ ಅಗಾಧವಾದುದು, ಸ್ವಲ್ಪದರಲ್ಲಿ ಅದನ್ನು ಹೇಳುವುದೆಂದರೆ ಕಡಲನ್ನು ಬೊಗಸೆಯಲ್ಲಿ ಹಿಡಿವೆನೆನ್ನುವಂತೆ. ಆದರೆ ಡಾ ಉಪಾಧ್ಯರು ಈ ಕಠಿಣತಮ ಕಾರ್ಯವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಕುವೆಂಪು ಅವರ ವಿಪುಲ ಸಾಹಿತ್ಯವನ್ನು ಕಾವ್ಯ, ಕಥನ ಸಾಹಿತ್ಯ, ನಾಟಕ ಮೊದಲಾದ ಅಧ್ಯಾಯಗಳಲ್ಲಿ ವಿವರಿಸಿರುವುದೇ ಅಲ್ಲದೆ ಅವರ ಮಹಾಕಾವ್ಯವಾಗಿ ಮೂಡಿ ಬಂದು ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ 'ಶ್ರೀ ರಾಮಾಯಣ ದರ್ಶನಂ' ಕೃತಿಯ ಅತಿಶಯತೆಯನ್ನು ಬಿಂಬಿಸಲೆಂದೇ ಒಂದು ಇಡಿಯ ಅಧ್ಯಾಯವನ್ನು ಮೀಸಲಿರಿಸಿದ್ದಾರೆ. ಕುವೆಂಪು ಅವರ ಆತ್ಮಕಥನವಾದ 'ನೆನಪಿನ ದೋಣಿಯಲ್ಲಿ' ಎಂಬ ಕೃತಿಯಿಂದ ಉದ್ಧೃತವಾದ ಸಾಲುಗಳಿಂದ ಅವರ ಬಾಲ್ಯ,ಯೌವನ, ವಿದ್ಯಾಭ್ಯಾಸ, ವೃತ್ತಿ ಜೀವನ, ಸಾಹಿತ್ಯ, ರಚನೆ ಮೊದಲಾದ ಎಲ್ಲಾ ವಿಶೇಷಗಳನ್ನೂ ಅತ್ಯಂತ ಅಧಿಕೃತತೆಯಿಂದ ಡಾ. ಉಪಾಧ್ಯರು ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ಪ್ರೀ ವೆಡ್ಡಿಂಗ್ ಶೂಟ್ ಎಂಬ ವಿನೂತನ ಟ್ರೆಂಡ್

• ಸುರೇಂದ್ರ ಪೈ

ಮನೆಯ ಗೋಡೆಯ ಮೇಲೆ ತೂಗು ಹಾಕಿರುವ ನಮ್ಮ ಬಾಲ್ಯದ ಕಪ್ಪು-ಬಿಳಿಪಿನ ಫೋಟೋ ನೋಡಿದಾಗಲೆಲ್ಲ ನಾವು ಮೆಲ್ಲನೆ 70-80ರ ದಶಕಕ್ಕೆ ಜಾರುತ್ತೇವೆ. ಫೋಟೋಗಳು ನಮ್ಮ ನೆನಪಿನ ಬುತ್ತಿಯನ್ನು ಸದಾ ತಾಜಾಗೊಳಿಸುವ ಒಂದು ದೃಶ್ಯ ಸಾಧನ. ಕಪ್ಪು ಬಿಳುಪಿನ ರೀಲ್‌ನಿಂದ ಹಂತ ಹಂತವಾಗಿ ಕಲರ್ ಫೋಟೋಗಳು ಪ್ರಚಲಿತಕ್ಕೆ ಬಂದು, ತದನಂತರ ಡಿಜಿಟಲ್ ಕ್ಯಾಮರಾಗಳು ಲಗ್ಗೆಯಿಟ್ಟ ಮೇಲಂತೂ ಫೋಟೋಗ್ರಾಫಿಯ ಸಂಪೂರ್ಣ ಚಿತ್ರಣವೇ ಬದಲಾಗಿ ಹೋಯಿತು ಎನ್ನಬಹುದು. ಮೊದಲೆಲ್ಲ ಮದುವೆ, ಮುಂಜಿ(ಉಪನಯನ), ಇತ್ಯಾದಿ ಶುಭ ಸಮಾರಂಭದ ದಿನ ಮಾತ್ರ ಕ್ಯಾಮರಾಗಳು ತಮ್ಮ ಕೈಚಳಕವನ್ನು ತೋರಿಸುತ್ತಿದ್ದವು. ಮೊದಲೆಲ್ಲ ಕ್ಯಾಮರಾಗಳ ಬೆಲೆ ಹೆಚ್ಚಿದ್ದವು, ಅದನ್ನು ಕೊಂಡುಕೊಳ್ಳುವುದು ಹಾಗೂ ಅದನ್ನು ಸರಿಯಾಗಿ ಬಳಕೆ ಮಾಡಲು ಬಹುತೇಕರಿಗೆ ಬರುತ್ತಿರಲಿಲ್ಲ. ಆಗ ನಾವೆಲ್ಲರೂ ಸ್ಟುಡಿಯೋಗಳನ್ನೇ ನೆಚ್ಚಿಕೊಂಡಿದ್ದೇವು. ಆದರೆ ಕಳೆದ ಒಂದು ದಶಕದಿಂದ ಫೋಟೋಗ್ರಾಫಿಯ ಸಂಪೂರ್ಣ ಚಿತ್ರಣವೇ ಬದಲಾಗಿದೆ.



ಮೊದಲು ಮದುವೆ ದಿನ ಮಾತ್ರ ಸೀಮಿತವಾಗಿದ್ದ ಫೋಟೋ ಶೂಟ್, ಈಗ ನಿಶ್ಚಿತಾರ್ಥವಾದ ಬಳಿಕ ಮದುವೆಗೂ ಮುನ್ನ ಅಂದರೆ ವಿವಾಹ ಪೂರ್ವದಲ್ಲಿ 'ಪ್ರೀ ವೆಡ್ಡಿಂಗ್ ಶೂಟ್' ಎಂಬ ವಿನೂತನ ಟ್ರೆಂಡ್ ಒಂದು ಹೆಚ್ಚು ಪ್ರಸಿದ್ಧವಾಗುತ್ತಿದೆ. ನಮ್ಮ ಜೀವನದ ಸುಮಧುರ ಕ್ಷಣಗಳಲ್ಲಿ ಮದುವೆಯು ಒಂದು. ನಮ್ಮ ಬಾಳ ಸಂಗಾತಿಯ ಜೊತೆ ಮದುವೆಗೂ ಮುನ್ನ ಹೊಸ ಹೊಸ ಥೀಮ್ ಗಳೊಂದಿಗೆ ಫೋಟೋ ಶೂಟ್ ನಡೆಸುವುದು ಎಲ್ಲೆಡೆ ಕಂಡು ಬರುತ್ತದೆ. ಪ್ರೀ ವೆಡ್ಡಿಂಗ್ ಶೂಟ್ ಮಾಡಲು ಒಂದು ಡಿಜಿಟಲ್ ಕ್ಯಾಮೆರಾ ಹಾಗೂ ಒಂದು ಡ್ರೋನ್ ಇದ್ದರೆ ಸಾಕು. ಜೊತೆಗೆ ಅವುಗಳನ್ನು ಬಳಸುವ ಕಲೆ ಹಾಗೂ ಫೋಟೋ ಶೂಟ್ ಮಾಡುವ ಕ್ರೀಯಾಶೀಲ ವ್ಯಕ್ತಿ ನಿಮ್ಮೊಳಗಿದ್ದರೆ ಮುಗಿಯಿತು ನೀವು ಸಹ ಪ್ರೀ ವೆಡ್ಡಿಂಗ್ ಶೂಟ್ ಮಾಡುವ ಕೆಲಸವನ್ನು ಕೈಗೆತ್ತಿಕೊಳ್ಳಬಹುದು.

ಇಂದು ಹಲವಾರು ಯುವಕರು ಫೋಟೋಗ್ರಾಫಿಯನ್ನು ಒಂದು ಹವ್ಯಾಸವನ್ನಾಗಿಸಿಕೊಂಡು, ತಮ್ಮ ಬಿಡುವಿನ ವೇಳೆಯಲ್ಲಿ ಇಂತಹ ಪ್ರೀ ವೆಡ್ಡಿಂಗ್ ಶೂಟ್‌ಗಳನ್ನು ಮಾಡಿ ಸಾಕಷ್ಟು ಹಣ ಸಂಪಾದಿಸುತ್ತಿದ್ದಾರೆ. ಪ್ರೀ ವೆಡ್ಡಿಂಗ್ ಶೂಟ್ ಮಾಡಲು ಸಮುದ್ರದ ತೀರ, ಜಲಪಾತ, ಪ್ರಕೃತಿಯ ಮಡಿಲು, ಹಳೆಯ ಮನೆ, ಹಳೆಯ ಕಾಲದ ವೇಷಭೂಷಣ, ದೇವಸ್ಥಾನ, ಮರುಭೂಮಿ, ನದಿ ತೀರ, ಹಳೆ ಕಾಲದ ಶಿಲೆಯ ದೇವಸ್ಥಾನ, ಐತಿಹಾಸಿಕ ಪ್ರವಾಸಿ ತಾಣಗಳು, ತೋಟ ಹೀಗೆ ತಾವು ಆಯ್ದುಕೊಂಡ ಥೀಮ್‌ಗೆ ಅನ್ವಯವಾಗುವಂತೆ ಒಂದು ಜಾಗವನ್ನು ಆಯ್ಕೆಮಾಡಿಕೊಳ್ಳುತ್ತಾರೆ.

ಪ್ರೀ ವೆಡ್ಡಿಂಗ್ ಶೂಟ್ ನ ಚಿಕ್ಕ ವಿಡಿಯೋ ತುಣುಕನ್ನು ಮದುವೆಯ ಕರೆಯೋಲೆಯಾಗಿ ಬಳಸಿಕೊಂಡು ತಮ್ಮ ಸಂಬಂಧಿಕರು, ಸ್ನೇಹಿತರು, ಬಳಗದವರನ್ನು ಆಹ್ವಾನಿಸುವುದನ್ನು ನಾವು ನೋಡಬಹುದು. ಜೊತೆಗೆ ಮದುವೆಯ ದಿನ ಎಲ್ ಇ ಡಿ ಪರದೆಯ ಮೇಲೆ ಬಿತ್ತರಗೊಳ್ಳುವ ವಿಡಿಯೋ ನೋಡಿ ನಮ್ಮ ಕಾಲದಲ್ಲೂ ಈ ರೀತಿ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತಲ್ಲವೇ ಎಂದು ಅನಿಸಿರಲುಬಹುದು. ಇನ್ನು ಮದುವೆಯಾಗದವರು ತಮ್ಮ ಮದುವೆ ಮುನ್ನ ತಾವು ಸಹ ಇದೇ ರೀತಿ ಪ್ರೀ ವೆಡ್ಡಿಂಗ್ ಶೂಟ್ ಮಾಡಿಸಿಕೊಳ್ಳಬೇಕೆಂದು ನಿಶ್ಚಯ ಮಾಡಿಯೇ ಇರುತ್ತೀರಿ. ಪ್ರೀ ವೆಡ್ಡಿಂಗ್ ಶೂಟ್ ಎಂಬ ಈ ವಿನೂತನ ಟ್ರೆಂಡ್ ನಿಮ್ಮ ನೆನಪಿನ ಜೋಳಿಗೆಯನ್ನು ಹಚ್ಚಹಸಿರಾಗಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

ಸಮಾಚಾರ ಸಣ್ಣದಲ್ಲ

2ನೇ ಪಂದ್ಯಕ್ಕೂ ವಿಲಿಯಮ್‌ಸನ್ ಅಲಭ್ಯ

ಪುಣೆ: ನ್ಯೂಜಿಲೆಂಡ್‌ನ ಹಿರಿಯ ಬ್ಯಾಟರ್ ಕೇನ್ ವಿಲಿಯಮ್ಸನ್ ಅವರು ಭಾರತ ವಿರುದ್ಧ ಇಲ್ಲಿ ನಡೆಯಲಿರುವ ಎರಡನೇ ಟೆಸ್ಟ್ ಕ್ರಿಕೆಟ್ ಪಂದ್ಯಕ್ಕೂ ಲಭ್ಯವಿರುವುದಿಲ್ಲ. ಏಕೆಂದರೆ, ಗಾಯಗೊಂಡಿರುವ

ಅವರು ಪುನಶ್ಚೇತನ ಕೇಂದ್ರದಲ್ಲಿದ್ದು, ಇನ್ನೂ ಸಂಪೂರ್ಣ ಚೇತರಿಸಿಕೊಂಡಿಲ್ಲ ಎಂದು ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿ ಮಂಗಳವಾರ ತಿಳಿಸಿದೆ. ಬೆಂಗಳೂರಿನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯವನ್ನು 8 ವಿಕೆಟ್‌ಗಳಿಂದ ಜಯಿಸಿದ ನ್ಯೂಜಿಲೆಂಡ್, ಮೂರು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿದೆ. ಎರಡನೇ ಟೆಸ್ಟ್ ಪಂದ್ಯ ಗುರುವಾರದಿಂದ ಆರಂಭವಾಗಲಿದೆ. ಶ್ರೀಲಂಕಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಗಾಯಗೊಂಡಿರುವ ವಿಲಿಯಮ್ಸನ್ ಇನ್ನೂ ಚೇತರಿಕೆ ಕಂಡಿಲ್ಲ. ಗಾಯಗೊಂಡಿರುವ ವಿಲಿಯಮ್ಸನ್ ಆರೋಗ್ಯದಲ್ಲಿ ಸುಧಾರಣೆ ಕಂಡಿದ್ದು, ಅವರು ಇನ್ನೂ ಸಂಪೂರ್ಣ ಚೇತರಿಸಿಕೊಂಡಿಲ್ಲ ಎಂದು ಮುಖ್ಯ ಕೋಚ್ ಗ್ಯಾರಿ ಸ್ಟೀಡ್ ತಿಳಿಸಿದ್ದಾರೆ. 'ನಾವು ನಿಕಟವಾಗಿ ಕೇನ್ ಅವರ ಆರೋಗ್ಯದ ಮೇಲ್ವಿಚಾರಣೆ ನಡೆಸುತ್ತಿದ್ದೇವೆ. ಅವರ ಆರೋಗ್ಯ ಸುಧಾರಿಸುತ್ತಿದೆ. ಶೇ.100 ರಷ್ಟು ಫಿಟ್ ಆಗಿಲ್ಲ'ಎಂದು ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ. ಮುಂಬರುವ ದಿನಗಳಲ್ಲಿ ಅವರ ಫಿಟ್ನೆಸ್ ಮತ್ತಷ್ಟು ಸುಧಾರಣೆ ಕಂಡು, ಮೂರನೇ ಟೆಸ್ಟ್‌ಗೆ ಅವರು ಲಭ್ಯವಾಗುವ ಭರವಸೆ ಹೊಂದಿದ್ದೇವೆ ಎಂದು ತಿಳಿಸಿದೆ. ಮೂರನೇ ಟೆಸ್ಟ್ ಪಂದ್ಯ ಮುಂಬೈನಲ್ಲಿ ನವೆಂಬರ್ 1ರಿಂದ ಆರಂಭವಾಗಲಿದೆ.

ಫಿಟ್ನೆಸ್: ಪೃಥ್ವಿ ಶಾ ತಂಡದಿಂದ ಹೊರಕ್ಕೆ

ಮುಂಬೈ: ಆರಂಭಿಕ ಬ್ಯಾಟರ್ ಪೃಥ್ವಿ ಶಾ ಅವರನ್ನು ಮುಂಬೈ ತಂಡದಿಂದ ಕೈಬಿಡಲಾಗಿದೆ. ಫಿಟ್ನೆಸ್ ಕೊರತೆ ಮತ್ತು ಅಶಿಸ್ತಿನ ಕಾರಣಗಳಿಗಾಗಿ ಅವರನ್ನು ಕೈಬಿಡಲಾಗಿದೆ. ಇದೇ 26 ರಿಂದ 29ರವರೆಗೆ ಅಗರ್ತಲಾದಲ್ಲಿ ಮುಂಬೈ ಮತ್ತು ತ್ರಿಪುರ ಪಂದ್ಯವು ನಡೆಯಲಿದೆ. ಕ್ರೀಡಾಂಗಣದಲ್ಲಿ ಅವರ ಫಿಟ್ನೆಸ್ ಮತ್ತು ಓಟವನ್ನು ಗಮನಿಸಬೇಕು. ಎಂಸಿಎ (ಮುಂಬೈ ಕ್ರಿಕೆಟ್ ಸಂಸ್ಥೆ)ಗೆ ಬಹಳ ಶ್ರೀಮಂತ ಪರಂಪರೆ ಇದೆ. ಆದ್ದರಿಂದ ಎಲ್ಲ ಆಟಗಾರರಿಗೂ ಒಂದೇ ರೀತಿಯ ನಿಯಮ ಅನ್ವಯವಾಗುತ್ತದೆ ಎಂದು ಪದಾಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ರಣಜಿ ಟ್ರೋಫಿ ಟೂರ್ನಿಯ ಕಳೆದ ಎರಡು ಪಂದ್ಯಗಳಲ್ಲಿ ಪೃಥ್ವಿ (7,12, 1 ಮತ್ತು ಔಟಾಗದೆ 39) ಅವರು ಫಾರ್ಮ್ ಕಂಡುಕೊಂಡಿರಲಿಲ್ಲ. ಅವರನ್ನು ತಂಡದಿಂದ ಕೈಬಿಡುವ ನಿರ್ಧಾರವನ್ನು ಮುಂಬೈ ಸೀನಿಯರ್ ತಂಡದ ಆಯ್ಕೆ ಸಮಿತಿ ತೆಗೆದುಕೊಂಡಿದೆ.

ಬಜೆಟ್ ಸ್ನೇಹಿ ಆಗಿಸುವ ಯೋಜನೆ | 2026ರ ಜುಲೈ 23 ರಿಂದ ಆಗಸ್ಟ್ 2ರ ನಡೆಯುವ ಕ್ರೀಡಾಕೂಟ | ಇದರಿಂದ ಭಾರತದ ಪದಕ ಗಳಿಕೆಯಲ್ಲಿ ಕಡಿಮೆಯಾಗುವ ಸಂಭವನೀಯತೆ ಹೆಚ್ಚು

ಕಾಮನ್‌ವೆಲ್ತ್‌ನಿಂದ 10 ಕ್ರೀಡೆಗಳು ಹೊರಕ್ಕೆ!

ಲಂಡನ್: ಗ್ಲಾಸ್‌ಗೊನಲ್ಲಿ 2026ರಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡೆಯನ್ನು ಬಜೆಟ್ ಸ್ನೇಹಿಯಾಗಿಸುವ ಉದ್ದೇಶದಿಂದ ಹಾಕಿ, ಬ್ಯಾಡ್ಮಿಂಟನ್, ಕುಸ್ತಿ, ಶೂಟಿಂಗ್ ಹಾಗೂ ಕ್ರಿಕೆಟ್ ಸೇರಿದಂತೆ 10 ಕ್ರೀಡೆಗಳನ್ನು ಕೈಬಿಡಲಾಗಿದೆ ಎಂದು ವರದಿಯಾಗಿದೆ.

ಟೇಬಲ್ ಟೆನ್ನಿಸ್, ಸ್ಕ್ವಾಷ್ ಹಾಗೂ ಟ್ರಥ್ಲಾನ್ ಕೂಡಾ ಕೈಬಿಡಲಾದ ಪಟ್ಟಿಯಲ್ಲಿದೆ. ಇಡೀ ಕ್ರೀಡಾಕೂಟಕ್ಕೆ ಕೇವಲ ನಾಲ್ಕು ಕೇಂದ್ರಗಳನ್ನಷ್ಟೇ ಬಳಸಲಾಗುತ್ತಿದೆ. 2022ರ ಬರ್ಮಿಂಗ್‌ಹ್ಯಾಮ್ ಆವೃತ್ತಿಗೆ ಹೋಲಿಸಿದಲ್ಲಿ 2026ರಲ್ಲಿ ಕ್ರೀಡೆಗಳ ಸಂಖ್ಯೆಗಳು ಗಣನೀಯವಾಗಿ ಕುಸಿಯಲಿವೆ.

ಗೇಮ್ಸ್‌ನಲ್ಲಿ 10 ಕ್ರೀಡೆಗಳಷ್ಟೇ ಇರಲಿದೆ. ಕಾಮನ್‌ವೆಲ್ತ್ ಕ್ರೀಡೆಯಲ್ಲಿ ಹಲವು ಆಟಗಳು ಇರಬೇಕು ಜತೆಗೆ ನಿರ್ವಹಣೆ ಮತ್ತು ಹಣಕಾಸು ವೆಚ್ಚವನ್ನೂ ತಗ್ಗಿಸಬೇಕಾಗಿದೆ. ಅದಕ್ಕಾಗಿ ಅಥ್ಲೆಟಿಕ್ಸ್ ಹಾಗೂ ಪ್ಯಾರಾ ಅಥ್ಲೆಟಿಕ್ಸ್(ಟ್ರ್ಯಾಕ್ ಮತ್ತು ಫೀಲ್ಡ್)ನಲ್ಲಿ ಕೇವಲ ಹತ್ತು ಆಟಗಳನ್ನಷ್ಟೇ ಆಡಿಸಲಿದ್ದಾರೆ.

ಕಾಮನ್ವೆಲ್ತ್ ಗೇಮ್ಸ್‌ನ ಈ ಆವೃತ್ತಿಯು ಜುಲೈ 23ರಿಂದ ಆಗಸ್ಟ್ 2ರವರೆಗೆ ನಡೆಯಲಿದೆ. ಗ್ಲಾಸ್‌ಗೊಗೆ 12ನೇ ವರ್ಷದ ನಂತರ ಆತಿಥ್ಯ ವಹಿಸುವ ಅವಕಾಶ ಲಭಿಸಿದೆ. ಪ್ಯಾರಾ ಅಥ್ಲೀಟ್ 2002ರ ಮ್ಯಾಂಚೆಸ್ಟರ್ ಆವೃತ್ತಿಯಿಂದ ಆರಂಭಗೊಂಡಿದ್ದು, ಇದು 2026ರ

ಆವೃತ್ತಿಯಲ್ಲೂ ಮುಂದುವರಿಯಲಿದೆ.

ಕಾಮನ್‌ವೆಲ್ತ್‌ನಲ್ಲಿ 56 ದೇಶಗಳಿದ್ದರೂ, ಕೆಲವು ವಲಂಭಿತ ಪ್ರದೇಶಗಳು ಸೇರಿ ಸುಮಾರು 3000ಕ್ಕೂ ಹೆಚ್ಚು ಕ್ರೀಡಾಪಟುಗಳು ಈ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿದ್ದಾವೆ.

ಬರ್ಮಿಂಗ್‌ಹ್ಯಾಮ್ ಕ್ರೀಡಾಕೂಟದಲ್ಲಿ ಶೂಟಿಂಗ್ ಕೈಬಿಡಲಾಗಿತ್ತು. ಅದು ಈ ಬಾರಿಯೂ ಮುಂದುವರಿದಿದೆ. ಇದರೊಂದಿಗೆ ಇತರ ಪ್ರಮುಖ ಕ್ರೀಡೆಗಳನ್ನು ಕೈಬಿಟ್ಟಿರುವುದು ಭಾರತದ ಪದಕ ಬೇಟೆಗೆ ತೊಡಕಾಗಲಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

2014 ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಶೂಟಿಂಗ್ ಅನ್ನು ಗ್ಲಾಸ್‌ಗೊದಿಂದ 100 ಕಿ.ಮೀ. ದೂರದಲ್ಲಿ ಆಯೋಜಿಸಲಾಗಿತ್ತು. ಆರ್ಚರಿಯನ್ನೂ ಕಡೆಗಣಿಸಲಾಗಿದೆ. ಇದು 2010ರಲ್ಲಿ ದೆಹಲಿಯಲ್ಲಿ ನಡೆದ ಕ್ರೀಡಾಕೂಟದ ನಂತರ ನಡೆದೇ ಇಲ್ಲ. 2014ರಲ್ಲಿ ಹಾಕಿಯನ್ನು ಕೈಬಿಡಲಾಗಿತ್ತು. ಆದರೆ ಈವರೆಗಿನ ಕ್ರೀಡಾಕೂಟದಲ್ಲಿ ಭಾರತದ ಹಾಕಿ ತಂಡವು ಮೂರು ಬೆಳ್ಳಿ ಹಾಗೂ 2 ಕಂಚಿನ ಪದ ಗೆದ್ದಿತ್ತು. ಬ್ಯಾಡ್ಮಿಂಟನ್ ಈವರೆಗೂ 10 ಚಿನ್ನ ಸೇರಿದಂತೆ 31 ಪದಕಗಳನ್ನು ಪಡೆದಿದೆ.

ಶೂಟಿಂಗ್‌ನಲ್ಲಿ ಈವರೆಗೂ 135 ಪದಕಗಳನ್ನು ಪಡೆದಿದೆ. ಇದರಲ್ಲಿ 63 ಚಿನ್ನದ ಪದಕ ಒಳಗೊಂಡಿದೆ. ಭಾರತಕ್ಕೆ ಪದಕದ ಖಾತ್ರಿ ನೀಡಬಲ್ಲ ಕುಸ್ತಿಯಲ್ಲಿ 114 ಪದಕ ಭಾರತಕ್ಕೆ ಲಭಿಸಿದೆ. ಕ್ರಿಕೆಟ್‌ನಲ್ಲಿ ಮಹಿಳೆಯರ ತಂಡವು ಬೆಳ್ಳಿ ಪದಕ ಜಯಿಸಿದೆ.

2026ರ ಕಾಮನ್‌ವೆಲ್ತ್ ಗೇಮ್ಸ್‌ನ ಕ್ರೀಡಾ ನಗರಿಯ ಅಭಿವೃದ್ಧಿಗಾಗಿ 100 ದಶಲಕ್ಷ ಪೌಂಡ್‌ಗಳನ್ನು ಖರ್ಚು ಮಾಡುವುದಾಗಿ ಸ್ಕಾಟ್ಲೆಂಡ್ ಹೇಳಿದೆ.

ನಡೆಯಲಿರುವ ಕ್ರೀಡೆಗಳು

ನಡೆಯಲಿರುವ ಕ್ರೀಡೆಗಳು	
ಈಜು	ಬಾಸ್ಕೆಟ್‌ಬಾಲ್
ಪ್ಯಾರಾ ಈಜು	**ಕೈಬಿಡಲಾದ ಆಟಗಳು**
ಆರ್ಟಿಸ್ಟಿಕ್ ಜಿಮ್ನಾಸ್ಟಿಕ್	ಬಾಕ್ಸಿಂಗ್
ಟ್ರ್ಯಾಕ್ ಸೈಕ್ಲಿಂಗ್	ಹಾಕಿ
ಪ್ಯಾರಾ ಟ್ರ್ಯಾಕ್ ಸೈಕ್ಲಿಂಗ್	ಕ್ರಿಕೆಟ್
ನೆಟ್ಬಾಲ್	ಬ್ಯಾಡ್ಮಿಂಟನ್
ವೇಟ್ ಲಿಫ್ಟಿಂಗ್	ರಗ್ಬಿ ಸೆವೆನ್ಸ್
ಪ್ಯಾರಾ ಪವರ್ ಲಿಫ್ಟಿಂಗ್	ಟೇಬಲ್ ಟೆನ್ನಿಸ್
ಬಾಕ್ಸಿಂಗ್	ಬೀಚ್ ವಾಲಿಬಾಲ್
ಜುಡೊ	ಮೌಂಟೇನ್ ಬೈಕಿಂಗ್
ಬೌಲ್ಸ್	ಸ್ಕ್ವಾಶ್
ಪ್ಯಾರಾ ಬೌಲ್ಸ್	ರಿಧಮಿಕ್ ಜಿಮ್ನಾಸ್ಟಿಕ್ಸ್
3x3 ಬಾಸ್ಕೆಟ್‌ಬಾಲ್	ಟ್ರಥ್ಲಾನ್
3x3 ಗಾಲಿಕುರ್ಚಿ	

ಆಟಗಳನ್ನು ಕೈಬಿಟ್ಟಿದ್ದಾದರೂ ಏಕೆ?

2026ನೇ ಸಾಲಿನ ಕಾಮನ್‌ವೆಲ್ತ್ ಕ್ರೀಡಾಕೂಟವೂ ಆಸ್ಟ್ರೇಲಿಯಾದಲ್ಲಿ ನಡೆಯಬೇಕಿತ್ತು. ಆದರೆ, ಅದರಿಂದ ಉಂಟಾಗುವ ಖರ್ಚಿನ ಬಗ್ಗೆ ತಿಳಿದು ಅವರು ತಮ್ಮ ನಿರ್ಧಾರವನ್ನು ಹಿಂತೆಗೆದರು. ಅದಾದ ಮೇಲೆ ಕಾಮನ್‌ವೆಲ್ತ್ ಫೆಡರೇಷನ್‌ನವರು ಆತಿಥ್ಯವನ್ನು ವಹಿಸಿಕೊಳ್ಳುವ ಹೊಸ ದೇಶವನ್ನು ಹುಡುಕುತ್ತಿದ್ದಾಗ ಅವರಿಗೆ ಸಿಕ್ಕಿದ್ದು ಸ್ಕಾಟ್‌ಲೆಂಡ್. ಅದಾಗ್ಯೂ, ಖರ್ಚನ್ನು ಕಡಿಮೆ ಪಡಿಸುವ ಸಲುವಾಗಿ ಈಗಾಗಲೇ ಇರುವ ಕ್ರೀಡಾಂಗಣದಲ್ಲಿ ನಡೆಸುತ್ತಾರೆ. ಅದರ ಜತೆಗೆ ಹೊಸ ಕಾಮನ್‌ವೆಲ್ತ್ ಕ್ರೀಡಾ ಹಳ್ಳಿಯನ್ನು ಮಾಡುವ ಬದಲು, ಟಗಾರರ ಆತಿಥ್ಯವನ್ನು ಕೆಲವು ಹೊಟೆಲ್‌ಗಳಲ್ಲಿ ಕಲ್ಪಿಸಲಾಗಿದೆ. ಅದರ ಜತೆಗೆ ಇರುವ ನಾಲ್ಕೇ ಕ್ರೀಡಾಂಗಣದಲ್ಲಿ ಈ ಆಟವನ್ನು ಕಲ್ಪಿಸಲಾಗಿದೆ. ಉಳಿದ ಟಗಳನ್ನು ಸೌಲಭ್ಯಗಳು ಕಡಿಮೆಯಿರುವುದರಿಂದ ತೆಗೆಯಲಾಗಿದೆ.

ಭಾರತ ಸೋತರೂ ತಂಡದಲ್ಲಿ ಸ್ಥಾನ ಪಡೆದ ಭಾರತೀಯ ಆಟಗಾರ್ತಿ

ಐಸಿಸಿ ತಂಡ: ಹರ್ಮನ್‌ಪ್ರೀತ್‌ಗೆ ಸ್ಥಾನ

ದುಬೈ: ಮಹಿಳಾ ಟಿ20 ವಿಶ್ವಕಪ್ 2024 ತಂಡವನ್ನು ಐಸಿಸಿ ಸೋಮವಾರ ಪ್ರಕಟಿಸಿದ್ದು, ಇದರಲ್ಲಿ ಭಾರತ ತಂಡದ ನಾಯಕಿ ಹರ್ಮನ್ ಪ್ರೀತ್ ಕೌರ್ ಸ್ಥಾನ ಪಡೆದಿದ್ದಾರೆ. ಫೈನಲ್‌ನಲ್ಲಿ ಆಡಿದ ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡದ ಆಟಗಾರ್ತಿಯರು ಹೆಚ್ಚಿನ ಸ್ಥಾನಗಳನ್ನು ಪಡೆದಿದ್ದಾರೆ.

ನ್ಯೂಜಿಲೆಂಡ್ ಭಾನುವಾರ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಮೊದಲ ಬಾರಿ ಚಾಂಪಿಯನ್ ಆಗಿತ್ತು. ಸೆಮಿಫೈನಲ್ ತಲುಪಲು ವಿಫಲವಾಗಿದ್ದ ಭಾರತ ತಂಡದಲ್ಲಿ ಹರ್ಮನ್‌ಪ್ರೀತ್ ಕೌರ್ ಮಾತ್ರ ಸ್ಥಿರ ಪ್ರದರ್ಶನ ನೀಡಿದ್ದು, ಐಸಿಸಿ ಪ್ರಕಟಿಸಿದ ತಂಡದಲ್ಲಿ ಸ್ಥಾನ ಪಡೆದ ಭಾರತದ ಏಕೈಕ ಆಟಗಾರ್ತಿ ಎನಿಸಿದ್ದಾರೆ. ಅವರ ಸ್ಟ್ರೈಕ್‌ರೇಟ್ (133.92) ಟೂರ್ನಿಯ ಐದನೇ ಉತ್ತಮ ಎನಿಸಿತ್ತು.

ತಂಡ ಹೀಗಿದೆ:

ಲಾರಾ ವೋಲ್ವಾರ್ಟ್ (ದಕ್ಷಿಣ ಆಫ್ರಿಕಾ, ನಾಯಕಿ), ತಾಝ್ಮಿನ್ ಬ್ರಿಟ್ಸ್ (ದಕ್ಷಿಣ ಆಫ್ರಿಕಾ), ಡ್ಯಾನ್ನಿ ವ್ಯಾಟ್ ಹಾಜ್ (ಇಂಗ್ಲೆಂಡ್), ಅಮೇಲಿಯಾ ಕೆರ್ (ನ್ಯೂಜಿಲೆಂಡ್), ಹರ್ಮನ್‌ಪ್ರೀತ್ ಕೌರ್ (ಭಾರತ), ಡಿಯೆಂಡ್ರಾ ಡಾಟಿನ್ (ವೆಸ್ಟ್ ಇಂಡೀಸ್), ನಿಜರ್ ಸುಲ್ತಾನಾ ಜೋಟಿ (ಬಾಂಗ್ಲಾದೇಶ, ವಿಕೆಟ್ ಕೀಪರ್), ಆ್ಯಫಿ ಫ್ಲೆಚರ್ (ವೆಸ್ಟ್ ಇಂಡೀಸ್), ರೋಸ್ಮರಿ ಮೇರ್ (ನ್ಯೂಜಿಲೆಂಡ್), ನೊಬ್ಕುಲುಲೆಕೊ ಮ್ಲಾಬಾ (ದಕ್ಷಿಣ ಆಫ್ರಿಕಾ), ಮೇಗನ್ ಶೂಟ್ (ಆಸ್ಟ್ರೇಲಿಯಾ). 12ನೇ ಆಟಗಾರ್ತಿ: ಎಡೆನ್ ಕಾರ್ಸನ್ (ನ್ಯೂಜಿಲೆಂಡ್).

ಬಾಂಗ್ಲಾ-ದ.ಆಫ್ರಿಕಾ ನಡುವೆ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯ | ಇನ್ನಿಂಗ್ಸ್ ಸೋಲು ತಪ್ಪಿಸಲು ಬಾಂಗ್ಲಾಗೆ ಬೇಕು 101 ರನ್

ಸೋಲಿಂದ ಬಚಾವ್ ಆಗಲು ಆಟ!

ಮೀರಪುರ್, (ಬಾಂಗ್ಲಾದೇಶ): ಬಾಂಗ್ಲಾದೇಶ ತಂಡವು, ಮೊದಲ ಟೆಸ್ಟ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಸೋಲು ತಪ್ಪಿಸುವ ಸವಾಲು ಎದುರಿಸುತ್ತಿದೆ. ಎರಡನೇ ದಿನವಾದ ಮಂಗಳವಾರ ಆಟ ಮುಗಿದಾಗ ಆತಿಥೇಯರು 3 ವಿಕೆಟ್‌ಗೆ 101 ರನ್ ಗಳಿಸಿದ್ದು, ಇನಿಂಗ್ಸ್ ಸೋಲು ತಪ್ಪಿಸಲು ಇನ್ನೂ 101 ರನ್ ಗಳಿಸಬೇಕಾಗಿದೆ.

ಆರಂಭ ಆಟಗಾರ ಮಹಮುದುಲ್ ಹಸನ್ ಜಾಯ್ (38) ಮತ್ತು ಮುಷ್ಫಿಕುರ್ ರಹೀಂ (31) ಅವರು ಅಜೇಯರಾಗಿ ಉಳಿದಿದ್ದು, ಮುರಿಯದ ನಾಲ್ಕನೇ ವಿಕೆಟ್‌ಗೆ 42 ರನ್ ಸೇರಿಸಿದ್ದಾರೆ. ಮುಷ್ಫಿಕುರ್ ಈ ಹಾದಿಯಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ 6000 ರನ್ ಪೂರೈಸಿದ ಬಾಂಗ್ಲಾದೇಶದ ಮೊದಲ ಕ್ರಿಕೆಟರ್ ಎನಿಸಿದರು.

ಇದಕ್ಕೆ ಮೊದಲು ಬಾಂಗ್ಲಾದೇಶದ 106 ರನ್‌ಗಳಿಗೆ ಉತ್ತರವಾಗಿ, ದಕ್ಷಿಣ ಆಫ್ರಿಕಾ ತಂಡವು (ಸೋಮವಾರ: 6 ವಿಕೆಟ್‌ಗೆ 140) ಮೊದಲ ಇನ್ನಿಂಗ್ಸ್‌ನಲ್ಲಿ 308 ರನ್ ಗಳಿಸಿ 202 ರನ್‌ಗಳ ಮುನ್ನಡೆ ಪಡೆದಿತ್ತು. ವಿಕೆಟ್ ಕೀಪರ್ ಕೈಲ್ ವೆರೈನ್ ಆಕರ್ಷಕ ಶತಕ (114 ರನ್,

ಸ್ಕೋರುಗಳು: ಬಾಂಗ್ಲಾದೇಶ: 106 ಮತ್ತು 27.1 ಓವರುಗಳಲ್ಲಿ 3 ವಿಕೆಟ್‌ಗೆ 101 (ಮಹಮದುಲ್ ಹಸನ್ ಜಾಯ್ ಔಟಾಗದೇ 38, ಮುಷ್ಫಿಕುರ್ ರಹೀಂ ಔಟಾಗದೇ 31; ರಬಾಡ 10ಕ್ಕೆ2); ದಕ್ಷಿಣ ಆಫ್ರಿಕಾ: 88.4 ಓವರುಗಳಲ್ಲಿ 308 (ಕೈಲ್ ವೆರೈನ್ 114, ವಿಯಾನ್ ಮುಲ್ಡರ್ 54, ಡೇನ್ ಪೀಟ್ 32; ಹಸನ್ ಮಹಮುದ್ 66ಕ್ಕೆ3, ಮೆಹಿದಿ ಹಸನ್ ಮಿರಾಜ್ 63ಕ್ಕೆ2, ತೈಜುಲ್ ಇಸ್ಲಾಂ 122ಕ್ಕೆ5).

144) ಗಳಿಸಿದರು. ಏಳನೇ ವಿಕೆಟ್‌ಗೆ ವಿಯಾನ್ ಮುಲ್ಡರ್ (54, 112ಎ) ಜೊತೆಗೆ 119 ರನ್ ಸೇರಿಸಿದ್ದರಿಂದ ದಕ್ಷಿಣ ಆಫ್ರಿಕಾದ ಮುನ್ನಡೆ ಉಬ್ಬುತ್ತ ಹೋಯಿತು.

ನಂತರ ಕಗಿಸೊ ರಬಾಡ ಮೂರನೇ ಓವರ್‌ನಲ್ಲಿ ಶಾದ್ಮನ್ ಇಸ್ಲಾಂ ಮತ್ತು ಮೊಮಿನುಲ್ ಹಕ್ ಅವರ ವಿಕೆಟ್‌ಗಳನ್ನು ಪಡೆದು ಪೆಟ್ಟು ನೀಡಿದ್ದರು. ಮೊತ್ತ 59 ರನ್‌ಗಳಾಗಿದ್ದಾಗ ನಾಯಕ ನಜ್ಮುಲ್ ಹಸನ್ ಶಾಂತೊ (23) ನಿರ್ಗಮಿಸಿದರು.

ಭರವಸೆ ಮೂಡಿಸಿದ ಭಾರ್ಗವ

ಕನ್ನಡ ಚಿತ್ರರಂಗದಲ್ಲಿ ನವ ಪ್ರತಿಭೆಗಳು ತಮ್ಮ ಅಭಿನಯದ ಮೂಲಕವೇ ಗಮನಸೆಳೆಯುತ್ತಿದ್ದಾರೆ, ಅಂತಹವರಲ್ಲಿ ನಟ ಭಾರ್ಗವ ಕೂಡ ಒಬ್ಬರು. ವರನಟ ಡಾ.ರಾಜ್‌ಕುಮಾರ್ ಅವರ ಅಪ್ಪಟ ಅಭಿಮಾನಿಯಾದ ಭಾರ್ಗವ, ಅವರನ್ನೇ ಆರಾಧಿಸುತ್ತಾ, ಸ್ಫೂರ್ತಿ ಪಡೆದು ತಾನು ಕಲಾವಿದನಾಗಬೇಕು ಎಂದು ಚಿತ್ರರಂಗಕ್ಕೆ ಬಂದವರು.

ಚಾಮರಾಜ್ ಅವರ ಬಳಿ ಅಭಿನಯದ ತರಬೇತಿಯನ್ನು ಪಡೆದ ಭಾರ್ಗವ, ಡೇಟಿಂಗ್ ವಿತ್ ಸನ್ನಿ ವೆಬ್ ಸೀರೀಸ್‌ನಲ್ಲಿ ನಟಿಸಿ ಮನಸೂರೆಗೊಂಡರು. ಅಲ್ಲಿಂದ ಪರಿಶುದ್ಧಂ ಚಿತ್ರಕ್ಕೆ ನಾಯಕನಾಗಿಯೂ ಆಯ್ಕೆಯಾದರು. ಪರಿಶುದ್ಧಂ ಭಾರ್ಗವನಿಗೆ ಬಿಗ್ ಬ್ರೇಕ್ ನೀಡಿತು. ಈ ಚಿತ್ರದ ಯಶಸ್ಸಿನಿಂದ ಭಾರ್ಗವನಿಗೆ ಸಾಲು ಸಾಲು ಅವಕಾಶಗಳು ಅರಸಿ ಬಂದವು.

ಸದ್ಯ ವಿದುರನ ಅವತಾರ ತಾಳಿರುವ ಭಾರ್ಗವ, ವಿಪರ್ಯಾಸ, ಸುಡೋಕೋ, ವಿಕ್ರಮಾರ್ಕ, ಕೃಷ್ಣ ನೀ ಬೇಗನೆ ಬಾರೋ ಚಿತ್ರಗಳಲ್ಲಿ ನಟಿಸುತ್ತಿದ್ದಾರೆ. ಅದರ ಜತೆಗೆ ಈಗಷ್ಟೇ ಸೆಟ್ಟೇರಿರುವ ಆ..ಈ.. ಮತ್ತು ರಾಜ ದೇವ ಸಿಂಧು ಚಿತ್ರಗಳಲ್ಲಿ ಭಾರ್ಗವ ನಾಯಕನಾಗಿ ನಟಿಸುತ್ತಿದ್ದಾರೆ. ಮಾತ್ರವಲ್ಲ ನವದಿಗಂತ ಸಿನಿಮಾದಲ್ಲಿ ವಿಶೇಷ ಪಾತ್ರದಲ್ಲಿಯೂ ಕಾಣಿಸಿಕೊಳ್ಳುತ್ತಿದ್ದಾರೆ.

ಪ್ರತಿ ಚಿತ್ರದಲ್ಲಿಯೂ ವಿಭಿನ್ನ ಪಾತ್ರವನ್ನೇ ಆಯ್ದುಕೊಳ್ಳುವ ಭಾರ್ಗವ ಚಿತ್ರೀಕರಣ ಮುಗಿಸಿ ತೆರೆಗೆ ಸಿದ್ಧವಾಗಿರುವ ಟೆಡ್ಡಿಬೇರ್ ಚಿತ್ರದ ಮೂಲಕ ಭರ್ಜರಿಯಾಗಿ ತೆರೆಗೆ ಬರಲು ಸಿದ್ಧವಾಗಿದ್ದಾರೆ.

ಒಂದೇ ಚಿತ್ರದಲ್ಲಿ ಶಾರುಕ್-ತಾರಕ್

ದೇವರ ಚಿತ್ರದಲ್ಲಿ ಅಬ್ಬರಿಸಿದ ಜೂ.ಎನ್‌ಟಿಆರ್ ಈಗ ಬಾಲಿವುಡ್ ಅಂಗಳಕ್ಕೂ ಎಂಟ್ರಿಕೊಟ್ಟಿದ್ದಾರೆ. ಯಶ್ ರಾಜ್ ಫಿಲಂಸ್‌ನಲ್ಲಿ ನಿರ್ಮಾಣವಾಗುತ್ತಿರುವ ಹೈಬಜೆಟ್ ಸಿನಿಮಾ ವಾರ್ 2 ನಲ್ಲಿ ತಾರಕ್ ಕೂಡ ನಟಿಸಲಿದ್ದಾರೆ. ಈ ಚಿತ್ರದ ಕ್ಲೈಮ್ಯಾಕ್ಸ್ ಫೈಟ್‌ನಲ್ಲಿ ಜೂ.ಎನ್‌ಟಿಆರ್ ಮಿಂಚಲಿದ್ದು, ಬರೋಬ್ಬರಿ ನಲವತ್ತು ಜನರ ಜತೆಗೆ ಫೈಟ್ ಮಾಡಲಿದ್ದಾರೆ. ತಾರಕ್‌ರಾ ಲುಕ್‌ನಲ್ಲಿ ಕಂಗೊಳಿಸಲಿದ್ದು, ಅವರ ಪಾತ್ರಕ್ಕೆ ಸಾಕಷ್ಟು ಮಹತ್ವವಿದೆಯಂತೆ. ಇನ್ನು ವಿಶೇಷ ಎಂದರೆ ಈ ಚಿತ್ರದಲ್ಲಿ ಶಾರುಖ್ ಖಾನ್ ಕೂಡ ಅಭಿನಯಿಸಲಿದ್ದಾರೆ.

ಶಾರುಖ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಸಾಹಸ ಸನ್ನಿವೇಶದಲ್ಲಿ ಅಬ್ಬರಿಸಲಿದ್ದಾರೆ. ನವೆಂಬರ್‌ನಲ್ಲಿ ಸಾಹಸ ಸನ್ನಿವೇಶದ ಶೂಟಿಂಗ್ ನಡೆಯಲಿದ್ದು, ತಾರಕ್ ಹಾಗೂ ಶಾರುಖ್ ಚಿತ್ರತಂಡ ಸೇರಲಿದ್ದಾರೆ. ಹೃತಿಕ್ ರೋಷನ್ ಅಭಿನಯದ ವಾರ್ ಭರ್ಜರಿ ಯಶಸ್ಸು ಪಡೆದಿತ್ತು, ಆ ಖುಷಿಯಲ್ಲಿಯೇ ವಾರ್ 2 ಮೂಡಿಬರುತ್ತಿದೆ. ಈ ಚಿತ್ರದಲ್ಲಿಯೂ ಹೃತಿಕ್ ರೋಷನ್ ನಾಯಕನಾಗಿ ನಟಿಸುತ್ತಿದ್ದಾರೆ. ಇದು ಆ್ಯಕ್ಷನ್ ಚಿತ್ರವಾಗಿದ್ದು, ಮೊದಲ ಭಾಗದಂತೆಯೇ ಇಲ್ಲಿಯೂ ಭರ್ಜರಿ ಸಾಹಸ ದೃಶ್ಯಗಳಿರಲಿವೆ.

ಕಸ್ಟಡಿಯಲ್ಲಿ ಪ್ರಿಯಾ

ಭೀಮ ಚಿತ್ರದಲ್ಲಿ ಪೊಲೀಸ್ ಆಫೀಸರ್ ಆಗಿ ರಾ ಲುಕ್ ಕಂಗೊಳಿಸಿ, ಖಡಕ್ ಡೈಲಾಗ್ ಹೊಡೆದು ರಂಜಿಸಿ ಮನಗೆದ್ದ ಪ್ರಿಯಾ, ಈಗ ಕಸ್ಟಡಿ ಸೇರಿದ್ದಾರೆ. ಹೌದು, ಜೆ.ಜೆ.ಶ್ರೀನಿವಾಸ್ ನಿರ್ದೇಶನದ ಕಸ್ಟಡಿ ಚಿತ್ರದಲ್ಲಿ ಪ್ರಿಯಾ ಮತ್ತೆ ಪೊಲೀಸ್ ಅಧಿಕಾರಿಯಾಗಿ ನಟಸುತ್ತಿದ್ದಾರೆ. ಈ ಚಿತ್ರದ ಸಾಹಸ ಸನ್ನಿವೇಶದ ಚಿತ್ರೀಕರಣ

ಬೆಂಗಳೂರಿನ ಟೊರಿನೊ ಫ್ಯಾಕ್ಟರಿ ಆವರಣದಲ್ಲಿ ನಡೆಯುತ್ತಿತ್ತು. ಪ್ರಿಯಾ, ಶ್ರೀನಿವಾಸ್ ಮತ್ತು ಸಹಕಲಾವಿದರು ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು. ಪೊಲೀಸ್ ಅಧಿಕಾರಿಗಳು ದುರುಳರನ್ನು ಹೆಡೆಮುರಿ ಕಟ್ಟುವ ದೃಶ್ಯ ಇದಾಗಿತ್ತು.

ಸೈಬರ್ ಕ್ರೈಂ ಕುರಿತ ಕಥೆಯ ಚಿತ್ರ ಇದಾಗಿದ್ದು, ಮರ್ಡರ್ ಮಿಸ್ಟರಿ ಜತೆಗೆ ಸಸ್ಪೆನ್ಸ್, ಥ್ರಿಲ್ಲರ್ ಸ್ಟೋರಿಯೂ ಬೆರೆತಿದೆ. ಜೆ.ಜೆ.ಶ್ರೀನಿವಾಸ್ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಈ ಹಿಂದೆ ಗಜಾನನ ಗ್ಯಾಂಗ್ ಹಲವು ಚಿತ್ರಗಳನ್ನು ನಿರ್ಮಿಸಿರುವ ಯು.ಎಸ್. ನಾಗೇಶ್ ಕುಮಾರ್ ಬೃಂದಾವನ್ ಎಂಟರ್‌ಪ್ರೈಸಸ್ ಲಾಂಛನದಲ್ಲಿ ಕಸ್ಟಡಿ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ನಿರ್ದೇಶಕ ಜೆ.ಜೆ.ಶ್ರೀನಿವಾಸ್, ಈ ಚಿತ್ರದ ಕಥೆ ಹೇಳಿದರು. ಕಥೆ ಇಷ್ಟವಾಯಿತು. ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಭೀಮ ಖ್ಯಾತಿಯ ಪ್ರಿಯಾ ನಟಿಸಿದರೆ ಚೆನ್ನಾಗಿರುತ್ತದೆ ಎಂದರು. ಅಂತೆಯೇ ಪ್ರಿಯಾ ಅವರಿಗೆ ಈ ಕಥೆ ಹೇಳಿದೆ, ಅವರು ಕಥೆ ಕೇಳಿ ನಟಿಸಲು ಸಮ್ಮತಿಸಿದರು. ಸದ್ಯ ಚಿತ್ರೀಕರಣ ಭರದಿಂದ ಸಾಗಿದೆ ಎಂದು ನಿರ್ಮಾಪಕ ನಾಗೇಶ್ ಕುಮಾರ್ ತಿಳಿಸಿದರು.

ನಾಗೇಂದ್ರ ಅರಸ್, ಚಂಗಾರಿ ಮಹಾದೇವ್, ಮ್ಯಾಜಿಕ್ ರಮೇಶ್, ಮಧು, ಪವನ್ ಕುಮಾರ್, ಆರಾಧ್ಯ, ಕುಮಾರ್ ಶ್ರೀನಿವಾಸಮೂರ್ತಿ, ವಿನ್ಯಾ, ಅಶ್ವಿತಾ, ತೇಜಸ್ವಿನಿ ಚಿತ್ರದ ತಾರಾಗಣದಲ್ಲಿದ್ದಾರೆ. ಶಂಕರ್ ಛಾಯಾಗ್ರಹಣ, ನರಸಿಂಹ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

> ಭೀಮ ಚಿತ್ರದ ಗಿರಿಜಾ ಪಾತ್ರದಂತೆ ಈ ಚಿತ್ರದಲ್ಲಿಯೂ ನಾನು ಖಡಕ್ ಪೊಲೀಸ್ ಅಧಿಕಾರಿಯಾಗಿ ನಟಿಸುತ್ತಿದ್ದೇನೆ. ದುರ್ಗಾಪರಮೇಶ್ವರಿ ನನ್ನ ಪಾತ್ರದ ಹೆಸರು. ದುರ್ಗೆಯಂತೆ ದುರುಳರ ವಿರುದ್ಧ ಹೋರಾಡುವ ಪಾತ್ರವಿದು. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಥೆ ಇಲ್ಲಿದ್ದು, ಈ ಚಿತ್ರದಲ್ಲಿ ನಟಿಸುತ್ತಿರುವುದು ಖುಷಿ ಕೊಟ್ಟಿದೆ.
>
> -ಪ್ರಿಯಾ ನಟಿ

> ಮಕ್ಕಳಿಂದ ವೃದ್ಧರವರೆಗೂ ಎಲ್ಲರೂ ಬಳಸುವ ಮೊಬೈಲ್ ಸುತ್ತ ಈ ಚಿತ್ರದ ಕಥೆ ಸಾಗುತ್ತದೆ. ಸೈಬರ್ ಕ್ರೈಂ ಕುರಿತಾದ ಕಥೆಗಳು ಸಾಕಷ್ಟು ಬಂದಿದೆಯಾದರೂ ಈ ಕಥೆ ಸ್ವಲ್ಪ ವಿಭಿನ್ನ. ಈಗ ಚಿತ್ರೀಕರಣ ಮುಕ್ತಾಯ ಹಂತ ತಲುಪಿದೆ. ನಾನು ನಿರ್ದೇಶನದ ಜತೆಗೆ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಅಭಿನಯಿಸುತ್ತಿದ್ದೇನೆ.
>
> -ಜೆ.ಜೆ.ಶ್ರೀನಿವಾಸ್ ನಿರ್ದೇಶಕ

ಮೊದಲ ಹಂತ ಮುಗಿಸಿದ ದೂರತೀರ ಯಾನ

ಕನ್ನಡ ಚಿತ್ರರಂಗದಲ್ಲಿ ವಿಭಿನ್ನ ಕಥೆಯ ಸಿನಿಮಾಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿರುವ ನಿರ್ದೇಶಕ ನಿರ್ದೇಶಕ ಮಂಸೂರೆ ಈಗ ದೂರ ತೀರಯಾನ ಆರಂಭಿಸಿದ್ದಾರೆ. ಈ ಹಿಂದೆಯೇ ಸೆಟ್ಟೇರಿದ ಈ ಚಿತ್ರದ ಮೊಲದ ಹಂತದ ಚಿತ್ರೀಕರಣ ಮುಕ್ತಾಯವಾಗಿದ್ದು, ದ್ವಿತೀಯ ಹಂತದ ಚಿತ್ರೀಕರಣ ಸದ್ಯದಲ್ಲಿಯೇ ಆರಂಭವಾಗಲಿದೆ. ದೂರತೀರ ಯಾನ ಹೊಸ ತಲೆಮಾರಿನ ಸಂಗೀತಮಯ ಪ್ರೇಮಕಥೆಯನ್ನು ಒಳಗೊಂಡಿದ್ದು, ನಿಜ ಜೀವನಕ್ಕೆ ಹತ್ತಿರವಾಗುವ ಕಥೆಯೂ ಈ ಚಿತ್ರದಲ್ಲಿದೆ. ವಿಜಯ್ ಕೃಷ್ಣ ಹಾಗೂ ಪ್ರಿಯಾಂಕಾ ಕುಮಾರ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಜತೆಗೆ ಹಲವು ಹಿರಿಯ ಕಲಾವಿದರು ತಾರಾಗಣದಲ್ಲಿದ್ದಾರೆ. ಡಿ.ಕ್ರಿಯೇಷನ್ ಬ್ಯಾನರ್‌ನಲ್ಲಿ ಆರ್.ದೇವರಾಜ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಶೇಖರ್ ಚಂದ್ರು ಛಾಯಾಗ್ರಹಣ, ಬಕ್ಕೇಶ್ ಮತ್ತು ಕಾರ್ತಿಕ್ ಸಂಗೀತ ನಿರ್ದೇಶನ, ಜಯಂತ್ ಕಾಯ್ಕಿಣಿ, ಕವಿರಾಜ್, ಪ್ರಮೋದ್ ಮರವಂತೆ ಸಾಹಿತ್ಯ ಈ ಚಿತ್ರಕ್ಕಿದೆ. ನಾಗೇಂದ್ರ.ಕೆ. ಉಜ್ಜನಿ ಸಂಕಲನ ಹಾಗೂ ಸರವಣ ಕಲಾ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ.

ವಿಶ್ವವಾಣಿ
23.10.2024 ಬುಧವಾರ
vishwavani.news

ಕಿತ್ತೂರು ಸಂಸ್ಥಾನದ ರಾಣಿ ಚನ್ನಮ್ಮನ 200ನೇ ವಿಜಯೋತ್ಸವ

ಕಿತ್ತೂರು ಉತ್ಸವ ಅಂಗವಾಗಿ ಬೆಂಗಳೂರಿನಲ್ಲಿ ವಿಜಯ ಜ್ಯೋತಿಗೆ ಚಾಲನೆ ನೀಡಿದ ಸಂದರ್ಭದಲ್ಲಿ ಗಣ್ಯರು.

ಸ್ವಾತಂತ್ರ್ಯದ ಕನಸು ಬಿತ್ತಿದ ಚನ್ನಮ್ಮನ 200ನೇ ವಿಜಯೋತ್ಸವ

ಶೇಖರ ಕಲ್ಲೂರ ಚನ್ನಮ್ಮನ ಕಿತ್ತೂರು

ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಸಿಡಿದೆದ್ದು ಹೋರಾಟದ ಮೂಲಕ ಸೋಲಿನ ರುಚಿ ಕಾಣಿಸಿದ್ದು ಮಾತ್ರವಲ್ಲದೆ, ಇಡೀ ಭಾರತೀಯರಲ್ಲಿ ಸ್ವಾತಂತ್ರ್ಯದ ಕನಸು ಬಿತ್ತಿದ ಕಿತ್ತೂರು ಸಂಸ್ಥಾನದ ರಾಣಿ ಚನ್ನಮ್ಮನ ವಿಜಯೋತ್ಸವದ 200ನೇ ವರ್ಷಾಚರಣೆಯ ಅದ್ಭುತ ಘಳಿಗೆ ಬಂದೊದಗಿದೆ. ಈ ಸಂದರ್ಭದಲ್ಲಿ ಎರಡು ಶತಮಾನದ ಹಿಂದಿನ ಗೆಲುವನ್ನು ವಿಶೇಷವಾಗಿ ಆಚರಿಸಲು ಸರಕಾರ ನಿರ್ಧಾರ ಕೈಗೊಂಡಿದೆ.

ಚನ್ನಮ್ಮನ ಕಿತ್ತೂರು ಮತಕ್ಷೇತ್ರ, ಸಧ್ಯ ತಾಲೂಕು ಕೇಂದ್ರವಾಗಿ ಗುರುತಿಸಿಕೊಂಡಿದೆ. ಕಳೆದ ಒಂದುವರೆ ವರ್ಷದ ಅವಧಿಯಲ್ಲಿ ಸ್ಥಳೀಯ ಶಾಸಕ ಬಾಬಾಸಾಹೇಬ್ ಪಾಟೀಲ್ ಅವರ ಪ್ರಯತ್ನದ ಫಲವಾಗಿ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಪಟ್ಟಣದ ಅಭಿವೃದ್ಧಿಗೆ ಕೋಟ್ಯಂತರ ರು. ಅನುದಾನವನ್ನು ಅಭಿವೃದ್ಧಿಗೆ ಮೀಸಲಿಟ್ಟಿದ್ದು ಇದೇ ಮೊದಲು. ಕಳೆದ ಹದಿನೇಳು ತಿಂಗಳಿನಲ್ಲಿ 100 ಕೋಟಿ ಅನುದಾನ ತಂದ ಕೀರ್ತಿ ಸ್ಥಳೀಯ ಶಾಸಕ ಬಾಬಾಸಾಹೇಬ್ ಪಾಟೀಲ್ ಅವರಿಗೆ ಸಲ್ಲುತ್ತದೆ.

ಕಿತ್ತೂರು ಪಟ್ಟಣದಲ್ಲಿ ಬರುವ ರಾಣಿ ಚನ್ನಮ್ಮ ಕೋಟೆ ಸೇರಿದಂತೆ ಐತಿಹಾಸಿಕ ಹಿನ್ನಲೆ ಹೊಂದಿರುವ ಎಲ್ಲಾ ಜಾಗಗಳ ಅಭಿವೃದ್ಧಿಗೆ ಶಾಸಕರು ಟೊಂಕಕಟ್ಟಿ ನಿಂತಿದ್ದಾರೆ. ಕಿತ್ತೂರು ಪರಂಪರೆ ಉಳಿಸುವ ನಿಟ್ಟಿನಲ್ಲಿ ಸುಮಾರು 58 ಕೋಟಿ ರು. ಅನುದಾನ ಹರಿದುಬಂದಿದೆ. ಐತಿಹಾಸಿಕ ಕೋಟೆ ಸೇರಿದಂತೆ ಕಿತ್ತೂರು ಸಂಸ್ಥಾನದ ಹಿರಿಮೆ ಸಾರುವ ಉದ್ದೇಶದಿಂದ ಥೀಮ್ ಪಾರ್ಕ್ ನಿರ್ಮಾಣಕ್ಕೆ ಸರಕಾರ ಅಡಿಗಲ್ಲು ಹಾಕಿದ್ದು ವಿಶೇಷ.

ಕಿತ್ತೂರು ಕೋಟೆ ಸಂರಕ್ಷಣೆಗೆ ಮಹತ್ವದ ಕ್ರಮ: ಐತಿಹಾಸಿಕ ಕಿತ್ತೂರು ಕೋಟೆ ಕೇವಲ ಸಂಸ್ಥಾನದ ಪ್ರತೀಕವಾಗದೆ, ಇಡೀ ದೇಶಕ್ಕೆ ಶೌರ್ಯದ ಸಂಕೇತವಾಗಿದೆ. ಈ ಹಿನ್ನಲೆಯಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಹಾಗೂ ಸ್ಥಳೀಯ ಶಾಸಕ ಬಾಬಾಸಾಹೇಬ್ ಪಾಟೀಲ್ ಅವರ ನಿರಂತರ ಪ್ರಯತ್ನದ ಫಲವಾಗಿ ಐತಿಹಾಸಿಕ ಕಿತ್ತೂರು ಕೋಟೆ ಸಂರಕ್ಷಣೆಗೆ ಮಹತ್ವದ ಘೋಷಣೆ ಮಾಡಲಾಗಿದೆ.

ಕೋಟೆಯ ಮಹಾದ್ವಾರ, ಗೋಡೆಗಳು ಸೇರಿಂತೆ ವಿವಿಧ ಅವಶೇಷಗಳನ್ನು ಸಂರಕ್ಷಿಸಲು ರು. 12.11 ಕೋಟಿ ಹಾಗೂ ಇನ್ನಿತರ ಕಾಮಗಾರಿಗಳಿಗೆ 2.4 ಕೋಟಿ ಅನುದಾನ ಮೀಸಲಿಡಲಾಗಿದೆ. ಇದರಿಂದ ಮುಂದಿನ ಪೀಳಿಗೆಗೆ ಕಿತ್ತೂರು ಸಂಸ್ಥಾನದ ಇತಿಹಾಸ ಹಾಗೂ ಪರಂಪರೆಯ ಸಾರವನ್ನು ತಿಳಿಸುವ ಪ್ರಮುಖ ಉದ್ದೇಶ ಅಡಗಿದೆ. ಪ್ರಸ್ತುತ ಕೋಟೆಯ ಕೆಲ ಭಾಗಗಳು ಶಿಥಿಲಗೊಂಡ ಕಾರಣ ತ್ವರಿತವಾಗಿ ಅವುಗಳನ್ನು ಸಂರಕ್ಷಣೆ ಮಾಡುವುದಕ್ಕೆ ಸರಕಾರ ಮಹತ್ವದ ನಿರ್ಧಾರ ಘೋಷಿಸಿದ್ದು ಈ ಭಾಗದ ಜನರ ದಶಕಗಳ ಕನಸು ನನಸಾಗಿದೆ.

ಕಿತ್ತೂರು ಕೋಟೆ ಪ್ರವಾಸಿ ತಾಣವಾಗಿಸುವ ಮಹತ್ವದ ನಿರ್ಧಾರ: ಸಾಮಾನ್ಯವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಕಿತ್ತೂರು ಕೋಟೆ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಒಂದು. ಆದರೆ ಕಳೆದ ಸರಕಾರಗಳಿಂದ ಈ ಕುರಿತು ಯಾವುದೇ ಘೋಷಣೆಗಳು ಕಾರ್ಯರೂಪಕ್ಕೆ ಬರಲಿಲ್ಲ. ಪ್ರಸ್ತುತ ಸಿದ್ದರಾಮಯ್ಯ ಸರಕಾರ ಕಿತ್ತೂರು ಕೋಟೆಯನ್ನು ಪ್ರವಾಸಿ ತಾಣವಾಗಿಸುವ ನಿಟ್ಟಿನಲ್ಲಿ ಕೋಟ್ಯಂತರ ರು. ಅನುದಾನ ಘೋಷಣೆ ಮಾಡಿದ್ದಲ್ಲದೆ, ಈಗಾಗಲೇ ಕಾಮಗಾರಿಗಳನ್ನು ಪ್ರಾರಂಭಿಸಿದ್ದು ಸ್ಥಳೀಯ ಶಾಸಕರ ಕಾರ್ಯವೈಖರಿಗೆ ಹಿಡಿದ ಕನ್ನಡಿ ಎಂದರೆ ತಪ್ಪಾಗಲಾರದು.

ಸಚಿವ ಕೃಷ್ಣ ಬೈರೇಗೌಡ ಹಾಗೂ ಶಾಸಕ ಬಾಬಾಸಾಹೇಬ್ ಪಾಟೀಲ್ ಶಂಕು ಸ್ಥಾಪನೆ ನೆರವೇರಿಸಿದರು.

ಉತ್ತರ ಕರ್ನಾಟಕದ ಕಿತ್ತೂರು ಭಾಗವನ್ನು ದೊಡ್ಡ ಪ್ರವಾಸಿ ತಾಣವಾಗಿ ಮಾರ್ಪಡು ಮಾಡುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗಿದೆ. 30 ಕೋಟಿ ಅನುದಾನದಲ್ಲಿ ಕಿತ್ತೂರು ಇತಿಹಾಸವನ್ನು ಇಂದಿನ ಪೀಳಿಗೆ ಪರಿಚಯಿಸಲು ಆಧುನಿಕ ಮಾದರಿಯ ಉದ್ಯಾನವನ ನಿರ್ಮಾಣಕ್ಕೆ ಕಂದಾಯ ಸಚಿವ ಕೃಷ್ಣ ಭಭೈರೇಗೌಡ ಶಂಕುಸ್ಥಾಪನೆ ನೆರವೇರಿಸಿದ್ದಾರೆ . 3 ಕೋಟಿ ಅನುದಾನ ವೆಚ್ಚದಲ್ಲಿ ರಾಣಿ ಚನ್ನಮ್ಮನ ಭವನ ನಿರ್ಮಾಣದ ಹಂತದಲ್ಲಿದೆ. ಒಟ್ಟು ಅಂದಾಜು 18 ಕೋಟಿ ರು3 ಅನುದಾನದಲ್ಲಿ ವಿವಿಧ ಕಾಮಗಾರಿಗಳು ಪ್ರಗತಿಯಲ್ಲಿವೆ.

200ನೇ ವಿಜಯೋತ್ಸವಕ್ಕೆ 5 ಕೋಟಿ ರು. ಅನುದಾನ: ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ ಮೊದಲ ಭಾರತೀಯ ಮಹಿಳೆ ಎಂಬ ಖ್ಯಾತಿ ನಮ್ಮ ಕಿತ್ತೂರು ರಾಣಿ ಚನ್ನಮ್ಮನಿಗೆ ಸಲ್ಲುತ್ತದೆ. ಇಂತಹ ಐತಿಹಾಸಿಕ ಘಟನೆ ನಡೆದು 200 ವರ್ಷಗಳು ಪೂರೈಸಿದ ಈ ಸಂದರ್ಭದಲ್ಲಿ ಕಿತ್ತೂರು ಉತ್ಸವವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲು ಸರಕಾರ 5 ಕೋಟಿ ರು. ಅನುದಾನ ಘೋಷಣೆ ಮಾಡಿದ್ದು ಈ ಬಾರಿಯ ಮತ್ತೊಂದು ವಿಶೇಷ.

ಈ ಬಾರಿ ಕಿತ್ತೂರು ಉತ್ಸವ ಐತಿಹಾಸಿಕ ಘಟನೆಗೆ ಸಾಕ್ಷಿ ಆಗುತ್ತಿದೆ. ಇದಕ್ಕೆಂದು ಚೆನ್ನಮ್ಮನ ಕಿತ್ತೂರು ನಗರದ ಗೋಡೆಗಳ ಮೇಲೆ ರಾಣಿ ಚನ್ನಮ್ಮ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿ ಗೆದ್ದ ಮಹತ್ವದ ಸನ್ನಿವೇಶಗಳು ಗೋಡೆಗಳ ಮೇಲೆ ಮೂಡಿಬರುತ್ತಿದೆ. ಐತಿಹಾಸಿಕ ಘಟನೆಗಳನ್ನು ಜನರಿಗೆ ಮನದಟ್ಟು ಮಾಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂಬುದು ಸ್ಥಳೀಯ ಶಾಸಕರ ಅಭಿಪ್ರಾಯ.

ಇನ್ನೂ ಈ ಬಾರಿಯ ಉತ್ಸವಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಜನ ಬರುವ ಹಿನ್ನಲೆಯಲ್ಲಿ ಕಿತ್ತೂರು ಪಟ್ಟಣದ ಸ್ವಚ್ಚತೆ ಹಾಗೂ ವಿಭಿನ್ನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಜಿಲ್ಲಾಡಳಿತ ಹಾಗೂ ಸ್ಥಳೀಯ ಶಾಸಕರು ಸುಮಾರು ಎರಡು ತಿಂಗಳಿನಿಂದ ನಿರಂತರ ಶ್ರಮವಹಿಸುತ್ತಿದ್ದಾರೆ. ಸುಮಾರು 23 ಎಕರೆ ವಿಶಾಲ ಪ್ರದೇಶ ಹೊಂದಿರುವ ಕಿತ್ತೂರು ಕೋಟೆಯ ಆವರಣದ ಸ್ವಚ್ಚತೆ ಹಾಗೂ ಬರುವ ಜನರ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಮಹತ್ವದ ಕಾರ್ಯಗಳು ಸ್ಥಳೀಯ ಶಾಸಕರ ಮುಂದಾಳತ್ವದಲ್ಲಿ ನಡೆಯುತ್ತಿವೆ.

ಕಿತ್ತೂರು ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ: ಶಾಸಕ ಬಾಬಾಸಾಹೇಬ್ ಪಾಟೀಲ್

ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ 200ನೇ ವರ್ಷಾಚರಣೆಯ ಈ ಶುಭ ಸಂದರ್ಭದಲ್ಲಿ ತಾಯಿ ಚನ್ನಮ್ಮನ ಸೇವೆ ಮಾಡುವ ಅವಕಾಶ ಸಿಕ್ಕಿದ್ದು ನನ್ನ ಪೂರ್ವ ಜನ್ಮದ ಪುಣ್ಯ. ಕೇವಲ ಚುನಾವಣೆ ಪೂರ್ವದಲ್ಲಿ ಜನರಿಗೆ ಸುಳ್ಳು ಬರವಸೆ ನೀಡಿ ನಂತರ ಮರೆಯುವ ಕೆಲಸ ನಾನು ಯಾವತ್ತೂ ಮಾಡಲ್ಲ. ಕೊಟ್ಟ ಮಾತಿನಂತೆ ಚನ್ನಮ್ಮನ ಕಿತ್ತೂರು ತಾಲೂಕು ಹಾಗೂ ಕಿತ್ತೂರು ಕೋಟೆಯ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ನಮ್ಮ ಸರಕಾರ ಅಧಿಕಾರಕ್ಕೆ ಬಂದ ಕಡಿಮೆ ಅವಧಿಯಲ್ಲಿ ನೂರಾರು ಕೋಟಿ ಅನುದಾನ ನೀಡಿದೆ. ಅಭಿವೃದ್ಧಿ ವಿಷಯದಲ್ಲಿ ನಾನು ಯಾವತ್ತೂ ರಾಜಿಯಾಗುವುದಿಲ್ಲ. ಮುಂಬರುವ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಮತ್ತಷ್ಟು ಶ್ರಮವಹಿಸುತ್ತೇನೆ ಎಂದು ಶಾಸಕ ಬಾಬಾಸಾಹೇಬ್ ಪಾಟೀಲ್ ತಿಳಿಸಿದರು.

ಮುನ್ನುಡಿ ಕಾರ್ಯಕ್ರಮವನ್ನು ಸಚಿವರಾದ ಸತೀಶ ಜಾರಕಿಹೊಳಿ ಅವರು ಉದ್ಘಾಟಿಸಿದರು.

ಚನ್ನಮ್ಮನ ಇತಿಹಾಸ ನಾಡಿನಾದ್ಯಂತ ಪಸರಿಸಲಿ

ಬೆಳಗಾವಿ: ಕಿತ್ತೂರು ರಾಣಿ ಚನ್ನಮ್ಮನ 200ನೇ ವರ್ಷದ ವಿಜಯೋತ್ಸವ, ಕಿತ್ತೂರಿನ ಇತಿಹಾಸವನ್ನು ಬೆಳಗಾವಿ ಸೇರಿದಂತೆ ನಾಡಿನಾದ್ಯಂತ ಪಸರಿಸುವ ನಿಟ್ಟಿನಲ್ಲಿ ಕಿತ್ತೂರು ಉತ್ಸವದ ಮುನ್ನುಡಿ ಕಾರ್ಯಕ್ರಮವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಅವರು ನುಡಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ (ಅ.21) ಜರುಗಿದ ಕಿತ್ತೂರು ಉತ್ಸವ–2024 ಮುನ್ನುಡಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಿತ್ತೂರು ಉತ್ಸವದ ಪ್ರಯುಕ್ತ ಬೆಳಗಾವಿಯಲ್ಲಿ ಇದೇ ಮೊದಲಬಾರಿಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ.

ಕಿತ್ತೂರಿನ ಹೊರಾಟದಲ್ಲಿ ಭಾಗವಹಿಸಿದ ಮಹನಿಯರ ಇತಿಹಾಸ ಬೆಳಗಾವಿ ಸೇರಿದಂತೆ ನಾಡನೆಲ್ಲಡೆ ಪಸರಿಸುವದು ಈ ಕಾರ್ಯಕ್ರಮದವಮುಖ್ಯ ಉದ್ದೇಶವಾಗಿದೆ.

ಕಿತ್ತೂರಿನ ವೈಭವವನ್ನು ಪ್ರಪಂಚದಾದ್ಯಂತ ಹರಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜನೆ ಮಾಲಡಾಗಿದ್ದು ಈ ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವ ಮೂಲಕ ಕಿತ್ತೂರಿನ ಗತವೈಭವ ನಾಡಿನಾದ್ಯಂತ ಪಸರಿಸಲಿ ಎಂದು ಆಶಯ ವ್ಯಕ್ತ ಪಡಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಮಾತನಾಡಿ ನಮ್ಮ ದೇಶದ ಮಿನುಗು ತಾರೆ, ಮಹಿಳೆಯರ ಶಕ್ತಿಯಾದಂತಹ ಚನ್ನಮ್ಮನ ವಿಜಯೋತ್ಸವ ನಮ್ಮೆಲ್ಲರ ಹೆಮ್ಮೆಯ ಕಾರ್ಯಕ್ರಮ ಇದಾಗಿದೆ.

ಭಾರತ ದೇಶದಲ್ಲಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಕಿಚ್ಚು ಹಚ್ಚಿದ ಮೊದಲ ಮಹಿಳೆ ರಾಣಿ ಚನ್ನಮ್ಮ ಆಗಿದ್ದು. ಉತ್ತರ ಕರ್ನಾಟಕ ಭಾಗದ ಜನರಿಗೆ ಕಿತ್ತೂರು ರಾಣಿ ಚನ್ನಮ್ಮನ ಉತ್ಸವ ಅತ್ಯಂತ ಮಹತ್ವದಾಗಿದ್ದು ರಾಣಿ ಚನ್ನಮ್ಮನ ಉತ್ಸವ ನಮ್ಮೆಲ್ಲರ ಉತ್ಸವವಾಗಿದ್ದು ಕಿತ್ತೂರಿನಲ್ಲಿ ಮೂರು ದಿನಗಳ ಕಾಲ ಜರುಗುವ ರಾಣಿ ಚನ್ನಮ್ಮಳ 200ನೇ ವರ್ಷದ ವಿಜಯೋತ್ಸವದ ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ರಾಣಿಚನ್ನಮ್ಮಹಾಗೂ ಸಂಗೋಳ್ಳಿ ರಾಯಣ್ಣ ಅಭಾನಿಗಳು ಭಾಗ ವಹಿಸಿಕಾರ್ಯಕ್ರಮ ಯಶಸ್ವಿಗೊಳಿಸಲು ತಿಳಿಸಿದರು.

ಶಾಸಕರಾದ ರಾಜು(ಆಸೀಫ್) ಸೇಠ ಅವರು ಮಾತಾನಡಿ ರಾಣಿ ಚನ್ನಮ್ಮನ ವಿಜಯೋತ್ಸವ ದ 200 ವರ್ಷದ ಕಾರ್ಯಕ್ರಮ ಬೆಳಗಾವಿ ನಗರದಲ್ಲಿ ಆಯೋಜಿಸಿರುವದು ಸಂತಸದಾಯಕ ಸಂಗತಿಯಾಗಿದ್ದು. ಈ ಮೂಲಕ ರಾಣಿ ಚನ್ನಮ್ಮನ ಇತಿಹಾಸ ಸಾರುವ ಕಾರ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ಬಾಬಸಾಹೇಬ ಪಾಟೀಲ, ವಿಧಾನ ಪರಿಷತ ಸದಸ್ಯ ಚನ್ನರಾಜ ಹಟ್ಟಿಹೊಳಿ, ಮಹಾಪೌರರಾದ ಸವಿತಾ ಕಾಂಬಳೆ ಉಪ ಮಹಾಪೌರ ಆನಂದ ಚವ್ಹಾಣ,ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾಪೋಲಿಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಜಿ.ಪಂ. ಸಿ.ಇ.ಓ ರಾಹುಲ ಶಿಂಧೆ, ಬೆಳಗಾವಿ ಉಪವಿಭಾಗಾಧಿಕಾರಿ ಶ್ರವಣ ನಾಯಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ವಿದ್ಯಾವತಿ ಭಜಂತ್ರಿ ಉಪಸ್ಥಿತರಿದ್ದರು.

ವಿಶ್ವವಾಣಿ 23.10.2024 ಬುಧವಾರ vishwavani.news III

ವೀರ ರಾಣಿ
ಕಿತ್ತೂರು ಚನ್ನಮ್ಮಾಜಿಯ
ಐತಿಹಾಸಿಕ
200ನೇ ವರ್ಷದ
ಕಿತ್ತೂರು ವಿಜಯೋತ್ಸವಕ್ಕೆ

ಆಗಮಿಸುತ್ತಿರುವ ಮಠಾಧೀಶರು, ಮುಖ್ಯಮಂತ್ರಿಯವರಿಗೆ,
ಸಚಿವರು, ಶಾಸಕರು, ಕಲಾವಿದರು, ಅಧಿಕಾರಿಗಳು ಸೇರಿದಂತೆ ಸಮಸ್ತ ನಾಡಿನ ಜನತೆಗೆ

ಹಾರ್ದಿಕ ಸ್ವಾಗತ

ಸ್ವಾಗತ ಕೋರುವವರು
ಡಾ.ವ್ಹಿ.ಇ. ಗಡಿಗಿ ಎಂ.ಎಸ್ ಜನರಲ್ ಸರ್ಜನ್
ಶ್ರೀ ಶಕುಂತಲಾ ಗ್ರಾಮೀಣ ಆಸ್ಪತ್ರೆ ಚನ್ನಮ್ಮನ ಕಿತ್ತೂರು
ಶ್ರೀಮತಿ ಶಕುಂತಲಾ ಗಡಿಗಿ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ)
ಶ್ರೀಮತಿ ಶಕುಂತಲಾ ಗಡಿಗಿ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್
ತಜ್ಞ ವೈದರು, ಸಿಬ್ಬಂದಿಗಳು, ವೈದ್ಯಕೀಯ ವಿದ್ಯಾರ್ಥಿಗಳು
ಚನ್ನಮ್ಮನ ಕಿತ್ತೂರು ಜಿ.ಬೆಳಗಾವಿ

ಡಾ.ವ್ಹಿ.ಇ. ಗಡಿಗಿ
ಎಂ.ಎಸ್ ಜನರಲ್ ಸರ್ಜನ್

ಚನ್ನಮ್ಮನ 200ನೇ ವಿಜಯೋತ್ಸವ

ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರ ರುದ್ಧ ಹೋರಾಡಿ ಜಯ ಸಾಧಿಸಿದ ೀರರಾಣಿ ಕಿತ್ತೂರ ಚನ್ನಮ್ಮಾಜಿಯ 200 ನೇ ರಾಜ್ಯ ಮಟ್ಟದ ಉತ್ಸವಕ್ಕೆ ಆಗುಸುತ್ತಿರುವ ಸ್ವಾೀಜಿಗಳಿಗೆ, ಮುಖ್ಯಮಂತ್ರಿಗಳಿಗೆ, ಸಚಿವರಿಗೆ, ಶಾಸಕರುಗಳಿಗೆ, ಕಲಾದರಿಗೆ, ಅಂತರ್‌ರ್ರಾೀಯ ಮಟ್ಟದ ಕ್ರೀಡಾಪಟುಗಳಿಗೆ ಹಾಗೂ ನಾಡಿನ ಸಮಸ್ತ ಜನತೆಗೆ ಸ್ವಾಗತ ಕೋರುವವರು, ಚನ್ನಮ್ಮನ ಕಿತ್ತೂರು ತಾಲೂಕಿನ ಅನುದಾನಿತ ಪ್ರೌಢ ಶಾಲೆಗಳ ಶಿಕ್ಷಕರ ಬಳಗ

ಶ್ವಭಾರತಿ ಪ್ರೌಢ ಶಾಲೆ ಶಿಕ್ಷಕರು, ದೇವರ ಶೀಗಿಹಳ್ಳಿ

ಶ್ರೀ ಎಸ್ ಜಿ ಇಟಗಿ.
ಶ್ರೀ ್ಡಎಸ್ ಹುದಲಿಮಠ.
ಶ್ರೀ ಎಸ್ ವಾಯ್ ಬಾಲನ್ನವರ.

ಶ್ರೀ ಕಲ್ಮೇಶ್ವರ ಪ್ರೌಢ ಶಾಲೆ ಶಿಕ್ಷಕರು, ಎಮ್ ಕೆ ಹುಬ್ಬಳ್ಳಿ

ಶ್ರೀ ಸಿ ಕೆ ಗುರವಣ್ಣವರ
ಶ್ರೀ ಸಿ ಕೆ ಇಟ್ನಾಳ
ಶ್ರೀ ಪಿ ಬಿ ಗಣಾಚಾರಿ
ಶ್ರೀ ಆರ್‌ಎಚ್ ಹೈಬತ್ತಿ
ಶ್ರೀ ಎಸ್‌ಎನ್ ಪಾಟೀಲ
ಶ್ರೀ ಎಸ್ ಎ ಮಳಗಲಿ
ಶ್ರೀ ಬಿ ಸಿ ಗದಗ
ಶ್ರೀ ಎಸ್‌ಆಯ್ ಕಳಸನ್ನವರ

ಶ್ರೀ ಆರ್ ಜಿ ರಾಹುತ
ಶ್ರೀ ್ಡಎಲ್‌ರಾಹುತ
ಶ್ರೀ ಎಚ್ ಕೆ ಜಗ್ಗಲ
ಶ್ರೀ ಎಸ್ ಎ ತಳವಾರ
ಶ್ರೀ ಮತಿ ಜಿ ಸಿ ದುರ್ಗಣ್ಣವರ
ಶ್ರೀ ಯು ಸಿ ಮಾಸ್ತಿಹೊಳಿ

ಅಕ್ಷಯ ಟ್ರಸ್ಟ್ ಹೊಸ ಪ್ರೌಢಶಾಲೆ ಶಿಕ್ಷಕರು, ಕಲಭಾಂ

ಶ್ರೀ ಆಯ್ ಬಿ ಚುರಮರಿ
ಶ್ರೀ ಎಸ್ ಪಿ ಕದಮ್
ಶ್ರೀ ಎಸ್‌ಎಸ್ ರೇಮಠ
ಶ್ರೀ ಮತಿ ಎಮ್ ಎಸ್ ದೇಶಪಾಂಡೆ
ಶ್ರೀ ಮತಿ ಪಿ ಎಸ್ ಮಲ್ಲಾಪೂರ
ಶ್ರೀ ಎಮ್ ಬಿ ಹೊಸಮಠ
ಶ್ರೀ ಎಸ್‌ಎಮ್ ಬುಳ್ಳಣ್ಣವರ

ಡಾ. ಜ,ಚ,ನಿ ಪ್ರೌಢ ಶಾಲೆ ಶಿಕ್ಷಕರು ಅಂಬಡಗಟ್ಟಿ

ಶ್ರೀ ಜೆಎನ್ ಕನಿಕೇರ
ಶ್ರೀ ಸಂತೋಷಕುಮಾರ ಕೆ ಎಚ್
ಶ್ರೀ ಮತಿ ಆರ್‌ಎಚ್‌ದೊಡಮನಿ
ಶ್ರೀ ಆಯ್ ಜಿ ಹುಕ್ಕೇರಿ
ಶ್ರೀ ಎಮ್ ಕೆ ರಾಠೋಡ
ಶ್ರೀ ಮತಿ ಜಿ ಆರ್ ದಿಬ್ಬದಮನಿ
ಶ್ರೀ ಬಿ ಪೂಜಾರಿ

ಅಲ್‌ಅುೀನ್‌ಉರ್ದು ಪ್ರೌಢಶಾಲೆ ಶಿಕ್ಷಕರು, ಎಮ್ ಕೆ ಹುಬ್ಬಳ್ಳಿ

ಶ್ರೀ ಎಸ್‌ಎಮ್ ಪಟೇಲ
ಶ್ರೀ ಜೆ ಬಿ ಜಮಾದಾರ

ಶ್ರೀ ಟಿ ಎ ಸವದಿ
ಶ್ರೀ ಟಿ ಎನ್ ಸೌದಾಗರ
ಶ್ರೀ ಎಸ್‌ಎಲ್ ಕವಳಿಕಾ
ಶ್ರೀ ಎನ್‌ಆಯ್ ಸೌದಾಗರ
ಶ್ರೀ ಎಸ್‌ಎಮ್ ಮಾಮುಲದಾರ

ಶ್ರೀ ಎಸ್ ್ಡಗಡಗಿ ಪ್ರೌಢಶಾಲೆ ಶಿಕ್ಷಕರು, ಚನ್ನಮ್ಮನಕಿತ್ತೂರು

ಶ್ರೀ ಎಸ್ ್ಡಭಜಂತ್ರಿ
ಶ್ರೀ ಎನ್ ಜಿ ನಾಯ್ಕ
ಶ್ರೀ ಟಿ ಬಿ ಪಡೆನ್ನವರ
ಶ್ರೀ ಎಸ್ ್ಡಭಜಂತ್ರಿ
ಶ್ರೀ ಯು ಎಮ್ ಪೆಂಟೇದ
ಶ್ರೀ ಮತಿ ಎಸ್ ಕೆ ಗಸ್ತಿ
ಶ್ರೀ ಬಿ ಎಮ್ ಸುಣಗಾರ
ಶ್ರೀ ಎಸ್ ಕೆ ಕರೆಣ್ಣವರ

ಶ್ರೀ ಗುರುಶಿದ್ದೇಶ್ವರ ಪ್ರೌಢಶಾಲೆ ಶಿಕ್ಷಕರು ಚನ್ನಮ್ಮನಕಿತ್ತೂರು

ಶ್ರೀ ಎಸ್ ಕೆ ಅಂಗಡಿ
ಶ್ರೀ ಮತಿ ಎನ್ ಜೆ ವಸ್ತ್ರದ
ಶ್ರೀ ಎಸ್‌ಎಸ್ ಅಕ್ಕಣ್ಣವರ
ಶ್ರೀ ಬಿ ಕೆ ಪಾಟೀಲ
ಶ್ರೀ ಮತಿ ಎಸ್ ಪಿ ರಾಜಣ್ಣವರ
ಶ್ರೀ ಮತಿ ಆರ್ ಸಿ ಕುಂಬಾರ
ಶ್ರೀ ಮತಿ ಎ ಜಿ ಇಂಗಳಗಿ
ಶ್ರೀ ಮತಿ ಪಿ ಪಿ ಕಾರಿಮನಿ

ಎಂ. ಕೆ. ಹುಬ್ಬಳ್ಳಿ ವಲಯ

ಅಮರಾಪುರ ಸರ್ಕಾರಿ ಶಾಲೆಯ ಶಿಕ್ಷಕರು

ಮಹಾಂತೇಶ ಕಲ್ಲೊಳ್ಳಿ
ಶಿಲ್ಪಾ ಕುಬಸದ

ದಾಸ್ತಿಕೊಪ್ಪ ಸರ್ಕಾರಿ ಶಾಲೆಯ ಶಿಕ್ಷಕರು

ಸುಜಾತಾ ವಾಘರವಾಡಿ
ಕಲ್ಲಪ್ಪ ಹೊಳಿ
ರಾಜಶ್ರೀ ಗಲಗಲಿ
ಗಂಗವ್ವ ಜುಟ್ಟನವರ
ಮಲ್ಲಿಕಾರ್ಜುನ ಕಲ್ಮಠ
ರಿಝುವಾನಾ ಕಿತ್ತೂರ
ಯಶಸ್ವಿನಿ ಪಾಟೀಲ
ಸಲ್ಮಾ ಮುಲ್ಲಾ

ದಾಸ್ತಿಕೊಪ್ಪ ಸರ್ಕಾರಿ ಉರ್ದು ಶಾಲೆಯ ಶಿಕ್ಷಕರು

ವಹೀದಾ ಜಮೀನ್ದಾರ
ಜಬೀನಾಬೇಗಂ ಕಿತ್ತೂರ
ಬಿ. ಎನ್. ಪಾಗಾದ

ದೇವರಶೀಗಿಹಳ್ಳಿ ಸರ್ಕಾರಿ ಶಾಲೆಯ ಶಿಕ್ಷಕರು

ವಿನಾಯಕ ಗಣಾಚಾರಿ
ವಿಠಲ ನನ್ನೂರ
ರುದ್ರಗೌಡ ಪಾಟೀಲ
ಸವಿತಾ ವಿರುಪಾಕ್ಷಯ್ಯಾ

ಉಮಾಶ್ರೀ ಕೊರವರ
ವೀರಪ್ಪ ಮಜ್ಜಗಿ
ಹೊಳಬಸಪ್ಪ ಪಾಟೀಲ
ಮೌಲಾಸಾಬ ಮಾಣಿಕಬಾಯಿ
ಮಂಜುನಾಥ ಶೆಟ್ಟೆನ್ನವರ
ಶಾಂತವ್ವ ಭೂತಾಳಿ

ಎಂ. ಕೆ. ಹುಬ್ಬಳ್ಳಿ ಸರ್ಕಾರಿ ಶಾಲೆಯ ಶಿಕ್ಷಕರು

ಕಲ್ಲಪ್ಪ ಗಡಾದ
ರಾಜಶ್ರೀ ಗಡಲಿಂಗನವರ
ಬಸವರಾಜ ಹೊಂಗಲ
ಜಗದೀಶ ಬಾರಕೇರ
ಗಂಗಪ್ಪ ರಾವಳ
ಸಿದ್ದಯ್ಯ ಹಿರೇಮಠ
ನಾಗಪ್ಪ ಗುಂಡಣ್ಣವರ
ಗಿರಿಜಾ ಕಡೋಲಿ
ಲಕ್ಷ್ಮಣ ಜಂಗಳಿ
ರಾಜಣ್ಣಾ ಮೆಳೇದ
ವಿಜಯಲಕ್ಷ್ಮೀ ಹಲವಾಯಿ
ಶಮೀಮಬಾನು ನದಾಫ
ನೀಲವ್ವ ಕಲ್ಯಾಣಿ
ರತ್ನಕ್ಕ ಬೋರಕ್ಕನವರ
ಗಿರಿಜಾ ಮೆಳವಂಕಿ
ಶೋಭಾ ಹರಕುಣಿ

ಸರ್ಕಾರಿ ಉರ್ದು ಬಾಲಕರ ಶಾಲೆ ಶಿಕ್ಷಕರು

ನುಸ್ರತ್ ಬೇಗಂ
ತಸ್ಲೀಂ ಬಾನು
ನೇಮಣ್ಣ ದೊಡಮನಿ
ವಾಹಿದಾ ಜಮಾದಾರ
ಮನೋಹರ ಬಸರಗಿ

ಎಂ. ಕೆ. ಹುಬ್ಬಳ್ಳಿ ಗಾಂಧಿನಗರ ಸರ್ಕಾರಿ ಉರ್ದು ಶಾಲೆಯ ಶಿಕ್ಷಕರು

ಜಾಹಿದಾಬೇಗಂ ಮಕಾನದಾರ
ಮಮ್ಮತಾಜಬೇಗಂ ನದಾಫ್
ಸುರೇಶ ಮಿರಜಕರ

ಎಂ. ಕೆ. ಹುಬ್ಬಳ್ಳಿ ಶುಗರ್ ಫ್ಯಾಕ್ಟರಿ ಸರ್ಕಾರಿ ಶಾಲೆಯ ಶಿಕ್ಷಕರು

ಸುರೇಶ ಗುಂಡೆನ್ನವರ
ಶೋಭಾ ಅಲ್ಲೈನವರ

ವೀರಾಪುರ ಅಗಸಿ ಸರ್ಕಾರಿ ಶಾಲೆ ಶಿಕ್ಷಕರು

ದೇಮಪ್ಪಾ ಪಡದಪ್ಪನವರ
ಗೌರವ್ವ ಕಳಸಣ್ಣವರ
ಛಾಯಾ ಕುಲಕರ್ಣಿ
ವೀರಾಪುರ ಸರ್ಕಾರಿ ಶಾಲೆಯ ಶಿಕ್ಷಕರು
ಕಲ್ಲಪ್ಪ ಇಟ್ನಾಳ
ಮಾರುತಿ ಜೋಳದ
ಶಕುಂತಲಾ ಪಾಟೀಲ
ಸುನಿತಾ ಬೀರನ್ನವರ
ಜಗದೀಶ ಬೋಳಣ್ಣವರ

ಸ್ವಾತಂತ್ರ್ಯದ ಕನಸು ಬಿತ್ತಿದ ಚನ್ನಮ್ಮನ 200ನೇ ವಿಜಯೋತ್ಸವ

ಕಾದರವಳ್ಳಿ ವಲಯ

ಹುಣಶೀಕಟ್ಟಿ ಸರ್ಕಾರಿ ಶಾಲೆಯ ಶಿಕ್ಷಕರು

ರಮೇಶ ಡಿ ಎಲ್
ಬಸವರಾಜ ಕುಂಬಾರ
ಭಾರತಿ ಬಾಯಣ್ಣವರ
ಬಾಬು ಹಿರೇಮಠ
ನಫೀಸಾ ಮದಲಮಟ್ಟಿ
ವಿದ್ಯಾ ಹಟ್ಟಿ
ಗಂಗಾಧರಯ್ಯಾ ಹಿರೇಮಠ
ಶಿವಲೀಲಾ ತಳವಾರ
ಅನಸೂಯಾ ಎಲಿಗಾರ
ಗೌರವ್ವ ಓಲೇಕಾರ
ವಿಜಯ ರೇವಣ್ಣವರ
ಸುರೇಶ ಇಂಚಲ
ಸುರೇಶ ಹಳೆಮನಿ
ಸವಿನಾ ಶೇಟ್
ಸುಶ್ಮಿತಾ ಕೋಲಾರ
ಗೌರವ್ವ ತಾವಲಗಿ
ಬಾಳಪ್ಪ ಎಲಿಗಾರ
ಸರ್ವಮಂಗಳಾ ಆನಿಕಿವಿ

ಹುಣಶೀಕಟ್ಟಿ ಸರ್ಕಾರಿ ಉರ್ದು ಶಾಲೆಯ ಶಿಕ್ಷಕರು

ಬೀಬಿಆಯಿಶಾ ನದಾಫ
ಮಹ್ಮದರಫಿ ನದಾಫ

ಕಾದರವಳ್ಳಿ ಸರ್ಕಾರಿ ಶಾಲೆಯ ಶಿಕ್ಷಕರು

ಸುರೇಶ ರಾವಳ
ಅದೃಶ್ಯಪ್ಪ..ಹಮ್ಮಣ್ಣವರ
ನೀಲವ್ವ ಜಮದೂರ
ಎಫ್. ಎಸ್. ಪಾಟೀಲ
ಗೀತಾ ಚವ್ಹಾಳಿ
ಕುಸುಮ ಸಿ. ಪಿ.
ಮಹೇಶ್ವರ ಹಿರೇಮಠ
ರಾಜೇಶ್ವರಿ ಶೇಬಣ್ಣವರ
ಸರ್ವಮಂಗಳಾ ಹಿರೇಮಠ

ಮಾರ್ಗನಕೊಪ್ಪ ಸರ್ಕಾರಿ ಶಾಲೆಯ ಶಿಕ್ಷಕರು

ಈರಪ್ಪ ಪಟ್ಟೇದ
ಅಣ್ಣಪ್ಪ ಕಮ್ಮಾರ

ಪಂಚಾಕ್ಷರಿ ಎಂ. ಕೆ.
ಮಹಾಂತೇಶ ದೊಡ್ಡವೀರಪ್ಪನವರ
ಶಿವದೀಪ ಎಲ್
ಬಸವರಾಜ ಸೊಟ್ಟನವರ
ಬಾಳಪ್ಪ ಕೊಡಚವಾಡ

ಕ್ಯಾರಕೊಪ್ಪ -ಮಾರ್ಗನಕೊಪ್ಪ ಸರ್ಕಾರಿ ಶಾಲೆಯ ಶಿಕ್ಷಕರು

ವಿರುಪಾಕ್ಷಿ ಸುಬೇದಾರ
ಸುರೇಶ ಗಾಡದ

ತುರಮರಿ ಸರ್ಕಾರಿ ಶಾಲೆಯ ಶಿಕ್ಷಕರು

ಸುಮಿತ್ರಾ ಹೊಂಗಲದಾರ
ಉಳುವಪ್ಪ ಕಾಮಕರ
ಬಸಪ್ಪ ನಾಡಗೌಡ
ವಿಜಯಲಕ್ಷ್ಮಿ
ಉಮಾಶ್ರೀ ಹಿರೇಮಠ
ಸಂಗೀತ ಮಠದ
ಬಸಪ್ಪ ಪಡದಪ್ಪನವರ
ಮಹಾಂತೇಶ ಪಾಟೀಲ
ವಿವೇಕಾನಂದ. ಹೊಳಿ
ಬಸವರಾಜ ದಬಾಡಿ
ಬಸವರಾಜ ಹೊಸಮಠ
ಫಕ್ಕೀರಪ್ಪ ಬನ್ನೂರ
ವೀರಭದ್ರಪ್ಪ ಮರಡಿ

ಹೊಸಕಾದರವಳ್ಳಿ ಸರ್ಕಾರಿ ಶಾಲೆಯ ಶಿಕ್ಷಕರು

ರುದ್ರಪ್ಪ ಹೊಳಿ
ಚೈತ್ರಾ ಗಾಣಗಿ
ಸುಮಾ ಮರಡಿ
ರೇಣುಕಾ ಪಡದಪ್ಪನವರ
ಅಜಿತ ಹಂಜಿ
ಮಹಾಂತೇಶ ಪಾಶ್ಚಾಪೂರ
ಶಿವನಪ್ಪ ಕೋಟಿ
ವಿಜಯಲಕ್ಷ್ಮಿ ದೇಸಾಯಿ

ಹೊಸಕಾದರವಳ್ಳಿ ಸರ್ಕಾರಿ ಉರ್ದು ಶಾಲೆಯ ಶಿಕ್ಷಕರು

ತಹಸೀನ ಬಡೇಸಿಪಾಯಿ
ಅಕಿಲಅಹ್ಮದ ಕೊತವಾಲ
ಗೀತಾ ಕಮತಗಿ

ಚನ್ನಮ್ಮನ ಕಿತ್ತೂರಿನ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ ವ್ಯಾಪ್ತಿಯ ಶಿಕ್ಷಕರ ಬಳಗದವರು

ಇತಿಹಾಸ ಪುಟಗಳಲ್ಲಿ ಸ್ಥಿರಸ್ಥಾಯಿ ಆಗಿರುವ ವೀರವನಿತೆ ಕಿತ್ತೂರು ರಾಣಿ ಚನ್ನಮ್ಮನ ವಿಜಯೋತ್ಸವ ಪ್ರಯುಕ್ತ ಚನ್ನಮ್ಮನ ಕಿತ್ತೂರು ಕೋಟೆ ಆವರಣದಲ್ಲಿ ಅ. 23ರಿಂದ 25 ರವರೆಗೆ ಕೋಟೆ ಆವರಣದಲ್ಲಿ ನಡೆಯುತ್ತಿರುವ ಚನ್ನಮ್ಮನ ಕಿತ್ತೂರು ಉತ್ಸವ-2024ಕ್ಕೆ ಎಲ್ಲರಿಗೂ ಗೌರವಪೂರ್ವಕ ಸ್ವಾಗತ ಕೋರುವವರು,

ಚನಬಸಪ್ಪ ತುಬಾಕಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಚನ್ನಮ್ಮನ ಕಿತ್ತೂರು

ಗಾಯತ್ರಿ ಅಜ್ಜನ್ನವರ, ಕ್ಷೇತ್ರ ಸಮನ್ವಯ ಅಧಿಕಾರಿಗಳು

ಶಿಕ್ಷಣ ಸಂಯೋಜಕರು ಶಂಕ್ರಯ್ಯ ಶಹಾಪುರಮಠ, ಮಹೇಶ ಹೆಗಡೆ

ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು: ಎಂ. ವೈ. ಕಡಕೋಳ, ಸುನೀತಾ ಪರಪ್ಪನವರ, ಸ್ನೇಹಲ್ ಪೂಜಾರ, ಲಕ್ಕಪ್ಪ ಕುರಬೆಟ್, ಜ್ಯೋತಿ ಕೋಟಗಿ,

ಸಮೂಹ ಸಂಪನ್ಮೂಲ ವ್ಯಕ್ತಿಗಳು ವಿನಾಯಕ ಲಕ್ಕನಗೌಡ್ರ ಹೊಸ ಕಾದರವಳ್ಳಿ, ನಾಗೇಶ ರಾವಳ ಅಂಬಡಗಟ್ಟಿ, ವಿನೋದ ಪಾಟೀಲ ಎಂ. ಕೆ. ಹುಬ್ಬಳ್ಳಿ, ವೀರಣ್ಣ ದಾನಣ್ಣವರ ಕಲಭಾಂವಿ, ಡಿ. ಎಚ್. ಪಾಟೀಲ, ಸಂಜೀವ ಹುಬ್ಬಳ್ಳಿ ಬೈಲೂರು ಮತ್ತು ಕತ್ರಿದಡ್ಡಿ, ವಸೀಮಾ ದಡವಾಡ ಹಾಗೂ ವಿವಿಧ ಶೈಕ್ಷಣಿಕ ವಲಯಗಳ ಶಿಕ್ಷಕರು.

ಅಂಬಡಗಟ್ಟಿ ವಲಯ

ಅಂಬಡಗಟ್ಟಿ ಸರ್ಕಾರಿ ಶಾಲೆ ಶಿಕ್ಷಕರು

ಮಂಜುನಾಥ ಪಾಗಾದ
ಗಂಗಾಧರ ಹನುಮಸಾಗರ
ಪೌಲ್ ಹಂಚಿನಮನಿ
ಮಹಾಂತೇಶ ಪಾಟೀಲ
ಶಕುಂತಲಾ ಬಿ. ಎಂ.
ಪ್ರೀತಿ ಕರಡೆ
ಶಿವಪ್ಪ ಹೊಳಿ
ಸಿದ್ದಪ್ಪ ತಲ್ಲೂರ
ಸುಭಾಸ ಶಿವನಗುಡಿ
ಪರಪ್ಪ ಜಮದರಖಾನಿ
ನಿರ್ಮಲಾ ಮೆಣಸಿನಕಾಯಿ
ಚನಬಸಪ್ಪ ಗಂಗನಾಯ್ಕ
ಅಂಜುಮಬಾನು ನಾಯಿಕ
ಮಂಜುನಾಥ ಹಳೇಮನಿ
ಶಾಂತಾ ಪಾಟೀಲ
ಸುನಂದಾ ಹರ್ದಿ

ಬಚ್ಚನಕೇರಿ ಸರ್ಕಾರಿ ಶಾಲೆ ಶಿಕ್ಷಕರು

ಕೆ. ಆರ್. ವಿದ್ಯಾ
ಶಾಂತವ್ವ ಸಾವಕ್ಕನವರ
ವೀಣಾ ಹಿರೇಮಠ

ಮಹಾಬಳೇಶ್ವರ ಗುಂಡಗಾವಿ
ಅಕ್ಷತಾ ಹಿರೇಮಠ

ದೇಮಟ್ಟಿ ಸರ್ಕಾರಿ ಶಾಲೆಯ ಶಿಕ್ಷಕರು

ರಕ್ಷಾ ಮಡಿವಾಳ
ಶಿವರಾಯಪ್ಪ ಹರಕಮನಿ
ಸುವರ್ಣಾ ಹಳೇಮನಿ
ಶಶಿಕಲಾ ಬಾವಾನವರ

ದೇಮಟ್ಟಿ ಸರ್ಕಾರಿ ಉರ್ದು ಶಾಲೆ ಶಿಕ್ಷಕರು

ಶಬ್ಬೀರ ಕಲಬುರ್ಗಿ
ಗಣಪತಿ ಭಂಡಾರಿ

ಹುಲಿಕಟ್ಟಿ ಸರ್ಕಾರಿ ಶಾಲೆ ಶಿಕ್ಷಕರು

ಸಿದ್ದಪ್ಪ ಹುಲ್ಲೂರ
ಶ್ರೀ ಕಾಂತ ದಡ್ಡಿ
ರವೀಂದ್ರ ಶೇಬಣ್ಣವರ
ಶೃತಿಕಾ ಪಾಟೀಲ
ಪ್ರಶಾಂತ ದಳವಾಯಿ
ಪಂಡಿತ ಪಡೆಣ್ಣವರ
ಚಂದ್ರಶೇಖರ ಕುಂಡಾಲ
ಈಶ್ವರ ಉಪರಿ

ಹೊನ್ನಿದಿಬ್ಬ ಸರ್ಕಾರಿ ಶಾಲೆ ಶಿಕ್ಷಕರು

ಮಹಾಂತೇಶ ಪೂಜಾರ
ಭರತೇಶ ಮಾರ್ಗನಕೊಪ್ಪ
ಪ್ರಭಾವತಿ ಲದ್ದಿಮಠ

ಮಡಿವಾಳಯ್ಯ ಗುರುವಯ್ಯನವರ

ತಿಮ್ಮಾಪುರ ಸರ್ಕಾರಿ ಶಾಲೆ ಶಿಕ್ಷಕರು

ಭೀಮರತಿ ಬುಗಡಿಕಟ್ಟಿ
ಬಸವರಾಜ ತುಕ್ಕಣ್ಣವರ

ತಿಮ್ಮಾಪುರ ಆಂಜನೇಯನಗರ ಸರ್ಕಾರಿ ಶಾಲೆಯ ಶಿಕ್ಷಕರು

ನಿಂಗಪ್ಪ ದಾಸ್ತಿಕೊಪ್ಪ
ವಿಜಯಾತಾಯಿ ಪಾಟೀಲ
ಕುಬೇರಪ್ಪ ಜಾಯಕ್ಕನವರ

ತೇಗೂರ ಸರ್ಕಾರಿ ಶಾಲೆ ಶಿಕ್ಷಕರು

ಬಸವರಾಜ ಅಂಗಡಿ
ಜ್ಯೋತಿ ಪಾಟೀಲ
ಚನಬಸಪ್ಪ ಮುರಗೋಡ

ಉಗರಖೋಡ ಸರ್ಕಾರಿ ಶಾಲೆ ಶಿಕ್ಷಕರು

ಭೂಕಾಂತ ಎಸ್. ಎನ್.
ಸೋಮಯ್ಯ ಸುತಗಟ್ಟಿ
ಕವಿತಾ ಹರಕಮನಿ
ನಿಂಗಪ್ಪ ಕೊಳ್ಳಿ
ನಿಂಗಪ್ಪ ಕಾದ್ರೊಳ್ಳಿ
ಅಶೋಕ ಜಡಿ
ದೇಮಪ್ಪ ಬಡಿಗೇರ
ಗದಗಯ್ಯಾ ಕೆರಿಮಠ
ದುರದುಂಡೇಶ್ವರ ಹೊಳಿ
ಅಪ್ಪಣ್ಣ ಮರಿಕಟ್ಟಿ

ಕಲಭಾಂವಿ ವಲಯ

ಚಿಕ್ಕನಂದಿಹಳ್ಳಿ ಸರ್ಕಾರಿ ಶಾಲೆಯ ಶಿಕ್ಷಕರು

ರಾಘವೇಂದ್ರ ಕಾವಲದಾರ
ರಾಜೇಶ್ವರಿ ನಂದಗಡ
ದುಂಡಪ್ಪ ಘಟ್ಟದ

ಹಿರೇನಂದಿಹಳ್ಳಿ ಸರ್ಕಾರಿ ಶಾಲೆಯ ಶಿಕ್ಷಕರು

ಮಹಾಂತೇಶ ಬೋಗೂರ
ಶಂಕರ ತೋಪಖಾನೆ
ಶಿವಾನಂದ ಗಾಣಗಿ
ಸೋಮಪ್ಪ ದೊಡಮನಿ
ನಾಗಯ್ಯ ಹುಲೇಪ್ಪನವರಮಠ
ಗಿರಿಮಲ್ಲ ಕರಿಸಿದ್ದನವರ
ರುದ್ರಗೌಡ ಪಾಟೀಲ
ಜಗದೀಶ ಆಲದಕಟ್ಟಿ

ಹಿರೇ ಬೆಳ್ಳಿಕಟ್ಟಿ ಸರ್ಕಾರಿ ಶಾಲೆಯ ಶಿಕ್ಷಕರು

ಮಹಾಂತೇಶ ಗೌಡ್ರ
ಮಲ್ಲೇಶಪ್ಪ ಭಜಂತ್ರಿ
ಚೇತನಾ ಚಲವಾದಿ
ನಾಗಪ್ಪ ಕಟ್ಟಿಮನಿ
ಗಂಗಪ್ಪ ಚನ್ನಣ್ಣವರ
ಯಶೋಧಾ ನೇಸರಗಿ

ಜಮಳೂರ ಸರ್ಕಾರಿ ಶಾಲೆ ಶಿಕ್ಷಕರು

ಮಾಧುರಿ ಸೊಂಟಕ್ಕಿ
ಸುಶೀಲಾ ಮಠದ
ವೀರಭದ್ರಪ್ಪ ಹಾರೋಗೊಪ್ಪ
ರುದ್ರಪ್ಪ ಕಾಜಗಾರ
ಪುಷ್ಪಾ ಖನ್ನಿನಾಯ್ಕರ

ಕಲಭಾಂವಿ ಸರ್ಕಾರಿ ಶಾಲೆ ಶಿಕ್ಷಕರು

ಮಾರುತಿ ಕೆ
ಅನುಸೂಯಾ ತೋಟಗಿ
ಮಂಜುನಾಥ ಹಾರೋಗೊಪ್ಪ
ಶಂಕರೆಪ್ಪ ಕೋರಿ
ಹೂವಪ್ಪ ಬೋಗೂರ
ಶಿವರಾಜ ಶೇರಖಾನೆ
ವಿಜಯ ಬೆಣಚಮರ್ಡಿ
ಶಿವಲಿಂಗಯ್ಯ ಹಿರೇಮಠ
ಯಲ್ಲಪ್ಪ ಕುರಿ
ವೀರಭದ್ರಪ್ಪ ನೇಸರಗಿ
ಮಂಜುಳಾ ಮಂಡಲಗೇರಿ
ಸರಪಪ್ಪ ಹರಿಜನ
ದ್ರಾಕ್ಷಾಯಣಿ ಕರಯ್ಯನವರ

ಕೊಟಬಾಗಿ ಸರ್ಕಾರಿ ಶಾಲೆಯ ಶಿಕ್ಷಕರು

ಶಿವರಾಜ ಕೋಳಿ
ಅಶ್ವಿನಿ ಕುಂಬಾರ
ಬಸಪ್ರಭು ಪಾಟೀಲ

ಪುಷ್ಪಾ ಯಲಿವಾಳ
ಸವಿತಾ ಹಂದೂರ
ಅದೃಶಪ್ಪ ಹೊಳಿ
ಬಾಬು ಪಾಟೀಲ
ಬಾಲಚಂದ್ರ ಮಳಗಲಿ

ಹೊಸಕಟ್ಟಿ ಸರ್ಕಾರಿ ಶಾಲೆ ಶಿಕ್ಷಕರು

ಸಿದ್ದೇಶ್ವರ ಅರಳಿ
ವಿರುಪಾಕ್ಷಿ ಬರಗಾಲಿ

ಖೋದಾನಪುರ ಸರ್ಕಾರಿ ಶಾಲೆ ಶಿಕ್ಷಕರು

ಗಂಗಾಧರ ಕಲ್ಯಾಣಿ
ಅಫ್ನಾಬಾನು ಮುಜಾವರ
ನಿಂಗಪ್ಪ ಮರಿತಮ್ಮನವರ
ಸರೋಜಿನಿ ಹಾರುಗೊಪ್ಪ
ಸುಧೀಂದ್ರ ಹಂಬರ
ಕೆಂಚಪ್ಪ ಜುಲ್ಪಿ
ನಬಿಸಾಬ ಖುದ್ದುನವರ
ಅಶೋಕ ಚಚಡಿ
ನಾಗಪ್ಪ ಹುರಳಿ

ಕುಲಮನಟ್ಟಿ ಸರ್ಕಾರಿ ಶಾಲೆ ಶಿಕ್ಷಕರು

ವಿರುಪಾಕ್ಷಿ ಶೀಪರಮಟ್ಟಿ
ಮಹಾದೇವ ಕಮ್ಮಾರ
ಈರನಗೌಡ ಪಾಟೀಲ
ಗಂಗವ್ವ ಪಾಗಾದ

ಕಡಸಗಟ್ಟಿ ಸರ್ಕಾರಿ ಶಾಲೆ ಶಿಕ್ಷಕರು

ಮಡಿವಾಳಯ್ಯ ಹಿರೇಮಠ
ಫಕ್ಕೀರಪ್ಪ ಕುರಿ

ಮೇಟ್ಯಾಲ ಸರ್ಕಾರಿ ಶಾಲೆ ಶಿಕ್ಷಕರು

ಮಂಜುನಾಥ ಬೇಕವಾಡ ಎಸ್
ಶಿವಪ್ಪ ಸುಬೇದಾರ
ಅಕ್ಕಮ್ಮ ಮುಳಗುಂದ
ಜಯಶ್ರೀ ಜಡಿ
ಶೀಲಾ ಸೊಂಟಕ್ಕಿ

ಮರಿಗೇರಿ ಸರ್ಕಾರಿ ಶಾಲೆ ಶಿಕ್ಷಕರು

ರವೀಂದ್ರ ಬನ್ನೂರ
ರಾಜಶ್ರೀ ಹಂಚಿನಮನಿ
ಮೈಲಾರಪ್ಪ ಕಲ್ಲೇದ

ತುರಕರ ಶೀಗಿಹಳ್ಳಿ ಸರ್ಕಾರಿ ಶಾಲೆ ಶಿಕ್ಷಕರು

ನೂರಜಹಾನ್ ಅತ್ತಾರ
ನಾಗರತ್ನ ಅಂಗಡಿ
ರುದ್ರಪ್ಪ ಬನಪ್ಪಗೌಡ್ರ
ಉಮಾ ಚವ್ಹಾಣ
ಸುಜಾತಾ ಸಾವಳಗಿ
ವೀರಪ್ಪ ದಾನಣ್ಣವರ
ಶಿವಲಿಂಗಪ್ಪ ಬೆಳವಡಿ
ಶಿವಾನಂದ ಶಿಂತ್ರಿ
ಎಂ. ಜಿ. ತುರಾಯಿ
ನರಗಿಸಬಾನು ಬಾಗವಾಲೆಗ

ಚನ್ನಮ್ಮನ ಕಿತ್ತೂರು ವಲಯ

ಅವರಾದಿ ಸರ್ಕಾರಿ ಶಾಲೆಯ ಶಿಕ್ಷಕರು

ಸೂರನಾಯ್ಕ ದಿನ್ನಿಮನಿ
ಸದಾನಂದ ಚಂಗೋಲಿ
ಸೋನಿ ಹಟ್ಟಿಹೊಳಿ ಜಿ
ಮಾತಾ ಕತ್ತಿ
ಮೌನೇಶ್ವರಿ ಪತ್ತಾರ
ಚಿದಂಬರ ಕುಲಕರ್ಣಿ
ಉಮೇಶ ಕೋಲಕಾರ
ಇಂದಿರಾ ಕಿತ್ತೂರ
ಶಿವಾನಂದ ಪೂಜೇರ
ಕವಿತಾ ಬಡಿಗೇರ

ಬಸಾಪುರ ಸರ್ಕಾರಿ ಶಾಲೆಯ ಶಿಕ್ಷಕರು

ಶೌಕತ್‌ಅಲಿ ನದಾಫ
ಶಿವಲೀಲಾ ಹಳೇಮನಿ
ಕಸ್ತೂರಿ ಡಮ್ಮಣಗಿ
ರುದ್ರಮ್ಮಾ ಶಿವಲಿಂಗನವರ
ಕಮಲವ್ವ ಗಾಣಗಿ
ಚಂದ್ರಕಲಾ ಪತಂಗಿ
ಮಂಗಲ ಚಿಕ್ಕಮಠ

ಡೊಂಬರಕೊಪ್ಪ ಸರ್ಕಾರಿ ಶಾಲೆಯ ಶಿಕ್ಷಕರು

ಈಶ್ವರ ಸೊಂಟಕ್ಕಿ
ಶಾಂತವ್ವ ಧಾರವಾಡ
ತ್ರಿವೇಣಿ ದೇಸಾಯಿ
ನಾಗರಾಜ ಕಿತ್ತೂರ
ಮಹಮ್ಮದಹನೀಫ್ ಮಕಾನದಾರ

ಕಿತ್ತೂರು ಶಾಸಕರ ಮಾದರಿ ಶಾಲೆಯ ಶಿಕ್ಷಕರು

ರಾಘವೇಂದ್ರ ಮುಂಡೆವಾಡಿ
ಜಯಶ್ರೀ ಮಡಿವಾಳರ
ಪ್ರಭಾವತಿ ಚೌಗಲೆ
ಮಹಾದೇವಿ ಸಂಪಗಾವಿ
ಭೀಮಪ್ಪ ಗೋಡಕುಂದರಗಿ
ಸದಾನಂದ ಲಿಂಗದಳ್ಳಿ
ಅನಂದ ಶಿವನಗೋಳ
ಲಲಿತಾ ಹಿರೇಮಠ
ಶಾಂತವ್ವ ಶೆಲ್ಲಿಕೇರಿ
ಮಹಾಂತೇಶ ಉಡಕೇರಿ

ಚನ್ನಮ್ಮನ ಕಿತ್ತೂರು ಸೋಮವಾರ ಪೇಟೆ ಸರ್ಕಾರಿ ಉರ್ದು ಮಾದರಿ ಶಾಲೆಯ ಶಿಕ್ಷಕರು

ಅಕ್ಕಮಹಾದೇವಿ ತೋಟಗಿ
ಶಿರೀನಬಾನು ಸೌದಾಗರ
ದೀಪಿಕಾ ಸುಳೇಭಾವಿ
ರಮೇಶ ಬೆಣಚಮರ್ಡಿ
ಮಹಾದೇವಿ ನಾಗಲಾಪೂರ
ಧರೆಪ್ಪ ಬಸರಕೋಡ

ಶಾಹೀನಬಾನು ಮೊಕಾಶಿ
ಸಯೀದಾಬಾನು ಮಹಾಲದಾರ
ತಹಸೀನಬಾನು ಗೋಲಂದಾಜ
ಶಿವನಗೌಡ ಪಾಟೀಲ

ಚನ್ನಮ್ಮನ ಕಿತ್ತೂರು ಗುರುವಾರ ಪೇಟೆ ಸರ್ಕಾರಿ ಉರ್ದು ಶಾಲೆಯ ಶಿಕ್ಷಕರು

ಹಫ್ರೋಜ್ ಹಳಿಯಾಳ
ಆಝುಂಬಿ ಮೋಮಿನ
ನಜರೀನಬಾನು ಹಂದೂರ
ಪಾರ್ವತಿಬಾಯಿ ತೇಗೂರ

ಚನ್ನಮ್ಮನ ಕಿತ್ತೂರು ಗುರುವಾರ ಪೇಟೆ ಸರ್ಕಾರಿ ಮಾದರಿ ಶಾಲೆಯ ಶಿಕ್ಷಕರು

ರುದ್ರವ್ವ ಹಂಚಿನಮನಿ
ಸದೆಪ್ಪ ಕಾಶಪ್ಪನವರ
ಅಶೋಕ ಗಿರೆಪ್ಪಗೌಡರ
ಆದಮ್ಮಲಿ ಕಾಲಿಬಾಯಿ
ಮಹಾದೇವಿ ಪಾಟೀಲ
ರುಕ್ಮಣಿ ಕೆ
ಅರ್ಜುನ ಕಾಗೆಪ್ಪಗೋಳ
ಅಶೋಕ ಕುರಬೆಟ್ಟ
ಸುರೇಶ ಶಿವಪ್ಪನವರ
ಶ್ರೀದೇವಿ ಕಾರಜೋಳ

ಮಲ್ಲಾಪುರ ಕೆಎ ಸರ್ಕಾರಿ ಶಾಲೆಯ ಶಿಕ್ಷಕರು

ಗಂಗಾಧರ ಅಂಗಡಿ
ಪ್ರಕಾಶ ನಾಡಗೌಡ
ಪಲ್ಲವಿ ಅರುಟಗಿ
ಮಹಾಂತೇಶ ಕಾಮಣ್ಣವರ
ನಂದಾ ಕಾಜಗಾರ
ಜಯಶ್ರೀ ಜ್ಯೋತಿ
ಹನುಮಂತ ಕಮ್ಮಾರ
ಜಯಶ್ರೀ ಹಿರೇಮಠ
ಸುನಂದಾ ಪಾಟೀಲ

ನಿಚ್ಚಣಕಿ ಸರ್ಕಾರಿ ಶಾಲೆಯ ಶಿಕ್ಷಕರು

ಮಹಾದೇವಿ ಹಿರೇಮಠ
ಶಂಕರ ಹಂಬರ
ಗೀತಾ ಜೋಶಿ
ರಾಘವೇಂದ್ರ ಪತಂಗೆ
ಉಮೇಶ ಹಿರೇಮಠ
ನಿಚ್ಚಣಕಿ ಸರ್ಕಾರಿ ಉರ್ದು ಶಾಲೆಯ ಶಿಕ್ಷಕರು
ಆಸ್ಮಾ ಸೌದಾಗರ
ಗುರುರಾಜ ಶೆಟ್ಟರ

ಶಿವನೂರು ಸರ್ಕಾರಿ ಶಾಲೆಯ ಶಿಕ್ಷಕರು

ಈರಪ್ಪ ಚನ್ನಣ್ಣವರ
ವಿದ್ಯಾವತಿ ಚಂಗೋಲಿ
ಲಕ್ಷ್ಮೀಬಾಯಿ ಪೂಜಾರ
ದುಂಡವ್ವ ಇಟಗಿ

ಸಮಾಚಾರ ಸಣ್ಣದಲ್ಲ

ಎಚ್‌ಡಿಕೆ ಜಾಮೀನು ರದ್ದತಿಗೆ ಎಸ್‌ಐಟಿ ಅರ್ಜಿ

ಬೆಂಗಳೂರು: ಸಾಯಿ ವೆಂಕಟೇಶ್ವರ ಮಿನರಲ್‌ಗೆ ಸಂಬಂಧಿಸಿದ ಪ್ರಕರಣದ ತನಿಖೆಯಲ್ಲಿ ಮಧ್ಯಪ್ರವೇಶ ಮತ್ತು ಸಾಕ್ಷಿಗಳಿಗೆ ಬೆದರಿಕೆ ಹಾಕಿದ ಹಿನ್ನೆಲೆಯಲ್ಲಿ ಕೇಂದ್ರ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ನೀಡಿರುವ ಜಾಮೀನು ರದ್ದುಗೊಳಿಸುವಂತೆ ಕೋರಿ ಅಕ್ರಮ ಗಣಿಗಾರಿಕೆ ಪ್ರಕರಣಗಳ ತನಿಖೆ ನಡೆಸುತ್ತಿರುವ ಕರ್ನಾಟಕ ಲೋಕಾಯುಕ್ತದ ಎಸ್‌ಐಟಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆ. 3.8.2015ರಂದು ಕುಮಾರಸ್ವಾಮಿ ಅವರಿಗೆ ನೀಡಲಾದ ನಿರೀಕ್ಷಣಾ ಜಾಮೀನು ರದ್ದತಿಗೆ ಕೋರಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಎಸ್‌ಐಟಿ ಅಧಿಕಾರಿಗಳು ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಆರೋಪಿಗಳ ಪರ ವಕೀಲರಿಗೆ ಸೂಚಿಸಿದ ನ್ಯಾಯಾಲಯ ವಿಚಾರಣೆ ಅ.25ಕ್ಕೆ ಮುಂದೂಡಿತು. ಪ್ರಕರಣದ ಎರಡನೇ ಆರೋಪಿಯಾಗಿರುವ ಕುಮಾರಸ್ವಾಮಿ, ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಅಕ್ರಮವಾಗಿ ಪಡೆದಿದ್ದಾರೆ ಎಂದು ಅರ್ಜಿಯಲ್ಲಿ ಎಸ್‌ಐಟಿ ಉಲ್ಲೇಖಿಸಿದೆ. ಅಲ್ಲದೆ, ತನಿಖೆ ಕುಂಠಿತಗೊಳಿಸುವ ಉದ್ದೇಶದಿಂದ ಆರೋಪಿ ರಾಜ್ಯಪಾಲರು ಮತ್ತು ಎಸ್‌ಐಟಿ ನಡುವಣ ಸಂವಹನವನ್ನು ಅಕ್ರಮವಾಗಿ ಪಡೆದುಕೊಂಡಿದ್ದಾರೆ. ಇದು ತನಿಖಾ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುತ್ತದೆ ಮತ್ತು ಪ್ರಾಸಿಕ್ಯೂಷನ್ ಸಾಕ್ಷಿ ಮತ್ತು ತನಿಖಾ ಅಧಿಕಾರಿಗಳಿಗೆ ಬೆದರಿಕೆ ಹಾಕುತ್ತದೆ ಎಂದು ಎಸ್‌ಐಟಿ ಉಲ್ಲೇಖಿಸಿರುವುದಾಗಿ ತಿಳಿದುಬಂದಿದೆ.

ದರ್ಶನ್ ಜಾಮೀನು: ಆರೋಗ್ಯದ ಮಾಹಿತಿ ಕೇಳಿದ ಹೈಕೋರ್ಟ್

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ನಟ ದರ್ಶನ್ ತೂಗುದೀಪ ಅವರ ಆರೋಗ್ಯದ ಕುರಿತು ಮಾಹಿತಿ ನೀಡುವಂತೆ ಜೈಲು ಅಧಿಕಾರಿಗಳಿಗೆ ಹೈಕೋರ್ಟ್ ಸೂಚನೆ ನೀಡಿದೆ. ಜಾಮೀನು ಕೋರಿ ದರ್ಶನ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಅವರಿದ್ದ ನ್ಯಾಯಪೀಠ, ಅರ್ಜಿಯ ಕುರಿತಂತೆ ಆಕ್ಷೇಪಣೆ ಸಲ್ಲಿಸುವಂತೆ ಸರಕಾರಿ ವಿಶೇಷ ಅಭಿಯೋಜಕ ಪ್ರಸನ್ನ ಕುಮಾರ್ ಅವರಿಗೆ ಸೂಚನೆ ನೀಡಿ ವಿಚಾರಣೆ ಮುಂದೂಡಿದೆ. ವಿಚಾರಣೆ ವೇಳೆ ದರ್ಶನ್ ಪರ ವಕೀಲರು, ಅರ್ಜಿದಾರ ದರ್ಶನ್ ಬೆನ್ನುಹುರಿ ನೋವಿನಿಂದ ಬಳಲುತ್ತಿದ್ದಾರೆ. ವಿಮ್ಸ್ ಆಸ್ಪತ್ರೆಗೆ ಸೋಮವಾರ ದಾಖಲಿಸಲಾಗಿದೆ. ಆಸ್ಪತ್ರೆಯಲ್ಲಿ ಎಂಆರ್‌ಐ ಸ್ಕ್ಯಾನ್ ಮಾಡಿಸಲಾಗಿದೆ. ಬೆನ್ನುಹುರಿಯ ಸರ್ಜರಿ ಅಗತ್ಯವೆಂದು ವೈದ್ಯರು ಮಾಹಿತಿ ನೀಡಿದ್ದಾರೆ. ಹೀಗಾಗಿ ಅನಾರೋಗ್ಯ ಕಾರಣಕ್ಕೆ ಜಾಮೀನು ಕೇಳುತ್ತಿದ್ದೇವೆ ಎಂದು ಮನವಿ ಮಾಡಿದರು. ವಾದ ಆಲಿಸಿದ ನ್ಯಾಯಪೀಠ, ಅರ್ಜಿದಾರ ದರ್ಶನ್ ಅವರ ವೈದ್ಯಕೀಯ ವರದಿ ನೀಡಲು ಸೂಚನೆ ನೀಡಿ ವಿಚಾರಣೆ ಮುಂದೂಡಿತು. ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್‌ಗೆ ನಗರದ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಜಾಮೀನು ತಿರಸ್ಕರಿಸಿದ ಹಿನ್ನೆಲೆ ದರ್ಶನ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ರೇಣುಕಾಸ್ವಾಮಿ ಕೊಲೆ: ಆರೋಪಿ ಸ್ಥಳಾಂತರ ಆದೇಶ ರದ್ದು

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಯಾದ ನಟ ದರ್ಶನ್‌ಗೆ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಶೇಷ ಸೌಲಭ್ಯ ನೀಡಿದ ಆರೋಪದ ಹಿನ್ನೆಲೆಯಲ್ಲಿ ಮೂರನೇ ಆರೋಪಿ ಪವನ್ ಅಲಿಯಾಸ್ ಪುಟ್ಟಸ್ವಾಮಿಯನ್ನು ಮೈಸೂರು ಜೈಲಿಗೆ ಸ್ಥಳಾಂತರಿಸಿದ್ದ ಆದೇಶ ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ. ಮೈಸೂರು ಜೈಲಿಗೆ ತನ್ನನ್ನು ಸ್ಥಳಾಂತರಿಸಲು 24ನೇ ಎಸಿಜೆಎಂ ನ್ಯಾಯಾಲಯ ಆ.27ರಂದು ಹೊರಡಿಸಿದ ಆದೇಶ ರದ್ದು ಕೋರಿ ಪವನ್ ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ವಿಚಾರಣೆ ವೇಳೆ ಪವನ್ ಪರ ವಕೀಲರು ಹಾಜರಾಗಿ, ಇದೇ ವಿಚಾರವಾಗಿ 14ನೇ ಆರೋಪಿ ಪ್ರದೋಷ್ ಅವರನ್ನು ಪರಪ್ಪನ ಅಗ್ರಹಾರ ಜೈಲಿನಿಂದ ಬೆಳಗಾವಿ ಜೈಲಿಗೆ ಸ್ಥಳಾಂತರಿಸಿದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ. ಆ ಆದೇಶವು ಅರ್ಜಿದಾರನ ವಿಷಯದಲ್ಲೂ ಅನ್ವಯಿಸಲಿದೆ ಎಂದು ತಿಳಿಸಿದರು. ಇದಕ್ಕೂ ಮುನ್ನ ರಾಜ್ಯ ಸರಕಾರಿ ಅಭಿಯೋಜಕ ಬೆಳ್ಳಿಯಪ್ಪ ಅವರು, ಪ್ರದೋಷ್ ವಿಚಾರದಲ್ಲಿ ಹೈಕೋರ್ಟ್ ನೀಡಿರುವ ತೀರ್ಪು ಪವನ್ ಸ್ಥಳಾಂತರದಲ್ಲೂ ಅನ್ವಯಿಸಲಿದೆ ಎಂದು ಒಪ್ಪಿಕೊಂಡರು.

ಬ್ಲಿಂಕೆನ್‌ಗೆ ಸ್ವೀಡನ್‌ನ ಉನ್ನತ ಪುರಸ್ಕಾರ

ಸ್ಟಾಕ್‌ಹೋಮ್: ವಿಶ್ವದ ಬೃಹತ್ ಮಿಲಿಟರಿ ಒಕ್ಕೂಟ ನ್ಯಾಟೊದ ಸದಸ್ಯತ್ವ ಪಡೆಯಲು ಸಹಾಯ ಮಾಡಿದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಮತ್ತು ನ್ಯಾಟೊದ ಮಾಜಿ ಕಾರ್ಯದರ್ಶಿ ಜನರಲ್ ಜೆನ್ಸ್ ಸ್ಟೋಲ್ಟೆನ್ ಬರ್ಗ್ ಅವರಿಗೆ ಉನ್ನತ ಪುರಸ್ಕಾರ ನೀಡಲು ಸ್ವೀಡನ್ ನಿರ್ಧರಿಸಿದೆ. ಸ್ವೀಡನ್ ಹಿತಾಸಕ್ತಿಗೆ ಸಹಕರಿಸುವ ವಿದೇಶಿ ನಾಗರಿಕರು ಅಥವಾ ಪ್ರಸಿದ್ಧ ವ್ಯಕ್ತಿಗಳಿಗೆ ಸ್ವೀಡನ್ ಪೋಲರ್ ಸ್ಟಾರ್ ಪುರಸ್ಕಾರವನ್ನು ನೀಡುತ್ತದೆ. ಈ ಬಾರಿ ಬ್ಲಿಂಕೆನ್, ಸ್ಟಾಲ್ಟನ್ ಬರ್ಗ್, ಫಿನ್ಲೆಂಡ್‌ನ ಮಾಜಿ ಪ್ರಧಾನಿ ಸನ್ನಾ ಮರೀನ್ ಮತ್ತು ಮಾಜಿ ವಿದೇಶಾಂಗ ಸಚಿವ ಪೆಕ್ಕ ಹಾವಿಸ್ಟೊ ಅವರು ಈ ಪುರಸ್ಕಾರವನ್ನು ಪಡೆಯಲಿದ್ದಾರೆ. ಗೌರವ ಪುರಸ್ಕಾರ ನೀಡುವ ಮೂಲಕ, ನ್ಯಾಟೊ ಸದಸ್ಯತ್ವ ಪಡೆಯಲು ಸಹಕರಿಸಿದವರಿಗೆ ಕೃತಜ್ಞತೆ ಸಲ್ಲಿಸಲಿದ್ದೇವೆ ಎಂದು ಸ್ವೀಡನ್ ಪ್ರಧಾನಿ ಉಲ್ಫ್ ಕ್ರಿಸ್ಟರ್ಸನ್ ಅವರು ಮಂಗಳವಾರ ಹೇಳಿದ್ದಾರೆ.

ನೆಲದವರೆಗೂ ಬಗ್ಗಿದ್ದೇನೆ, ಇನ್ನೂ ಬಗ್ಗಲು ನನ್ನಿಂದ ಸಾಧ್ಯವಿಲ್ಲ | ಭಾವನೆಗಳ ವಿರುದ್ಧ ನಿರ್ಧಾರ ಮಾಡಲ್ಲ: ಕಾರ್ಯಕರ್ತರಿಗೆ ಮಾತುಕೊಟ್ಟ ಎಚ್‌ಡಿಕೆ

ಸಹನೆ ಮೀರಿ ಮಣಿದಿರುವೆ: ಎಚ್.ಡಿ.ಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚನ್ನಪಟ್ಟಣ ಟಿಕೆಟ್ ವಿಚಾರದಲ್ಲಿ ಈಗಾಗಲೇ ಸಹನೆಗೂ ಮೀರಿ ಸಾಕಷ್ಟು ಮಣಿದಿದ್ದು, ಕಾರ್ಯಕರ್ತರ ಭಾವನೆಗಳಿಗೆ ವಿರುದ್ಧವಾಗಿ ನಿರ್ಧಾರ ಕೈಗೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ರಾಜ್ಯ ಜೆಡಿಎಸ್ ಕಚೇರಿಯಲ್ಲಿ ಚನ್ನಪಟ್ಟಣ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, ನಮ್ಮಿಂದಲೇ ಬೆಳೆದವರು ಜೆಡಿಎಸ್ ಮುಗಿಸುವ ಮಾತನಾಡಿದ್ದು, ಕಾರ್ಯಕರ್ತರು ನಮ್ಮ ಜೊತೆಯಲ್ಲಿ ಇರುವುದರಿಂದ ಹೆದರುವುದಿಲ್ಲ ಎಂದಿದ್ದಾರೆ.

ಮೋದಿ, ಶಾ ಸಂಬಂಧ ಹಾಳು ಮಾಡಿಕೊಳ್ಳಲಾರೆ ಪ್ರಧಾನಿ ಮೋದಿ ಅವರು ದೇವೇಗೌಡರಿಗೆ ಕೊಡುವ ಗೌರವ ಹಾಗೂ ಅವರಿಬ್ಬರ ನಡುವಿನ ಗೌರವಭಾವ ನಾನು ನೋಡಿದ್ದೇನೆ. ಆ ಸಂಬಂಧಕ್ಕೆ ಚ್ಯುತಿಬರಬಾರದು ಎಂಬ ಕಾರಣಕ್ಕೆ ಬಗ್ಗಿದ್ದೇನೆ. ಇನ್ನೂ ಬಗ್ಗಿ ಎಂದರೆ ನನ್ನಿಂದ ಸಾಧ್ಯವಿಲ್ಲ. ಈ ದೇಶದಲ್ಲಿ ಕಾಂಗ್ರೆಸ್ ಪಕ್ಷ ಮೂಲೋತ್ಪಾಟನೆ ಮಾಡಬೇಕು ಎನ್ನುವ ಪ್ರಧಾನಿ ಮೋದಿ ಸಂಕಲ್ಪಕ್ಕೆ ಹೆಗಲಾಗಿ ನಿಂತಿದ್ದು, ಬಗ್ಗಿರುವುದು ಅಧಿಕಾರಕ್ಕಾಗಿ ಅಲ್ಲ. ವೈಯಕ್ತಿಕವಾಗಿ ಮಾಡದ ತಪ್ಪಿಗೆ ತಲೆಕೊಟ್ಟಿದ್ದೇನೆ ಎಂದರು.



ಜೆಡಿಎಸ್ ಕಚೇರಿಯಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ

ಜೆಡಿಎಸ್ ನಿಂದಲೇ ಟಿಕೆಟ್ ಕೊಡಿ ಎಂದಿದ್ದರು ನಡ್ಡಾ: ಯೋಗೇಶ್ವರ್ ಗೆ ಜೆಡಿಎಸ್ ನಿಂದ ಚುನಾವಣೆಗೆ ನಿಲ್ಲುವುದಕ್ಕೆ ಹೇಳುತ್ತೇವೆ ಎಂದು ನವದೆಹಲಿಯಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷ ಹೇಳಿದ್ದರು. ನಿಮ್ಮ ಭಾವನೆಗಳಿಗೆ ಧಕ್ಕೆ ಆಗದಂತೆ ನಿರ್ಧಾರ ಮಾಡುತ್ತೇನೆ. ನಿಮ್ಮ ಮಾತಿಗೆ ಗೌರವ ನೀಡುತ್ತೇನೆ. ಕಾರ್ಯಕರ್ತರು ಒಟ್ಟಾಗಿರಿ, ಯಾರಿಗೂ ತಲೆ ಬಾಗಬೇಕಿಲ್ಲ, ಗೌರವಕ್ಕೆ ತಲೆಬಾಗೋಣ, ಇನ್ನು ಮೂರು ದಿನ ಸಮಯ ಇದೆ. ನನ್ನ ಕಾರ್ಯಕರ್ತರ ಭಾವನೆ ಅಂತಿಮ. ಸಮಯ ಕೊಡಿ ಎಂದು ಮನವಿ ಮಾಡಿದ್ದಾರೆ.

ಪಕ್ಷವನ್ನು ಪಾತಾಳಕ್ಕೆ ತುಳಿದಿದ್ದಾರೆ: ಕಾಂಗ್ರೆಸ್ ಪಕ್ಷ ಕುತಂತ್ರ ಮಾಡಿ ನಮ್ಮ ಪಕ್ಷವನ್ನು ಪಾತಾಳಕ್ಕೆ ತುಳಿದಿದೆ. ಅವರು ತುಳಿದಷ್ಟೂ ನಾವು ಪ್ರಬಲವಾಗಿ ಎದ್ದು ಬಂದಿದ್ದೇವೆ. ಲೋಕಸಭೆ ಚುನಾವಣೆಗೆ ಮೊದಲು ಜೆಡಿಎಸ್ ಮುಗಿದೇ ಹೋಯಿತು ಎಂದು ಜಾಗಟೆ ಹೊಡೆಯುತ್ತಿದ್ದರು. ಈಗ ಇದೇ ಕುಮಾರಸ್ವಾಮಿ ಏನು ಎನ್ನುವುದು ಅವರಿಗೆ ಅರ್ಥವಾಗಿದೆ. ಇಂತಹ ಕಾಂಗ್ರೆಸ್‌ನವರಿಗೆ ನಾನು ಹೆದರಲ್ಲ, ಚಿನ್ನದಂತಹ ಕಾರ್ಯಕರ್ತರು ಇದ್ದೀರಿ. ಧೈರ್ಯವಾಗಿ ಚುನಾವಣೆ ಎದುರಿಸೋಣ. ಇದೊಂದು ಅಗ್ನಿಪರೀಕ್ಷೆ ನಿಜ, ಹಾಗಂತ ಎದೆಗುಂದಬೇಕಿಲ್ಲ ಎಂದು ಕಾರ್ಯಕರ್ತರಿಗೆ ಮನವಿ ಮಾಡಿದ್ದಾರೆ.

> ಬೆಂಗಳೂರು ಸಂಪೂರ್ಣವಾಗಿ ಹಲವಾರು ಪ್ರದೇಶಗಳು ಜಾಲಾವೃತವಾಗಿದೆ. ಜನರು ಹೊಟೇಲ್‌ಗಳಲ್ಲಿ ಜೀವನ ಮಾಡುತ್ತಿದ್ದಾರೆ. ರೈತರು ಬೆಳೆದಿರುವ ಬೆಳೆ ನಾಶವಾಗಿದೆ. ಹಿಂದೆ ಸಿಂಗಾಪುರ ಮಾಡಿದ್ದು ನೋಡಿದ್ದೆವು. ಈಗ ಬ್ರ್ಯಾಂಡ್ ಬೆಂಗಳೂರನ್ನು ವೆನಿಸ್ ಮಾಡಿದ್ದಾರೆ. ಮಳೆಗೆ ಕೆಂಗೇರಿಯಲ್ಲಿ ನಡೆದ ದುರ್ಘಟನೆಗೆ ಎರಡು ಜೀವ ಹೋಗಿವೆ. ಈ ದುರಂತಕ್ಕೆ ಹೊಣೆ ಯಾರು? ಸರಕಾರಕ್ಕೆ ರಾಜಕೀಯದ ಚಿಂತೆಯಿದ್ದು, ಜನರು ಇನ್ನಿಲ್ಲದ ನರಕ ಅನುಭವಿಸುತ್ತಿದ್ದಾರೆ.
>
> ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಭಾಷಣ ಮೊಟಕು

ಯುವ ಜನತಾದಳ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿಗೆ ಟಿಕೆಟ್ ಕೊಡಬೇಕು, ಯಾವುದೇ ಕಾರಣಕ್ಕೂ ಯೋಗೇಶ್ವರ್‌ಗೆ ಕೊಡಬಾರದು ಎಂದು ಕಾರ್ಯಕರ್ತರು ಗದ್ದಲ ಎಬ್ಬಿಸಿದರು. ನಿಖಿಲ್ ಕುಮಾರಸ್ವಾಮಿ ಅವರು ಭಾಷಣ ಮಾಡುವಾಗಲೂ ಪದೇಪದೆ ಅಡ್ಡಿಪಡಿಸಿ, ನಿಖಿಲ್ ಅವರ ಹೆಸರನ್ನು ಘೋಷಿಸುವಂತೆ ಒತ್ತಾಯಿಸಿದರು. ನಮ್ಮನ್ನು ಯೋಗೇಶ್ವರ್ ಹಿಂಸಿಸಿದ್ದಾರೆ. ನೀವು ಶಾಸಕರಾಗಿದ್ದಾಗಲೇ ನಮಗೆ ಕೊಡಬಾರದ ಕಾಟ ಕೊಟ್ಟರು. ಆ ವ್ಯಕ್ತಿಯೇ ಶಾಸಕರಾಗಿದ್ದಾಗ ಜೆಡಿಎಸ್ ಕಾರ್ಯಕರ್ತರು ಪ್ರತಿದಿನವೂ ಪೊಲೀಸ್ ಠಾಣೆಗೆ ಅಲೆಯಬೇಕಾಗಿತ್ತು. ಒಂದು ವೇಳೆ ನೀವು ನಿಖಿಲ್ ಅವರನ್ನು ಬಿಟ್ಟು ಯೋಗೇಶ್ವರ್‌ಗೆ ಮಣೆಹಾಕಿದರೆ ನಮ್ಮ ವಿರೋಧ ಎದುರಿಸಬೇಕಾಗುತ್ತದೆ ಎಂದು ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಳೆ ಸಂತ್ರಸ್ತ ಪ್ರದೇಶದಲ್ಲಿ ನಿರಂತರ ಪರಿಹಾರ ಕಾರ್ಯದಲ್ಲಿ ನಿರತ:ಡಿಸಿಎಂ

ಪರಿಹಾರ ಕಾರ್ಯ ಮುಖ್ಯವೇ ಹೊರತು, ಪ್ರಚಾರವಲ್ಲ: ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಧಿಕಾರಿಗಳ ತಂಡ ಮಳೆಪೀಡಿತ ಪ್ರದೇಶಗಳಲ್ಲಿ ನಿರಂತರವಾಗಿ ಪರಿಹಾರ ಕಾರ್ಯದಲ್ಲಿ ನಿರತರಾಗಿದ್ದು, ಈಗ ಪರಿಹಾರ ಕಾರ್ಯ ಮುಖ್ಯವೇ ಹೊರತು, ನಾನು ಸ್ಥಳಕ್ಕೆ ಭೇಟಿ ನೀಡುವುದಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಭೇಟಿ ಮಾಡಿದರೆ ಪ್ರಚಾರ ಸಿಗಲಿದ್ದು, ನಮಗೆ ಪ್ರಚಾರ ಮುಖ್ಯವಲ್ಲ. ಮಳೆ ಪೀಡಿತ ಪ್ರದೇಶಗಳನ್ನು ಎದುರಿಸುತ್ತಿರುವ ಸ್ಥಳಗಳನ್ನು ಗುರುತಿಸಿ ಶಾಶ್ವತ ಪರಿಹಾರ ನೀಡಲು ಸಮಿತಿ ರಚಿಸಲಾಗಿದ್ದು, ಆ ಸಮಿತಿ ವರದಿ ನೀಡಲಿದೆ ಎಂದು ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡುತ್ತಿಲ್ಲ ಎನ್ನುವ ಪ್ರತಿಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿದರು.

24 ಗಂಟೆಗಳ ಕಾಲ ಶ್ರಮಿಸುತ್ತಿರುವ ಅಧಿಕಾರಿಗಳು ದಿನದ 24 ಗಂಟೆಗಳ ಕಾಲ ಶ್ರಮಿಸುತ್ತಿದ್ದು, ಕಳೆದ 48 ಗಂಟೆಗಳಿಂದ ಮಳೆಪೀಡಿತ ಪ್ರದೇಶಗಳಲ್ಲಿ ಇದ್ದಾರೆ. ಈ ಸಮಯದಲ್ಲಿ ಅವರನ್ನು ಮುಜುಗರಕ್ಕೀಡು ಮಾಡಲು ಇಷ್ಟವಿಲ್ಲ. ಚೌಡೇಶ್ವರಿ ನಗರದಲ್ಲಿ 150 ಎಂ.ಎಂ. ಮಳೆಯಾ ಗಿದೆ. ಇನ್ನು ಕೆಲ ಕಡೆಗಳಲ್ಲಿ ವಾಡಿಕೆ ಗಿಂತ ಶೇ.300ರಷ್ಟು ಹೆಚ್ಚಿನ ಮಳೆ ಯಾಗಿದೆ. ಕೆಲವು ಪ್ರದೇಶದ ಜನರಿಗೆ ಸ್ಥಳಾಂತರಿಸಲು ತಿಳಿಸಿದ್ದು, ಕೇಂದ್ರೀಯ ವಿದ್ಯಾಲಯ ಹಾಗೂ ಟಾಟಾನಗರದಿಂದ 600 ಕುಟುಂಬ ಸ್ಥಳಾಂತರಗೊಳಿಸಲು 5 ಎಸ್‌ಡಿಆರ್‌ಎಫ್ ಹಾಗೂ ಎನ್‌ಡಿಆರ್‌ಎಫ್ ತಂಡ ನಿಯೋಜನೆ ಮಾಡಲಾಗಿದೆ ಎಂದರು.

ಕೆಲ ಅಪಾರ್ಟ್‌ಮೆಂಟ್‌ಗಳನ್ನು 8 ದಿನ ಮುಚ್ಚಿ: ಕೆಲವು ಅಪಾರ್ಟ್‌ಮೆಂಟ್‌ಗಳನ್ನು 8 ದಿನಗಳ ಕಾಲ ಮುಚ್ಚಲು ಸೂಚಿಸಿದ್ದು, 20–25 ಎಚ್.ಪಿ. ಯಂತ್ರ ಹಾಕಿ ಚರಂಡಿ ಸ್ವಚ್ಛಗೊಳಿಸಲಾಗುತ್ತಿದೆ. 20 ಕಡೆಗಳಲ್ಲಿ ನೀರನ್ನು ತೆಗೆಯಲಾಗುತ್ತಿದೆ. ತಂಡ ಹಗಲಿರುಳು ಶ್ರಮಿಸುತ್ತಿದ್ದು, ನಾನು ಕೂಡ ಪರಿಹಾರ ಕಾರ್ಯಗಳ ಪರಿಶೀಲನೆ ಮಾಡಿದ್ದೇನೆ ಎಂದರು.

ಪಡಿತರ: ತಂತ್ರಾಂಶ ಮುಂದುವರಿಕೆಗೆ ಒತ್ತಾಯ

ಬೆಂಗಳೂರು: ಸುಮಾರು 10 ದಿನಗಳವರೆಗೆ ಪಡಿತರ ವಿತರಣೆ ತಂತ್ರಾಂಶ ಮುಂದುವರಿಸಬೇಕು ಎಂದು ಕರ್ನಾಟಕ ರಾಜ್ಯ ಸರಕಾರಿ ಪಡಿತರ ವಿತರಕರ ಸಂಘದ ಅಧ್ಯಕ್ಷ ಟಿ.ಕೃಷ್ಣಪ್ಪ ಒತ್ತಾಯಿಸಿದ್ದಾರೆ.

ಆಹಾರ ಇಲಾಖೆಯ ತಂತ್ರಾಂಶ ಸುಮಾರು 30 ಇಲಾಖೆಗಳು ಬಳಸಿಕೊಳ್ಳುತ್ತಿರುವುದರಿಂದ ಪಡಿತರ ವಿತರಣೆಯಲ್ಲಿ ಸರ್ವರ್ ಡೌನ್ ಆಗಿ ಪಡಿತರ ವಿತರಣೆ ಸಾಧ್ಯವಾಗುತ್ತಿಲ್ಲ. ಈ ಸಮಸ್ಯೆಯನ್ನು ಬಗೆಹರಿಸುವ ಸಂಬಂಧ ಎನ್‌ಐಸಿಯಿಂದ ಕರ್ನಾಟಕ ರಾಜ್ಯ ತಂತ್ರಾಂಶಕ್ಕೆ ಬದಲಾಯಿಸಲು ನಿರ್ಧರಿಸಲಾಗಿದ್ದು, ಅದರಂತೆ ಅಕ್ಟೋಬರ್ ತಿಂಗಳಲ್ಲಿ ಚಾಲನೆ ನೀಡಲಾಗಿದೆ. ಅ.14 ಆದರೂ ಸಹ ತಂತ್ರಾಂಶ ಪೂರ್ಣವಾಗದೆ ಇರುವುದರಿಂದ ಪಡಿತರ ಚೀಟಿದಾರರು ನ್ಯಾಯಬೆಲೆ ಮಾಲೀಕರಿಗೆ ಒತ್ತಡ ಹಾಕುತ್ತಿದ್ದಾರೆ.

ಗ್ರೀನ್ ಎನರ್ಜಿ ಮತ್ತು ಕೋರ್ ಮ್ಯಾನುಫ್ಯಾಕ್ಚರಿಂಗ್ ವಲಯದ ಸಭೆಯಲ್ಲಿ ಪಾಟೀಲ್ ಭಾಗಿ

ರಾಜ್ಯದಲ್ಲಿ ಪರಿಸರಸ್ನೇಹಿ ಇಂಧನಕ್ಕೆ ವಿಪುಲ ಅವಕಾಶ: ಎಂ.ಬಿ.ಪಾಟೀಲ್

ಖನಿಜ ಭವನದಲ್ಲಿ ಆಯೋಜಿಸಿದ್ದ ಗ್ರೀನ್ ಎನರ್ಜಿ ಮತ್ತು ಕೋರ್ ಮ್ಯಾನುಫ್ಯಾಕ್ಚರಿಂಗ್ ವಲಯಗಳಿಗೆ ಸಂಬಂಧಪಟ್ಟ ಸರಕಾರದ ವಿಷನ್ ಗ್ರೂಪ್ ಗಳ ಚೊಚ್ಚಲ ಸಭೆಯಲ್ಲಿ ಪಾಲ್ಗೊಂಡ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ. ರೆನ್ಯೂ ಪವರ್ ಅಧ್ಯಕ್ಷ ವಿವೇಕ್ ಸಿಂಘ್ಲಾ, ಎಮ್ವೀ ಸೋಲಾರ್‌ನ ಸ್ಥಾಪಕ ಡಿ ವಿ ಮಂಜುನಾಥ ಮತ್ತು ಇತರರು ಪಾಲ್ಗೊಂಡಿದ್ದರು.

ಬೆಂಗಳೂರು: ರಾಜ್ಯದಲ್ಲಿ ಪರಿಸರಸ್ನೇಹಿ ಇಂಧನ (ಗ್ರೀನ್ ಎನರ್ಜಿ) ಕ್ಷೇತ್ರದಲ್ಲಿ ಹೂಡಿಕೆ ಮತ್ತು ಉತ್ಪಾದನೆಗೆ ಸಾಕಷ್ಟು ಅವಕಾಶಗಳಿದ್ದು, ಇಂಧನ ಇಲಾಖೆ ಎರಡೂ ಜತೆಗೂಡಿ ಸೂಕ್ತನೀತಿ ರೂಪಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಖನಿಜ ಭವನದಲ್ಲಿ ಆಯೋಜಿಸಿದ್ದ ಗ್ರೀನ್ ಎನರ್ಜಿ ಮತ್ತು ಕೋರ್ ಮ್ಯಾನುಫ್ಯಾಕ್ಚರಿಂಗ್ ವಲಯಗಳಿಗೆ ಸಂಬಂಧಪಟ್ಟ ಸರಕಾರದ ವಿಷನ್ ಗ್ರೂಪ್‌ಗಳ ಚೊಚ್ಚಲ ಸಭೆಯಲ್ಲಿ ಮಾತನಾಡಿದ ಅವರು, ಉದ್ಯಮಿಗಳು ಗ್ರೀನ್ ಎನರ್ಜಿ ಕ್ಷೇತ್ರದಲ್ಲಿರುವ ಸಾಧ್ಯತೆ, ಅಗತ್ಯ, ಬೇಡಿಕೆ, ನೀತಿ ನಿರೂಪಣೆ, ರಿಯಾಯಿತಿ ಇತ್ಯಾದಿ ಕುರಿತು ಸಲಹೆ–ಸೂಚನೆ ನೀಡಿದ್ದಾರೆ. ಈ ವಲಯ ಬೆಳೆಸಬೇಕೆಂಬುದು ಸರಕಾರದ ಮುಕ್ತ ನಿಲುವಾಗಿದೆ. ಮುಂದಿನ ಹೆಜ್ಜೆಯಾಗಿ ಇಂಧನ ಸಚಿವರ ಜತೆ ಮಾತುಕತೆ ನಡೆಸಲಾಗುವುದು. ಇಂಧನ ಇಲಾಖೆ ಇದರಲ್ಲಿ ಪ್ರಮುಖ ಪಾಲು ಹೊಂದಿದೆ ಎಂದರು.

ಸರಕಾರ ಪ್ರೋತ್ಸಾಹಿಸಿದರೆ ಎಲೆಕ್ಟ್ರೋಲೈಟ್, ಬ್ಯಾಟರಿ ತಯಾರಿಕೆ: ‘ಅವಾಡಾ’ ಕಂಪನಿಯ ಸಿಇಒ ಕಿಶೋರ್ ನಾಯರ್ ಮಾತನಾಡಿ, ‘ಗ್ರೀನ್ ಹೈಡ್ರೋಜನ್ ಉತ್ಪಾದನೆಗಾಗಿ ರಾಜ್ಯ ಸರಕಾರದ ಜತೆ 45 ಸಾವಿರ ಕೋಟಿ ಹೂಡಿಕೆಯ ಒಡಂಬಡಿಕೆ ಮಾಡಿಕೊಂಡಿದ್ದು, ಸರಕಾರವು ಸೂಕ್ತ ಪ್ರೋತ್ಸಾಹಕ ಭತ್ಯೆ ಮತ್ತು ನೀತಿ ಜಾರಿಗೆ ತಂದರೆ ಎಲೆಕ್ಟ್ರೋಲೈಟ್ ಮತ್ತು ಬ್ಯಾಟರಿ ತಯಾರಿಕೆಯ ಕಡೆಗೆ ಗಮನ ಹರಿಸಬಹುದು. ಜತೆಗೆ ರಾಜ್ಯದಲ್ಲಿ ಅಪಾರ ಪ್ರಮಾಣದಲ್ಲಿ ಕಬ್ಬು ಬೆಳೆಯಲಾಗುತ್ತಿದೆ. ಆದ್ದರಿಂದ, ಪರಿಸರಸ್ನೇಹಿ ಮೆಥನಾಲ್ ಮತ್ತು ಪರಿಸರಸ್ನೇಹಿ ಜಲಜನಕ(ಗ್ರೀನ್ ಹೈಡ್ರೋಜನ್)ದ ಉತ್ಪಾದನೆಗೂ ಆದ್ಯತೆ ಕೊಡಬಹುದು. ರಾಜಸ್ಥಾನ ಮತ್ತು ಮಹಾರಾಷ್ಟ್ರ ಈಗಾಗಲೇ ಈ ಸಂಬಂಧ ನೀತಿ ಜಾರಿಗೆ ತಂದಿವೆ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ

ಆಧುನಿಕ ಕಾಲಘಟ್ಟದಲ್ಲಿ ಕನ್ನಡದ ಅಸ್ತಿತ್ವದ ಪ್ರಶ್ನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕನ್ನಡದ ತಂತ್ರಜ್ಞಾನ ಹೊಸ ತಲೆಮಾರಿನ ಆದ್ಯತೆ ಅರ್ಥೈಸಿಕೊಂಡು ರೂಪುಗೊಳ್ಳದೇ ಹೋದಲ್ಲಿ ಆಧುನಿಕ ಕಾಲಘಟ್ಟದಲ್ಲಿ ಕನ್ನಡ ಭಾಷೆ ಅಸ್ತಿತ್ವದ ಪ್ರಶ್ನೆ ಎದುರಿಸಲಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಆತಂಕ ವ್ಯಕ್ತಪಡಿಸಿದ್ದಾರೆ.

ವಿಕಾಸಸೌಧದಲ್ಲಿ ರಾಜ್ಯ ಸರಕಾರದ ಇ-ಆಡಳಿತ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಇ-ಕನ್ನಡ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, ಇಂದಿನ ಎಲ್ಲ ಬಿಕ್ಕಟ್ಟುಗಳ ನಡುವೆ ಕನ್ನಡ ತಂತ್ರಜ್ಞಾನ ಜನಸಾಮಾನ್ಯರ ದೈನಂದಿನ ಬದುಕಿನ ಭಾಗವಾಗಬೇಕಾದಲ್ಲಿ ಆಡಳಿತ ಯಂತ್ರದ ಕಾಳಜಿ ಮತ್ತು ಜವಾಬ್ದಾರಿ ಪ್ರಮುಖವಾಗುತ್ತದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬದುಕಿನ ಎಲ್ಲ ಆಯಾಮ ಆವರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಸರಕಾರಿ ಯಂತ್ರಗಳು ತಮ್ಮ ಕಾರ್ಯ ಚಟುವಟಿಕೆಗಳಲ್ಲಿ ಇನ್ನಷ್ಟು ವೃತ್ತಿಪರತೆ ರೂಢಿಸಿಕೊಳ್ಳುವ ಮೂಲಕ ಕನ್ನಡ ಭಾಷಾ ಸೇವೆ ನೆರವೇರಿಸಬೇಕಾದ ಅವಶ್ಯಕತೆ ಇದೆ ಎಂದು ಸೂಚಿಸಿದ್ದಾರೆ.

ಖಾಸಗಿ ತಂತ್ರಾಂಶ ಮಾರುಕಟ್ಟೆ : ಬದ್ಧತೆ ಕೊರತೆ

ಖಾಸಗಿ ತಂತ್ರಾಂಶಗಳ ಮಾರುಕಟ್ಟೆ ಆಧಾರಿತ ಕಾರ್ಯ ನಿರ್ವಹಣೆಯಲ್ಲಿ ಸಾರ್ವಜನಿಕ ಬದ್ಧತೆಯ ಕೊರತೆ ಇದ್ದು, ಜನಸಾಮಾನ್ಯರೆಡೆಗೆ ತಂತ್ರಾಂಶ ಮುಕ್ತವಾಗಿ ಕೊಂಡೊಯ್ಯುವ ನಿಟ್ಟಿನಲ್ಲಿ ಸರಕಾರದ ಜವಾಬ್ದಾರಿ ಹೆಚ್ಚಿರುತ್ತದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಖಾಸಗಿ ವಲಯದ ಅಭಿವೃದ್ಧಿ ಮತ್ತು ಪ್ರಗತಿಗೆ ಅನುಗುಣವಾಗಿ ಸರಕಾರದ ಉಪಕ್ರಮಗಳಲ್ಲಿ ಬದಲಾವಣೆಯಾದಾಗ ಮಾತ್ರ ಹೊಸ ತಲೆಮಾರಿನ ಕನ್ನಡದ ಸವಾಲು ಎದುರಿಸಲು ಸಾಧ್ಯ ಎಂದು ತಿಳಿಸಿದ್ದಾರೆ.

ಕನ್ನಡ ಕಸ್ತೂರಿ ಶೀಘ್ರ ಲೋಕಾರ್ಪಣೆ

ಆಂಗ್ಲಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡುವ ಸಮರ್ಥ ತಂತ್ರಾಂಶ ಇ-ಆಡಳಿತ ಇಲಾಖೆ ಸಿದ್ಧಪಡಿಸಿದ್ದು, ಶೀಘ್ರದಲ್ಲಿ ಲೋಕಾರ್ಪಣೆಗೊಳಿಸಲಾಗುವುದು. ಉದ್ದೇಶಿತ ತಂತ್ರಾಂಶ ಇಂದಿನ ಖಾಸಗಿ ತಂತ್ರಾಂಶಗಳಿಗಿಂತ ಅತಿ ಹೆಚ್ಚು ದಕ್ಷತೆ ಹೊಂದಿದ್ದು, ಸುಮಾರು 2.3 ಕೋಟಿ ಆಂಗ್ಲ ಮತ್ತು ಕನ್ನಡ ಸಮಾನಾಂತರ ವಾಕ್ಯಗಳನ್ನು ಆಧರಿಸಿ ಸಿದ್ಧಗೊಂಡಿದೆ. ಈ ತಂತ್ರಾಂಶ ಲೋಕಾರ್ಪಣೆಗೊಂಡಲ್ಲಿ ತಂತ್ರಜ್ಞಾನ ಕ್ಷೇತ್ರಕ್ಕೆ ಕರ್ನಾಟಕ ರಾಜ್ಯದ ಬಹುದೊಡ್ಡ ಕೊಡುಗೆ ನೀಡುವುದರ ಜೊತೆಗೆ ಖಾಸಗಿ ವಲಯದ ತಂತ್ರಾಂಶಕ್ಕೆ ತೀವ್ರ ಪೈಪೋಟಿ ನೀಡಲಿದೆ ಎಂದು ತಿಳಿಸಿದ್ದಾರೆ.

200ಕ್ಕೂ ಹೆಚ್ಚು ನಿಘಂಟುಗಳನ್ನು ಬಳಸಿ ಅತ್ಯಾಧುನಿಕ ಪದಕಣಜ ತಂತ್ರಾಂಶ ಸಾರ್ವಜನಿಕ ಬಳಕೆಗೆ ನೀಡಿದ್ದು, ಸುಮಾರು 2 ಲಕ್ಷ 20 ಸಾವಿರ ಕನ್ನಡ ಪದಗಳು ಹಾಗೂ 1 ಲಕ್ಷ 20 ಸಾವಿರ ಆಂಗ್ಲ ಮೂಲ ಪದಗಳು ಈ ತಂತ್ರಾಂಶದಲ್ಲಿ ಲಭ್ಯವಿದೆ. ಪದಕಣಜ ಮೊಬೈಲ್ ತಂತ್ರಾಂಶ ಸಹ ಬಳಕೆಗೆ ನೀಡಲಾಗಿದ್ದು, ಸಾರ್ವಜನಿಕರು ಈ ತಂತ್ರಾಂಶದ ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ.

ಇ-ಕಲಿಕಾ ಕನ್ನಡ ಪೋರ್ಟಲ್

ಜಗತ್ತಿನ ಬೇರೆ ಭಾಗಗಳಿಂದ ಉದ್ಯೋಗ, ವ್ಯವಹಾರದ ಉದ್ದೇಶದಿಂದ ಇಲ್ಲಿ ನೆಲೆಸಿರುವ ಅನ್ಯಭಾಷಿಕರಿಗೆ, ಕನ್ನಡ ಕಲಿಯಲು ಉತ್ಸಾಹ ಇರುವವರಿಗೆ ಅಂತರ್ಜಾಲದ ಮೂಲಕ ಕನ್ನಡ ಕಲಿಸುವ ಉದ್ದೇಶದಿಂದ ಸರಕಾರ ಇ-ಕಲಿಕಾ ಕನ್ನಡ ಪೋರ್ಟಲ್ ರೂಪಿಸಿದ್ದು, ಇದು ಪ್ರಾಧಿಕಾರದ ಆಶಯಕ್ಕೆ ಪೂರಕವಾಗಿದೆ. ಕನ್ನಡೇತರರು ಕನ್ನಡ ಭಾಷೆಯನ್ನು ಕಲಿಯುವಲ್ಲಿ ಇ-ಕಲಿಕಾ ಕನ್ನಡ ಪೋರ್ಟಲ್ ನಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳಬಹುದಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಮುಸ್ಲಿಂ ಅಭ್ಯರ್ಥಿ ಹಾಕಲು ಜಮೀರ್ ಬ್ಯಾಟಿಂಗ್

ಬೆಂಗಳೂರು: ಉಪ ಚುನಾವಣೆ ಹಿನ್ನೆಲೆ ಬೆಂಗಳೂರಿಗೆ ಆಗಮಿಸಿರುವ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆ ವಾಲಾ ಅವರನ್ನು ಭೇಟಿ ಮಾಡಿದ ಸಚಿವ ಜಮೀರ್ ಅಹಮದ್ ಖಾನ್, ಶಿಗ್ಗಾವಿ ಕ್ಷೇತ್ರಕ್ಕೆ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡಲು ಒತ್ತಾಯಿಸಿದರು.

ಕಳೆದ ವಿಧಾನ ಸಭೆ ಹಾಗೂ ಲೋಕಸಭೆ ಚುನಾವಣೆ ಯಲ್ಲಿ ಮುಸ್ಲಿಂ ಸಮುದಾಯ ಕಾಂಗ್ರೆಸ್ ಪರ ನಿಂತಿದ್ದು ಶಿಗ್ಗಾವಿ ಟಿಕೆಟ್ ಮುಸ್ಲಿಂ ಸಮುದಾಯಕ್ಕೆ ಬೇಕೇ ಬೇಕು ಎಂದು ಪಟ್ಟು ಹಿಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೂ ಈ ಬಗ್ಗೆ ಜಮೀರ್ ಅಹಮದ್ ಖಾನ್ ನೇತೃತ್ವದಲ್ಲಿ ಮುಸ್ಲಿಂ ಜನಪ್ರತಿನಿಧಿಗಳ ನಿಯೋಗ ಬೇಡಿಕೆ ಇಟ್ಟಿತ್ತು.

ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರ ವಿರುದ್ಧ ಹೋರಾಡಿ ವಿಜಯ ಸಾಧಸಿದ ವೀರರಾಣಿ ಕಿತ್ತೂರ ಚನ್ನಮ್ಮಾಜಿಯ 200ನೇ ವಿಜಯೋತ್ಸವಕ್ಕೆ
ಅಗಮಿಸುತ್ತಿರುವ ಸ್ವಾಮೀಜಿಗಳಿಗೆ, ಮಂತ್ರಿಗಳಿಗೆ, ಸಂಸದರಿಗೆ, ಶಾಸಕರುಗಳು ಸೇರಿದಂತೆ ಎಲ್ಲ ಜನ ಪ್ರತಿನಿಧಿಗಳಿಗೆ ಕಲಾವಿದರಿಗೆ, ಸಾರ್ವಜನಿಕರಿಗೆ
ಸ್ವಾಗತ ಕೋರುವವರು
ಶ್ರೀ ಪ್ರಶಾಂತ ಶೆಟ್ಟಿ
ಶ್ರೀ ಸುಕಾಂತ ಶೆಟ್ಟಿ
ಮಾಲಿಕರು ಗಜರಾಜ ಪ್ಯಾಲೇಸ್ ಚನ್ನಮ್ಮನ ಕಿತ್ತೂರ.
Hotel M/s Gajaraj Palace
LODGE

200 ಕಿತ್ತೂರು ವಿಜಯೋಯ್ಸವ-2024
ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿ ಚುಕ್ಕಿ ವೀರರಾಣಿ ಕಿತ್ತೂರ ಚನ್ನಮ್ಮಾಜಿಯ 200ನೇ ವಿಜಯೋತ್ಸವಕ್ಕೆ ಆಗಮಿಸುತ್ತಿರುವ ಸ್ವಾಮೀಜಿಗಳಿಗೆ, ಮುಖ್ಯಮಂತ್ರಿಗಳಿಗೆ, ಸಚಿವರಿಗೆ, ಸಂಸದರಿಗೆ, ಶಾಸಕರುಗಳು ಸೇರಿದಂತೆ ಎಲ್ಲ ಜನಪ್ರತಿನಿಧಿಗಳಿಗೆ, ಕಲಾವಿದರಿಗೆ
: ಸರ್ವರಿಗೂ ಸ್ವಾಗತಕೋರುವವರು :
ಡಾ. ಎಸ್. ಎಸ್. ಸಿದ್ದನ್ನವರ, ತಾಲೂಕ ವೈದ್ಯಾಧಿಕಾರಿಗಳು, ಚನ್ನಮ್ಮನ ಕಿತ್ತೂರು, ಬೈಲಹೊಂಗಲ
ಡಾ. ಇಮಾದ ರಾಜಗುಳಿ, ಎ ಎಮ್ ಓ, ಚಿಕ್ಕಮಕ್ಕಳ ತಜ್ಞರು ಚನ್ನಮ್ಮನ ಕಿತ್ತೂರ.
ಡಾ. ಮಹಾಂತೇಶ ಹಿರೇಮಠ, ಎ ಎಮ್ ಓ ಪ್ರಾಥಮಿಕ ಆರೋಗ್ಯ ಕೇಂದ್ರ ಅಂಬಡಗಟ್ಟಿ,
ಡಾ. ವ್ಹಿ. ಸುಮಲತಾ, ಎ ಎಮ್ ಓ ಪ್ರಾಥಮಿಕ ಆರೋಗ್ಯ ಕೇಂದ್ರ ಎಂ ಕೆ ಹುಬ್ಬಳ್ಳಿ,
ಚನ್ನಮ್ಮ ಕಿತ್ತೂರ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಅಂಬಡಗಟ್ಟಿ, ಬೈಲೂರು, ಹುಣಶಿಕಟ್ಟಿ ಹಾಗೂ ಎಂ. ಕೆ. ಹುಬ್ಬಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿ ವರ್ಗ ಜಿ: ಬೆಳಗಾವಿ